ಸಂಪುಟ : ೨೭

ಸಂಚಿಕೆ : ೧

ಕರ್ನಾಟಕ ಭಾರತಿ

ಸ್ವಾತಂತ್ರ್ಯೋತ್ಸವ ಸಂಚಿಕೆ

ಆಗಸ್ಟ್, ೧೯೯೪

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಲೇಖಕರಿಗೆ ಸೂಚನೆಗಳು

"ಕರ್ನಾಟಕ ಭಾರತಿ"ಯು ಸೃಜನ, ವಿಮರ್ಶನ, ಸಂಶೋಧನ, ಸಾಹಿತ್ಯ, ವಿಜ್ಞಾನ ಮತ್ತು ಮಾನವಿಕ ವಿಷಯಗಳ ಅಭಿವೃದ್ಧಿಗಾಗಿ ಮೀಸಲಾಗಿದ್ದು, ಅದರಲ್ಲಿ ಪ್ರಕಟನೆಗಾಗಿ ಈ ಬಗೆಯ ಎಲ್ಲ ಲೇಖನಗಳಿಗೂ ಸ್ವಾಗತವಿದೆ. ಅನುವಾದ ಲೇಖನ ಗಳಿದ್ದರೆ ಮೂಲ ಲೇಖಕರ ಅಥವಾ ಪ್ರಕಾಶಕರ ಅನುಮತಿಯನ್ನು ಕಳುಹಿಸಬೇಕು.

ಲೇಖನಗಳನ್ನು ಕಾಗದದ ಒಂದೇ ಮಗ್ಗುಲಲ್ಲಿ ಸಾಕಷ್ಟು ಮಾರ್ಜಿನ್ ಬಿಟ್ಟು, ಸ್ಪಷ್ಟವಾಗಿ ಬರೆದಿರಬೇಕು, ಇಲ್ಲವೆ ಟೈಪು ಮಾಡಿರಬೇಕು. ಹಸ್ತಪ್ರತಿಗಳು ಯಾವ ರೀತಿಯಿಂದಲೂ ಅಸ್ಪಷ್ಟವಾಗಿಯಾಗಲೀ ಅಸಂಪೂರ್ಣವಾಗಿಯಾಗಲೀ ಇರಬಾರದು.

ಲೇಖನ ಸ್ವೀಕೃತವಾದ ಕೂಡಲೇ ಲೇಖಕರಿಗೆ ತಿಳಿಸಲಾಗುತ್ತದೆ. ಅಸ್ವೀಕೃತ ಲೇಖನಗಳನ್ನು ಮರಳಿ ಪಡೆಯಲಿಚ್ಛಿಸುವವರು ಸಾಕಷ್ಟು ಅಂಚೆ ಚೀಟಿಗಳನ್ನು ಕಳು ಹಿಸಬೇಕು.

ಲೇಖಕರಿಗೆ ಅವರ ಲೇಖನಗಳ ೨೫ ಪ್ರತಿಗಳನ್ನು ಲೇಖನವು ಪ್ರಕಟವಾದ ಸಂಚಿ ಕೆಯ ಪ್ರತಿಯೊಂದಿಗೆ ಕಳುಹಿಸಲಾಗುತ್ತದೆ. ಹೆಚ್ಚಿಗೆ ಪ್ರತಿಗಳು ಬೇಕಾದವರು ಅದರ ಮುದ್ರಣಾದಿ ವೆಚ್ಚವನ್ನು ವಹಿಸಬೇಕಾಗುತ್ತದೆ. ಲೇಖನ ಅಚ್ಚಾಗುವ ಪೂರ್ವದಲ್ಲಿ ಈ ವಿಷಯಕ್ಕೆ ತಿಳಿಸಬೇಕು,

ಲೇಖನಗಳನ್ನು ವಿಮರ್ಶೆಗಾಗಿ ಪುಸ್ತಕಗಳನ್ನು ಸಂಪಾದಕರು. "ಕರ್ನಾಟಕ ಭಾರತಿ" ಕನ್ನಡ ಅಧ್ಯಯನಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರಿಗೆ ಕಳುಹಿಸಬೇಕು. ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ಎರಡು ಪ್ರತಿಗಳನ್ನು ಕಳುಹಿಸಬೇಕು. ಇನ್ನಿತರ ಯಾವದೇ ವಿಷಯಕ್ಕೆ ನಿರ್ದೇಶಕರು ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೫೮೦ ೦೦೩ ಇವರಿಗೆ ಬರೆಯಬೇಕು.

ಕರ್ನಾಟಕ ಭಾರತಿ

೧, ಸ್ವಾತಂತ್ರ್ಯೋತ್ಸವ ಸಂಚಿಕೆ	೨, ರಾಜ್ಯೋತ್ಸವ ಸಂಚಿಕೆ
೩. ಸಂಕ್ರಮಣ ಸಂಚಿಕೆ	೪. ಅಕ್ಷಯಾ ತೃತೀಯಾ ಸಂಚಿಕೆ

ಬಿಡಿ ಸಂಚಿಕೆಯ ಬೆಲೆ : ರೂ. ೨೦-೦೦

ಈ ಹಣವನ್ನು ವಿತ್ತಾಧಿಕಾರಿಗಳು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರ ಹೆಸರಿನಲ್ಲಿ ಡಿಮಾಂಡ ಡ್ರಾಫ್ಟ್ ತೆಗೆಯಿಸಿ, ನಿರ್ದೇಶಕರು, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರ ವಿಳಾಸಕ್ಕೆ ಕಳುಹಿಸಬೇಕು.

ಕರ್ನಾಟಕ ಭಾರತಿ

ತ್ರೈಮಾಸಿಕ ಪತ್ರಿಕೆ

ಸಂಪುಟ : ೨೭ ಸಂಚಿಕೆ -೧

ಗೌರವ ಸಂಪಾದಕರು

ಡಾ. ಎಸ್. ರಾಮೇಗೌಡ

ಕುಲಪತಿಗಳು

ಸಂಪಾದಕರು

ಡಾ. ವೀರಣ್ಣ ರಾಜೂರ

ಡಾ. ಬಿ. ಆರ್. ಹಿರೇಮಠ

ಪ್ರಸಾರಾಂಗ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಕರ್ನಾಟಕ ಭಾರತಿ

ಕರ್ನಾಟಕ ವಿಶ್ವವಿದ್ಯಾಲಯದ ತ್ರೈಮಾಸಿಕ ಪತ್ರಿಕೆ

ಸಂಪುಟ : ೨೭ ಸಂಚಿಕೆ-೧

ಅಗಸ್ಟ -೧೯೯೪

ಸ್ವಾತಂತ್ರ್ಯೋತ್ಸವ ಸಂಚಿಕೆ

ಪ್ರಕಾಶಕರು

ಪ್ರೊ. ಎಚ್. ವಿ. ನಾಗೇಶ್

ನಿರ್ದೇಶಕರು, ಪ್ರಸಾರಾಂಗ, ಕ. ವಿ. ವಿ. ಧಾರವಾಡ

ಮುದ್ರಕರು :

ಎನ್. ಎಸ್. ಮಾಲಿಪಾಟೀಲ ಎಂ. ಕಾಮ್.
ಉಪಕುಲಸಚಿವರು ಹಾಗೂ ನಿರ್ದೇಶಕರು,
ಕರ್ನಾಟಕ ವಿಶ್ವವಿದ್ಯಾಲಯ ಮುದ್ರಣಾಲಯ,
ಧಾರವಾಡ

ಪರಿವಿಡಿ

ವಚನಕಾರ್ತಿಯರು ಪ್ರಕಟಿಸುವ ನಿರ್ಲಿಂಗಿಗುಣ*

★ ವೀಣಾ ಬನ್ನಂಜೆ

ಹೆಣ್ಣು ಹೆಣ್ಣಾದೊಡೆ ಗಂಡಿನ ಸೂತಕ !
ಗಂಡು ಗಂಡಾದೊಡೆ ಹೆಣ್ಣಿನ ಸೂತಕ !
ಮನದ ಸೂತಕ ಹಿಂಗಿದೊಡೆ
ತನುವಿನ ಸೂತಕಕ್ಕೆ ತೆರಹುಂಟೇ ಅಯ್ಯಾ?
ಮೊದಲಿಲ್ಲದ ಸೂತಕಕ್ಕೆ ಮರುಳಾಯಿತ್ತು ಜಗವೆಲ್ಲ!
ಎನ್ನ ದೇವ ಚನ್ನಮಲ್ಲಿಕಾರ್ಜುನಯ್ಯನೆಂಬ
ಗರುವಂಗೆ ಜಗವೆಲ್ಲಾ ಹೆಣ್ಣು ನೋಡಾ !

- ಅಕ್ಕಮಹಾದೇವಿ

ಪ್ರಧಾನ ಸಂಸ್ಕೃತಿಗೆ ಹೊರತಾದ ಅಪ್ರಧಾನ ಸಂಸ್ಕೃತಿಯು ಪ್ರಧಾನ ಸಂಸ್ಕೃತಿಯ ಪ್ರವಾಹದಲ್ಲಿ ಮೂಕವಾಗಿ ಹರಿದದ್ದು ನಮ್ಮ ಇತಿಹಾಸ. ವರ್ತಮಾನ ಎಂದರೆ ಇತಿಹಾಸದ ಮುಂದುವರಿಕೆ. ಆದ್ದರಿಂದ ಇತಿಹಾಸವನ್ನು ವರ್ತಮಾನದ ಸಂದರ್ಭದಲ್ಲಿ ಮರು ಪರಿಶೀಲನೆಗೆ ಒಡ್ಡುವುದು ಇಂದಿನ ತುರ್ತು. ಏಕೆಂದರೆ ಇತಿಹಾಸದ ಪ್ರತೀ ದಾಖಲೆಗಳು ಸಮಗ್ರ ಮತ್ತು ಪರಿಪೂರ್ಣವಾಗಬೇಕೆಂದಿಲ್ಲ. ಅಂಥ ಇತಿಹಾಸವನ್ನು ವರ್ತಮಾನದಲ್ಲಿ ವ್ಯಾಖ್ಯಾನಿಸುವಾಗ ಅದರ ವೈಶಿಷ್ಟಗಳನ್ನು ಮರೆಯುವದು ಇತಿಹಾಸವನ್ನು ನಿರಾಕರಿಸಿದ ಹಾಗೆ. ಈ ಎಚ್ಚರ ಇದ್ದಾಗಲೂ ನಾವು ಗಮಿನಿಸಬೇಕಾದ ಮುಖ್ಯ ಸಂಗತಿ ಎಂದರೆ ವರ್ತಮಾನದ ಅನೇಕ ನಡಾವಳಿಗಳ ಹಿಂದೆ ಇರುವ ಸೂಕ್ಷ್ಮ ಪ್ರಭುತ್ವವನ್ನು. ಏಕೆಂದರೆ ಕಾರ್ಕಳದಲ್ಲಿ ಬಾಹುಬಲಿಯನ್ನು ಕೆತ್ತಿದ ಕಲ್ಕುಡನನ್ನು ಭೈರರಸ ಗೌರವಿಸಿದನೆಂದು ಶಾಸನ ದಾಖಲಿಸಿದರೆ, ಕಲ್ಕುಡ - ಕಲ್ಲುರ್ಟಿಯ ಪಾಡ್ದನವು ಅರಸ ಕಲ್ಕುಡನ ಕೈ ಕಾಲು ಕತ್ತರಿಸಿದನೆಂಬ ವಿವರಣೆಯನ್ನು ನೀಡುತ್ತದೆ. ಇಂಥ ಸಂದಿಗ್ಧಗಳಲ್ಲಿರುವ ಸಾಮಾಜಿಕ ಸತ್ಯಗಳನ್ನು ನಾವು ಎಚ್ಚರದಿಂದ ಗಮನಿಸಬೇಕಾಗಿದೆ.

ಈ ರೀತಿಯ ಗೊಂದಲವಿರುವ ನಮ್ಮ ಚಾರಿತ್ರಿಕ ಸಂದರ್ಭದಲ್ಲಿ ನಡೆದಿರುವ ಲಿಂಗ ಅಸಮಾನತೆ ಕೂಡ ಒಂದು ಚಾರಿತ್ರಿಕ ಮೋಸವಾಗಿ ಕಾಣಿಸುತ್ತದೆ. ' ನ ಸ್ತ್ರೀ ಸ್ವಾತಂತ್ರ್ಯಮರ್ಹತಿ' ಎಂಬ ಮನು ಆಗಲೀ, "Anotomy decides the destiny" ಎಂಬ ತೀರ್ಮಾನವನ್ನು ಬರೆದ ಫ್ರಾಯ್ಡ್ ಆಗಲಿ ಅವರ ಮುನ್ನ ಇದ್ದ ಯೋಚನಾ ಕ್ರಮಗಳ ದಾಖಲಾತಿಯೇ ಆಗಿದ್ದಾರೆ.

---

* ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬಿಜಾಪೂರ ಇವರು ನಡೆಸಿದ ' ವಚನ ಸಂಗೀತೋತ್ಸವ' ವಿಚಾರ ಗೋಷ್ಠಿಯಲ್ಲಿ ಮಂಡಿಸಿದ ಪ್ರಬಂಧ

ಹೆಣ್ಣೆಂದರೆ ಗರ್ಭಕೋಶ ಮತ್ತು ಹೆರುವವಳು ಎಂಬ ಯೋಚನಾಕ್ರಮದ ಬೆಳವಣಿಗೆಗೂ, ವ್ಯವಸಾಯವನ್ನು ವೃತ್ತಿಯನ್ನಾಗಿಸಿಕೊಂಡ ಮನುಷ್ಯರ ಚಾರಿತ್ರಿಕ ಬೆಳವಣಿಗೆಗೂ ಸಂಬಂಧವಿದೆ. ಬೇಟೆಯನ್ನು ಮೂಲ ಕಸುಬನ್ನಾಗಿಸಿಕೊಂಡು ಬದುಕಿದ್ದ ಕಾಲಕ್ಕೆ ಇದ್ದ ಮೌಲ್ಯಗಳು ವ್ಯವಸಾಯ ಮೂಲ ಕಸುಬಾದ ಸಂದರ್ಭಕ್ಕೆ ಅಪ್ರಸ್ತುತವಾಗುತ್ತಾ - ಹೆಣ್ಣನ್ನು ಭೂಮಿಗೆ, ಪುರುಷನನ್ನು ಸೃಷ್ಟಿಸುವ ಒಡೆತನಕ್ಕೆ, ಆ ಮೂಲಕ ಆಳ್ವಿಕೆಗೆ, ಉಳುವ, ಬಿತ್ತುವ ಪ್ರಭುತ್ವಕ್ಕೆ ಆರೋಪಿಸಿದ ಮೌಲ್ಯಗಳು ಪ್ರಸ್ತುತವಾದದ್ದು ಚಾರಿತ್ರಿಕವಾಗಿ ನಡೆದ ಬದಲಾವಣೆಗಳೇ.

ಆಗ ಹೆಣ್ಣು ತನ್ನ ವಿಧೇಯತೆ, ನಯ, ಲಾವಣ್ಯ, ಕೋಮಲ ಮುಂತಾದ ''ಹೆಣ್ಣುಗುಣ'' ಗಳಿಗೆ ಸೀಮಿತಳಾಗಿ, ಗಂಡು, ಆಕ್ರಮಣಶೀಲತೆ, ಬಲಿಷ್ಠ ಮುಂತಾದ ''ಗಂಡುಗುಣ'' ಗಳಿಗೆ ಸೀಮಿತನಾದ. ಇವೆರಡು ಸಂಕುಚಿತ ಗುಣಗಳ ಆರೋಪವೇ ಆಗಿ ಪುರುಷ ಮತ್ತು ಸ್ತ್ರೀ ಅಂತಹ ಮೌಲ್ಯಗಳನ್ನು ಕಾಪಾಡಲು ಹೆಣಗಿದರು. ಅಂತಹ ಗುಣ ನಡತೆಗಳನ್ನು ಮೀರುವ ಸಂದರ್ಭವೆಂದರೆ 'ಅತಿರೇಕ' ಎಂಬ ಅಪಕಲ್ಪನೆ ಬೆಳೆಯಿತು. ಆದರೆ ಮೂಲಭೂತವಾಗಿ ಪ್ರತಿಯೊಬ್ಬರು ದ್ವಿಲಿಂಗಿಗಳೇ ಎಂಬುದನ್ನಾಗಲೀ, ಅಂಥ ಮಿಶ್ರಗುಣ ಸಹಜ ಎಂಬ ಚಿಂತನೆಯಾಗಲಿ ಬೆಳೆಯಲಿಲ್ಲ.

ಈ ರೀತಿಯ ಲಿಂಗಾತೀತ ನಿರ್ಲಿಂಗಿ ಗುಣಗಳು ಶರಣ ಚಳುವಳಿಯಲ್ಲಿ ಕಾಣಿಸುತ್ತವೆ. ನಿರ್ದಿಷ್ಟ ಕುಟುಂಬದ ಒಳಗೆ ಹೆಂಡತಿಯಾಗುವ , ಆ ಮೂಲಕ ತಾಯಿಯಾಗುವ, ತಾಯ್ತನದ ಎಲ್ಲ ''ಸಹಜ ಗುಣ'' ಗಳನ್ನು ಹೆಣ್ಣಿಗೆ ಆರೋಪಿಸುವ ಕೌಟುಂಬಿಕ ಸ್ಥಿತಿಗಿಂತ ತೀರ ಭಿನ್ನವಾದ ಸ್ಥಿತಿಯನ್ನು ಇಲ್ಲಿ ಕಾಣಬಹುದಾಗಿದೆ.

ಈ ದೃಷ್ಟಿಯಿಂದ ಸ್ತ್ರೀಯಾಗಿ ಹುಟ್ಟುವುದು ಮತ್ತು ಸಾಂಸ್ಕೃತಿಕ ಸಂದರ್ಭದಲ್ಲಿ ಸ್ತ್ರೀತನವನ್ನು ಪಡೆಯುವದು ಎರಡೂ ಒಂದೇ ಅಲ್ಲ, ಅವು ಭಿನ್ನ ಎಂಬ ಎಚ್ಚರಿಕೆಯ ಅಗತ್ಯವಿದೆ. ಒಂದೊಮ್ಮೆ ಸ್ತ್ರೀ ಸಂವೇದನೆ ಎಂದರೆ ಅವಳ ನಯ, ನಾಜೂಕು, ನಾಚಿಕೆ, ಕೋಮಲತೆ ಮುಂತಾದ ಗುಣಗಳೆಂದು ಒಪ್ಪಿಕೊಂಡರೆ, ಶರಣ ಚಳುವಳಿಯ ವಚನಕಾರ್ತಿಯರು ಪ್ರಕಟಿಸುವ ಸ್ತ್ರೀಸಂವೇದನೆ ಸಂಪ್ರದಾಯಸ್ಥರಿಗೆ ದಿಗಿಲು ಹುಟ್ಟಿಸಬಹುದು. ಆದ್ದರಿಂದಲೇ ವರ್ತಮಾನದ '' ಸ್ತ್ರೀಸಂವೇದನೆ'' ಯ ಕುರಿತ ತಪ್ಪು ತಿಳುವಳಿಕೆಯನ್ನು ತಿದ್ದಿಕೊಂಡು ಸ್ತ್ರೀ ಮತ್ತು ಸ್ತ್ರೀತನಗಳು ಪರಸ್ಪರ ಆರೋಪಿತ ಮತ್ತು ಅವುಗಳ ಬೆಳವಣಿಗೆಗೆ ಜೈವಿಕವಲ್ಲದ, ಸಾಮಾಜಿಕ ಮತ್ತು ಸಾಂಸ್ಕೃತಿಕ ಕಾರಣಗಳಿವೆ ಎಂಬ ಅಂಶವನ್ನು ವಚನಕಾರ್ತಿಯರು ಪ್ರಕಟಿಸುವ ಸಂವೇದನೆಗಳು ಸ್ಪಷ್ಟಪಡಿಸುತ್ತವೆ.

ಸ್ತ್ರೀವಾದವೇ ಗುರುತಿಸುವ ಹಾಗೆ, '' ಸ್ತ್ರೀ ಬರೆದ ಕಾರಣಕ್ಕಾಗಿಯೇ ಅವಳ ಕೃತಿಗಳೆಲ್ಲ ಸ್ತ್ರೀನಿಷ್ಠವಾಗಬೇಕಿಲ್ಲ, ಹೆಣ್ಣು ಓದುವಾಗಲೂ ಪುರುಷನಂತೆ ಓದುತ್ತಾಳೆ, ಓದಬಲ್ಲಳು. ಹೆಣ್ಣಿಗೆ ಹೆಣ್ಣಿನಂತೆ ಓದುವದಕ್ಕೆ ಕೇಳುವ ಕಾರಣ ಯಾವುದಿದೆಯೋ ಅದನ್ನು ಸ್ತ್ರೀನಿಷ್ಠವೆಂದು

ಭಾವಿಸಬೇಕಾಗುತ್ತದೆ.'' (ಮ್ಯಾಗಿಹಮ್ ; ೧೯೮೬, ೧೩) ಈ ಮಾತು ಈಗಾಗಲೇ ನಾನು ಮೇಲೆ ಚರ್ಚಿಸಿರುವ ನಿರ್ಲಿಂಗಿ ಅಥವಾ ದ್ವಿಲಿಂಗಿ ಗುಣವನ್ನೇ ಸ್ಪಷ್ಟಪಡಿಸುತ್ತದೆ.

ಆದರೆ ಸಾಹಿತ್ಯವನ್ನು ವಿಮರ್ಶಿಸುವ ಮಾನದಂಡಗಳು ಕೂಡ ನಮ್ಮ ಕಾಲದ ಪ್ರಧಾನ ಆಲೋಚನಾ ಕ್ರಮದ ಮುಖಾಂತರವೇ ನಿರ್ಧರಿತವಾಗಿವೆ. '' ವಿಮರ್ಶಕರು ತಮ್ಮ ಬಗ್ಗೆ ಪಕ್ಷಪಾತ ಮಾಡುತ್ತಿರುವರೆಂದು ಲೇಖಕಿಯರು ಆಪಾದಿಸುತ್ತಿರುವುದರಲ್ಲಿ ಏನೇನೂ ಹುರುಳಿಲ್ಲ. ಹಾಗೆ ನೋಡಿದರೆ ಇವರು ಮಹಿಳೆಯರು ಎಂಬ ಕಾರಣಕ್ಕಾಗಿ ಇವರ ಕೃತಿಗಳಿಗೆ ಸಿಗಬೇಕಾದುದಕ್ಕಿಂತ ಹೆಚ್ಚಿನ ಗಮನ ಸಿಕ್ಕಿದೆ. ಇದಕ್ಕೆ ಹೆಣ್ಣುಮಕ್ಕಳೆಂಬ ದಾಕ್ಷಿಣ್ಯ ಒಂದು ಕಾರಣವಾದರೆ, ಇವರಿಂದ ಮುಂದಾದರೂ ಒಳ್ಳೆಯ ಕೃತಿಗಳು ಬರಲಿ ಎಂಬ ಪ್ರೋತ್ಸಾಹ ಇನ್ನೊಂದು ಕಾರಣ. ವಾಸ್ತವವಾಗಿ ನಮ್ಮ ವಿಮರ್ಶೆ ಸಮೀಕ್ಷೆಗಳಲ್ಲೆಲ್ಲ ಮಹಿಳೆಯರ ಸಲುವಾಗಿ ಪ್ರತ್ಯೇಕ ವಿಭಾಗಗಳನ್ನು ಕಲ್ಪಿಸಿಕೊಳ್ಳುವುದೇ ಒಂದು ವಿಶೇಷ ರಿಯಾಯತಿ '' (ಗಿರಡ್ಡಿ ಗೋವಿಂದರಾಜ: ೧೯೭೯, ೩೬) ಎಂಬಂತಹ ಆಧುನಿಕ ವಿಮರ್ಶಕರ ಧಾರ್ಷ್ಟ್ಯದ ಮಾತುಗಳ ಹಿಂದೆ ಇರುವುದು ಸಾಹಿತ್ಯವನ್ನು ಲಿಂಗಾಧಾರಿತ ನೆಲೆಯಲ್ಲಿ ನೋಡುವ ಪೂರ್ವಗ್ರಹವೇ. ಇಂತಹ ಪೂರ್ವಗ್ರಹಗಳಿಂದ ಮುಕ್ತವಾಗಿ '' ಹೇಗೆ ಬರೆದಿದ್ದಾರೆ ಎನ್ನುವುದು ಹೇಗೆ ಬರೆಯುವುದಕ್ಕೆ ಅನುಮತಿಸಿದ್ದಾರೆ.'' (ಮ್ಯಾಗಿಹಮ್ : ೧೯೮೬) ಎಂಬ ನೆಲೆಯಿಂದ ನಿರ್ಧರಿತವಾಗುತ್ತದೆ ಎಂಬುದನ್ನು ಪರಿಗಣಿಸಿ ಸಾಹಿತ್ಯವನ್ನು ಅರ್ಥಮಾಡಿಕೊಳ್ಳಬೇಕಾಗಿದೆ.

ಹಾಗಾಗಿ '' ಶಿವಶರಣರ ಕ್ರಾಂತಿಯಲ್ಲಿ ಅನೇಕ ಜನ ಶಿವಶರಣೆಯರು ಅವತರಿಸಿದುದು ಒಂದು ವಿಶೇಷವೆಂದು ಹೇಳಬೇಕು. ಅದು ಬಸವಾದಿ ಪ್ರಮಥರ ದಿವ್ಯದರ್ಶನದ ಪ್ರಭಾವವೆಂದು ಹೇಳಿದರೆ ಅತ್ಯುಕ್ತಿಯಲ್ಲ'' (ಹಿರೇಮಠ ಆರ್. ಸಿ. ೧೯೬೮ ಭಾಗ II, III) ಎಂಬ ಮಾತೇ '' ಅನುಮತಿ'' ಅನ್ನುವುದನ್ನು ಹೆಣ್ಣಿನ ಕಾವ್ಯರಚನೆಯ ಮೊದಲ ಮಾನದಂಡ ಎಂಬುದನ್ನು ಒಪ್ಪಿಕೊಳ್ಳುತ್ತದೆ. ಇಂತಹ ಅನೇಕ ಸಂಕುಚಿತ ಮನೋಭಾವಗಳ ಮಧ್ಯೆ ''ಪುರುಷರ ಅನುಮತಿ'' ಇದ್ದ ಕಾಲಘಟ್ಟದಲ್ಲಿ ಹುಟ್ಟಿಕೊಂಡಿರುವ ವಚನಕಾರ್ತಿಯರ ವಚನಗಳಿಗೆ ಮಹತ್ವವಿದೆ.

ಪ್ರಬಂಧದ ವ್ಯಾಪ್ತಿ ಮತ್ತು ಉದ್ದೇಶ : ಈ ಪ್ರಬಂಧದಲ್ಲಿ ಇಡೀ ವಚನ ಸಾಹಿತ್ಯವನ್ನು ಗಮನದಲ್ಲಿಟ್ಟುಕೊಂಡು ಸ್ತ್ರೀಸಂವೇದನೆಯ ಚರ್ಚೆಯನ್ನು ನಾನು ವಿಶ್ಲೇಷಿಸುತ್ತಿಲ್ಲ. ವಚನಸಾಹಿತ್ಯದ ಕಾಲಕ್ಕೆ ಕಂಡು ಬಂದ ವಚನಕಾರ್ತಿಯರ ವಚನಗಳನ್ನು ಸ್ತ್ರೀಸಂವೇದನೆಯ ನೆಲೆಯಲ್ಲಿ ಗಮನಿಸುವುದು ಈ ಪ್ರಬಂಧದ ಉದ್ದೇಶ. ಪ್ರತಿ ವಚನಕಾರ್ತಿಯರನ್ನು ವೈಯುಕ್ತಿಕ ನೆಲೆಯಲ್ಲಿ ಚರ್ಚಿಸುವದು ಈ ಪ್ರಬಂಧದ ವಿಸ್ತಾರದ ಒಳಗೆ ಅಸಾಧ್ಯವಾದದ್ದರಿಂದ ವಚನಕಾರ್ತಿಯರಲ್ಲಿ ಕಂಡುಬರುವ ಕೆಲವು ಸಮಾನ ಅಂಶಗಳನ್ನು (Common factors) ಗುರುತಿಸವುದು ಈ ಪ್ರಬಂಧದ ಉದ್ದೇಶ.

ವಚನಕಾರ್ತಿಯರು ಲೌಕಿಕ - ಅಲೌಕಿಕ ಎಂಬ ಭೇದದ ಮುಖಾಂತರ ವ್ಯಕ್ತ ಪಡಿಸುವ ಅಂಶಗಳಾವುವು. ಅವರ ಸಂಬೋಧನೆಗಳು ಆಕಸ್ಮಿಕಗಳೇ, ಉದ್ದೇಶ ಪೂರ್ವಕವೇ, ವರ್ಣನೆಗೂ ಕವಯಿತ್ರಿಯರ ಮನೋಧರ್ಮಕ್ಕೂ ಸಂಬಂಧವಿದೆಯೇ ಮುಂತಾದ ಪ್ರಶ್ನೆಗಳನ್ನು ಪ್ರಮುಖವಾಗಿಟ್ಟುಕೊಂಡು ಸ್ತ್ರೀಸಂವೇದನೆಗಳನ್ನು ಗುರುತಿಸುವುದು ಈ ಪ್ರಬಂಧದ ಉದ್ದೇಶ. ಆ ಮೂಲಕ ವಚನಕಾರ್ತಿಯರು ಪ್ರಕಟಿಸುವ ಸ್ತ್ರೀಸಂವೇದನೆಯ ಸ್ವರೂಪದ ಕುರಿತು ನಾವು ಕೆಲವು ನಿರ್ದಿಷ್ಟ ನಿಲುವುಗಳನ್ನು ತಳೆಯಲು ಸಾಧ್ಯವಿದೆ.

ಶರಣ ಚಳುವಳಿಯ ಪ್ರಧಾನ ಗುಣಗಳು : ಭಕ್ತ ಚಳುವಳಿಯಲ್ಲಿ ಪ್ರತೀ ಭಕ್ತ ಅಥವಾ ಭಕ್ತೆಯರು ಸಾಮಾನ್ಯರ ಬದುಕಿಗಿಂತ ತೀರ ಭಿನ್ನವಾದ ಮೂರು ಪರ್ಯಾಯ (alternatives) ಗಳನ್ನು ಸೃಷ್ಟಿಸಿಕೊಳ್ಳುವುದು ಗಮನಾರ್ಹ ಅಂಶ. ಈ ಮೂರು ಪರ್ಯಾಯಗಳನ್ನು ಹೀಗೆ ಗುರುತಿಸಬಹುದು :

೧) ಅಲೌಕಿಕ ಲೋಕದ ಸೃಷ್ಟಿ

೨) ಅಲೌಕಿಕ ಗಂಡನ ಸೃಷ್ಟಿ

೩) ವಚನ ಸೃಷ್ಟಿ

ಈ ಮೂರು ಪರ್ಯಾಯಗಳ ಮುಖಾಂತರವೇ ಅವರು ಸಾಮಾನ್ಯ ಬದುಕಿನ ಪರಿಧಿಯಿಂದ ಪ್ರತ್ಯೇಕರಾಗುತ್ತಾರೆ. ಈ ಮೂರು ಬದಲಿಗಳ ಸೃಷ್ಟಿ ಭಕ್ತೆಯರಿಗೇ ವಿಶೇಷವಾದ ಸಂಗತಿಗಳಲ್ಲ. ಆದರೆ ಅವು ಶರಣೆಯರ ಸಂದರ್ಭದಲ್ಲಿ ಪಡೆದುಕೊಳ್ಳುವ ಭಿನ್ನ ಅರ್ಥ ಸಾಧ್ಯತೆಗಳನ್ನು ಮುಂದೆ ಚರ್ಚಿಸಬಹುದು.

ಈ ಲೌಕಿಕಕ್ಕಿಂತ ತೀರ ಭಿನ್ನವಾದ ಧಾರ್ಮಿಕ ಲೋಕದ ಸೃಷ್ಟಿ ಪ್ರತೀ ಭಕ್ತಿ ಪಂಥದ ಮೊದಲ ಹಂತ. ಹಾಗಾಗಿ ಸಹಜವಾಗಿಯೇ ಅಲೌಕಿಕಕ್ಕೆ ಮೊದಲ ಪ್ರತಿಭಟನೆಯಾಗಿಯೇ ಗೋಚರವಾಗುತ್ತದೆ. ಅಲೌಕಿಕದ ಸೃಷ್ಟಿ ಮತ್ತು ಅದರ ಸ್ವೀಕರಣೆ ಎಂದರೆ ಲೋಕದ ನಿರಾಕರಣೆ ಎಂಬುದು ಸ್ಪಷ್ಟ.

ಆದರೆ ಮುಂದಿನ ಹಂತ ಈ ಲೋಕದ ಗಂಡನ (ಹೆಂಡತಿಯ ಅಲ್ಲ) ನಿರಾಕರಣೆ ಮತ್ತು ಆ ಲೋಕದ ಗಂಡನ ಸೃಷ್ಟಿ . ಇದೂ ಕೂಡ ಲೌಕಿಕದ ಗಂಡನನ್ನು ನಿರಾಕರಿಸುವುದಕ್ಕೆ ಮಾಡಿಕೊಂಡ ಬದಲಿ ವ್ಯವಸ್ಥೆಯೇ ಆಗಿದೆ. ಇಂತಹ ಅಲೌಕಿಕ ಲೋಕ ಮತ್ತು ಅಲೌಕಿಕ ಗಂಡಂದಿರನ್ನು ಸೃಷ್ಟಿಸಿ ಪ್ರತೀ ಭಕ್ತೆಯರೂ ಸಾಹಿತ್ಯ ಸೃಷ್ಟಿ ಎಂಬ ಮೂರನೆಯ ಬದಲಿ ವ್ಯವಸ್ಥೆಯನ್ನು ಹುಟ್ಟಿಸಿದ್ದಾರೆ ಎಂಬುದು ಕುತೂಹಲದ ಅಂಶ. ಅದು ಅವರ ಪರ್ಯಾಯ ಲೋಕದ, ಪರ್ಯಾಯ ಗಂಡನ ಕುರಿತ ಭಾಷಿಕ ಅಭಿವ್ಯಕ್ತಿ ಮತ್ತು ಆ ಮೂಲಕ ಅವರು ಸೃಷ್ಟಿಸಿಕೊಂಡಿರುವ ಬದುಕನ್ನು ದಾಖಲಿಸಿಟ್ಟ ಮಾದರಿ ರಚನೆಗಳು.

ಅಲೌಕಿಕ ಗಂಡನ ಸೃಷ್ಟಿಸಿಕೊಳ್ಳುವ ಭಕ್ತ ಮತ್ತು ಭಕ್ತೆಯರಿಬ್ಬರನ್ನೂ ಒಂದೇ ಮಾನದಂಡದಿಂದ ಅರ್ಥೈಸಿಕೊಳ್ಳಬಹುದೇ? ಎ. ಕೆ. ರಾಮಾನುಜನ್ ಬರೆಯುತ್ತಾರೆ: ಲೌಕಿಕದ ಗಂಡುತನ ಎನ್ನುವುದೇ ಒಂದು ಸವಲತ್ತು (Privilege). ಬದುಕಿನ ಅನೇಕ ಸವಲತ್ತುಗಳನ್ನು ದಾಟುವುದೇ ನಿಜವಾದ ಭಕ್ತಿಯ ಅನುಭವಕ್ಕೆ ಅಗತ್ಯವಾದದ್ದರಿಂದ ''ಗಂಡುತನ'' ಎಂಬ ಸವಲತ್ತನ್ನು ದಾಟುವುದೂ ಇಲ್ಲಿಯ ಮುಖ್ಯ ಗುಣ (ರಾಮಾನುಜನ್.ಎ ಕೆ. : ೧೯೭೨, ೫೪). ಆದರೆ ಈ ವಿವರಣೆಯನ್ನು ಭಕ್ತ ಮತ್ತು ಭಕ್ತೆಯರಿಬ್ಬರ ಸಂದರ್ಭದಲ್ಲೂ ಒಪ್ಪಿಕೊಳ್ಳುವುದು ಕಷ್ಟ . ವಚನಕಾರ್ತಿಯರು ಇದಕ್ಕೆ ಬೇರೆಯೇ ವಿವರಣೆಯನ್ನು ಅಪೇಕ್ಷಿಸುತ್ತಾರೆ.

ಏಕೆಂದರೆ ಇವರ ಅಲೌಕಿಕ ಲೋಕದ ಸೃಷ್ಟಿಯು (ಪ್ರಮುಖ ಭಕ್ತೆಯರಿಗೆ ಸೀಮಿತಗೊಳಿಸಿ ಹೇಳುವುದಾದರೆ - ಮಹಾದೇವಿ, ಮೀರಾ, ಆಂಡಾಳ, ಕಾರಿಕಾಲಮ್ಮ) ಪೂರ್ತಿಯಾಗಿ ಲೌಕಿಕ ಲೋಕದ ಎಲ್ಲ ಬಂಧನಗಳ ನಿರಾಕರಣೆಯಾಗಿ ರಚಿತವಾಗಿದೆ. ಆದ್ದರಿಂದ ಈ ಲೋಕದ ಗಂಗಾಂಬಿಕೆ, ನೀಲಾಂಬಿಕೆಯರಿಗೆ ಗಂಡನಾಗಿ ಉಳಿದುಕೊಂಡೇ ಪರ್ಯಾಯ ಲೋಕ ಮತ್ತು ಗಂಡನನ್ನು ಸೃಷ್ಟಿಸುವ ಬಸವಣ್ಣನಂಥವರಿಗೂ, ತನ್ನ ಗಂಡ ಮತ್ತು ಈ ಲೋಕವನ್ನು ನಿರಾಕರಿಸಿ ದೇವರನ್ನೇ ಪರ್ಯಾಯ ಗಂಡನನ್ನಾಗಿಸಿ, ಅಲೌಕಿಕ ಲೋಕ ಸೃಷ್ಟಿಸುವ ಅಕ್ಕಮಹಾದೇವಿಯಂಥವರಿಗೂ ಅಗಾಧ ವ್ಯತ್ಯಾಸವಿದೆ. ಪುರುಷ ಭಕ್ತರು ಅಲೌಕಿಕ ಲೋಕದ ಒಳಗೆ ತಾತ್ಕಾಲಿಕವಾಗಿ ಮಾತ್ರ ಲೌಕಿಕವನ್ನು ನಿರಾಕರಿಸಿದರೆ, ಭಕ್ತೆಯರು ಶಾಶ್ವತವಾಗಿ ಲೌಕಿಕವನ್ನು ನಿರಾಕರಿಸುತ್ತಾರೆ. ಈ ನೆಲೆಯಲ್ಲಿ ಭಕ್ತಿ ಚಳುವಳಿ ಎನ್ನುವುದು ಗಂಡುತನದ, ಆ ಮೂಲಕ ಸವಲತ್ತುಗಳನ್ನು ಒಪ್ಪುವ ಪ್ರಭುತ್ವದ ನಿರಾಕರಣೆ ಎಂಬ ಎ. ಕೆ. ರಾಮಾನುಜನ್ ಅವರ ವಾದವನ್ನು ಒಪ್ಪುವುದು ಕಷ್ಟವಾಗುತ್ತದೆ. ಹೀಗಾಗಿ ಎ. ಕೆ. ರಾಮಾನುಜನ್ ಅವರ ವಾದವನ್ನು ತಾತ್ಕಾಲಿಕ ಮತ್ತು ಶಾಶ್ವತ ಎಂಬ ನೆಲೆಗಳಲ್ಲಿ ವಿವರಿಸಬೇಕಾಗುತ್ತದೆ. ಭಕ್ತೆಯರು ಶಾಶ್ವತವಾಗಿ ಪ್ರಭುತ್ವವನ್ನು ನಿರಾಕರಿಸಿದರೆ, ಭಕ್ತರು ತಾತ್ಕಾಲಿಕವಾಗಿ ಮಾತ್ರ ಪ್ರಭುತ್ವವನ್ನು ನಿರಾಕರಿಸಿ ಉಳಿದ ಸಂದರ್ಭಗಳಲ್ಲಿ ಅದನ್ನು ನೆಮ್ಮಿಕೊಂಡಿದ್ದಾರೆ. ಅವರು ಗಂಡುತನವನ್ನು ಪೂರ್ತಿ ನಿರಾಕರಿಸುವುದೂ ಇಲ್ಲ; ಹೆಣ್ಣುತನವನ್ನು ಪೂರ್ತಿ ಒಪ್ಪಿಕೊಳ್ಳುವುದೂ ಇಲ್ಲ. ತಾತ್ಕಾಲಿಕವಾಗಿ ಮಾತ್ರ ತಮ್ಮ ದೇವರೆಂಬ ಗಂಡನ ಮುಂದೆ ಹೆಣ್ಣಾಗುತ್ತಾರೆ. ಆದರೆ ವಚನಕಾರ್ತಿಕರು ನಿರ್ಲಿಂಗಿ ಗುಣಪ್ರಕಟಿಸುವುದು ಈ ನಿರಾಕರಣೆಯಲ್ಲೇ.

ಈ ದೃಷ್ಟಿಯಿಂದಲೇ ಶರಣ ಚಳುವಳಿಯ ವಚನ ಎಂಬ ವಾಚಿಕ ಅಭಿವ್ಯಕ್ತಿ ಕೂಡ ಪುರುಷ ವಚನಕಾರರು ಮತ್ತು ವಚನಕಾರ್ತಿಯರ ಅನುಭವಕ್ಕೆ ಅನುಗುಣವಾಗಿ ವಿಭಿನ್ನವಾಗಿದೆ. ಈ ಕೆಳಗಿನ ಕೆಲವು ಪ್ರಮುಖ ಅಂಶಗಳನ್ನು ವಚನಕಾರ್ತಿಯರು ವ್ಯಕ್ತಪಡಿಸುವ ಸ್ತ್ರೀಸಂವೇದನಾತ್ಮಕ

ಗುಣಗಳೆಂಬ ನೆಲೆಯಲ್ಲಿ ಚರ್ಚಿಸುತ್ತಾ ಅವು ಪುರುಷರ ವಾಚಿಕ ಅಭಿವ್ಯಕ್ತಿಗಿಂತ ಹೇಗೆ ಭಿನ್ನ ಎಂಬುದನ್ನು ಸ್ಥೂಲವಾಗಿ ಗಮನಿಸೋಣ.

೧) ಬೋಧನೆಯ ಅಂಶಗಳ ಗೈರುಹಾಜರಿ
೨) ಅಂತಸ್ಥ ಪ್ರತಿಭಟನೆ ಅಥವಾ ಆತ್ಮಶೋಧ
೩) ಶರಣ ಸತಿ - ಲಿಂಗಪತಿ ತತ್ವ
೪) ಭೋಗ ಮತ್ತು ವರ್ಣನೆ
೫) ಸ್ತ್ರೀಯ ಭಾಷೆ ಮತ್ತು ಕೇಳುಗರು

೧. ಬೋಧನೆಯ ಅಂಶಗಳ ಗೈರು ಹಾಜರಿ : ವಚನಕಾರ್ತಿಯರ ವಚನಗಳಲ್ಲಿ ನಾವು ವೈಯಕ್ತಿಕ ತುಮುಲ, ಆತ್ಮಶೋಧ, ಗಂಡನನ್ನು ಕುರಿತ ನಿರಂತರ ಹುಡುಕಾಟ, ಮಿಲನದ ಅಪೇಕ್ಷೆ ಮೊದಲಾದವುಗಳನ್ನು ಸಾಕಷ್ಟು ಪ್ರಮಾಣದಲ್ಲಿ ಗುರುತಿಸಬಹುದಾಗಿದೆ. ಆದರೆ ಸಾಮಾಜಿಕ ವಿಡಂಬನೆ, ನೀತಿಬೋಧೆ, ತಿದ್ದುವಿಕೆ ಮುಂತಾದ ವಿಚಾರಗಳು ಇಲ್ಲವೇ ಇಲ್ಲವೆಂಬಷ್ಟು ವಿರಳ. ಪ್ರಮುಖ ವಚನಕಾರ್ತಿಯಾದ ಅಕ್ಕಳಲ್ಲಿ ಕೆಲವೇ ಕೆಲವು (ಸುಮಾರು ಒಂಬತ್ತು)[೧] ವಚನಗಳು ಸಾಮಾಜಿಕ ನೀತಿಬೋಧೆಗೆ ಸೀಮಿತವಾಗಿರುವದನ್ನು ಕಾಣುತ್ತೇವೆ. ಈ ಮಾತಿಗೆ ಅಪವಾದವಾಗಿ ಕಾಣಸುವ ಏಕಮಾತ್ರ ವಚನಕಾರ್ತಿ ಲಿಂಗಮ್ಮ. ಅವಳು ಬೋಧನೆಯಲ್ಲಿಯೇ ಮುಳುಗಿ ತನ್ನ ವಚನಗಳಲ್ಲಿ ಏಕತಾನತೆಯನ್ನು ಹೊಂದಿರುವುದು ಕುತೂಹಲದ ಅಂಶ.

ಬಸವಣ್ಣ, ಜೇಡರ ದಾಸಿಮಯ್ಯ ಮುಂತಾದ ಪ್ರಮುಖ ವಚನಕಾರರಲ್ಲಿ ಕಾಣಸುವ ಬೋಧನೆಯ ಅಂಶಗಳು, ವಚನಕಾರ್ತಿಯರಲ್ಲಿ ಕಾಣಸದೆ ಇರುವುದಕ್ಕೆ ಕಾರಣವಿದೆ. ಬೇರೆಯವರನ್ನು ತಿದ್ದುವ, ಬೋಧಿಸುವ ಸ್ಥಿತಿ ಎಂದರೆ ಒಂದು ದೃಷ್ಟಿಯಿಂದ ಬಂಧಿತ

---

೧. ಆರ್. ಸಿ. ಹಿರೇಮಠರು ಸಂಪಾದಿಸಿದ ಕೃತಿಯ ಸಂಖ್ಯೆಗಳಿಗನುಗುಣವಾಗಿ ಅವುಗಳನ್ನು ಹೀಗೆ ಗುರುತಿಸಬಹುದು :

ಪು.ಸಂ.	ವ.ಸಂ
೧೪	೩೫
೨೪	೬೨
೩೦	೮೦
೩೨	೮೭
೪೯	೧೨೮
೫೧	೧೩೪
೬೩	೧೬೭
೬೪	೧೬೯

ಸ್ಥಿತಿಯೆ. ಅವರು ಬೇರೆಯವರಿಗೆ ಉಪದೇಶಿಸಿದ ಸಂಗತಿಯನ್ನು ಮೊದಲು ಪಾಲಿಸುವವರಾಗಿರಬೇಕು ಮತ್ತು ತಾವು ಹೇಳುವುದಕ್ಕೆ ಸ್ವತಃ ಬದ್ಧರಿರಬೇಕು. ಆ ಬಳಿಕವೇ ಇತರರಿಂದ ಅದನ್ನು ಅಪೇಕ್ಷಿಸಬೇಕು. ಈ ದೃಷ್ಟಿಯಿಂದ ಬೋಧಿಸುವ ವ್ಯಕ್ತಿ ಸ್ವಾತಂತ್ರ್ಯವಿಲ್ಲದೆ 'ಸಾಮಾಜಿಕ', ಮತ್ತು ''ಬಂಧಿತ'' ವ್ಯಕ್ತಿಯೇ ಆಗಿರುತ್ತಾರೆ. ಆದರೆ ವಚನಕಾರ್ತಿಯರು ಈ ಅರ್ಥದಲ್ಲಿ ಲೌಕಿಕದ ಪ್ರತಿಯೊಂದರಿಂದಲೂ ಸ್ವತಂತ್ರರು ಮತ್ತು ಮುಕ್ತರು. ಈ ನೆಲೆಯಲ್ಲಿ ನೋಡಿದಾಗಲೂ ಇವರ ವಚನಗಳಲ್ಲಿ ಕಾಣದಿರುವ ಸಾಮಾಜಿಕ ತಿದ್ದುಪಡಿಗಳೂ ಅಂತಿಮವಾಗಿ ಸಾಮಾಜಿಕ ಪ್ರಭುತ್ವದ, ಲೌಕಿಕ ಲೋಕದ ನಿರಾಕರಣೆಯೇ ಆಗಿವೆ.

ಉಪದೇಶಕ್ಕಿಂತ ಆಚರಣೆಯನ್ನೇ ಮಾದರಿ ಮಾಡಿಕೊಳ್ಳುವ ಗುಣವಿಶೇಷತೆಯನ್ನು ಅಕ್ಕಮಹಾದೇವಿಯಲ್ಲಿ ಸ್ಪಷ್ಟವಾಗಿ ಗುರುತಿಸಬಹುದು. ಬಸವ, ಅಲ್ಲಮಾದಿಗಳು ಯಾವುದನ್ನು ಬೋಧಿಸಿ, ತಿದ್ದುವ ಕೆಲಸವನ್ನು ಮಾಡಿದರೋ ಅಕ್ಕಳಂಥವರು ಅದನ್ನು ಆಚರಣೆಯ ಮುಖಾಂತರವೇ ವ್ಯಕ್ತಪಡಿಸಿದ್ದಾರೆ. ಅಕ್ಕ ಬದುಕುವ ಕ್ರಮದಲ್ಲೇ ಸಮಾಜಕ್ಕೆ ಮಾದರಿಯನ್ನು ನೀಡುತ್ತಾಳೆಯೇ ಹೊರತು ಬೋಧನೆಯ ಮುಖಾಂತರ ಅಲ್ಲ. ಮತ್ತು ಅವಳ ಈ ಮಾದರಿಯೂ ಕೂಡ ''ಕಳಬೇಡ, ಕೊಲಬೇಡ'' ದಂಥ ಸಾಮಾಜಿಕ ಸಂಗತಿಯ ಕುರಿತದ್ದಾಗಿರದೆ ಕುಟುಂಬ, ತಾಯ್ತನ, ಗಂಡ ಮುಂತಾದ ಕೌಟುಂಬಿಕ ಪರಿಕಲ್ಪನೆಗಳಲ್ಲಿ ಮಾಡಿಕೊಳ್ಳಬೇಕಾದ ತಿದ್ದುಪಡಿಯನ್ನು ಸೂಚಿಸುತ್ತದೆ.

ಮಧುಕೀಶ್ವರ ಮತ್ತು ರುತ್‌ವನಿತಾ ಅವರು ಕೇಳುವ ಭಕ್ತೆಯರು ಒಂದು ಪಂಥ ನಿರ್ಮಾಣ ಮಾಡದೆ ಇರಲು ಕಾರಣವೇನು ಎಂಬ ಪ್ರಶ್ನೆಗೆ[೨] ಇಲ್ಲಿ ಉತ್ತರವನ್ನು ಕಂಡು ಕೊಳ್ಳಬಹುದಾಗಿದೆ. ಸಾಮಾಜಿಕ ಅಥವಾ ಸಾಮೂಹಿಕ ತಿದ್ದುಪಡಿಗಿಂತ ಭಕ್ತೆಯರಿಗೆ ಉದ್ಧಾರ ಮತ್ತು ವೈಯುಕ್ತಿಕ ನೆಲೆಯ ಆಚರಣೆಯೇ ಪ್ರಮುಖವಾಗಿರುವುದನ್ನು ವಚನಾಕಾರ್ತಿಯರ ಉದಾಹರಣೆಗಳು ಸ್ಪಷ್ಟಪಡಿಸುತ್ತವೆ. ಬೋಧಕನ ಪತ್ನಿ ಎನಿಸಿಕೊಂಡ ನೀಲಾಂಬಿಕೆ, ಗಂಗಾಂಬಿಕೆಯರೂ ಆಂತರಿಕ ತುಮುಲಗಳ ಒತ್ತಡವನ್ನೇ ಪ್ರಮುಖ ಭಾಷಿಕ ಅಭಿವ್ಯಕ್ತಿಯನ್ನಾಗಿಸಿಕೊಂಡದ್ದು ಗಮನಿಸಬೇಕಾದ ಅಂಶ.

೨. ಅಂತಸ್ಥ ಪ್ರತಿಭಟನೆ ಅಥವಾ ಆತ್ಮಶೋಧ : ಪ್ರತಿಭಟನೆಗಳು ಬಹಿರಂಗ ಸ್ವರೂಪದಲ್ಲೂ ಕಾಣಸಬಹುದು. ಅಂತರಂಗ ಸ್ವರೂಪದಲ್ಲೂ ಕಾಣಸಬಹುದು. ಮೇಲೆ ಚರ್ಚಿಸಿದ ಸಾಮಾಜಿಕ ಮತ್ತು ವೈಯಕ್ತಿಕ ಎಂಬ ನೆಲೆಯಲ್ಲಿಯೇ ಇದನ್ನು ಗಮನಿಸಿದರೆ ವಚನಕಾರ್ತಿಯರ ಬಹುತೇಕ ಪ್ರತಿಭಟನೆಗಳು ಆತ್ಮಶೋಧದ ಸ್ವರೂಪದವು ಮತ್ತು ಇಲ್ಲಿ

---

೨. ಈ ಲೇಖನವನ್ನು ಗಮನಿಸಿ : Madhu Kiswar & Ruth Vanita (ಲೇ) Poison to NECTAR : THE LIFE OF MIRABAI India International Centre Quarterly 1992;Volume19,Number 4, New Delhi.

ಸಾಮೂಹಿಕ ಪ್ರತಿಭಟನೆಗಿಂತ ವ್ಯಕ್ತಿಯೇ ಪ್ರತಿಭಟನೆಯ ಮಾದರಿಯಾಗುತ್ತಾರೆ. ಅಕ್ಕ, ಸೂಳೆ ಸಂಕವ್ವೆ, 'ಬಿಡಾಡಿ' ಎಂಬಂತಹ ಅಂಕಿತನಾಮವನ್ನು ಧೈರ್ಯದಿಂದ ಪ್ರಕಟಿಸಿದ ಬೊಂತಾದೇವಿಯರೆಲ್ಲರೂ ಈ ರೀತಿಯ ಅಂತಸ್ಥ ಪ್ರತಿಭಟನೆಯ ಮಾದರಿಯನ್ನೇ ತಮ್ಮ ವಚನಗಳಲ್ಲಿ ಪ್ರಕಟಿಸುತ್ತಾರೆ. ಗುಂಪು ಕಟ್ಟಿಕೊಂಡು ವ್ಯವಸ್ಥೆಯನ್ನು ಪ್ರತಿಭಟಿಸುವ ಬಸವಣ್ಣನಂಥ ಪುರುಷ ಮಾದರಿಗಿಂತ ಇದು ತೀರ ಭಿನ್ನವಾದುದು.

೩. ಶರಣಸತಿ - ಲಿಂಗಪತಿ ತತ್ತ್ವ: ಬಸವ ಅಲ್ಲಮಾದಿಗಳಿಗೆ ಶರಣ ಸತಿ ಭಾವವು ಆರೋಪಿತ ಪ್ರಕ್ರಿಯೆಯಾದರೆ ವಚನಕಾರ್ತಿಯರಿಗೆ ಅದು ಅನಾರೋಪಿತ ಪ್ರಕ್ರಿಯೆ. ಹಾಗಾಗಿ ಈ ತತ್ತ್ವವನ್ನು ಭಕ್ತ ಮತ್ತು ಭಕ್ತೆ ಇಬ್ಬರ ಸಂದರ್ಭದಲ್ಲೂ ಒಂದೇ ನೆಲೆಯಲ್ಲಿ ವಿಶ್ಲೇಷಿಸಲು ಸಾಧ್ಯವಿಲ್ಲ.

ವಚನಕಾರ್ತಿಯರು ಸ್ವತಃ ಹೆಣ್ಣಾಗಿರುವುದು ಮತ್ತು ಅಲೌಕಿಕದ ಗಂಡನನ್ನು ಪತಿಯೆಂದು ಭಾವಿಸುವ ಸಹಜ ಸ್ಥಿತಿಗೂ ಬಸವ ಅಲ್ಲಮಾದಿಗಳು ತಮ್ಮನ್ನು ಹೆಣ್ಣೆಂದು ಆರೋಪಿಸಿಕೊಂಡು, ದೇವರನ್ನು ಗಂಡನೆಂದು ಕಲ್ಪಿಸುವ ಅಸಹಜ ಸ್ಥಿತಿಗೂ ಭೇದವಿದೆ. ಈ ದೃಷ್ಟಿಯಿಂದ ಗಮನಿಸಿದಾಗ ವಚನಕಾರ್ತಿಯರ ವಚನಗಳು ಹೆಚ್ಚು ಅಂತರ್‌ಮುಖಿಯಾಗಿರುವುದನ್ನು ಅರ್ಥೈಸಿಕೊಳ್ಳಬೇಕು. ಇಲ್ಲಿ ಕಾಣುವ ನಿರಂತರ ಹುಡುಕಾಟ. ಅಂತರಂಗದ ತುಡಿತ ಮುಂತಾದ ವಿವರಗಳನ್ನು ಪುರುಷ ವಚನಗಳು ಅಷ್ಟಾಗಿ ಅಭಿವ್ಯಕ್ತಿಸುವುದಿಲ್ಲ.

ಇದಕ್ಕೆ ಪ್ರಮುಖ ಉದಾಹರಣೆಯಾಗಿ ಅಕ್ಕಳ ಮತ್ತು ಕದಿರರೆಮ್ಮವ್ವೆಯ ಒಂದೊಂದು ವಚನಗಳನ್ನು ಗಮನಿಸಬಹುದು.

ಸೆಜ್ಜೆ ಉಪ್ಪರಿಸಿ ಶಿವಲಿಂಗ ಕರಸ್ಥಲಕ್ಕೆ ಬರೆ
ಪ್ರಜ್ವಲಿಸಿ ತೊಳತೊಳಗಿ ಬೆಳಗುತ್ತಿಹ ಕಾಂತಿಯಲ್ಲಿ ಒಜ್ಜರಿಸಿ
ತನುಮನ ದೃಷ್ಟಿ ನಟ್ಟು ಲಿಂಗದಲ್ಲಿ ಒಜ್ಜರಿಸುವ
ಶಿವಸುಖದೊಳೋಲಾಡುತ್ತ ಸಜ್ಜನ ಸದ್ಭಕ್ತ ರತಿಯೊಡನೆ ಕೂಡಾಡಿ
ಲಜ್ಜೆಗೆಟ್ಟು ನಿಮ್ಮ ನೆರೆವೆ ಚನ್ನಮಲ್ಲಿಕಾರ್ಜುನಾ

(ಆರ್. ಸಿ. ಹಿರೇಮಠ; ೧೯೭೩ ೨೭೫-೧೧೬)

ಎಲ್ಲರ ಹೆಂಡಿರು ತೊಳಸಿಕ್ಕುವರು :
ಎನ್ನ ಗಂಡಂಗೆ ತೊಳಸುವುದಿಲ್ಲ
ಎಲ್ಲರ ಗಂಡಂದಿರಿಗೆ ಬಸಿವರು
ಎನ್ನ ಗಂಡ ಬಸಿವುದಿಲ್ಲ.

ಎಲ್ಲ ಗಂಡಂದಿರಿಗೆ ಬೀಜವುಂಟು
ಎನ್ನ ಗಂಡಂಗೆ ಅಂಡದ ಬೀಜವಿಲ್ಲ.
ಎಲ್ಲರ ಗಂಡಂದಿರು ಮೇಲೆ
ಎನ್ನ ಗಂಡ ಕೆಳಗೆ ನಾ ಮೇಲೆ
ಕದಿರರೆಮ್ಮವ್ವೆಯೊಡೆಯ ಗುಮ್ಮೇಶ್ವರಾ.

(ಆರ್. ಸಿ. ಹಿರೇಮಠ, ೧೯೬೮, ೩೮೧-೧೯೩)

ಹೀಗೆ ಇವರ ವಚನಗಳು ಲೈಂಗಿಕಾಭಿಮುಖಿಯಾಗಿದ್ದಾಗಲೂ ಒಂದು ಅಂಶವನ್ನು ಗಮನಿಸಬೇಕು. ಇಲ್ಲಿಯ ಯಾವುದೇ ಲೈಂಗಿಕಾಭಿಮುಖಿ ವಚನಗಳಲ್ಲಿ ತಮ್ಮ ಲಿಂಗ ಪ್ರಜ್ಞೆಯ (Sex Consiousness) ಭಾವವಿಲ್ಲ. 'ಎನ್ನ ದೇವಂಗೆ ಜಗವೆಲ್ಲ ಹೆಣ್ಣು ನೋಡಾ' ಎಂಬಂತಹ ಅಕ್ಕಳ ವಚನದ ಸಾಲುಗಳೇ ಆಗಲಿ, ' ಎಲ್ಲರ ಗಂಡ ಮೇಲೆ ನನ್ನ ಗಂಡ ಕೆಳಗೆ ನಾ ಮೇಲೆ' ಎಂಬ ಕದಿರರೆಮ್ಮವ್ವೆಯ ಅದ್ಭುತ ಸಾಲುಗಳಾಗಲಿ ಸಾರುವುದು ಲಿಂಗಾತೀತ ಅಥವಾ ನಿರ್ಲಿಂಗಿ ಗುಣವನ್ನೇ.

ಆದ್ದರಿಂದ ವಚನಕಾರ್ತಿಯರು ಪ್ರಕಟಿಸುವ ಭಕ್ತಿಯ ಸ್ವರೂಪಕ್ಕೂ ವಚನಕಾರರು ಪ್ರಕಟಿಸುವ ಭಕ್ತಿಯ ಸ್ವರೂಪಕ್ಕೂ ವ್ಯತ್ಯಾಸವಿದೆ. ಏಕೆಂದರೆ ಗಂಡನನ್ನು ಕಳಕೊಂಡ ಅಕ್ಕ, ಪರ್ಯಾಯವಾಗಿ ಭಕ್ತಿಯ ಮೊರೆಹೋದರೆ, ಬಸವ ಅಲ್ಲಮಾದಿಗಳ ಭಕ್ತಿಯ ಸ್ವರೂಪ ಅದಕ್ಕಿಂತ ಭಿನ್ನವಾದದ್ದು [೩].

ತಮ್ಮನ್ನು ಹೆಣ್ಣೆಂದು ಆರೋಪಿಸಿಕೊಳ್ಳಬೇಕಾದ ಪ್ರಸಂಗವಿಲ್ಲದೆ ಸಹಜನೆಲೆಯಲ್ಲಿಯೇ 'ಶರಣ ಸತಿ' ಯರಾಗಿರುವ ವಚನಕಾರ್ತಿಯರು ಅನಾರೋಪಿತ ಪ್ರಕ್ರಿಯೆಯಲ್ಲಿಯೇ ಪ್ರಕಟಿಸುವ ಲಿಂಗಾತೀತ ಗುಣ (ಹೆಣ್ಣೆಂಬ ನೆನಪು ಶಾಪದ ಸ್ಥಿತಿ) ತಮ್ಮನ್ನು ಹೆಣ್ಣೆಂದು ಆರೋಪಿಸಿಕೊಂಡು ಉದ್ದೇಶಪೂರ್ವಕ (ಪ್ರಜ್ಞಾಪೂರ್ವಕ) ಲಿಂಗ ಪ್ರಜ್ಞೆಯನ್ನು ಮರೆಯುವ ಪುರುಷ ಭಕ್ತರ ಗುಣಕ್ಕಿಂತ ಭಿನ್ನವಾದುದು.

೪. ಭೋಗ ಮತ್ತು ವರ್ಣನೆ : ನಮ್ಮ ಭೋಗಕ್ಕೆ ಇರುವ ಸಂಗತಿಗಳನ್ನು ಮಾತ್ರ ನಾವು ವರ್ಣಿಸುತ್ತೇವೆ. ವರ್ಣನೆ ಎಂಬುದೇ '' ಅನುಭವಿಸುವುದರ'' ಭಾಷಿಕ (ಸಾಂಕೇತಿಕ) ಅಭಿವ್ಯಕ್ತಿ. ಪಂಪಾದಿಗಳಿಂದ ಬೆಳೆದು ಬಂದ ವರ್ಣನಾ ಪರಂಪರೆ ವಚನಕಾರ್ತಿಯರ ಸಂದರ್ಭಗಳಲ್ಲಿ ಪಡೆದುಕೊಳ್ಳುವ ಅರ್ಥ ಸ್ವರೂಪ ತೀರ ಭಿನ್ನವಾದುದು. ನಿರ್ದಿಷ್ಟ ವಸ್ತುವಿಗೆ ಆರೋಪಿಸಿರುವ ವರ್ಣನಾ ಗುಣ ಪರಂಪರೆಯನ್ನು ವಚನಕಾರ್ತಿಯರು

---

೩. ವಿವರಗಳಿಗೆ ಗಮನಿಸಿ: ವೀಣಾ ಬನ್ನಂಜೆ 1992 '' ಅಕ್ಕಮಹಾದೇವಿಯ ವಚನಗಳಲ್ಲಿ ಸ್ತ್ರೀ ಸಂವೇದನೆ'' (ಅಪ್ರಕಟಿತ) ಮಂಗಳ ಗಂಗೋತ್ರಿ.

ಉಳಿಸಿಕೊಳ್ಳುತ್ತಾರಾದರೂ ಅವರು ಅದನ್ನು ತಮ್ಮ ಭಾಷಿಕ ಅಭಿವ್ಯಕ್ತಿಯಲ್ಲಿ ಬಳಸಿಕೊಳ್ಳುವ ಕ್ರಮ ಮಾತ್ರ ಹಳೆಯ ಪರಂಪರೆಗೆ ವ್ಯತಿರಿಕ್ತವಾದುದು. ಉದಾಹರಣೆಗೆ : ಒಂದು ವಚನವನ್ನು ಗಮನಿಸಬಹುದು.

ಚಿಲಿಮಿಲಿ ಎಂದೋದುವ ಗಿಳಿಗಳಿರಾ ನೀವು ಕಾಣಿರೆ, ನೀವು ಕಾಣಿರೆ
ಸರವೆತ್ತಿ ಪಾಡುವ ಕೋಗಿಲೆಗಳಿರಾ ನೀವು ಕಾಣಿರೆ, ನೀವು ಕಾಣಿರೆ
ಎರಗಿ ಬಂದಾಡುವ ತುಂಬಿಗಳಿರಾ ನೀವು ಕಾಣಿರೆ, ನೀವು ಕಾಣಿರೆ
ಕೊಳನ ತಡಿಯೊಳಾಡುವ ಹಂಸೆಗಳಿರಾ ನೀವು ಕಾಣಿರೆ, ನೀವು ಕಾಣಿರೆ
ಚನ್ನಮಲ್ಲಿಕಾರ್ಜುನನೆಲ್ಲಿದ್ದಹನೆಂದು ಹೇಳಿರೆ

(ಆರ್. ಸಿ. ಹಿರೇಮಠ ೧೯೭೩. ೨೭೪ -೧೧೬)

ಪಕ್ಷಿಯ ಗುಣಗಳೆಂದು ವರ್ಣನಾ ಪರಂಪರೆಯಲ್ಲಿ ಪಂಪಾದಿಗಳು ಒಪ್ಪಿಕೊಂಡ ಚಿಲಿಮಿಲಿ ಎಂದೋದುವುದು, ಸರವೆತ್ತಿ ಪಾಡುವುದು, ಎರಗಿ ಬಂದಾಡುವುದು ಮುಂತಾದ ಭಾಗಗಳನ್ನು ಅಕ್ಕ ಒಪ್ಪಿಕೊಳ್ಳುತ್ತಾಳೆ. ಆದರೆ ಅಕ್ಕಳಿಗೆ ಅವು ಕೇವಲ ವರ್ಣನೆಗೆ ಇರುವ ಅನುಭೋಗಿ ಸಾಮಗ್ರಿಗಳಲ್ಲ. ಬದಲಿಗೆ ಅವು ಅವಳ ಕೇಳುಗರು. ಹಾಗಾಗಿ ಅಕ್ಕ ಅವುಗಳನ್ನು ತನ್ನ ಅನುಭೋಗದ ಸಾಮಗ್ರಿಗಳನ್ನಾಗಿ ಬಳಸದೆ, ಬದುಕಿನ ಅವಿಭಾಜ್ಯ ಅಂಗಗಳಾಗಿ, ಸಂವಹನದ ಬಂಧುಗಳಾಗಿ ಬಳಸಿಕೊಳ್ಳುತ್ತಾಳೆ.

ಪುರುಷ ವರ್ಣನೆಗಳಿಗಿಂತ ಸ್ತ್ರೀ ವರ್ಣನೆಗಳು ಭಿನ್ನವಾಗುವುದು ಇದೇ ಕಾರಣದಿಂದ. ಅಂದರೆ ಯಾವುದನ್ನೇ ಆದರೂ ಭೋಗದ ಸಂಗತಿ ಎಂದು ತಿಳಿದು ತಾನು ಭೋಗಿಸುವವರು ಎಂದು ಭಾವಿಸುವ ಪ್ರಭುತ್ವವು ಸಹಜವಾಗಿಯೇ ಆ ಸಂಗತಿಯನ್ನು ತನಗೆ ಸುಖವೀಯುವ ಹಾಗೆ ವರ್ಣಿಸುತ್ತದೆ. ಈ ದೃಷ್ಟಿಯಿಂದ ಸಿಂಹಕಟಿ, ಬಾಳೆಯ ದಿಂಡಿನಂಥ ತೊಡೆ, ಜಿಂಕೆಯ ಕಣ್ಣು, ತೊಂಡೆಯಂಥ ತುಟಿ ಮುಂತಾದ ವರ್ಣನೆಯ ಭಾಗಗಳನ್ನು ನಾವು ಕೂಲಂಕಷವಾಗಿ ಗಮನಿಸಬೇಕು. ಅವು ಹೆಣ್ಣನ್ನು ಭೋಗಿಸುವ ಭೋಗ ಗುಣದ ಪ್ರತಿಫಲಗಳು. ನಾವು ಭೋಗಿಸುವದನ್ನು ಮಾತ್ರ ವರ್ಣಿಸುತ್ತೇವೆ. ಭೋಗಕ್ಕೆ ದಕ್ಕದ್ದು ವರ್ಣಿತವಲ್ಲ.

ಈ ನೆಲೆಯಲ್ಲಿ ವಚನಕಾರ್ತಿಯರು ಪ್ರಕೃತಿಯ ಯಾವುದೇ ಸಂಗತಿಗಳನ್ನು ವರ್ಣನೆಗೆ ಬಳಸದೆ ಇರುವುದು ಗಮನಾರ್ಹ. ಅವರಿಗೆ ಅದು ಭೋಗದ ವಸ್ತುವಲ್ಲ. ಈ ದೃಷ್ಟಿಯಿಂದ ''ವರ್ಣನಾತೀತ ಗುಣ'' ಕೂಡ ಸ್ತ್ರೀ ವಿಶಿಷ್ಟ ಶೈಲಿಯಾಗಿಯೇ ವಚನಕಾರ್ತಿಯರಲ್ಲಿ ಕಾಣಿಸುತ್ತದೆ. ಹಾಗೆ ನೋಡಿದರೆ ವಚನ ಸಾಹಿತ್ಯವೇ ಭಕ್ತಿ ಪಂಥದ ಸೃಷ್ಟಿಯಾಗಿರುವುದರಿಂದ ಇಲ್ಲಿ ಭೋಗಭೋಗಿಯ ಸಂಬಂಧವೇ ಇಲ್ಲವಾಗಿ ಇಡೀ ವಚನ ಸಾಹಿತ್ಯದಲ್ಲೇ ವರ್ಣನೆಗಳು ತೀರ ಅಪರೂಪ.

೫. **ಸ್ತ್ರೀಯ ಭಾಷೆ ಮತ್ತು ಕೇಳುಗರು** : ಪ್ರತಿ ಹೆಣ್ಣಿನ ಬರಹವು ಪುರುಷನ ಬರಹಕ್ಕಿಂತ ಭಿನ್ನವಾಗಿರುತ್ತದೆ ಎಂಬುದು ಭಾಷಾ ವೈಜ್ಞಾನಿಕ ದೃಷ್ಟಿಯಿಂದ ತಿಳಿದು ಬಂದಿರುವ ಅಂಶ. ಆದರೆ ಪುರುಷ ಬರಹಗಳನ್ನು ಶ್ರೇಷ್ಠತೆಗೆ ಮಾನದಂಡವಾಗಿಸಿಕೊಂಡು, ಅವುಗಳ ಹೋಲಿಕೆಯ ಮುಖಾಂತರ ಸ್ತ್ರೀ ಬರೆಹವನ್ನು ಶ್ರೇಷ್ಠ ಮತ್ತು ನಿಕೃಷ್ಟವೆಂದು ಅಳೆಯಲಾಗುತ್ತದೆ. ಅಕ್ಕಳನ್ನು ಸಾಹಿತ್ಯಕವಾಗಿ ಶ್ರೇಷ್ಠವೆಂದು ಒಪ್ಪಿಕೊಂಡ ವಿಮರ್ಶೆ ಕೂಡ ಅವಳನ್ನು ಬಸವ ಅಲ್ಲಮಾದಿಗಳಿಗೆ ಹೋಲಿಸಿಕೊಂಡೇ ಹುಟ್ಟಿದ್ದಾಗಿದೆ.

ಆದರೆ ಸ್ತ್ರೀ ಬರಹದಲ್ಲಿ ಕಾಣಿಸುವ ಕೋಮಲತೆಯ ವರ್ಣನೆಯಾಗಲಿ, ಅಡುಗೆ ಮನೆಯ ವರ್ಣನೆಗಳಾಗಲಿ, ಬಾಹ್ಯದ ಕ್ರೌರ್ಯಕ್ಕೆ ಪ್ರತಿಕ್ರಿಯೆಯಾಗಿಯೇ ರೂಪುಗೊಂಡಿರುತ್ತವೆ ಎಂಬ ಸಂಗತಿಯನ್ನು ನಾವು ಪ್ರಮುಖವಾಗಿ ಗಮನಿಸಬೇಕು. ಕ್ರೌರ್ಯಕ್ಕೆ ಪ್ರತಿಭಟನೆಯಾಗಿ ಹೂವು ಚಿಗುರುಗಳು ವರ್ಣನೆಯಾದರೆ, ಕ್ರಾಂತಿಗೆ ಪ್ರತಿಭಟನೆಯಾಗಿ ಅಡುಗೆಮನೆ, ಒಳಗಿನ ಸಂರಕ್ಷಣೆ ಪ್ರತಿಕ್ರಿಯೆಯಾಗುವುದು ಕೂಡ ಇರದುದರ ಹುಡುಕಾಟವೇ ತುಂಬ ಕುತೂಹಲಕಾರಿಯಾದದ್ದು. ಎಲ್ಲ ವಚನಕಾರ್ತಿಯರಲ್ಲೂ ಕಾಣಸಿಗುವ ಒಂದು ಪ್ರಧಾನ ಅಂಶವೆಂದರೆ ತಮ್ಮ ಆತ್ಮೀಯ ಸಂವಹನಕ್ಕೆ ಅವರು ದೇವನೆಂಬ ಗಂಡನನ್ನು ಬಿಟ್ಟರೆ ಒಂದೋ ಸ್ತ್ರೀಯರನ್ನು ಇಲ್ಲವೇ ಪ್ರಾಣಿಪಕ್ಷಿಗಳನ್ನು ಆಯ್ದುಕೊಳ್ಳುತ್ತಾರೆ. ಯಾವ ವಚನಕಾರ್ತಿಯರೂ ತಮ್ಮ ಭಾವನೆಗಳನ್ನು ಹಂಚಿಕೊಳ್ಳಲು ಪುರುಷರನ್ನು ಆಯ್ದುಕೊಳ್ಳುವುದಿಲ್ಲ. ಇಂಥ ಕನಿಷ್ಠ ಮೂರರಿಂದ ನಾಲ್ಕು ವಚನಗಳನ್ನು ಪ್ರತಿ ವಚನಕಾರ್ತಿಯರಲ್ಲೂ ಗುರುತಿಸಬಹುದು.

ಆದರೆ ಇನ್ನೊಂದು ಗಮನಾರ್ಹ ಅಂಶವೆಂದರೆ ಸಾಮಾಜಿಕ ವಿಡಂಬನೆಯ ಸಂದರ್ಭದಲ್ಲಿ ಲೋಕನೀತಿ ಹೇಳುವಲ್ಲಿ, ತಿದ್ದುಪಡಿಯ ಸಂದರ್ಭದಲ್ಲಿ ಪ್ರತಿ ವಚನಕಾರ್ತಿಯರು ಆ ಬೋಧನೆಗಳನ್ನು ಪುರುಷರನ್ನೇ ಸಂಬೋಧಿಸಿ ಹೇಳುತ್ತಾರೆ. ಆಗ ಎಲ್ಲಿಯೂ ಸ್ತ್ರೀ ಸೂಚಕ ಸಂಬೋಧನೆಗಳು ಕಾಣಿಸುವುದಿಲ್ಲ.

ಅಕ್ಕಳಂತೂ ತನ್ನ ಎಲ್ಲ ನೋವುಗಳನ್ನು , ಸುಖ, ಸಂತೋಷ, ಕನಸುಗಳನ್ನು ಅಕ್ಕ, ಕೆಳದಿ, ಸಖಿ, ತಾಯೆ, ಅವ್ವಾ, ಎಲಗೆ ಮುಂತಾದ ಸ್ತ್ರೀ ಕುಲದ ಜೊತೆಗೆ ಹಂಚಿಕೊಂಡರೆ, ಅವಳು ಪುರುಷ ಸಂಬೋಧನೆಗಳನ್ನು ಬಳಸುವ ಸಂದರ್ಭಗಳಿಗೆ ವಿಶೇಷ ಅರ್ಥಮಹತ್ವವಿದೆ. ಯಾಕೆಂದರೆ ಅಕ್ಕ ಮರುಳಾ, ದುರುಳಾ ಎಂಬ ಪುರುಷ ಸಂಬೋಧನೆಯನ್ನು ಸಾಮಾಜಿಕ ವಿಡಂಬನೆಯ ಸಂದರ್ಭದಲ್ಲಿ ಬಳಸುವ ಮೂಲಕ ಪುರುಷನ ಅಸ್ತಿತ್ವವನ್ನು ಸ್ವೀಕರಿಸುತ್ತಾಳೆ.

ಈ ಸಂದರ್ಭದಲ್ಲಿ ನಾವು ಗಮನಿಸಬೇಕಾದ ಇನ್ನೊಂದು ಅಂಶವೆಂದರೆ ವಚನಕಾರ್ತಿಯರು ಬಳಸುವ ಅತ್ತೆ, ನಾದಿನಿ, ಭಾವಂದಿರು, ಮಾವ, ಗಂಡನ ಮನೆ ಮುಂತಾದ ಪ್ರಯೋಗಗಳು. ಆತ್ಮೀಯ ಸಂವಹನಕ್ಕೆ ತಾಯೆ, ಎಲಗೆ, ಸಖಿ, ಕೆಳದಿ ಎಂಬ ಪ್ರಯೋಗಗಳಿದ್ದರೆ. ಬದುಕಿನ ನೋವು ಕುಟುಂಬದ ದುಃಖದ ಸಂದರ್ಭಗಳಲ್ಲಿ ಅತ್ತೆಯ

ಮನೆ, ಮಾವನ ಏಟು ಮುಂತಾದ ಪ್ರಯೋಗಗಳನ್ನು ವಚನಗಳಲ್ಲಿ ಗುರುತಿಸಬಹುದು.

ವಿಶಿಷ್ಟ ಅಂಶ : ಇವು ಎಲ್ಲ ವಚನಕಾರ್ತಿಯರಿಗೆ ಸಂಬಂಧ ಪಟ್ಟ ಮಾತಾದರೆ ಕೆಲವು ವಿಶಿಷ್ಟ ಅಂಶಗಳನ್ನು ವ್ಯಕ್ತಪಡಿಸುವ ವಚನಕಾರ್ತಿಯರನ್ನು ಪ್ರತ್ಯೇಕವಾಗಿ ಗಮನಿಸಬಹುದು.

ಹೀಗೆ ಬರೆಯುವಾಗ ಸ್ತ್ರೀ ಸಂವೇದನೆಯನ್ನು ಕೇವಲ ಮೊತ್ತಮೊದಲ ಕವಯಿತ್ರಿ ಎಂಬ Brand ನಲ್ಲಷ್ಟೆ ಅಲ್ಲದೆ ಆಚರಣೆ ಮತ್ತು ಚಾರಿತ್ರಿಕ ಮಾದರಿಯ ರೂಪದಲ್ಲಿ ಪ್ರಕಟಿಸಿದ ಅಕ್ಕಮಹಾದೇವಿಯ ವಿಶಿಷ್ಟ ಅಂಶಗಳನ್ನು ಪ್ರತ್ಯೇಕವಾಗಿ ಗಮನಿಸಬೇಕಾಗುತ್ತದೆ.

ಅಕ್ಕ ಮಾತ್ರವಲ್ಲ ಶ್ರೇಷ್ಠ ವ್ಯಕ್ತಿಗಳೆಲ್ಲರ ಹುಟ್ಟಿನ ಚಿತ್ರಣಗಳನ್ನು ಮಾಡುವ ಧಾರ್ಮಿಕ ಚಿತ್ರಣಗಳು ಹುಟ್ಟನ್ನು ವೈಭವೀಕರಿಸುತ್ತವೆ. ಆದರೆ ಬಸವ ಅಲ್ಲಮಾದಿಗಳನ್ನು ಹೀಗೆ ಚಿತ್ರಿಸುವುದಕ್ಕೂ ಹೆಣ್ಣಾದ ಅಕ್ಕಳನ್ನು ಚಿತ್ರಿಸುವುದಕ್ಕೂ ಉಂಟಾಗಬಹುದಾದ ಪರಿಣಾಮಗಳಲ್ಲಿ ವ್ಯತ್ಯಾಸವಿದೆ.

ಅಕ್ಕಳ ಹುಟ್ಟಿನ ಧಾರ್ಮಿಕ ಚಿತ್ರಣಗಳು ಅಕ್ಕಳನ್ನು ಸಾಮಾಜಿಕ ಸಂಘರ್ಷಗಳಿಗೆ ಮುಖಾಮುಖಿಯಾಗಿಸದೆ ಇರುವುದು ಮಾತ್ರವಲ್ಲ ಅಕ್ಕಳನ್ನು 'ಅಸಹಜ' 'ಅಮಾನುಷ' ಎಂದು ವೈಭವೀಕರಿಸಿ ಕೌಶಿಕನನ್ನು 'ಸಹಜ' ಮತ್ತು 'ಮಾದರಿ' ಗಳನ್ನಾಗಿಯೇ ಉಳಿಸುತ್ತವೆ.

ಕೌಶಿಕನನ್ನು ಅಕ್ಕ ಮದುವೆಯಾಗಿದ್ದಳೋ ಇಲ್ಲವೋ ಅದು ಅಮುಖ್ಯ. ಆದರೆ ಅವಳ ಇಚ್ಛೆಗೆ ವಿರುದ್ಧವಾದ ಬಲಾತ್ಕಾರ ಅವಳ ಮೇಲೆ ನಡೆದಿದೆ. ಆಗ ಅವಳು ಅಲೌಕಿಕ ಗಂಡನನ್ನು ಆಯ್ಕೆ ಮಾಡಿಕೊಂಡಿದ್ದಾಳೆ. ಆದ್ದರಿಂದ ಉಳಿದ ವಚನಕಾರ್ತಿಯರಿಗಿಂತಲೂ ಅಕ್ಕಳ 'ಲಿಂಗಪತಿ' ಯ ಆಯ್ಕೆ ಎನ್ನುವುದು ಲೌಕಿಕಗಂಡನ ನಿರಾಕರಣೆಗೆ ಮಾಡಿಕೊಂಡ ಒಂದು ಪರ್ಯಾಯ ವ್ಯವಸ್ಥೆ ಮತ್ತು ಲೌಕಿಕದ ಗಂಡನ ವಿರುದ್ಧವಾಗಿ ಅವಳು ಸೃಷ್ಟಿಸಿಕೊಳ್ಳುವ ಗಂಡ ಅಸ್ತಿತ್ವದಲ್ಲಿ ಇಲ್ಲದೆ ಇರುವುದು ಒಂದು ಭಾಷಿಕ ವ್ಯಂಗ್ಯ.

ಅಕ್ಕ ಬದುಕಿನುದ್ದಕ್ಕೂ ದಿಗಂಬರೆಯಾಗಿದ್ದಳೋ ಇಲ್ಲವೋ ಎನ್ನುವುದು ಅಮುಖ್ಯ. ಆದರೆ ಬಟ್ಟೆಯನ್ನು ಕಳಚುವುದರ ಮುಖಾಂತರ ಅಕ್ಕ 'ಹೆಣ್ತನ' ವನ್ನು ಕಳಚಿದ್ದಾಳೆ. ಆ ಪ್ರತಿಭಟನೆ ಮಹತ್ವದ್ದು. ಅದು ಲಿಂಗ (Sex) ಕ್ಕೆ ಅಂಟಿಕೊಳ್ಳದ ಗುಣದ್ದು.

ಶೂನ್ಯ ಸಂಪಾದನೆ ಹೇಳುವ ಕಿನ್ನರಿ ಬೊಮ್ಮಯ್ಯನ ಪ್ರಸಂಗ ಕಾಲ್ಪನಿಕ ಅಲ್ಲವೆಂದಾರೆ ಸ್ವಾತಂತ್ರ್ಯದ ಪರಿಕಲ್ಪನೆ ಕೇವಲ ಬೋಗಸ್ ಗುಣವೆಂದು ಒಪ್ಪಿಕೊಳ್ಳಬೇಕು. ಹೆಣ್ಣು ಮಾತ್ರ ಪರೀಕ್ಷಿಸಿದ ಅಂಥ ಭಯಾನಕ ವ್ಯವಸ್ಥೆಯನ್ನು ವೀರಶೈವ ಚಳುವಳಿಯ ಪ್ರತಿಗಾಮಿ ಧೋರಣೆ ಎಂದು ನಂಬಬೇಕು. ಒಂದು ವೇಳೆ ಅದು ಶೂನ್ಯ ಸಂಪಾದನೆಕಾರರೇ ಆ ಬಳಿಕ ಸೃಷ್ಟಿಸಿದ

ಕತೆಯಾದರೆ ವಚನ ಚಳುವಳಿಯ ಕಾಲ ಮಾಗುತ್ತಾ ಹಳೆಯ ಜಡ್ಡು ಸಂಪ್ರದಾಯವನ್ನೇ ನಂಬಿತೆಂದೂ. ಆ ಮೂಲಕ ವೀರಶೈವ ಚಳುವಳಿಗೆ ಅಪಚಾರ ಮಾಡಿತೆಂದೂ ಒಪ್ಪಬೇಕಾಗುತ್ತದೆ. ಕಿನ್ನರಿಯ ಬೊಮ್ಮಯ್ಯ ಸ್ವತಃ ಮುಟ್ಟಿದ್ದೆಂದಾದರೆ ಅದು ಹೆಣ್ಣೊಬ್ಬಳು ವ್ಯವಸ್ಥೆಯನ್ನು ಧಿಕ್ಕರಿಸಿ ನಡೆಯುವ ಸಂದರ್ಭದಲ್ಲಿ ಎದುರಿಸಬೇಕಾಗುವ ಅಂದಿನ ಮತ್ತು ಇಂದಿನ ಒಂದು ಸಾಮಾಜಿಕ ಸಮಸ್ಯೆಯ ಸಂಕೇತವೆಂದು ಪರಿಗಣಿಸಬೇಕಾಗುತ್ತದೆ.

ಅಕ್ಕಳಿಗೇ ವಿಶಿಷ್ಟವಾದ ಕೊನೆಯ ಅಂಶವೆಂದರೆ ಅಕ್ಕ ತನ್ನ ವಚನರಚನೆಯಲ್ಲಿ ಪ್ರಕಟಿಸುವ ಭ್ರಮಾಪ್ರಪಂಚ : ಅಕ್ಕ ಈ ವಚನ ರಚನೆಗಳಲ್ಲೆಲ್ಲ (ಉದಾ : ''ಅಕ್ಕ ಕೇಳಕ್ಕ ಆನೊಂದು ಕನಸ ಕಂಡೆ'' - '' ಜಲದ ಮಂಟಪದ ಮೇಲೆ ಮುಂತಾದ) ತನ್ನ ಮದುವೆಯ ಕುರಿತು, ತನ್ನ ಗಂಡನನ್ನು ತನಗೆ ಧಾರೆ ಎರೆದದ್ದರ ಕುರಿತು ಕನಸುಗಳನ್ನು ವಿವರಿಸುತ್ತಾಳೆ ಮತ್ತು ಹೀಗೆ ವಿವರಿಸುವ ಅಕ್ಕ ಲೌಕಿಕದ ಕುಟುಂಬ ವ್ಯವಸ್ಥೆ, ತಾಯ್ತನ, ಮದುವೆ ಮುಂತಾದವುಗಳನ್ನು ವಿರೋಧಿಸುತ್ತಾ ತನ್ನ ಆದರ್ಶದ ಮದುವೆ ಮತ್ತು ಗಂಡನ ಕುರಿತು ಹೇಳುತ್ತಿರುತ್ತಾಳೆ. ಇಂಥ ಭ್ರಮಾಪ್ರಪಂಚದ ಕೇಳುಗರೆಲ್ಲ ತಾಯಿ, ಕೆಳದಿ, ಸಖಿ, ಅವ್ವಾ ಮುಂತಾದ ಸ್ತ್ರೀ ಸಮುದಾಯ. ಕುಟುಂಬ ವ್ಯವಸ್ಥೆ' ''ಒಲ್ಲದ ಸಮುದಾಯವನ್ನು'' ಅಕ್ಕ ಪ್ರತಿನಿಧಿಸಿದರೆ ಅದನ್ನು ''ಒಪ್ಪಿದ ಸಮುದಾಯ''ದ ತಾಯಿ, ಕೆಳದಿ, ಅವ್ವೆಯರು ಅಕ್ಕಳ ಕೇಳುಗರು. ಈ ದೃಷ್ಟಿಯಿಂದ ಅಕ್ಕ ''ಒಲ್ಲದ ಸಮುದಾಯದ'' ಆಶಯಗಳ ಮಾದರಿ ರಚನೆಗಳನ್ನು ''ಒಪ್ಪಿದ ಸಮುದಾಯಕ್ಕೆ'' ಪ್ರಸರಿಸುತ್ತಿರುತ್ತಾಳೆ. ಈ ಹಿನ್ನೆಲೆಯಲ್ಲಿ ಅಕ್ಕಳ ಬಹುತೇಕ ವಚನಗಳು ಸ್ವಗತಗಳಾಗಿರುವುದು ಕೂಡ ಅವಳ ಶೈಲಿಯ ವಿಶಿಷ್ಟ ಅಂಶ. ಇಂದಿಗೂ ಕಾವ್ಯ ಕಾದಂಬರಿಯನ್ನು ಬರೆಯುವ ಬರಹಕಾರ್ತಿಯರಿದ್ದರೂ ನಾಟಕಕಾರ್ತಿಯರ ಸಂಖ್ಯೆ ವಿರಳವಾಗಿರುವುದನ್ನು ಈ ನಿಟ್ಟಿನಲ್ಲಿ ಗಮನಿಸಬೇಕು. ನಾಟಕದಂಥ ಸಾರ್ವಜನಿಕ ಪ್ರಕಟಿತ ರೂಪಕ್ಕಿಂತ ಕಾವ್ಯ, ಕಾದಂಬರಿಯಂಥ ಅಂತರ್ಮುಖಿ ಸ್ವಗತಗಳನ್ನು ಬರಹಗಾರ್ತಿಯರು ಆಯ್ಕೆ ಮಾಡುವುದಕ್ಕೂ ಸಾಮಾಜಿಕ ಮತ್ತು ರಾಜಕೀಯ ಪ್ರಭುತ್ವಗಳ ಒಳಗೆ ನಿರ್ಧಾರವಾಗುವ ಖಾಸಗಿ ಮತ್ತು ಸಾರ್ವಜನಿಕ ಎಂಬ ಪರಿಕಲ್ಪನೆಗಳಿಗೂ ಕಾರ್ಯ ಕಾರಣ ಸಂಬಂಧಗಳಿವೆ ಎಂಬುದನ್ನು ಮೇರಿ ಈ ಗಲ್ ಟನ್ ಗುರುತಿಸುತ್ತಾರೆ.[೪] ಈ ನೆಲೆಯಲ್ಲಿ ಅಕ್ಕಳ ಸ್ವಗತಗಳಿಗೂ ಹೆಚ್ಚು ಮಹತ್ವವಿದೆ.

ಉಪಸಂಹಾರ: ವಚನಕಾರ್ತಿಯರೆಲ್ಲರೂ ಸ್ತ್ರೀಸಂವೇದನಾಶೀಲರೂ, ಲಿಂಗಾತೀತರೂ ಎಂದು ಗುರುತಿಸಲು ಸಾಧ್ಯವಾಗುವುದಿಲ್ಲ. ನೀಲಾಂಬಿಕೆ ಬಸವಣ್ಣನ ಹೆಂಡತಿ ಎಂಬ ವಿಶೇಷ ಅರ್ಹತೆ ಮತ್ತು ವಚನಗಳ ಸಂಖ್ಯೆಗಳಿಂದ [illegible] ಪಟ್ಟಿಗೆ ಸಂದಿದ್ದರೆ,

೪..ಗಮನಿಸಿರಿ : ಮೇರಿ ಈಗಲ್ ಟನ್ (ಸಂ.) : 1990.

ವಚನಗಳ ಗುಣಮಟ್ಟದಿಂದ ಶ್ರೇಷ್ಠ ವಚನಕಾರ್ತಿಯಾಗಿ ಕಾಣಿಸುವುದಿಲ್ಲ. ಹಾಗೆ ನೋಡಿದರೆ ತನ್ನ ಸೂಳೆ ಎಂಬ ಕಾಯಕವನ್ನು ನಿರ್ಭಿಡೆಯಿಂದ ಹೇಳಿದ ಸೂಳೆ ಸಂಕವ್ವೆ, ಬಿಡಾಡಿ ಎಂಬ ಅಂಕಿತವನ್ನು ಬಳಸಿಕೊಂಡು ಕೆಚ್ಚುತನದಿಂದ ವಚನ ರಚಿಸಿದ ಬೊಂತಾದೇವಿಯರು ವಚನ ಸಂಖ್ಯೆಯ ದೃಷ್ಟಿಯಿಂದ ಕಡಿಮೆಯಾದರೂ ಗುಣಮಟ್ಟದ ದೃಷ್ಟಿಯಿಂದ ಶ್ರೇಷ್ಠರೆನಿಸಿಕೊಳ್ಳುತ್ತಾರೆ. ಕದಿರಜ಼ಿಮ್ಮವ್ವೆಯ ನಾಲ್ಕು ವಚನಗಳೂ ಅಕ್ಕಳ ನಾಲ್ಕು ನೂರು ವಚನಗಳಿಗೆ ಸರಿಸಾಟಿಯಾಗಿ ನಿಲ್ಲುವಷ್ಟು ಪರಿಣಾಮಕಾರಿಯಾಗಿವೆ.

ಈ ಸಂದರ್ಭದಲ್ಲಿ ಆರಂಭದಲ್ಲಿ ಚರ್ಚಿಸಿದ ಒಂದು ಮಾತನ್ನು ಸ್ಪಷ್ಟಪಡಿಸಬೇಕು. ಸ್ತ್ರೀ ಎಂಬ ಕಾರಣಕ್ಕೆ ಅವಳು ಬರೆದದ್ದೆಲ್ಲ ಸ್ತ್ರೀವಾದಿ ಬರಹ ಆಗಿರಬೇಕಲ್ಲ ಎಂಬ ಮಾತಿಗೆ ಸಂಚಿಯ ಹೊನ್ನಮ್ಮ ಉದಾಹರಣೆ ಆಗುವ ಹಾಗೆ. ವಚನಕಾರ್ತಿಯರಲ್ಲಿ ಅಕ್ಕಮ್ಮ ಅಂಥದೇ ಉದಾಹರಣೆಯಾಗಿದ್ದಾಳೆ. ಆದರೆ ಸಂಚಿಯ ಹೊನ್ನಮ್ಮಳ ಕಾಲದ ಮನೋಧರ್ಮ, ಅವಳ ಕಾಲದ ರಾಜಕೀಯ ಆರ್ಥಿಕ ಮುಂತಾದ ಪ್ರಭುತ್ವಗಳ ಕೆಳಗೆ ಅವಳು ನಿರ್ವಹಿಸುತ್ತಿದ್ದ ಕಸುಬುಗಳ ನೆಲೆಯಲ್ಲಿ ಸಂಚಿಯ ಹೊನ್ನಮ್ಮಳ 'ಹದಿಬದೆಯ ಧರ್ಮ' ಕ್ಷಮಾರ್ಹವಾದರೂ ಅತ್ಯಂತ ಸ್ವಾತಂತ್ರ್ಯ ಮತ್ತು ಸಮಾನತೆಯನ್ನು " ಅನುಮತಿಸಿದ ವೀರಶೈವ ಚಳುವಳಿಯ ಕಾಲಘಟ್ಟದ ಅಕ್ಕಮ್ಮ ಮಾತ್ರ ಆ ಕಾಲದ ತೀರ ವಿಚಿತ್ರ ಉತ್ಪನ್ನವಾಗಿ ಗೋಚರಿಸುತ್ತಾಳೆ. ಅವಳ ವಚನಗಳ ತುಂಬ ಪಾತಿವ್ರತ್ಯದ ಮೌಲ್ಯ, ಸ್ತ್ರೀ ಮೌಲ್ಯ ಮುಂತಾದ ಸಾಂಪ್ರದಾಯಿಕ (Conservation) ಮನೋಧರ್ಮಗಳೇ ಬಹಳವಾಗಿವೆ. ಹಾಗೆ ನೋಡಿದರೆ ಇಂಥ ಮನೋಭಾವವನ್ನು ಪ್ರಕಟಿಸುವ ಏಕಮಾತ್ರ ವಚನಕಾರ್ತಿ ಅಕ್ಕಮ್ಮ ಎನ್ನಲು ಅಡ್ಡಿಯಿಲ್ಲ. ಇವಳೇನಾದರೂ ಚಳುವಳಿಯು ಬೇರೆ ತಿರುವುಗಳನ್ನು ಪಡೆವ ಕಾಲಕ್ಕೆ ವಚನ ಸೃಷ್ಟಿಗೆ ತೊಡಗಿದಳೇ ಎಂಬುದು ಸಂಶೋಧನಾರ್ಹ ಅಂಶ.

ಮೈ ಬಟ್ಟೆಯ ಹರಿದು, 'ಸ್ತ್ರೀತನ' ವೆಂಬ ಬಾಹ್ಯಮೌಲ್ಯಗಳನ್ನೇ ನೆಮ್ಮಿಕೊಳ್ಳದೆ ಉಳಿದ ಅಕ್ಕಮಹಾದೇವಿ, ಸಾಹಿತ್ಯ ರಚನೆಯ ಕೆಲವೇ ಮಾದರಿಗಳ ಮುಖಾಂತರ ಜೈವಿಕ ಅಂಗಪರಿಕಲ್ಪನೆಯನ್ನು ಮೀರಿ ಬೆಳೆದ ಕದಿರಜ಼ಿಮ್ಮವ್ವೆ ಮುಂತಾದ ವಚನಕಾರ್ತಿಯರ ಪಟ್ಟಿಗಳೆಲ್ಲವೂ ಬಹುತೇಕ ಧಾರ್ಮಿಕ ಚೌಕಟ್ಟಿನ ಒಳಗೆ ವ್ಯಕ್ತಪಡಿಸುವ ಮೌಲ್ಯಗಳು, ಸಾಮಾಜಿಕ ಸಂದರ್ಭಗಳಲ್ಲಿ ಒಪ್ಪಿಕೊಂಡ ಸ್ತ್ರೀ ಮೌಲ್ಯಗಳಿಗಿಂತ ತೀರ ಭಿನ್ನವೆಂಬುದು ಸುಸ್ಪಷ್ಟ. ವೀರಶೈವ ಚಳುವಳಿಗೆ ಮುನ್ನವೂ, ಆ ಬಳಿಕವೂ ಈ ರೀತಿಯಲ್ಲಿ (ಅಂದರೆ ಸುಮಾರು ಮೂವತ್ತರಿಂದ ನಲವತ್ತು) ವಚನಕಾರ್ತಿಯರನ್ನು ಸೃಷ್ಟಿಸಿದ ಯಾವುದೇ ಭಕ್ತಿಪಂಥ ಇಲ್ಲದೆ ಇರುವುದು 'ಅನುಮತಿ' ಯ ವಿಶೇಷತೆಯನ್ನು ಹೇಳುತ್ತದೆ. ಒಂದು ದೃಷ್ಟಿಯಿಂದ ಮೊತ್ತ ಮೊದಲ ಬಾರಿಗೆ ಈ ರೀತಿಯ ''ಅನುಮತಿ'' ಯನ್ನು ವೀರಶೈವ ಕಾಲದಲ್ಲಿ ಪಡೆದ ವಚನಕಾರ್ತಿಯರು ನಮ್ಮ ಇತಿಹಾಸದಲ್ಲಿ ಉಳಿಸಿ ಹೋಗಿರುವ ಸವಾಲುಗಳು ಬಹಳ ದೊಡ್ಡವು.

ಪರಾಮರ್ಶನ ಗ್ರಂಥಗಳು

ಪಠ್ಯ :

ಹಿರೇಮಠ ಆರ್. ಸಿ. (ಸಂ) : ೧೯೬೮
'ಶಿವಶರಣೆಯರ ವಚನಗಳು'
ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ

ಇತರ :

ಕೊಟ್ರಶೆಟ್ಟಿ ಎಂ. ಬಿ. : ೧೯೭೬
ವಿಮರ್ಶಾತ್ಮಕ ಲೇಖನಗಳು
ಪ್ರಸಾರಾಂಗ, ಕರ್ನಾಟಕ
ವಿಶ್ವವಿದ್ಯಾಲಯ, ಧಾರವಾಡ

ಗುರುಲಿಂಗ ಕಾಪಸೆ : ೧೯೮೮
ಅಕ್ಕಮಹಾದೇವಿ
ಸಾಹಿತ್ಯ ಆಕಾಡೆಮಿ, ನವದೆಹಲಿ

ಚಿದಾನಂದಮೂರ್ತಿ ಎಂ. : ೧೯೮೫
ಮಧ್ಯಕಾಲೀನ ಕನ್ನಡ ಸಾಹಿತ್ಯ ಮತ್ತು
ಅಸ್ಪೃಶ್ಯತೆ ಪ್ರಸಾರಾಂಗ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ತಿಪ್ಪೇರುದ್ರಸ್ವಾಮಿ ಎಚ್. : ೧೯೮೭
ಅಲ್ಲಮ ಪ್ರಭುದೇವ
ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ,
ಧಾರವಾಡ

ದಿವಾಕರ .ಆರ್. ಎಸ್ : ೧೯೭೬
ಶರಣರ ಅನುಭವ ಅನುಭಾವ ಅನುಭೂತಿ
ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ,
ಧಾರವಾಡ

ಮುಳಗುಂದ ಚ. ವಿ. (ಪ್ರ.ಸಂ) : ೧೯೮೬
ಮಾತೋಶ್ರೀ ಅಭಿನಂದನ ಗ್ರಂಥ
ಮಾತೋಶ್ರೀ ಪ್ರಕಾಶನ,
ಮುದ್ದೇಬಿಹಾಳ.

ವಿಜಯಶ್ರೀ ಸಬರದ : ೧೯೮೯
ಸಾಹಿತ್ಯ ಮತ್ತು ಮಹಿಳೆ
ನವಕರ್ನಾಟಕ ಪಬ್ಲಿಕೇಶನ್ಸ್ ಬೆಂಗಳೂರು

ಸಿದ್ದಯ್ಯ ಪುರಾಣಿಕ : ೧೯೮೨
ಮಹಾದೇವಿ
ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ,
ಧಾರವಾಡ

ಸಿದ್ಧಯ್ಯ ಪುರಾಣಿಕ : ೧೯೭೭
ಬಸವಣ್ಣನವರ ಜೀವನ ಹಾಗೂ ಸಂದೇಶ
ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ,
ಧಾರವಾಡ

ಹಿರೇಮಠ ಆರ್. ಸಿ. : ೧೯೭೧ (ದ್ವಿಮು)
ನೀಲಮ್ಮನ ವಚನಗಳು ಮತ್ತು ಲಿಂಗಮ್ಮನ
ವಚನಗಳು, ಪ್ರಸಾರಾಂಗ, ಕರ್ನಾಟಕ
ವಿಶ್ವವಿದ್ಯಾಲಯ, ಧಾರವಾಡ.

ಆಂಗ್ಲಭಾಷೆಯ ಕೃತಿಗಳು :

Maggle Humm : ೧೯೮೬
Feminist criticism - women as
cotemporory critics. the
Horvesters press Britan.

Mary Euyleton (ed) : ೧೯೯೦
Feminist literary theory - A
Reader
Brezil Blackwell

Geeti Sen (Ed) : ೧೯೯೨
India International Centre
Quarterly Published by
N. H. Ramachandran for India
International Centre New Delhi.

Simone de Beauvoir : ೧೯೭೨
The Second Sex
Panbooks London.

ನಿರೀಕ್ಷೆ

★ ಡಿ. ಬಿ. ಥಂಗ

ಲೇ ಕವಿತಾ
ಮೊನ್ನೆ ನಡೆದ
ಕವಿಗೋಷ್ಠಿಯಲ್ಲಿ
ಪ್ರೇಕ್ಷರೆದುರು ನಿಂತು
ಧ್ವನಿ ಸುರುಳಿ ಬಿಚ್ಚಿದಾಗ
ಮೈತುಂಬ ಅಂದ ಚೆಂದ
ಶೃಂಗರಿಸಿಕೊಂಡ
ಅಕ್ಷರ ಹೂವಿನ ' ಅಲಂಕಾರ' ದ ಸೀರೆ
ಸುಂದರ ಕೇಶರಾಶಿ
'ಕಾಲ'ಲ್ಲಿ ನುಡಿ ಗೆಜ್ಜೆ
ಕೈಯಲ್ಲಿ ಹೊಳಪಿನ ಬಳೆ
ಕೊರಳಲ್ಲಿ 'ಸುವರ್ಣ'(ದೀರ್ಘ) ಮುತ್ತಿನ ಹಾರ
ಕಣ್ಣಲ್ಲಿ ಪ್ರಕೃತಿ ಭಾವ ಕಂಡೆ.

ಇದೆಲ್ಲಾ ಬರು ಬರುತ್ತ
ಮೇಲ್ನೋಟದಲ್ಲಿ ಮಾತ್ರ ಕಾಣುತ್ತ
ಅಕ್ಷರ ಹೂವಿನಲ್ಲಿ ಮಕರಂದವಿಲ್ಲದೆ
ನೀ
ರಸವಾಗಿ ನಿಂತಿರುವ ನೀನು
ಹರಿದು ಬಂದ ಬೆವರು
ಕಾಮದ ಕಾವಿನಲ್ಲಿ
ಕುದಿ ಕುದಿದು
ಒಲವು ಆವಿ ಮೇಲೇರಿ
ಶುಭ್ರ ಮೋಡವಾಗಿ ತೇಲಾಡಿ

ಮುತ್ತ ಹನಿಯಾಗಿ
ನಮ್ಮೆಲ್ಲರ ಮೈಯಲ್ಲಿ
ಮಿಲನ ಹೊಂದುವದೆಂದು
ಅಮೂರ್ತವಿದ್ದ
ನಿನ್ನ ಮೈ ಭಾವ
ಮೂರ್ತ ರೂಪ ಪಡೆದು
ನಿನಗೊಂದು ಅರ್ಥ ಬರುವದೆಂದು ?
ಹೀಗೆ ಕೇಳಿಕೊಳ್ಳುತ್ತಾ
ಕಾಯುತ್ತಾ ನಿಂತಿರುವ
ಅಂದು
ಇಂದು.

ಪುನರುಕ್ತಿಯ ಪ್ರಕಾರಗಳು

★ ಆರ್. ವಾಯ್. ಕುಲಕರ್ಣಿ

ಭಾಷೆ ನಿಂತ ನೀರಲ್ಲ ; ಅದು ಯಾವಾಗಲೂ ಹರಿವ ನದಿಯಂತೆ. ಇದು ಸ್ವಾಭಾವಿಕ ಭಾಷೆಗಳ ಲಕ್ಷಣ. ಸ್ವಾಭಾವಿಕ ಭಾಷೆಗಳು ಹೀಗೆಯೇ ಇರಬೇಕೆಂದು ಅವುಗಳನ್ನು ಒಂದು ಕಟ್ಟುಪಾಡಿನಲ್ಲಿಡಲು ಬರುವುದಿಲ್ಲ. ಒಂದು ರೀತಿಯಿಂದ ನೋಡಿದರೆ ಭಾಷೆಯ ನಿಯಮಗಳೆಲ್ಲ ಅಲಿಖಿತ ನಿಯಮಗಳೇ. ಕಾಲಕಾಲಕ್ಕೆ ಭಾಷೆ ಹಂತಹಂತವಾಗಿ ತನ್ನ ರಚನೆ ಮತ್ತು ಸ್ವರೂಪವನ್ನು ಬದಲಿಸುತ್ತಿರುತ್ತದೆ. ಇಂತಹ ಬದಲಾವಣೆಗಳು ಭಾಷೆಯ ಎಲ್ಲ ಸ್ತರಗಳಲ್ಲಿಯೂ ನಡೆಯುತ್ತವೆ. ಈ ಪರಿವರ್ತನಶೀಲತೆಯೇ ಭಾಷೆಗಳಲ್ಲಿ ಘಟ್ಟಗಳನ್ನು ನಿರ್ಮಿಸುತ್ತದೆ. ಮತ್ತು ಆ ಕಾಲದ ಭಾಷಾ ರಚನೆ ಮತ್ತು ಸ್ವರೂಪವನ್ನು ವರ್ಣಿಸಲು ಸಾಧನಗಳಾಗುತ್ತವೆ. ಉದಾಹರಣೆಗೆ ಕನ್ನಡದಲ್ಲಿ ಪೂರ್ವದ ಹಳೆಗನ್ನಡ, ನಡುಗನ್ನಡ, ಮತ್ತು ಹೊಸಗನ್ನಡಗಳೆಂದು ಭಾಷಾ ವಿಜ್ಞಾನಿಗಳು ಗುರುತಿಸಿದ್ದಾರೆ. ಈ ಗುರುತಿಸುವಿಕೆ ಭಾಷೆಯ ವಿವಿಧ ಸ್ತರಗಳಲ್ಲಿ ನಡೆದು ಹೋದ ಬದಲಾವಣೆಗಳಿಂದ ಮಾತ್ರ ಸಾಧ್ಯ.

ಭಾಷಿಕ ಬದಲಾವಣೆಗಳು ಹಂತಹಂತವಾಗಿ ಕ್ರಮೇಣವಾಗಿ ವ್ಯಕ್ತಿಭಾಷೆಯಿಂದ ಉಪಭಾಷೆಗೆ ಪಸರಿಸಿ, ಉಪಭಾಷೆಯಿಂದ ಭಾಷೆಯನ್ನು ವ್ಯಾಪಿಸಿಬಿಡುತ್ತವೆ. ಇಂತಹ ಬದಲಾವಣೆಗಳು ಹಠಾತ್ತನೆ ನೋಡಸಿಗುವುದಿಲ್ಲ. ಇವು ನಮ್ಮ ಗಮನವನ್ನೂ ಸಹ ಅಷ್ಟು ಸೆಳೆಯುವುದಿಲ್ಲ ಅಥವಾ ಅವುಗಳ ಕಡೆಗೆ ನಾವು ಗಮನವನ್ನು ಹರಿಸುವದಿಲ್ಲವೆನ್ನಬಹುದು. ಭಾಷೆ ಯಾವುದೇ ಆದರೂ ಅದರ ಸಿರಿವಂತಿಕೆಗೂ ಅದರ ಶಬ್ದ ಸಂಪತ್ತಿಗೂ ನಂಟಿರುತ್ತದೆ. ನಾವು ಕನ್ನಡವನ್ನೇ ನೋಡಿದಾಗ ಮತ್ತು ಕನ್ನಡದ ಮೂಲಶಬ್ದಗಳ ಬಗ್ಗೆ ವಿಚಾರಿಸಿದಾಗ ನಮ್ಮೆದುರು ಬಹಳಷ್ಟು ಎರವಲಾಗಿ ಪಡೆದ ಶಬ್ದಗಳೇ ಬಂದು ನಿಲ್ಲುತ್ತವೆ. ಆದರೆ ಇವು ನಮಗೆ ಇಂದು ಎರವಲು ಶಬ್ದಗಳಂತೆ ಕಾಣಲಿಕ್ಕಿಲ್ಲ. ಒಂದು ಕಾಲಕ್ಕೆ ಕನ್ನಡದಲ್ಲಿ ಸಂಸ್ಕೃತ ಮತ್ತು ಪ್ರಾಕೃತ ಶಬ್ದಗಳ ಬಳಕೆ ವಿಪರೀತವಾಗಿ ಪರಭಾಷಾ ಶಬ್ದಗಳ ಬಳಕೆಯನ್ನು ಪ್ರತಿಭಟಿಸುವ ಕಾಲವೂ ಬಂದು ಹೋಯಿತು. ನಂತರದಲ್ಲಿ ಪರ್ಶಿಯನ್, ಅರೇಬಿಕ್, ಉರ್ದು, ಪೋರ್ತುಗೀಸ್, ಮರಾಠಿ, ಹಿಂದಿ ಮತ್ತು ಇಂಗ್ಲಿಷ್ ಹೀಗೆ ಹಲವಾರು ಭಾಷೆಗಳೊಡನೆ ಸಂಪರ್ಕವೂ ಏರ್ಪಟ್ಟಿತು. ಆಗ ಈ ಭಾಷೆಗಳಲ್ಲಿ ಕೊಡಕೊಳ್ಳುವಿಕೆ ಬಹಳ ಸಹಜವಾಗಿ ನಡೆದು ಹೋದ ಕ್ರಿಯೆಯನ್ನು ಗಮನಿಸಬೇಕು. ಇಂತಹ ಸಮಯದಲ್ಲಿ ಸ್ವಾಭಾವಿಕ ಭಾಷೆಗಳು

ತಮ್ಮ ಜಾಯಮಾನವನ್ನು ತಮ್ಮ ಪರಿಸರಕ್ಕನುಗುಣವಾಗಿ ಬದಲಿಸಿಕೊಂಡು ಶಬ್ದಸ್ವೀಕರಣ ಮಾಡುತ್ತವೆ. ಸ್ವೀಕರಣ ಹೊಂದಿದ ಶಬ್ದಗಳು ತಮ್ಮೊಡನೆ ಕಾಲ, ಸ್ಥಳ, ಸಂಸ್ಕೃತಿ ಮತ್ತು ರಾಜಕೀಯ ಅಲ್ಲದೇ ಇನ್ನೂ ಇಂತಹ ಎಷ್ಟೋ ಸಂಗತಿಗಳನ್ನು ಹೊತ್ತು ತಂದಿರುತ್ತವೆ. ಈ ಶಬ್ದಗಳು ರೂಪವನ್ನು ಬದಲಿಸಿಕೊಂಡರೂ, ತಮ್ಮ ಹುಟ್ಟು ಮತ್ತು ಸಂಗತಿಗಳನ್ನು ಮಾತ್ರ ಎಂದಿಗೂ ಬಿಟ್ಟುಕೊಡುವದಿಲ್ಲ. ಹಾಗೆ ನೋಡಿದರೆ ಎಷ್ಟೊ ಸಾರಿ ಇತಿಹಾಸಕಾರರಿಗೆ, ಸಮಾಜಶಾಸ್ತ್ರಜ್ಞರಿಗೆ, ಮಾನವಶಾಸ್ತ್ರಜ್ಞರಿಗೆ, ಮತ್ತು ಜನಪದ ವಿಜ್ಞಾನಿಗಳಿಗೆ ಗೋಚರಿಸದ ಸಂಗತಿಗಳನ್ನು ಇಂತಹ ಶಬ್ದಗಳು ಸರಳವಾಗಿ ಬಿಚ್ಚಿಹೇಳಿಬಿಡುತ್ತವೆ. ಈ ವರ್ಗಕ್ಕೆ ಸೇರಿದ ಶಬ್ದಗಳು ತಮ್ಮೊಡಲಿನಲ್ಲಿ ಸಾಮಾಜಿಕ, ಧಾರ್ಮಿಕ, ಮತ್ತು ಐತಿಹಾಸಿಕ ಘಟನೆಗಳನ್ನು ತುಂಬಿಕೊಂಡಿರುತ್ತವೆ. ಇಂತಹ ಮಾಹಿತಿಗಳನ್ನು ನಾವು ಶಬ್ದಗಳಿಂದ ದೊರಕಿಸಬೇಕಾದಲ್ಲಿ ಪ್ರತಿ ಶಬ್ದವನ್ನು ನಾವು ಹೆಕ್ಕಿ ಹೆಕ್ಕಿ ನೋಡುವ ತಾಳ್ಮೆ ಹೊಂದಿರಬೇಕು. ಶಬ್ದಗಳನ್ನು ಅಂತಹ ಸಂದರ್ಭಗಳಲ್ಲಿ ಇಟ್ಟು ಪರೀಕ್ಷಿಸಬೇಕು ಆದರೆ ಶಬ್ದಗಳನ್ನು ನಾವು ನಿತ್ಯವೂ ನಮ್ಮ ಸಂವಹನಕ್ಕಾಗಿ ಬಳಸುವದರಿಂದ, ಅವುಗಳ ಹುಟ್ಟು ಬೆಳವಣಿಗೆ ಮತ್ತು ಸಾವಿನೆಡೆಗೆ ನಾವು ಲಕ್ಷವಹಿಸುವುದು ಬಹಳ ಕ್ವಚಿತ.

. ಇಲ್ಲಿ ವಿವೇಚಿಸುತ್ತಿರುವ ಪುನರುಕ್ತಿ ಈ ಮೇಲೆ ವಿವರಿಸಿದ ಪ್ರಕ್ರಿಯೆಗಿಂತ ಹೊಸದೇನಲ್ಲ. ಪುನರುಕ್ತಿ ಸರ್ವಸಾಧಾರಣವಾಗಿ ಜಗತ್ತಿನ ಎಲ್ಲ ಭಾಷೆಗಳಲ್ಲಿಯೂ ಕಂಡು ಬರುತ್ತದೆ. ಭಾರತೀಯ ಭಾಷೆಗಳನ್ನು ಅವಲೋಕಿಸಿದರೆ ಸಂಸ್ಕೃತ ವೈಯಾಕರಣಿಕರಿಂದ ಹಿಡಿದು ಆಧುನಿಕ ಭಾಷಾವಿಜ್ಞಾನಿಗಳವರೆಗೆ ಎಲ್ಲರೂ ಪುನರುಕ್ತಿಯನ್ನು ಅಭ್ಯಸಿಸಿದ್ದಾರೆ. ಸಂಸ್ಕೃತದ ಕೆಲವು ವೈಯಾಕರಣಿಕರು ಪುನರುಕ್ತಿಯನ್ನು ವ್ಯಾಕರಣ ದೃಷ್ಟಿಯಿಂದ ದೋಷವೆಂದೂ, ಇನ್ನು ಕೆಲವರು ದೋಷವಲ್ಲವೆಂದೂ, ಕೆಲವರು ಕಾವ್ಯ ದೃಷ್ಟಿಯಿಂದ ಗುಣವೆಂದೂ ಹೇಳಿದ್ದಾರೆ. ಕನ್ನಡ ವ್ಯಾಕರಣಕಾರರ ಕಡೆಗೆ ದೃಷ್ಟಿಯನ್ನು ಹೊರಳಿಸಿದರೆ ಸಂಸ್ಕೃತ ವ್ಯಾಕರಣಕಾರರ ಅಭಿಮತವೇ ಕನ್ನಡ ವ್ಯಾಕರಣಕಾರರ ಅಭಿಮತ. ಇದಕ್ಕೆ ಕಾರಣವಿಷ್ಟೇ. ನಮ್ಮ ಕನ್ನಡ ವ್ಯಾಕರಣಕಾರರಾಗಲಿ, ಕಾವ್ಯಾಲಂಕಾರ ಶಾಸ್ತ್ರಗಳಾಗಲೀ ಸಂಸ್ಕೃತದ ಪಡಿಕಟ್ಟಿನಲ್ಲಿ ಹುಟ್ಟಿಬಂದಂತಹವು. ಇತ್ತೀಚೆಗೆ ಕನ್ನಡ ಭಾಷಾವಿಜ್ಞಾನಿಗಳು ಕನ್ನಡಕ್ಕೆ ಕನ್ನಡದ ವ್ಯಾಕರಣವನ್ನು ಕೊಡಲು ಪ್ರಯತ್ನಿಸುತ್ತಿದ್ದಾರೆ. ಅದೇನೇ ಇದ್ದರೂ ಕನ್ನಡ ಪುನರುಕ್ತಿಯನ್ನು ಅಭ್ಯಸಿಸುವಾಗ ಸಂಸ್ಕೃತ ವ್ಯಾಕರಣಕಾರರು ಪುನರುಕ್ತಿಯ ಬಗೆಗೆ ಹೇಳಿದ ಕೆಲವು ವಿಚಾರಗಳನ್ನು ಅಭ್ಯಸಿಸುವದು ಅಗತ್ಯ.

ಸಂಸ್ಕೃತದಲ್ಲಿ ಪುನರುಕ್ತಿ :

ಮೇಲುನೋಟಕ್ಕೆ ಪುನರುಕ್ತಿ ಎಷ್ಟೇ ಸರಳವಾಗಿ ಕಂಡರೂ ಈ ಪ್ರಕ್ರಿಯೆ ಬಹಳ ಗಹನವಾಗಿದೆ. ಪುನರುಕ್ತಿಗೆ ಬಹಳ ಮುಖಗಳಿವೆ. ಆದ್ದರಿಂದಲೇ ಸಂಸ್ಕೃತ

ವೈಯ್ಯಾಕರಣಿಕರು ಪುನರುಕ್ತಿಯ ಬಗೆಗೆ ವ್ಯಾಕರಣ ಗ್ರಂಥಗಳಲ್ಲಿಯೂ ಮತ್ತು ಅಲಂಕಾರಶಾಸ್ತ್ರಗಳಲ್ಲಿಯೂ ಉಲ್ಲೇಖಿಸಿದ್ದಾರೆ.

೧. ವಾಮನನು ತನ್ನ ಕಾವ್ಯಾಲಂಕಾರ ಸೂತ್ರ-ವೃತ್ತಿಯಲ್ಲಿ ಶಬ್ದಶುದ್ಧಿಯನ್ನು ಕುರಿತು ಐದನೆಯ ಅಧಿಕರಣದಲ್ಲಿ ಹೀಗೆ ಹೇಳುತ್ತಾನೆ.

''ನೈಕಂ ಪದಂ ದ್ವಿಃ ಪ್ರಯೋಜ್ಯಂ ಪ್ರಾಯೇಣ''

ಅಂದರೆ ಸಾಮಾನ್ಯವಾಗಿ, ಒಂದೇ ಪದವನ್ನು ಎರಡು ಸಲ ಪ್ರಯೋಗಿಸಬಾರದು; ಪುನರುಕ್ತಿಯು ದೋಷವೇ ಆದರೆ ವಿಶೇಷ ವಿವಕ್ಷೆಯಿದ್ದಾಗ ದೋಷವಲ್ಲ ಎನ್ನುತ್ತಾನೆ. ಉದಾಹರಣೆಗೆ ಮಾಘ ಪ್ರಯೋಗವನ್ನು ಕೊಡುತ್ತಾನೆ.

''ಕ್ಷಣೇ ಕ್ಷಣೇ ಯನ್ನವತಾಮುಪೈತಿ
ತದೇವ ರೂಪಂ ರಮಣೀಯತಾಯಃ''

೨. ರುದ್ರಟನು ತನ್ನ ಕಾವ್ಯಾಲಂಕಾರದಲ್ಲಿ, ಆರನೆಯ ಅಧ್ಯಾಯದಲ್ಲಿ ಪುನರುಕ್ತಿ ದೋಷವಲ್ಲವೆಂದು ಬಹಳ ಸ್ಪಷ್ಟವಾಗಿ ಹೇಳಿದ್ದಾನೆ.

'' ಯಚ್ಚ ಪ್ರತಿಪತ್ತೌವಾ ನ ಪ್ರತಿಪದ್ಯತೇ ವಸ್ತು ಸಕೃದುಕ್ತಂ ।
ತತ್ರ ಪದಂ ವ್ಯಾಕಂ ವಾ ಪುನರುಕ್ತಂ ನೈವ ದೋಷಾಯ ॥
....
ಅನ್ಯಾಭಿದೇಯಮಪಿ ಸತ್ ಪ್ರಯುಜ್ಯತೇ ಯತ್ ಪದಂ ಪ್ರಶಂಸಾರ್ಥಂ ।
ತದ್ಧಿ ನ ದೋಷಾಯ ಸ್ಯಾದಾಧಿಕ್ಯಂ ಪೌನರುಕ್ತಂ ವಾ ॥

ಚೆನ್ನಾಗಿ ಅಭಿವ್ಯಕ್ತಪಡಿಸಿದ ವಸ್ತುವಿನ ತಿಳುವಳಿಕೆಯಾಗದಿದ್ದರೆ ಅಂಥ ಹೊತ್ತಿನಲ್ಲಿ ಪದವನ್ನು ವಾಕ್ಯವನ್ನು ಮತ್ತೊಮ್ಮೆ ಉಚ್ಚರಿಸಿದರೆ ದೋಷವಲ್ಲ. ಬೇರೆ ಅರ್ಥ ಕೊಡುವ ಶಬ್ದವಾಗಿದ್ದರೂ ಪ್ರಶಂಸೆಗಾಗಿ ಉಪಯೋಗಿಸಿದರೆ ದೋಷವಿಲ್ಲ ಮತ್ತು ಅಧಿಕವಾದ ಪುನರುಕ್ತಿಯೂ ದೋಷವಲ್ಲ.

೩. ಇದೇ ಮಾತನ್ನು ಶಾಬರ-ಭಾಷ್ಯದಲ್ಲಿ ನಾಲ್ಕನೆಯ ಅಧ್ಯಾಯದಲ್ಲಿ ಪುಷ್ಟಿಗೊಳಿಸಲಾಗಿದೆ.

''ನ ಪುನರುಕ್ತಂ ಮಹಾನ್ ದೋಷಾ :,
ಬಹುಕೃತ್ವೋಪಿ ಪಥ್ಯಂ ವೇದಿತವ್ಯಂ ಭವತಿ ''

ಅಂದರೆ ಪುನರುಕ್ತಿ ದೊಡ್ಡ ದೋಷವಲ್ಲ; ಹಲವಾರು ಸಾರೆ ಉಪಯೋಗಿಸಿದರೂ ಅದು ಒಳ್ಳೆಯದನ್ನೇ ಹೇಳುತ್ತದೆ.

೪. ಮಮ್ಮಟನ ಕಾವ್ಯಪ್ರಕಾಶದ ಪ್ರಕಾರ-

''ಕಥಿತಪದಂ ಗುಣೋ ಲಾಟನುಪ್ರಾಸೇऽರ್ಥಾಂತರ ಸಂಕ್ರಮಿತ ವಾಚ್ಯೇ
ವಿಹಿತಾನುವಾದ್ಯತ್ವೇಚ ''

ಒಮ್ಮೆ ನುಡಿದ ಶಬ್ದ ಲಾಟಾನುಪ್ರಾಸದಲ್ಲಿ ಬೇರೆ ಅರ್ಥವನ್ನು ಸೂಚಿಸುವದರ ಸಲುವಾಗಿ ಮತ್ತು ವಿಹಿತವಾದ ಅರ್ಥಾಂತರಕ್ಕೂ ಅಥವಾ ಅನುವಾದಕ್ಕೂ ಮತ್ತೊಮ್ಮೆ ಪ್ರಯೋಗಿಸಿದರೆ ಗುಣವೇ ಹೊರತು ದೋಷವಲ್ಲ.

ವಾಮನ, ರುದ್ರಟ, ಶಾಬರ, ಮತ್ತು ಮಮ್ಮಟ ಇವರುಗಳ ವ್ಯಾಖ್ಯೆಗಳು ವಿವರಿಸುವ ವಿಚಾರಗಳು ಸ್ಪಷ್ಟವಾಗಿವೆ. ಶಾಬರ ಭಾಷ್ಯದಲ್ಲಿ ಒಡಮೂಡಿದ ವಿಚಾರ ''ನ ಪುನರುಕ್ತಂ ಮಹಾನ್ ದೋಷಃ'' ಎಂಬ ವ್ಯಾಖ್ಯೆ ಪುನರುಕ್ತಿ ದೋಷವೆಂದು ಸೂಚ್ಯವಾಗಿ ನಿರೂಪಿಸುತ್ತದೆ. ಜೊತೆಜೊತೆಗೆ ಒಟ್ಟು ಪುನರುಕ್ತಿ ದೋಷವಲ್ಲವೆಂದೂ ಹೇಳುತ್ತದೆ. ಆದರೆ ವಾಮನನು ಪುನರುಕ್ತಿಯನ್ನು ವ್ಯಾಕರಣದ ದೃಷ್ಟಿಯಿಂದ ಮಾತ್ರ ವಿವೇಚಿಸಿದ್ದಾನೆ. ಈ ವ್ಯಾಖ್ಯೆಗಳ ಹಿನ್ನೆಲೆಯಲ್ಲಿ ಕನ್ನಡ ವೈಯಾಕರಣಿಕರ ಮಾತುಗಳನ್ನೂ ಪರೀಕ್ಷಿಸಬೇಕು.

ಕನ್ನಡದಲ್ಲಿ ಪುನರುಕ್ತಿ :

ಈ ಮೊದಲೇ ಹೇಳಿದಂತೆ ಸಂಸ್ಕೃತ ಲಾಕ್ಷಣಿಕರಂತೆ, ವೈಯಾಕರಣಿಕರಂತೆ ಕನ್ನಡ ವ್ಯಾಕರಣಕಾರರು, ಲಾಕ್ಷಣಿಕರು ಪುನರುಕ್ತಿ ದೋಷವೆಂದೂ ಸಂದರ್ಭಕ್ಕನುಸಾರವಾಗಿ ಪ್ರಯೋಗಿಸಿದರೆ ದೋಷವಲ್ಲವೆಂದೂ ಹೇಳಿದ್ದಾರೆ.

೧. ನೃಪತುಂಗನು ತನ್ನ ಕವಿರಾಜಮಾರ್ಗದಲ್ಲಿ ಪುನರುಕ್ತಿಯನ್ನು ಕುರಿತು ಹೀಗೆ ನುಡಿದಿದ್ದಾನೆ :

''ಪುನರುಕ್ತಮೆಂದಕ್ಕುಂ, ನೆನೆಯದೆ ಪೂರ್ವೋದಿತಾರ್ಥ ಪದ ಪದ್ಧತಿಗೆ ಒಂದಿನಿಸುಂ ವಿಶೇಷಮಿಲ್ಲದೆ ಜನಯಿಸಿದ ಪದಾರ್ಥಮ್''.

ಮೊದಲು ಹುಟ್ಟಿದ ಅರ್ಥವನ್ನು ನೆನಪಿಗೆ ತಂದುಕೊಳ್ಳದೆ, ಅದೇ ಪದವನ್ನು ಹಾಗೆಯೇ ಮತ್ತೊಮ್ಮೆ ಪ್ರಯೋಗಿಸಿದರೆ ಆಗ ಜನಿಸುವ ಪದಾರ್ಥಕ್ಕೆ ಪುನರುಕ್ತಿ ಎನ್ನುವರು. ನೃಪತುಂಗನು ಉದಾಹರಣೆಗಾಗಿ ಈ ಕೆಳಗಿನ ರಚನೆಗಳನ್ನು ಕೊಟ್ಟಿದ್ದಾನೆ.

''ತ್ರಿದಶ ಸುರಲೋಕಾಸ್ಪದಮಂ ಪೆಱಗುಂ **ಮನುಷ್ಯ- ಮನುಜಂ** '' ಮತ್ತು **''ನಿನ್ನ ಪದಚರಣ ಯುಗದ್ವಯವಂ''**

೨. ಕೇಶಿರಾಜನು ಶಬ್ದಮಣಿದರ್ಪಣದಲ್ಲಿ ಹೀಗೆ ಹೇಳುತ್ತಾನೆ-

''ದುರಾಭೀಕ್ಷ್ಣವೀಪ್ಸೋ
ದಾರಾನುಕೃತಿಕ್ರಿಯಾಸಮಭಿಹಾರಸಮೀ
ಪೋರುತರ ಚಾಪಲಾದಿಗೆ
ಸಾರಂ ಬುಧರಿಂ ಪದಕ್ಕೆ ಯುಗಲೋಚ್ಚರಣಂ''

ದೂರದ ವಸ್ತುವನ್ನು ನೋಡುವದಕ್ಕೆ, ಇಚ್ಛೆಗೆ, ಔದಾರ್ಯ, ಅನುಕರಣ, ಕ್ರಿಯಾ ಸಮೂಹ, ಸಾಮಿಪ್ಯವನ್ನು ಸೂಚಿಸುವದಕ್ಕೆ ಮತ್ತು ತೀವ್ರವಾದ ಉತ್ಸಾಹಾದಿಗಳಿಗೆ ಪಂಡಿತರು ಪುನರುಕ್ತಿಯನ್ನು ಉಪಯೋಗಿಸುತ್ತಾರೆ. ಇದರರ್ಥ ಪುನರುಕ್ತಿ ದೋಷವಲ್ಲ ಗುಣವೆಂದಾಗುತ್ತದೆ.

೩. ನಾಗವರ್ಮನ ಕರ್ನಾಟಕ ಭಾಷಾ ಭೂಷಣ ಕನ್ನಡ ವ್ಯಾಕರಣವಾದರೂ ಸಂಸ್ಕೃತದಲ್ಲಿದೆ. ನಾಗವರ್ಮನ ವ್ಯಾಖ್ಯೆ ಈ ಕೆಳಗಿನಂತಿದೆ :

'' ವೀಪ್ಸಾನುಕರಣಾಭೀಕ್ಷ್ಣ್ಯಸ ಕ್ರಿಯಾ ಸಮಭಿಹಾರ
ಸಾಮೀಪ್ಯ ಚಾಪಲಾದೌ ಪದಸ್ಯ ದ್ವಿರ್ವಚನಂ''

ಇದನ್ನೇ ಕನ್ನಡದಲ್ಲಿ ನಾಗವರ್ಮನು ತನ್ನ ಕಾವ್ಯಾವಲೋಕನ ಅಧಿಕರಣ ಒಂದರಲ್ಲಿ ಅಂದರೆ ಶಬ್ದಸ್ಮೃತಿಯಲ್ಲಿ ಮೇಲೆ ಹೇಳಿದ ವಿಚಾರವನ್ನೇ ಕನ್ನಡೀಕರಿಸಿದ್ದಾನೆ :

''ಚಾಪಲ ವಿಪ್ಸಾಭೀಕ್ಷ್ಣ್ಯಸ
ಮೀಪಾನುಕೃತಿ ಕ್ರಿಯಾ ಸಮಭಿಹಾರಾದಿ
ವ್ಯಾಪಸೆಯೊಳ್ ಪದಕಕ್ಕುಂ
ರೂಪ ದ್ವಿತ್ವಂ ಯಥಾ ಪ್ರಯೋಗಾನುಗತಂ ''

ಇವೆರಡರ ಅರ್ಥವಿವರಣೆಯು ಒಂದೇ ಅಲ್ಲದೇ ಮೇಲೆ ಹೇಳಿದ ಕೇಶಿರಾಜನ ವಿವರಣೆಗಿಂತ ಭಿನ್ನವಾದುದಲ್ಲ. ಆದರೆ ನಾಗವರ್ಮನು ವಿಷಯವನ್ನು ಕ್ರಮಬದ್ಧವಾಗಿ ನಿರೂಪಿಸಿದ್ದಾನೆ. ಪುನರುಕ್ತಿ ದ್ರಾವಿಡ ಭಾಷೆಗಳಲ್ಲಿ ವಿಶಿಷ್ಟವಾಗಿ ಬೆಳೆದುಕೊಂಡು ಬಂದಿದೆ. ಕನ್ನಡ ಭಾಷೆಯಲ್ಲಿ ಪುನರುಕ್ತಿ ಬಹುಕಾಲದಿಂದ ಇಂದಿನವರೆಗೆ ನಡೆದುಕೊಂಡು ಬಂದು ಹೊಸ ಹೊಸ ಆಯಾಮಗಳನ್ನು ಸೃಷ್ಟಿಸಿಕೊಳ್ಳುತ್ತಲಿದೆ. ಈ ಪ್ರಕ್ರಿಯೆಯನ್ನು ವೈಜ್ಞಾನಿಕವಾಗಿ ವಿಶ್ಲೇಷಿಸುವುದು ಅವಶ್ಯ.

ಭಾಷಾವಿಜ್ಞಾನದ ಪ್ರಕಾರ ಪುನರುಕ್ತಿ ದೋಷವಲ್ಲ. ಅದು ಕಾವ್ಯದಲ್ಲಿಯೇ ಬರಲಿ, ಗದ್ಯದಲ್ಲಿಯೇ ಬರಲಿ, ಆಡುಮಾತಿನಲ್ಲಿಯೇ ಬರಲಿ, ಅದೊಂದು ಸಹಜ ಮತ್ತು ಸ್ವಾಭಾವಿಕ ಪ್ರಕ್ರಿಯೆ. ಸಂಸ್ಕೃತ ವ್ಯಾಕರಣಕಾರರಾಗಲಿ, ಕನ್ನಡ ವ್ಯಾಕರಣಕಾರರಾಗಲಿ ಎಷ್ಟು ವಿಧವಾಗಿ ಪುನರುಕ್ತಿಯನ್ನು ವಿಂಗಡಿಸಿದ್ದಾರೆಯೋ ಅಷ್ಟು ತೆರನಾದ ಕಾರ್ಯಗಳನ್ನು ಅವು ನಿರ್ವಹಿಸುತ್ತವೆ. ಅಂದಮೇಲೆ ದೋಷಪೂರಿತ ರಚನೆಗಳೆಂದು ಹೇಳುವುದು ಸಮಂಜಸವೂ ಅಲ್ಲ ; ವೈಜ್ಞಾನಿಕವೂ ಅಲ್ಲ. ಮೇಲಾಗಿ ಇವು ಎಲ್ಲ ಭಾಷೆಗಳಲ್ಲಿಯೂ ಕಂಡುಬರುತ್ತವೆ. ಪುನರುಕ್ತಿಗಳು ಅರ್ಥವನ್ನು ಸಾಧಿಸುತ್ತವೆ. ಒಂದು ರೀತಿಯಲ್ಲಿ ಪುನರುಕ್ತಿಗಳು ಅರ್ಥಬೆಳವಣಿಗೆಯ ಕಡೆಗೆ ಬಾಗುತ್ತವೆ. ವೈವಿಧ್ಯತೆ ವಕ್ರವಾಗಿದ್ದರೂ ಅರ್ಥ ನೇರವಾಗಿರುತ್ತದೆ, ಹೊರತು ಅರ್ಥಕ್ಕೆ ಬಾಧೆ ತರುವುದಿಲ್ಲ. ಇವು ತಮ್ಮದೇ ಆದ ವೈಶಿಷ್ಟ್ಯವನ್ನು ಪಡೆಗುಕೊಂಡಿರುವುದು ಗಮನಾರ್ಹವಾದ ಅಂಶ. ಭಾರತೀಯ ವೈಯಾಕರಣಿಕರು ವಿವೇಚಿಸದ ಪುನರುಕ್ತಿಗಳಿಗಿಂತ ತೀರಾ ಭಿನ್ನವಾದ ಪುನರುಕ್ತಿಗಳು ಜನ್ಮತಾಳುತ್ತಿವೆ. ಅಂದರೆ ಭಾಷೆ ಬೆಳೆದಂತೆ ಭಾಷೆಯೊಡನೆ ಪುನರುಕ್ತಿಯು ಬೆಳೆಯುತ್ತದೆ ಎನ್ನುವುದನ್ನು ಗಮನಿಸುವುದು ಅವಶ್ಯ. ಒಂದೇ ಮಾತಿನಲ್ಲಿ ಹೇಳುವುದಾದರೆ ಪುನರುಕ್ತಿಗೂ ತನ್ನದೇ ಆದ ಪರಂಪರೆ ಹುಟ್ಟಿಕೊಂಡಿದೆ.

ಪುನರುಕ್ತಿಯ ಪರಿಕಲ್ಪನೆ :

ಪುನರುಕ್ತಿಯ ಪರಿಕಲ್ಪನೆ ಸಾಕಷ್ಟು ಪ್ರಾಚೀನವಾದದ್ದು. ವ್ಯಾಕರಣಗಳಲ್ಲಿ ಪುನರುಕ್ತಿಯ ಬಗೆಗೆ ಎಲ್ಲಿಯಾದರೂ ಸ್ವಲ್ಪ ವಿಚಾರವಿದ್ದೇ ಇರುತ್ತದೆ. ಒಂದು ಮಹತ್ವದ ಸಂಗತಿ ಎಂದರೆ ಪುನರುಕ್ತಿಗೆ ವ್ಯಾಕರಣಗಳಲ್ಲಿ ದೊರೆಯಬೇಕಾದ ಸ್ಥಾನ ದೊರೆತಿಲ್ಲವೆಂದೇ ಹೇಳಬೇಕು. ಪುನರುಕ್ತಿಗಳ ಪ್ರಯೋಗ ವಿಶೇಷವಾಗಿ ಆಡುಮಾತಿನಲ್ಲಿ ಹೆಚ್ಚಿಗೆ ಇರುವುದರಿಂದ ಗ್ರಾಂಥಿಕದಲ್ಲಿ ಕೆಲಮಟ್ಟಿಗೆ ಇರುವುದರಿಂದ ವೈಯಾಕರಣಿಕರು ಇವುಗಳ ಬಗೆಗೆ ವಿಶೇಷವಾದ ಗಮನಹರಿಸಿರಲಿಕ್ಕಿಲ್ಲವೆಂದು ಹೇಳಬಹುದು. ಮಿಶನರಿ (ಕ್ರೈಸ್ತ) ವ್ಯಾಕರಣಕಾರರು ಕನ್ನಡ ಭಾಷಾ ವ್ಯಾಕರಣಗಳನ್ನು ರಚಿಸುವಾಗ ಅವರೂ ಕೂಡ ಕನ್ನಡಕ್ಕಿದ್ದ ವ್ಯಾಕರಣ ಪರಂಪರೆಯನ್ನು ಅನುಲಕ್ಷಿಸಿ ವ್ಯಾಕರಣಗಳನ್ನು ರಚಿಸಿದ್ದರಿಂದ

ಪುನರುಕ್ತಿಗೆ ಅಷ್ಟಕಷ್ಟೇ ಸ್ಥಾನ ದೊರೆತಿದೆ. ವಿಷಯವೇನೇಯಿದ್ದರೂ ಸಂಸ್ಕೃತ ಮತ್ತು ಕನ್ನಡ ವ್ಯಾಕರಣಗಳಲ್ಲಿ ಇರುವ ವಿವೇಚನೆಯೇ ಮುಂದೆ ಈ ದಿಕ್ಕಿನಲ್ಲಿ ಭಾಷಾವಿಜ್ಞಾನಿಗಳಿಗೆ ಬೆಳಕು ತೋರುವಂತಾಯಿತು.

ಕವಿರಾಜಮಾರ್ಗದಿಂದ ಮೊದಲು ಮಾಡಿ ಇಲ್ಲಿಯವರೆಗಿನ ಭಾಷಾಭ್ಯಾಸದ ಇತಿಹಾಸವನ್ನು ಅವಲೋಕಿಸಿದರೆ ಪುನರುಕ್ತಿಯ ಬಗೆಗೆ ನಡೆದ ವಿವೇಚನೆಯಿಂದ ನಮಗೆ ಪುನರುಕ್ತಿಯ ವ್ಯಾಪ್ತಿ ಎಷ್ಟು ಎಂಬ ಕಲ್ಪನೆ ಮೂಡುತ್ತದೆ. ವಿವೇಚನೆ ಬಹಳ ಕಡಿಮೆ ಪ್ರಮಾಣದಲ್ಲಿದ್ದರೂ ಪುನರುಕ್ತಿಯನ್ನು ವ್ಯಾಕರಣಕಾರರು ಮತ್ತು ಭಾಷಾವಿಜ್ಞಾನಿಗಳು ಬೇರೆ ಬೇರೆ ಹೆಸರಿನಿಂದ ಗುರುತಿಸಿದ್ದಾರೆ. ಸಂಸ್ಕೃತ ಮತ್ತು ಕನ್ನಡ ವ್ಯಾಕರಣಕಾರರು ಪುನರುಕ್ತಿಯನ್ನು ಈ ಕೆಳಗಿನಂತೆ ಹೆಸರಿಸಿದ್ದಾರೆ -

ಪುನರುಕ್ತಿ ಆಮ್ರೇಡಿತ, ದ್ವಿರುಕ್ತಿ ಜೋಡುನುಡಿ, ಕೂಡುನುಡಿ ಮತ್ತು ಮೇಳನುಡಿ ಎಂದರೆ ಪದಗಳನ್ನು ಎರಡು ಸೂಳು ಉಚ್ಚರಿಸುವುದು ಅಥವಾ ದ್ವಿಪ್ರಯೋಗ. ಬಹೂಕ್ತಿ ಎಂದರೆ ಮೂರು ಸೂಳು ಉಚ್ಚರಿಸುವುದು ಅಥವಾ ತ್ರಿಪ್ರಯೋಗವೆಂದು ವ್ಯಾಕರಣಕಾರರು ಕೊಟ್ಟ ವ್ಯಾಖ್ಯೆಗಳಿವೆ. ಈ ವ್ಯಾಖ್ಯಾನಿಸುವ ಪದ್ಧತಿಯ ಮರೆಯಲ್ಲಿ ಬಹುಶಃ ಸಂಸ್ಕೃತ ವಚನ ಪದ್ಧತಿಯ ಪ್ರಭಾವವಿರಬೇಕು. ಇವರ ನಂತರ ಬಂದ ಕನ್ನಡ ಮಿಶನರಿ ವ್ಯಾಕರಣಕಾರರು ಕನ್ನಡ ವ್ಯಾಕರಣವನ್ನು ಇಂಗ್ಲಿಷ್ ಮಾಧ್ಯಮದ ಮೂಲಕ ರಚಿಸಿದರು. ಅವರು ಇಂತಹ ತಾಂತ್ರಿಕ ಪದಗಳಿಗೆ ಇಂಗ್ಲಿಷ್ ತಾಂತ್ರಿಕ ಪದಗಳನ್ನೇ ಬಳಸಿದರು. ಮಿಶನರಿ ವ್ಯಾಕರಣಕಾರರು ಪುನರುಕ್ತಿಯನ್ನು **Duplication** ಮತ್ತು **Repetition** ಎಂದು ಹೆಸರಿಸಿದ್ದಾರೆ. ಇವರ ನಂತರದಲ್ಲಿ ಬಂದ ಕೆಲವು ಭಾಷಾಶಾಸ್ತ್ರಜ್ಞರು ಕೂಡ ಇವೇ ತಾಂತ್ರಿಕ ಪದಗಳನ್ನು ಬಳಸಿಕೊಂಡರು. ಭಾಷಾಶಾಸ್ತ್ರ ಒಂದು ವಿಜ್ಞಾನವಾಗಿ ಬೆಳೆದನಂತರ, ಈ ಶಿಸ್ತಿನಲ್ಲಿ ಬಂದ ದ್ರಾವಿಡ ಭಾಷಾವಿಜ್ಞಾನಿಗಳು ಪುನರುಕ್ತಿಯನ್ನು ಒಂದೇ ಮಗ್ಗಲಿನಿಂದ ಅಭ್ಯಸಿಸಿ ಈ ರಚನೆಯನ್ನು **Echo-Words** ಎಂದು ಕರೆದರು. ಇವರಲ್ಲಿ ಪ್ರಮುಖರಾದವರು ಎಮಿನೊ (೧೯೩೮), ಅಂದ್ರನೋವ್ (೧೯೭೦), ಚಿದಾನಂದ ಮೂರ್ತಿ (೧೯೮೧), ಶಿಫ್‌ಮನ್ (೧೯೮೩) ಮತ್ತು ಜ್ವಲಬಿಲ್ (೧೯೯೦). **Echo -Words** ಈ ಪದವನ್ನು 'ಪ್ರತಿಧ್ವನಿ ಪದ' ಎಂದು ಕನ್ನಡಿಸಿದ್ದಾರೆ. ಆದರೆ ಈ ಪದವನ್ನು ಆಧುನಿಕ ಭಾಷಾವಿಜ್ಞಾನಿಗಳೇ ಟಂಕಿಸಿದ್ದರೂ ಇದರ ವ್ಯಾಪ್ತಿ ಬಹಳ ಸೀಮಿತವಾದದ್ದು. ಇದನ್ನು ಗಮನಿಸಿದ ಆಕೃತಿಮಾ ವಿಜ್ಞಾನಿಗಳು, ಇಲ್ಲಿಯವರೆಗೆ ಉಪಯೋಗಿಸಿದ ಎಲ್ಲಾ ತಾಂತ್ರಿಕ ಪದಗಳನ್ನು ಚೆನ್ನಾಗಿ ಅಭ್ಯಸಿಸಿ ಅವುಗಳ ಸೀಮಿತವಾದ ವ್ಯಾಪ್ತಿಯನ್ನು ಗಮನಿಸಿ ಪುನರುಕ್ತಿ ಎಂಬುದಕ್ಕೆ ಸರಿಸಮಾನವಾದ ತಾಂತ್ರಿಕಪದ **Reduplication** ಎಂದು ಹೆಸರಿಸಿ **Reduplication** ಎಂಬ ತಲೆಪಟ್ಟಿಯ ಅಡಿಯಲ್ಲಿ

ಇನ್ನೆರಡು ಹೊಸ ಪರಿಕಲ್ಪನೆಗಳನ್ನು ಪರಿಚಯಿಸಿದರು - Partial Reduplication (ಆಂಶಿಕ ಪುನರುಕ್ತಿ) ಮತ್ತು Complete Reduplication (ಪೂರ್ಣ ಪುನರುಕ್ತಿ). ಆಂಶಿಕ ಪುನರುಕ್ತಿಯೂ ಪ್ರತಿಧ್ವನಿ ಪದಗಳಿಗೆ (Echo - Words) ಸಂವಾದಿಯಾಗಿ ಬರುತ್ತದೆ. (ಸ್ಮಿತ್ಸ್, ೧೯೭೪). ಇಲ್ಲಿಯವರೆಗೆ ಪುನರುಕ್ತಿಯು ಸಾಗಿ ಬಂದ ದಾರಿಯನ್ನು ನೋಡಿದಾಗ ಪುನರುಕ್ತಿಯ ಕಲ್ಪನೆಯ ಬಗೆಗೆ ಹೆಚ್ಚಿನ ವಿಶ್ಲೇಷಣೆ ನಡೆದದ್ದು ಆಧುನಿಕ ಭಾಷಾ ವಿಜ್ಞಾನಿಗಳಿಂದಲೇ ಎಂಬ ಮಾತು ಖಚಿತವಾಗಿ ತಿಳಿದುಬರುತ್ತದೆ.

ಪುನರುಕ್ತಿಯ ರಚನೆ ಮತ್ತು ಸ್ವರೂಪ :

ಪುನರುಕ್ತಿಯ ರಚನೆಯು ಎಷ್ಟು ಸರಳವಾಗಿದೆಯೋ ಅಷ್ಟೆ ಸಂಕೀರ್ಣವಾಗಿಯೂ ಇದೆ. 'ಪುನರುಕ್ತಿ' ಹೆಸರೇ ಸೂಚಿಸುವಂತೆ ಇದರಲ್ಲಿ ಎರಡು ಪದಗಳು ಸೇರಿಕೊಂಡಿವೆ. ಈ ರಚನೆಯಲ್ಲಿ ಎರಡು ಪದಗಳು ಸೇರಿಕೊಂಡಿದ್ದರೂ ನಾವು ಪುನರುಕ್ತಿಯಲ್ಲಿ ಎರಡು ಪದಗಳಿವೆ ಎಂದು ಗಣಿಸದೇ ಪುನರುಕ್ತಿಯನ್ನು ಒಂದೇ ಘಟಕ ಅಥವಾ ರಚನೆ ಎಂದು ಪರಿಗಣಿಸುತ್ತೇವೆ. ಪುನರುಕ್ತಿಯ ರಚನೆಯನ್ನು ಈ ಕೆಳಗಿನಂತೆ ತೋರಿಸಬಹುದು :

ಪುನರುಕ್ತಿ $= X_1 + X_2$

X ಎನ್ನುವುದು ಪದವನ್ನು ಸೂಚಿಸುತ್ತದೆ

ಆಂಶಿಕ ಪುನರುಕ್ತಿ (Partial Reduplication) :

ಈ ಮೇಲೆ ವಿವರಿಸಿದಂತೆ ಪುನರುಕ್ತಿಯಲ್ಲಿ ಆಂಶಿಕ ಮತ್ತು ಪೂರ್ಣ ಪುನರುಕ್ತಿಗಳು ಎಂಬ ಎರಡು ಪ್ರಕಾರಗಳಿವೆ. ಆಂಶಿಕ ಪುನರುಕ್ತಿಯಲ್ಲಿಯ ಪದಗಳನ್ನು ಈ ಮೇಲೆ ತೋರಿಸಿದ ಸೂತ್ರದ ಪ್ರಕಾರ ವಿಭಜಿಸಿದರೆ ಮೊದಲನೆಯ ಪದವು X_2 ಮಾತ್ರ ಪದಗಳ ವರ್ಗಕ್ಕೆ ಸೇರಿಕೊಳ್ಳುತ್ತದೆ. ಎರಡನೆಯದು X_2 ಪದಗಳ ವರ್ಗಕ್ಕೆ ಸೇರುವದಿಲ್ಲ. X_2ವನ್ನು X_1 ದಿಂದ ಬೇರ್ಪಡಿಸಿದರೆ X_2 ತನ್ನ ಅರ್ಥವಂತಿಕೆಯನ್ನು ಕಳೆದುಕೊಳ್ಳುತ್ತದೆ. ಯಾವುದೇ ಪದಗಳನ್ನು ಪದಗಳ ವರ್ಗಕ್ಕೆ ಸೇರಿಸಬೇಕಾದರೆ ಆ ಪದವು ಆ ಭಾಷೆಯಲ್ಲಿ ಸ್ವತಂತ್ರವಾಗಿ ಬಳಕೆಯನ್ನು ಹೊಂದಿರಬೇಕಾಗುತ್ತದೆ. ಆದರೆ ಇಲ್ಲಿಯ ಎರಡನೆಯ ಪದವು ಮೊದಲನೆಯ ಪದದೊಂದಿಗೆ ಸೇರಿಕೊಂಡು ಬಂದಾಗ ಮಾತ್ರ ಆ ಪದಕ್ಕೆ ಅರ್ಥ ಉತ್ಪತ್ತಿಯಾಗುತ್ತದೆ. ಅಲ್ಲದೇ ಎರಡನೆಯ ಭಾಗವು ಭಾಷೆಯಲ್ಲಿ ಸ್ವತಂತ್ರವಾಗಿ ಬಳಕೆಯನ್ನು ಹೊಂದುವುದಿಲ್ಲ.

ಉದಾಹರಣೆಗೆ :

ಕಡಿ ಗಿರಡಿ/ಪರಡಿ
ಚೋಳು ಗೀಳು /ಪಾಳು
ಊಟ ಗೀಟ/ಪಾಟ
ಕೋಳಿ ಗೀಳಿ /ಪಾಳಿ
ಅಕ್ಕಿ ಗಿಕ್ಕಿ /ಪಕ್ಕಿ
ಪಾಟಿ ಗೀಟಿ
ಗಿಡ ಪಡ

ಈ ಉದಾಹರಣೆಯಿಂದ ಇನ್ನೊಂದು ಅಂಶ ಸ್ಪಷ್ಟವಾಗುತ್ತದೆ. ಆಂಶಿಕ ಪುನರುಕ್ತಿಯಲ್ಲಿ X_1 ಇದು ಮೂಲರೂಪ (basic form) ಆಗಿದ್ದು X_2 ಬದ್ಧರೂಪ (bound form) ಆಗಿದೆ. ಆಂಶಿಕ ಪುನರುಕ್ತಿಯಲ್ಲಿ ಮೂಲರೂಪದೊಂದಿಗೆ ಬರುವ ಬದ್ಧರೂಪವು ಮೂಲರೂಪದ ಜಾತಿಗೆ ಸೇರಿದಂತಹ ವಸ್ತುಗಳನ್ನು ಸೂಚಿಸುತ್ತದೆ. ಅಲ್ಲದೇ ಮೂಲ ರೂಪದ ಮೊದಲ ಅಕ್ಷರಕ್ಕೆ ಬದಲಾಗಿ ಗಿ-, ಅಥವಾ ಪ-, ಇಲ್ಲದಿದ್ದರೆ ಗೀ-, ಅಥವಾ ಪಾ-, ಎಂಬ ಅಕ್ಷರವು ಬದ್ಧರೂಪಕ್ಕೆ ಸೇರಿಕೊಳ್ಳುತ್ತದೆ. ಇದು ಮೂಲಪದದ ಮೊದಲ ಅಕ್ಷರದಲ್ಲಿ ಬರುವ ಸ್ವರವನ್ನು ಅವಲಂಬಿಸಿರುತ್ತದೆ. ಸ್ವರವು ಹ್ರಸ್ವವಾಗಿದ್ದರೆ ಹ್ರಸ್ವ, ದೀರ್ಘವಾಗಿದ್ದರೆ ದೀರ್ಘಸ್ವರ ಬರುತ್ತದೆ. ಈಗ ಆಂಶಿಕ ಪುನರುಕ್ತಿಯ ಸೂತ್ರವನ್ನು ಈ ಕೆಳಗಿನಂತೆ ತೋರಿಸಬಹುದು.

ಆಂಶಿಕ ಪುನರುಕ್ತಿ = ಮೂಲರೂಪ + ಬದ್ಧರೂಪ.

ಗಿ-, ಗೀ-, ಪ-, ಪಾ-, ಇವು ಇಂತಹ ಸಂದರ್ಭದಲ್ಲಿಯೇ ಬರಬೇಕೆಂಬ ನಿಯಮವೇನೂ ಇಲ್ಲ. ಈ ನಿಯಮವು ಐಚ್ಛಿಕವೂ ಆಗಿಲ್ಲ. ಸರ್ವಸಾಮಾನ್ಯವಾಗಿ ಈ ನಿಯಮವು ಕಂಡುಬರುತ್ತದೆ. ಆದರೆ ಇದಕ್ಕೆ ಸಾಕಷ್ಟು ಅಪವಾದಗಳೂ ಇವೆ. ಮೂಲರೂಪದ ಮೊದಲ ಅಕ್ಷರವು ಪ/ಗ ದಿಂದ ಆರಂಭವಾಗಿದ್ದರೆ ಪ ಕ್ಕೆ ಗ, ಗ ಕ್ಕೆ ಪ ಆಗಮವಾಗುವುದು. ಕೆಲವು ಕಡೆಗಳಲ್ಲಿಯಂತೂ ಆಂಶಿಕ ಪುನರುಕ್ತಿಯು ಮೂಲರೂಪ ಮತ್ತು ಬದ್ಧರೂಪಗಳ ನಿಯಮವನ್ನು ಬಿಟ್ಟರೆ ಉಳಿದೆಲ್ಲಾ ನಿಯಮಗಳಿಂದ ಇದರ ಸ್ವರೂಪ ಮುಕ್ತವಾಗಿ ಬಿಡುತ್ತದೆ. ಇಲ್ಲಿ ಎಮನ್ ಬಾಕ್ ಹೇಳಿದ ಮಾತು ನೆನಪಿಗೆ ಬರುತ್ತದೆ. ಸ್ವಾಭಾವಿಕ ಭಾಷೆಗಳು ಹೀಗೇಕೆ ವರ್ತಿಸುತ್ತವೆ ಎಂದರೆ ಅದು ಸ್ವಾಭಾವಿಕ ಭಾಷೆಗಳ ಲಕ್ಷಣವೆನ್ನುತ್ತಾನೆ.

ಉದಾಹರಣೆಗೆ :

ಜಡ್ಡು ಜಾಪತ್ರಿ
ಮೊಸರು ಹಸರು
ದಂಡ ದಬಕ
ತಂಗಳ ಮುಂಗಳ
ರೋಗ ರುಜಿನು

ಆದ್ದರಿಂದ ಆಂಶಿಕ ಪುನರುಕ್ತಿಯ ಪ್ರಕ್ರಿಯೆಯನ್ನು ನಿಯಮಬದ್ಧತೆಗೆ ಒಳಪಡಿಸುವದಾಗಲಿ ಒಂದು ಪಡಿಕಟ್ಟಿನಲ್ಲಿ ಇರಿಸುವದಾಗಲಿ ಕಷ್ಟಸಾಧ್ಯವೆನ್ನಿಸುತ್ತದೆ. ಆಂಶಿಕ ಪುನರುಕ್ತಿ ಇಲ್ಲಿ ಸಾಧ್ಯ ಇಲ್ಲಿ ಅಸಾಧ್ಯವೆಂದು ಹೇಳಲು ಬರುವಂತಿಲ್ಲ. (ನೋಡಿ ಕಿಟೆಲ್ ೧೯೦೩ ; ३೦೦) ಮತ್ತು ಚಿದಾನಂದಮೂರ್ತಿ (೧೯೮೧ ; ೧೨೨) "ಪದಂಗಳ್ಗೆ ಎರಡು ವೇಳೆ ಉಚ್ಚರಿಸುವುದು ಶ್ರೇಷ್ಠವಪ್ಪುದು " ಎಂದು ಕನ್ನಡ ವೈಯಾಕರಣಿಕರು ಹೇಳಿದುದು ಆಗಿನ ಭಾಷಾಸ್ವರೂಪಕ್ಕೆ ತಕ್ಕಂತೆ ಎಂಬುದನ್ನು ಗಮನಿಸಬೇಕು. ಅದೂ ಕೂಡ ಆರೇಳು ಸಂದರ್ಭಗಳಲ್ಲಿ ಮಾತ್ರ. ಇಂದಿನ ಭಾಷಾ ಸ್ವರೂಪಕ್ಕೂ ಅಂದಿನ ಭಾಷಾ ಸ್ವರೂಪಕ್ಕೂ ಅಜಗಜಾಂತರದಷ್ಟು ವ್ಯತ್ಯಾಸವಿದೆ. ಆ ಕಾಲದ ಕನ್ನಡದಲ್ಲಿ ಇರದಂತಹ ಎಷ್ಟೋ ರಚನೆಗಳು ಈಗ ಕಾಣಸಿಗುತ್ತವೆ. ಹಲವಾರು ಭಾಷೆಗಳೊಡನೆ ಕನ್ನಡ ಭಾಷೆ ಸಂಪರ್ಕವನ್ನು ಬೆಳೆಸಿಕೊಂಡಿದೆ. ಆ ಭಾಷಾ ನಿಯಮಗಳೂ ಕನ್ನಡದಲ್ಲಿ ಸೇರಿಕೊಂಡಿವೆ.

ಪೂರ್ಣ ಪುನರುಕ್ತಿ (Complete Reduplication) :

ಪೂರ್ಣ ಪುನರುಕ್ತಿಯಲ್ಲಿ ಮೂಲರೂಪವು ಸಂಪೂರ್ಣವಾಗಿ ಮರಳಿ ಬರುತ್ತದೆಂದು ಅದರ ಹೆಸರೇ ಹೇಳಿಬಿಡುತ್ತದೆ. ಇಂತಹ ರಚನೆಯಲ್ಲಿ ಎರಡೂ ಒಂದೇ ಪದಗಳಾಗಿದ್ದರೂ, ಅವು ಸ್ವತಂತ್ರ ಪದಗಳಿದ್ದರೂ, ಆ ಎರಡೂ ಪದಗಳು ಸೇರಿ ಒಂದು ರಚನೆಯನ್ನು ಸೃಷ್ಟಿಸುತ್ತವೆ.

ಉದಾಹರಣೆಗೆ :

ಸಣ್ಣ ಸಣ್ಣ
ಚಿಕ್ಕ ಚಿಕ್ಕ
ಪುಟ್ಟ ಪುಟ್ಟ

ಪೂರ್ಣ ಪುನರುಕ್ತಿಯಲ್ಲಿ ಇನ್ನೊಂದು ಪ್ರಕಾರದ ಪುನರುಕ್ತಿ ಇದೆ. ಇಲ್ಲಿ ಮೂಲಪದ ಮರುಕಳಿಸಿ ಬರದೇ ಮೂಲಪದದ ಪರ್ಯಾಯ ಪದವೇ ಮೂಲಪದದೊಂದಿಗೆ ಬರುತ್ತದೆ. ಪರ್ಯಾಯ ಪದಕ್ಕೆ ಇಂದಿನ ಭಾಷಾ ಪ್ರಯೋಗದಲ್ಲಿ ಅದೇ ಅರ್ಥ ಇರದೇ ಹೋಗಿರುವ ಸಂಭವವೂ ಇದೆ.

ಉದಾಹರಣೆಗೆ :

ಕೂಸು ಕುನ್ನಿ
ಮಾಡು ಮಟ್ಟು
ಹಚ್ಚ ಹಸರು.

ಐತಿಹಾಸಿಕವಾಗಿ ಈ ಬೆಳವಣಿಗೆಯನ್ನು ನೋಡಿದಾಗ ಒಂದು ಕಾಲಕ್ಕೆ ಒಂದು ಪದದ ಅರ್ಥವು ಯಾವುದೋ ಕಾರಣದಿಂದ ಬಿದ್ದು ಹೋದಾಗ ಅದುವೇ ಇದು ಎಂದು ಹೇಳಲು ಈ ತೆರನಾದ ರಚನೆಗಳು ಹುಟ್ಟಿಕೊಳ್ಳುವ ಸಾಧ್ಯತೆಗಳಿವೆ. ಈ ರಚನೆಯಲ್ಲಿ ಬರುವ ಎರಡೂ ಪದಗಳಿಗೂ ಇಂದಿನ ಭಾಷೆಯಲ್ಲಿ ಒಂದೇ ತೆರನಾದ ಅರ್ಥ ಚಲಾವಣೆ ಇದೆ ಎಂದು ಹೇಳಲಾಗುವುದಿಲ್ಲ. ಯಾಕೆಂದರೆ ಮೂಲಪದವಾಗಲಿ ಅಥವಾ ಇನ್ನೊಂದು ಪದವಾಗಲಿ ತನ್ನ ಚಲಾವಣೆಯನ್ನು ಕಳೆದುಕೊಂಡಿರಬಹುದು.

ಈ ಮೇಲೆ ಉಲ್ಲೇಖಿಸಿದ ಉದಾಹರಣೆಗಳಲ್ಲಿಯ ಕುನ್ನಿ, ಮಟ್ಟು ಮತ್ತು ಹಚ್ಚ ಈ ಮೂರು ಪದಗಳನ್ನು ಬೇರ್ಪಡಿಸಿ ನೋಡಿದಾಗ ಈ ಪದಗಳು ಬೇರೆ ಬೇರೆ ಅರ್ಥವನ್ನು ಸೂಚಿಸಬಹುದು. ಅಂದರೆ ಕನ್ನಡ ಭಾಷೆಯ ಒಂದು ಘಟ್ಟದಲ್ಲಿರುವ ಅರ್ಥವನ್ನು ಹೇಳಬಹುದು ಅಥವಾ ಮೂಲದ ಅರ್ಥವನ್ನೇ ಸೂಚಿಸಬಹುದು.

''ಕುನ್ನಿ'' ಎಂಬ ಪದವು ೧೨ನೆಯ ಶತಮಾನದವರೆಗೆ ಕೂಸು ಎಂಬರ್ಥದಲ್ಲಿಯೇ ಉಪಯೋಗವಾಗುತ್ತಿತ್ತು.

ಉದಾಹರಣೆಗೆ ಬಸವಣ್ಣನವರ ವಚನವನ್ನೇ ನೋಡಬಹುದು :

''ನಮ್ಮ ಕುನ್ನಿಗೆ ತಳಿಗೆಯಲ್ಲಿ ಉಣ್ಣಲಿಡಬೇಡ''

ಆದರೆ ಇಂದಿನ ಕನ್ನಡದಲ್ಲಿ ಮಾತ್ರ ''ಕುನ್ನಿ'' ಎಂದರೆ ''ನಾಯಿಯ ಕುನ್ನಿ'' ಎಂಬರ್ಥಕ್ಕೆ ಮೀಸಲಾಗಿದೆ. ''ಮಟ್ಟು'' ಎಂಬ ಪದದ ಅರ್ಥ ಹಳೆಗನ್ನಡದಲ್ಲಿ ''ಮಾಡು'' ಎಂದಿದೆ.

ಉದಾಹರಣೆಗೆ :

"ಪೊಡಮಟ್ಟು "ಅಂದರೆ " ನಮಸ್ಕಾರ ಮಾಡಿ" ಎಂದರ್ಥ. ಆಧುನಿಕ ಕನ್ನಡದಲ್ಲಿ "ಮಟ್ಟು" ಎಂಬ ಪದದ ಬಳಕೆಯೇ ಇಲ್ಲ. (ಹವ್ಯಕ ಉಪಭಾಷೆಯಲ್ಲಿದೆ.)

"ಹಚ್ಚ" ಎಂಬ ಪವದ ಅರ್ಥ "ಹಸರು" ಎಂತಲೇ. ಇದು ಹಳೆಗನ್ನಡದಲ್ಲಿ ಪಚ್ಚ ಎಂದಿದೆ. ಪಚ್ಚ / ಹಚ್ಚ ಅಧುನಿಕ ಕನ್ನಡದಲ್ಲಿಯೂ ಸಹ ಹಸಿರಾಗಿದೆ ಎಂದು ಹೇಳಲು ನಾವು ಹಚ್ಚಗಿದೆ ; ಹಚ್ಚಗಾಗಿದೆ ಎಂದು ಹೇಳುತ್ತೇವೆ.

ಈ ಮೇಲಿನ ಪುನರುಕ್ತಿಗಿಂತ ಸ್ವಲ್ಪ ಭಿನ್ನವಾದ ಪುನರುಕ್ತಿಯೂ ಇದೆ. ಈ ರಚನೆಯಲ್ಲಿ ಎರಡೂ ಪದಗಳು ಇಂದಿನ ಕನ್ನಡದಲ್ಲಿ ಚಲಾವಣೆ ಹೊಂದಿದ್ದು, ಸಮರ್ಥಪದಗಳಿದ್ದು ಮೊದಲ ಪದದ ಅರ್ಥವನ್ನು ಸೂಚಿಸುತ್ತದೆ. ಯಾವ ಅಂಶದಲ್ಲಿಯೂ ಬೇರೆ ಅರ್ಥಛಾಯೆಯನ್ನು ಹೊಂದಿದಂತಹದಲ್ಲ. ಪದಗಳು ಮಾತ್ರ ರೂಪದಿಂದ ಭಿನ್ನವಾಗಿರುತ್ತವೆ. ಅರ್ಥ ದೃಷ್ಟಿಯಿಂದ ಏಕಾರ್ಥವನ್ನೇ ಸೂಚಿಸುತ್ತವೆ.

ಅರ್ಥಕ್ಕೆ ಯಾವುದೇ ರೀತಿಯ ಚ್ಯುತಿಯನ್ನು ತರುವದಿಲ್ಲ.

ಉದಾಹರಣೆಗೆ :

ಚಿಕ್ಕ ಪುಟ್ಟ
ಸಣ್ಣಪುಟ್ಟ
ಹಣಕಾಸು

ಈ ರಚನೆಗಳು ನಿಯಮಬದ್ಧವಾದವುಗಳು. ಇಲ್ಲಿ ಬರುವ ಪದಗಳನ್ನು ಓಂಸೆಯಿಂದ ಹಿಂದೆ ಮುಂದೆ ಮಾಡಲು ಬರುವುದಿಲ್ಲ. ಹೀಗೆ ಹಿಂದೆ ಮುಂದೆ ಮಾಡಿದಲ್ಲಿ ಆ ರಚನೆಗಳು ತಮ್ಮ ಭಾಷಿಕ ಸೌಂದರ್ಯವನ್ನು ಕಳೆದುಕೊಳ್ಳುತ್ತವೆ.

ಚಿಕ್ಕ ಪುಟ್ಟ ವನ್ನು ಪುಟ್ಟ ಚಿಕ್ಕ
ಸಣ್ಣಪುಟ್ಟ ವನ್ನು ಪುಟ್ಟ ಸಣ್ಣ
ಹಣಕಾಸು ಅನ್ನು ಕಾಸುಹಣ

ಹೀಗೆ ರಚಿಸಿದರೆ ಇಂತಹ ರಚನೆಗಳನ್ನು ಭಾಷಾ ಸಮುದಾಯ ಸಮ್ಮತಿಸುವುದಿಲ್ಲ. ಈ ಪ್ರಕಾರದ ಪುನರುಕ್ತಿಗಳನ್ನು ಪರ್ಯಾಯ ಪುನರುಕ್ತಿ (Parallel Reduplication) ಎಂದು ಕರೆಯಬಹುದು.

ಅಂಶಿಕ ಪುನರುಕ್ತಿ, ಪೂರ್ಣ ಪುನರುಕ್ತಿ ಮತ್ತು ಪರ್ಯಾಯ ಪುನರುಕ್ತಿಗಳಷ್ಟೇ ಮಹತ್ವದ ಸ್ಥಾನ ಪಡೆದುಕೊಂಡು ಇನ್ನೊಂದು ಪ್ರಕಾರದ ಪುನರುಕ್ತಿ ಆಧುನಿಕ ಕನ್ನಡದಲ್ಲಿ ಹುಟ್ಟಿಕೊಂಡಿದೆ. ಈ ಪುನರುಕ್ತಿಯು ಭಾರತೀಯ ಅನೇಕ ಭಾಷೆಗಳಲ್ಲಿಯೂ ಕಂಡು ಬಂದಿದೆ. ಉದಾಹರಣೆಗೆ ಉರ್ದು (ಜೈದಿ, ೧೯೭೫), ಮರಾಠಿ (ಜೋಶಿ, ೧೯೫೨), ಮತ್ತು ಇಂಡಿಯನ್ ಇಂಗ್ಲಿಷ್ (ಕಾಚರು, ೧೯೮೩). ಬ್ರಜ್ ಕಾಚರು ಅವರು ಈ ಪ್ರಕ್ರಿಯೆಯನ್ನು ಇಂಡಿಯನ್ ಇಂಗ್ಲಿಷ್‌ದಲ್ಲಿ ಗುರುತಿಸಿ **Hybrid Reduplication** ಎಂದು ಹೆಸರಿಸಿದ್ದಾರೆ. ಇದನ್ನೇ ನಾನು ''ಮಿಶ್ರ ಪುನರುಕ್ತಿ'' ಎಂದು ಕರೆದಿದ್ದೇನೆ. ಕನ್ನಡದಲ್ಲಿ ಶಂ. ಭಾ. ಜೋಶಿ (೧೯೭೧:೧೦೫) ಮತ್ತು ರಾ. ಯ. ಧಾರವಾಡಕರ (೧೯೫೧:೧೩೧) ಇವರೀರ್ವರು ಈ ಪ್ರಕ್ರಿಯೆಯನ್ನು ಗುರುತಿಸಿದ್ದರೂ ಜೋಡುನುಡಿ ಅಥವಾ ದ್ವಿರುಕ್ತಿ ಎಂದು ಕರೆದಿದ್ದಾರೆ. ಆದರೆ ಇಲ್ಲಿ ನಡೆದಿರುವ ಈ ಪ್ರಕ್ರಿಯೆಯ ಸುಳಿವು ಹತ್ತಿದರೂ ಇದು ಎಂಥಹದು ಎಂಬುದು ಅವರನ್ನು ಕಾಡಿದಂತೆ ಕಾಣುವುದಿಲ್ಲ. ಆದುದರಿಂದಲೇ ಸಾಂಪ್ರದಾಯಿಕವಾಗಿ ವಿಭಜಿಸಿ ಮತ್ತು ವಿಶ್ಲೇಷಿಸಿ ಪುನರುಕ್ತಿಯ ಅಡಿಯಲ್ಲಿ ಸೇರಿಸಿದಂತೆ ಕಾಣುತ್ತದೆ.

ಮಿಶ್ರ ಪುನರುಕ್ತಿ:

ಮಿಶ್ರ ಪುನರುಕ್ತಿಯಲ್ಲಿ ಎರಡು ಪ್ರಕಾರಗಳು: ಮಿಶ್ರ ಪುನರುಕ್ತಿ ಮತ್ತು ಮಿಶ್ರ ಬಹೂಕ್ತಿಗಳು. ಮಿಶ್ರ ಪುನರುಕ್ತಿಯ ಬೆಳವಣಿಗೆಯು ಪುನರುಕ್ತಿಯ ರಚನೆಯಲ್ಲಿ ಆದ ಬದಲಾವಣೆಯನ್ನು ತೋರಿಸುತ್ತದೆ. ಇದು ಆಮೂಲಾಗ್ರ ಬದಲಾವಣೆ ಏನಲ್ಲ. ಆದಾಗ್ಯೂ ಮಿಶ್ರಪುನರುಕ್ತಿ ತನ್ನ ರಚನಾ ವ್ಯವಸ್ಥೆಯ ಬಗ್ಗೆ ನಮ್ಮ ಲಕ್ಷವನ್ನು ಸೆಳೆಯುವಷ್ಟು ಶಕ್ತಿಯುತವಾಗಿದೆ. ರಚನೆಯ ದೃಷ್ಟಿಯಿಂದ ಮಿಶ್ರಪುನರುಕ್ತಿ ಪುನರುಕ್ತಿ ಅಥವಾ ಬಹೂಕ್ತಿಯಂತಿದ್ದರೂ ಅದರಲ್ಲಿ ಬರುವ ಘಟಕಗಳ ಸಂಯೋಜನೆ ಬೇರೆ ಪ್ರಕಾರದ್ದಾಗಿದೆ. ಈ ರಚನೆಗಳು ಒಮ್ಮಿಲೇ ಭಾಷಾ ಸಂಪರ್ಕ (**Language Contact**)ದ ಅರಿವನ್ನು ಮೂಡಿಸುತ್ತವೆ. ಅಲ್ಲದೇ ಅರ್ಥಪ್ರಕಟನೆ, ಅರ್ಥದ ಹುಡಕಾಟ, ಅರ್ಥಪತನ ಇವುಗಳ ಜೀವನ್ಮೃತಾವಸ್ಥೆಯ ಘಟ್ಟಗಳನ್ನು ನೆನಪಿಗೆ ತರುತ್ತವೆ.

ಮಿಶ್ರ ಪುನರುಕ್ತಿಯು ಪುನರುಕ್ತಿಯ ರಚನೆಯಂತೆಯೇ ಎರಡು ಪದಗಳನ್ನು ಹೊಂದಿದ್ದು ಒಂದು ಪದವು ದೇಶ್ಯವಾಗಿದ್ದು, ಇನ್ನೊಂದು ಪದವು

ಅನ್ಯದೇಶದ್ದಾಗಿರಬಹುದು, ಅಥವಾ ಎರಡೂ ಅನ್ಯ ದೇಶದ ಪದಗಳಾಗಿರಬಹುದು. ಪುನರುಕ್ತಿಯಂತೆಯೇ ಈ ರಚನೆಯೂ ಸಹ ಒಂದೇ ಘಟಕದಂತೆ ವರ್ತಿಸಿ ಏಕಾರ್ಥವನ್ನು ಸೂಚಿಸುತ್ತದೆ.

ಉದಾಹರಣೆ :

ಛಪ್ಪನ್ ಐವತ್ತಾರು
ಹೊಳ್ಳಿ return
ಹೊಳ್ಳಿ ವಾಪಸ್
ಕಹಿ ಜಾರು (ಜಾರು/ಜಹರ್)
ಕೆಂಪಲಾಲ
ಅಖೇರ Last
ಹೊಲಸ ಘಾಣ
catch ಹಿಡಿ
Straight direct
ನಡು ಮಧ್ಯ

ಮಿಶ್ರ ಬಹೂಕ್ತಿ :

ಮಿಶ್ರ ಬಹೂಕ್ತಿಯಲ್ಲಿ ಎರಡಕ್ಕಿಂತ ಹೆಚ್ಚು ಪದಗಳಿದ್ದು ಅವೂ ಕೂಡ ಏಕಾರ್ಥವನ್ನು ಸೂಚಿಸುತ್ತವೆ. ಈ ಉಕ್ತಿಯಲ್ಲಿ ಸಾಮಾನ್ಯವಾಗಿ ಮೂರು ಪದಗಳಿದ್ದು ಮೂರು ಪದಗಳು ಪರಭಾಷಾ ಪದಗಳಾಗಿರಬಹುದು, ಅಥವಾ ಎರಡು ಸ್ವಭಾಷಾ ಪದಗಳಿದ್ದು ಇನ್ನೊಂದು ಪರಭಾಷಾ ಪದವಾಗಿರಬಹುದು. ಈ ಪದಗಳು ಇಂತಹ ಸ್ಥಾನದಲ್ಲಿಯೇ ಇರಬೇಕೆಂಬ ನಿಯಮವೇನೂ ಇಲ್ಲ. ಇದನ್ನು ಇಂಗ್ಲಿಷ್‌ನಲ್ಲಿ **Multi Hybrid Reduplication** ಎನ್ನಬೇಕು.

Just ಇದ ಈಗ
ಅಖೇರ ಕಡೀ Last
ಹೊಳ್ಳಿ return back
ಮಲಯಗಿರಿ ಪರ್ವತ
ಎಲ್ಲಾ ಪೂರ್ತಿ Complete

ಈ ಉದಾಹರಣೆಗಳನ್ನು ಜಾಗರೂಕತೆಯಿಂದ ನೋಡಿದಾಗ ಇವು ಐತಿಹಾಸಿಕ ಕುತೂಹಲತೆಯನ್ನು ಕೆರಳಿಸುತ್ತವೆ. ನಾವು ಈ ರಚನೆಗಳನ್ನು ದಿನಾಲು ಬಳಸುತ್ತಿರುವದರಿಂದ ಇವು ನಮ್ಮನ್ನು ಎಚ್ಚರಿಸುವುದೇ ಇಲ್ಲ. ಒಮ್ಮೊಮ್ಮೆ ಎಚ್ಚರಿಸಿದರೂ ಹೌದು ಹಾಗಿದೆ ಎಂದು ಹೇಳಿ ಸುಮ್ಮನಾಗಿ ಬಿಡುತ್ತೇವೆ. ಇದು ನಮ್ಮ ಭಾಷಿಕ ಅಜ್ಞಾನವಿದ್ದರೂ ಇರಬಹುದು. ಭಾಷೆ ಮಾತ್ರ ತನ್ನ ಸಹಜ ಸ್ವಭಾವದಂತೆ ಪರಿವರ್ತನೆ ಹೊಂದುತ್ತಲೇ ಇರುತ್ತದೆ. ಜಗತ್ತಿನಲ್ಲಿಯ ಯಾವುದೇ ವಿಷಯವಾಗಲಿ ಅದು ಬದಲಾವಣೆ ಹೊಂದಬೇಕಾದರೆ, ಅಥವಾ ತನ್ನ ರಚನೆಯಲ್ಲಿ ಏನಾದರೂ ಮಾರ್ಪಾಟನ್ನು ತಂದುಕೊಳ್ಳಬೇಕಾದರೆ ಅದರ ಹಿಂದೆ ಏನಾದರೂ ಕಾರಣ ಇರಲೇಬೇಕು. ಆ ಕಾರಣವೇ ಮುಂದೆ ಆ ಬದಲಾವಣೆಯ ತಂತ್ರವಾಗಿ ಪರಿಣಮಿಸುತ್ತದೆ. ನಂತರ ಆ ಮಾರ್ಪಾಟು ಅಥವಾ ಬದಲಾವಣೆ ಐತಿಹಾಸಿಕ ಸತ್ಯವಾಗಿಬಿಡುತ್ತದೆ. ಈ ಮಿಶ್ರಪುನರುಕ್ತಿಯೂ ಕೂಡ ಈ ನಿಯಮದಂತೆ ನಡೆದ ಐತಿಹಾಸಿಕ ಸತ್ಯ.

ಈ ಪ್ರಕ್ರಿಯೆ ಸುಮಾರು ನೂರು ವರ್ಷಗಳ ಹಿಂದೆಯೇ ಪ್ರಾರಂಭವಾಗಿರುವ ಸಾಧ್ಯತೆ ಇದೆ. ಕನ್ನಡ ಈ ನೂರು ವರ್ಷಗಳಲ್ಲಿ ಹಲವಾರು ಭಾಷೆಗಳ ಸಂಪರ್ಕವನ್ನು ಹೊಂದಿದೆ. ಒಂದು ಭಾಷೆ ಇನ್ನೊಂದು ಭಾಷೆಯೊಡನೆ ಸಂಪರ್ಕವನ್ನು ಹೊಂದಿದಾಗ ಆ ಪರಭಾಷೆಯ ಎಷ್ಟೋ ಸಂಗತಿಗಳನ್ನು ಅನಾಮತ್ತಾಗಿ ಎತ್ತಿಕೊಂಡು ಬಿಡುತ್ತದೆ. ೧೨ನೆಯ ಶತಮಾನದಲ್ಲಿ ಮುಸ್ಲಿಂ ರಾಜರು ಭಾರತಕ್ಕೆ ಬಂದರು. ಮುಂದೆ ಅವರು ಕರ್ನಾಟಕಕ್ಕೂ ಕಾಲಿರಿಸಿದ್ದರು, ರಾಜ್ಯಭಾರವನ್ನೂ ಪ್ರಾರಂಭಿಸಿದರು. ಆಡಳಿತದಲ್ಲಿ ಪರ್ಶಿಯನ್ ಮತ್ತು ಉರ್ದು ಭಾಷೆಗಳನ್ನು ಅಮಲಿನಲ್ಲಿ ತಂದು ನಮಗೆ ಈ ಭಾಷೆಗಳ ಪರಿಚಯ ಮಾಡಿಸಿದರು. ದಿನಗಳೆದಂತೆ ಮುಸ್ಲಿಂ ರಾಜರು ನಮ್ಮ ಕಲೆ, ಸಂಗೀತ, ನೃತ್ಯ ಮತ್ತು ವಾಸ್ತುಶಿಲ್ಪಗಳಲ್ಲಿ ಆಸಕ್ತಿಯನ್ನು ತೋರಿಸಿದರು. ಅದರೊಡನೆ ಅವರ ಬಲವು ಭಾಷೆ ಮತ್ತು ಸಾಹಿತ್ಯದಲ್ಲಿಯೂ ಬೆಳೆದು ಬಂದದ್ದು ಕಂಡುಬರುತ್ತದೆ. ಆಗ ಸಂಸ್ಕೃತ ಮತ್ತು ಪ್ರಾಕೃತ ಭಾಷೆಗಳನ್ನು ಮುಸಲ್ಮಾನ ರಾಜರೂ ಕಲಿತರು. ಅವರೊಡನೆ ನಾವು ಪರ್ಶಿಯನ್, ಅರೇಬಿಕ್, ಮತ್ತು ಉರ್ದು ಭಾಷೆಗಳನ್ನು ಕಲಿತೆವು. ಮುಸ್ಲಿಂ ರಾಜರ ಕಾಲಕ್ಕೆ ಪರ್ಶಿಯನ್ ಮತ್ತು ಅರೇಬಿಕ್ ಭಾಷೆಗಳು ಎಷ್ಟು ಪ್ರಮುಖವಾದ ಭಾಷೆಗಳಾಗಿದ್ದವೆಂದರೆ ಕೋರ್ಟು ಮತ್ತು ಕಚೇರಿಗಳಲ್ಲಿ ಈ ಭಾಷೆಗಳನ್ನು ನಾವು ಬಳಕೆ ಮಾಡುತ್ತಿದ್ದೆವು. ಅರೇಬಿಕ್ ಲಿಪಿಯನ್ನು ಲಿಪ್ಯಂತರಕ್ಕಾಗಿಯೂ ಉಪಯೋಗಿಸಲಾಗುತ್ತಿತ್ತು. ಜಿಲ್ಲಾ ಮಟ್ಟದ ಕಚೇರಿಗಳಲ್ಲಿ ಹಿಂದುಸ್ತಾನಿಯನ್ನೂ ಬಳಸಲಾಗುತ್ತಿತ್ತು.

ಇವಾದ ನಂತರದಲ್ಲಿ ಮರಾಠಿ, ಹಿಂದಿ, ಇಂಗ್ಲೀಷ್, ಪೋರ್ತುಗೀಸ್, ಮತ್ತು ಕೆಲಮಟ್ಟಿಗೆ ಫ್ರೆಂಚ್ ಈ ಭಾಷೆಗಳೊಡನೆ ಸಂಪರ್ಕವೂ ಏರ್ಪಟ್ಟಿತು. ಇವುಗಳ ಹೊರತಾಗಿ ಉಳಿದ ಭಾರತೀಯ ಭಾಷೆಗಳೊಡನೆಯೂ ಸಂಬಂಧವಿದೆ ಎಂಬುವನ್ನು

ಮರೆಯಲಾಗದು. ಈ ಮೇಲೆ ಹೇಳಿದ ಭಾಷೆಗಳ ಪ್ರಭಾವ ಎಷ್ಟು ಗಾಢವಾಗಿತ್ತೋ ಅಷ್ಟು ಮಾತ್ರ ಅವುಗಳ ಪ್ರಭಾವವನ್ನು ಕನ್ನಡದಲ್ಲಿ ಕಾಣಬಹುದು. ಈ ಕಾರಣದಿಂದಲೇ ಈ ಎಲ್ಲ ಭಾಷೆಗಳ ಪ್ರಭಾವವನ್ನು ಪುನರುಕ್ತಿಯಲ್ಲಿ ಕಾಣುವುದು ಅಥವಾ ಬಯಸುವುದು ಕಷ್ಟ. ಕೆಲವು ಭಾಷೆಗಳು ಮಾತ್ರ ಅಗಾಧವಾದ ಪ್ರಭಾವವನ್ನು ಬೀರಿವೆ. ಉದಾಹರಣೆಗೆ ಕೆಳದಿನೃಪ ವಿಜಯ, ರಾಜೇಂದ್ರನಾಮೆ, ಮತ್ತು ರೆವೆನ್ಯೂ ರೆಕಾರ್ಡ್‌ಗಳನ್ನು ನೋಡಿದರೆ ಅರೇಬಿಕ್ ಮತ್ತು ಪರ್ಶಿಯನ್ ಭಾಷೆಗಳ ಪ್ರಭಾವ ಕನ್ನಡದ ಮೇಲೆಷ್ಟಿದೆ ಎಂಬುದನ್ನು ಖಚಿತಪಡಿಸುತ್ತವೆ. ಮುಂದೆ ಬಂದ ಆಂಗ್ಲರು ಭಾಷೆಯನ್ನು ಆಡಳಿತ ಭಾಷೆಯನ್ನಾಗಿಸಿದರು. ಆದರೂ ಅದರಲ್ಲಿ ಅರೇಬಿಕ್ ಮತ್ತು ಪರ್ಶಿಯನ್ ಕನ್ನಡ ಶಬ್ದಗಳು ಉಳಿದುಕೊಂಡು ಬಂದವು. ಬ್ರಿಟೀಶರ ಆಳ್ವಿಕೆಯಲ್ಲಿ ಆಂಗ್ಲ ಭಾಷೆ ಭಾರತೀಯ ಭಾಷೆಗಳ ಬೇರಿನೊಡನೆ ಸೇರಿಬಿಟ್ಟಿದೆ. ಆದ್ದರಿಂದ ಭಾರತೀಯ ಎಲ್ಲ ಭಾಷೆಗಳ ಆಯಾಮಗಳಲ್ಲಿ ಆಂಗ್ಲಭಾಷೆಯ ಶಬ್ದಗಳನ್ನು ಕಾಣುತ್ತೇವೆ. ಅಕ್ಷರ ಕಲಿಯದವರೂ ಸಹ ಗಹನವಾದ ಇಂಗ್ಲಿಷ್ ಪದಗಳನ್ನು ಬಳಸುವ ರೂಢಿಯನ್ನು ಮಾಡಿಕೊಂಡಿದ್ದಾರೆ. ಇಂತಹ ವಿಚಿತ್ರ ಸಹಜವಾದ ಸನ್ನಿವೇಶದಲ್ಲಿ ಮಿಶ್ರಪುನರುಕ್ತಿ ಹುಟ್ಟಿಕೊಂಡಿದೆ. ಪುನರುಕ್ತಿ ಹುಟ್ಟಿಬರುವ ಕಾರಣವನ್ನು ಈ ಮೊದಲೇ ಹೇಳಿಆಗಿದೆ. ಇದರ ಅವಶ್ಯಕತೆ ಬಹುಶಃ ಭಾಷೆಗೆ ಪಾರದರ್ಶಕತೆಯನ್ನುಂಟು ಮಾಡುವ, ಭಾಷೆಯನ್ನು ಸಂಯೋಜಿಸುವ ಅಥವಾ ವಿಚಾರಗಳನ್ನು ಘನೀಕರಿಸುವ ಇಲ್ಲವಾದರೆ ಭಾಷೆಗೆ ಹೊಸ ರೂಪಕೊಡುವ, ಅಥವಾ ಭಾಷೆಯಲ್ಲಿ ಅನ್ಯೋನ್ಯತೆಯನ್ನು ಅಥವಾ ಸಾಮ್ಯತೆಯನ್ನು ಕಾಣುವ ಒಂದು ಮೈಮರೆತ ಪ್ರಯತ್ನವಾಗಿರುವ ಸಾಧ್ಯತೆ ಇದೆ. ಉದಾಹರಣೆಗೆ ಕನ್ನಡದಲ್ಲಿ ''ಅಪರಾ ತಪರಾ'' ಎಂಬ ರಚನೆಯನ್ನು ಬಳಸುತ್ತೇವೆ. ಇದರ ಮೂಲ ಅರೇಬಿಕ್ ಭಾಷೆಯದು.

ಅರೇಬಿಕ್ ಇಫ್ರಾತ್-ಅಫ್ರೀತ್ ''ಅತಿರೇಕ ಮತ್ತು ಕೊರತೆ''
ಉರ್ದು ಅಫ್ರಾ - ತಫ್ರೀ ''ಹುಯಿಲು, ಅವ್ಯವಸ್ಥೆ, ಗೊಂದಲ''

ಉರ್ದುವಿನಲ್ಲಿಯ ರಚನೆ ಅರೇಬಿಕ್ ಮೂಲದಿಂದ ಬಂದು ಸ್ವಲ್ಪ ಪ್ರಮಾಣದಲ್ಲಿ ತನ್ನ ರೂಪವನ್ನು ಮತ್ತು ಅರ್ಥವನ್ನು ಬದಲಿಸಿಕೊಂಡಿದೆ. ಈ ಪ್ರಕ್ರಿಯೆ ಇಲ್ಲಿಗೆ ನಿಲ್ಲದೆ ಕನ್ನಡದಲ್ಲಿ - ''ಅಪರಾ ತಪರಾ'' ''ಎಪರಾ ತಪರಾ'' ಎಂದಾಗಿ ಆದರೆ ಉರ್ದು ಭಾಷೆಯಲ್ಲಿಯ ಅರ್ಥವನ್ನೇ ನಾವಿಟ್ಟು ಕೊಂಡಿದ್ದೇವೆ. ಆದರೂ ನಮಗೆ ಇದು ಮೂಲತಃ ಅರೇಬಿಕ್ ರಚನೆ ಎಂದು ಹೊಳೆಯುವುದು ಕಠಿಣವೇ ಆಗಿದೆ. ಇದರಂತಹ ಇನ್ನೂ ಕೆಲವು ಉಕ್ತಿಗಳನ್ನು ನೋಡಬಹುದು ''ಅವಳಿ ಜವಳಿ'' ''ಗಂಟು ಗದಡಿ'' ಅವಳಿ ಜವಳಿಯಲ್ಲಿಯ ಎರಡೂ ಪದಗಳೂ ಕನ್ನಡದವುಗಳಲ್ಲ. ''ಅವಳಿ'' ಪದವು ಸಂಸ್ಕೃದ 'ಯಮಲ' ದಿಂದ ಬಂದಿದೆ ಯಮಲವೆಂದರೆ ಜೋಡಿ ಎಂದೇ ಅರ್ಥ. 'ಜವಳಿ' ಪದವು ಪ್ರಾಕೃತದ 'ಜಮಲ'ದಿಂದ ಬಂದಿದೆ. ಜಮಲ ಎಂದರೂ

ಜೋಡಿಯಂತಲೇ ಅರ್ಥ. ಇದೇ ಉಕ್ತಿ ಮುಂದೆ ಮರಾಠಿಯಲ್ಲಿ 'ಅವಳೇ ಜಾವಳೇ' ಎಂದಾಗಿದೆ. 'ಗಂಟು ಗದಡಿ' ಯಲ್ಲಿಯ 'ಗಂಟು' ಇದು ಸಂಸ್ಕೃತ 'ಗ್ರಂಥಿ'ಯ ತದ್ಭವ 'ಗದಡಿ' ಇದು ಕೂಡ ಪ್ರಾಕೃತದ 'ಗಠಡಿ'ಯಿಂದ ಬಂದಿದೆ. ಎರಡೂ ಪದಗಳ ಅರ್ಥ ಗಟ್ಟಿಯಾಗಿ ಕಟ್ಟಿದುದು ಎಂತಲೇ.

ಮುಖ್ಯವಾಗಿ ವಿಭಿನ್ನ ಭಾಷಾ ಸಮುದಾಯಗಳು ನಿರಂತರ ಸಂಪರ್ಕದಲ್ಲಿ ಬಂದಾಗ ಸಂವಹನದ ಪ್ರಶ್ನೆ ಬಹಳ ಗಡಚಾಗಿ ಬಿಡುತ್ತದೆ. ತಮಗೆ ತಿಳಿದಷ್ಟು ಎರಡೂ ಸಮುದಾಯದವರೂ ತಮ್ಮ ತಮ್ಮ ಭಾಷೆಗಳನ್ನು ಶಿಥಿಲಗೊಳಿಸಿ ಉಪಯೋಗಿಸುತ್ತಾರೆ. ಇಂತಹ ಶಿಥಿಲ ಭಾಷೆಯ ಸಂದರ್ಭ ಪರಿಮಿತವಾಗಿದ್ದರೂ ಮಿಶ್ರಪುನರುಕ್ತಿಯ ಪ್ರಕ್ರಿಯೆಯನ್ನು ಅವಲೋಕಿಸಿದಾಗ ಈ ವಿಶಿಷ್ಟ ಸನ್ನಿವೇಶ ಜ್ಞಾಪಕಕ್ಕೆ ಬರುತ್ತದೆ. ಆದ್ದರಿಂದ ಈ ಪ್ರಕ್ರಿಯೆ ಸಾಮಾಜಿಕ ಮತ್ತು ಐತಿಹಾಸಿಕ ಅನಿವಾರ್ಯತೆಯಿಂದಲೇ ಅಸ್ತಿತ್ವದಲ್ಲಿ ಬಂದಿರಬೇಕು.

ಭಾರತೀಯ ಕೆಲವು ಭಾಷೆಗಳಲ್ಲಿ ಮಿಶ್ರ ಪುನರುಕ್ತಿ - ಒಂದು ನೋಟ :

ಉರ್ದು : ಈ ಪ್ರಕ್ರಿಯೆಯನ್ನು ಉರ್ದು ಭಾಷೆಯಲ್ಲಿ ಮುಜಾಹಿದ್ ಹುಸೇನ್ ಜೈದಿ ಗುರುತಿಸಿದ್ದಾರೆ. ಅವರು ಕೊಟ್ಟ ಉದಾಹರಣೆಗಳನ್ನು ನಾನು ಈ ಕೆಳಗೆ ಉದ್ಧರಿಸಿದ್ದೇನೆ. ಈ ರಚನೆಗಳಲ್ಲಿ ಒಂದು ಶಬ್ದ ಹಿಂದಿ ಮತ್ತು ಇನ್ನೊಂದು ಪರ್ಶಿಯನ್ ಅಥವಾ ಅರೇಬಿಕ್ ಆಗಿವೆ. ಜೈದಿ ಅವರ ಪ್ರಕಾರ ಈ ಪ್ರಕ್ರಿಯೆ ೧೨೦೬ ರಿಂದ ಪ್ರಾರಂಭವಾಗಿ ೧೮೫೭ರಲ್ಲಿ ಸ್ಥಾಯಿಯಾಗಿರಬೇಕೆಂದು ಅಭಿಪ್ರಾಯಪಡುತ್ತಾರೆ.

ಶಾದಿ ಬಿಯಾಹ	'ಲಗ್ನ'
ಮರ್ದ್ ಮಾನಸ್	'ಮನುಷ್ಯ'
ಧನ್ ದೌಲತ್	'ಶ್ರೀಮಂತಿಕೆ'
ದಂಗಾ ಫಸಾದ್	'ಗೊಂದಲ'
ಬಾಲ್ ಬಚ್ಚೆ	'ಮಕ್ಕಳು'
ಇತ್ರ ಪುಲೈಲ್	'ವಾಸನೆ ಎಣ್ಣೆ'
ಗಲೀ ಕೂಚಾಹ್	'ಓಣಿ'
ಗಾಲಿ ದುಶ್‌ನಾಮ್	'ಬೈಗಳು'
ಜೂತಿ ಪೆಜಾರ್	'ಚಪ್ಪಲಿ'
ಗೊರ್ ಗೃಹಾ	'ಗೋರಿ'
ಖತ್ ಪತ್ರ	'ಪತ್ರ' (ಜೈದಿ ೧೯೭೫:೧೦೨)

ಮರಾಠಿ-ದ್ರಾವಿಡ : ನಾನು ಇಲ್ಲಿ ಉಲ್ಲೇಖಿಸಿದ ವಿಷಯಗಳು ಶಂ.ಬಾ. ಜೋಶಿಯವರವು.

ಮರ್‍ಹಾಟೀ ಸಂಸ್ಕೃತಿ -ಕೆಲವು ಸಮಸ್ಯೆಗಳು ಮೂಲತಃ ಈ ಗ್ರಂಥವು ಮರಾಠಿಯಲ್ಲಿದೆ. ೧೯೫೨ರಲ್ಲಿ ಪ್ರಕಟಗೊಂಡಿದೆ. ಇದನ್ನು ೧೯೯೦ರಲ್ಲಿ ಕೀರ್ತಿನಾಥ ಕುರ್ತಕೋಟಿಯವರು ಕನ್ನಡಕ್ಕೆ ಅನುವಾದಿಸಿದ್ದಾರೆ. ಇಲ್ಲಿ ಹೇಳುವ ವಿಷಯವನ್ನು ಕನ್ನಡ ಅನುವಾದದಿಂದ ಎತ್ತಿಕೊಳ್ಳಲಾಗದೆ. ''ಕನ್ನಡ ಮತ್ತು ಮರಾಠಿಯಲ್ಲಿ ಅನೇಕ ಶಬ್ದಗಳು ಈ ಭಾಷಿಕರ ನಿಕಟ ಸಂಬಂಧಕ್ಕೆ ನಿದರ್ಶಕವಾಗಿವೆ. ..... 'ಕೋಲ-ಕಾಠೀ ' 'ಚೂಲ-ವೈಲ' 'ಕೀಂವ-ಕಾಕುಳತೀ, ' 'ಓಲಿ-ಶೇಲಾ' ಮೊದಲಾದ ಎರಡು ಭಾಷೆಗಳ ಶಬ್ದಗಳಿಂದ ತಯಾರಾದ ಜೋಡು ಶಬ್ದಗಳು ..... ಈ ಬಗೆಯ ಜೋಡು ಶಬ್ದಗಳು ಕನ್ನಡದಲ್ಲಿಯೂ ಇವೆ. ಉದಾಹರಣೆಗೆ 'ಛಪ್ಪನ್ನೈವತ್ತಾರು' 'ನಡುಮಧ್ಯೆ' ಇತ್ಯಾದಿ '' (ಜೋಶಿ ೧೯೯೦:೧೨೩) ಈ ಪ್ರಕ್ರಿಯೆಯ ವಿಧಾನವನ್ನು ಈ ಕೆಳಗಿನಂತೆ ವಿವರಿಸಿದ್ದಾರೆ.

'' ಮರಾಠಿಯಲ್ಲಿ ಇಂಥ ಜೋಡುಶಬ್ದಗಳು ಮಹಾನುಭಾವ ಸಾಹಿತ್ಯದಲ್ಲಿ ಮತ್ತು ಜ್ಞಾನೇಶ್ವರಿಯಲ್ಲಿ ಸಿಗುತ್ತವೆ. ಚಕ್ರಧರನ 'ಲೀಳಾಚರಿತ್ರೆ' ಯಲ್ಲಿ ಕೇವಲ 'ಕೋಲ' ಶಬ್ದದ ಉಪಯೋಗವಿದೆ. ಇದು ಮರಾಠಿ ಶಬ್ದವಲ್ಲ. ಮುಂದೆ ಈ ಶಬ್ದದ ಅರ್ಥ ಜ್ಞಾನೇಶ್ವರಿಯ ಹೊತ್ತಿಗೆ ಮಸಕಾಗಿರಬೇಕು. ಆದ್ದರಿಂದ 'ಕೋಲ' ಶಬ್ದದ ಅರ್ಥ ತಿಳಿಯಲು 'ಕಾಠೀ' ಎಂಬ ಶಬ್ದ ಮುಂದೆ ಬರಬೇಕಾಯಿತು. ಜ್ಞಾನೇಶ್ವರಿಯಲ್ಲಿ 'ಕೋಲ-ಕಾಠೀ' ಎಂಬ ಶಬ್ದದ ಪ್ರಯೋಗವಿದೆ. ಇದೇ ರೀತಿಯಲ್ಲಿ 'ಓಲೀ-ಶೇಲಾ' ಎಂಬ ಶಬ್ದ 'ವಲ್ಲಿ' ಎಂಬದು ಹೊದ್ದುಕೊಳ್ಳುವ ವಸ್ತ್ರ ಎಂಬರ್ಥದಲ್ಲಿ ಕನ್ನಡದ ಆಡುಮಾತಿನಲ್ಲಿ ಪ್ರಯೋಗವಿದೆ. 'ಓಲಿ' ಶಬ್ದ ಲೀಳಾ ಚರಿತ್ರೆಯಲ್ಲಿ ಬರುತ್ತದೆ. ಆದರೆ ನರೇಂದ್ರ ಕೃತ 'ರುಕ್ಮಿಣೀ ಸ್ವಯಂವರ'ದಲ್ಲಿ 'ಓಲಿಶೇಲಾ' ಎಂಬ ಜೋಡುಶಬ್ದ ದೊರೆಯುತ್ತದೆ.'' (ಜೋಶಿ ೧೯೯೦:೧೨೭-೩೮)

ಮಿಶ್ರಪುನರುಕ್ತಿ ಕೇವಲ ಕ್ರಿಯಾಪದ, ನಾಮಪದಗಳಿಗೆ ಸೀಮಿತವಾದರೆ ಸ್ಥಳನಾಮ ಮತ್ತು ವ್ಯಕ್ತಿನಾಮಗಳಲ್ಲಿಯೂ ಹರಡಿಕೊಂಡಿದೆ.

ಉದಾಹರಣೆಗೆ:

ಶಿವರುದ್ರ
ಗೋಪಾಲಕೃಷ್ಣ
ರಘುರಾಮ

ಮಾಳಮಡ್ಡಿ
ಕೂಡಲಸಂಗಮ

ಶಿವರುದ್ರದ ವಿಶ್ಲೇಷಣೆಯನ್ನು ಜೋಶಿಯವರು ಈ ಕೆಳಗಿನಂತೆ ಮಾಡಿದ್ದಾರೆ -

'' ಪುರಾಣಕಾಲದಲ್ಲಿ ರುದ್ರನಿಗೆ ಶಿವ ಎಂಬ ಹೆಸರು ಎಲ್ಲ ಕಡೆಗೂ ಪ್ರಚಾರದಲ್ಲಿ ಬಂತೆಂದು ಕಾಣುತ್ತದೆ. ಆದರೆ ವೇದದಲ್ಲಿ 'ಶಿವ' ಶಬ್ದ ದೇವವಾಚಕವಾಗಿಲ್ಲ. ಆದರೂ ರುದ್ರನಿಗೆ ಶಿವನೆಂದು ಕರೆಯುವುದು ಪ್ರಾಚೀನಕಾಲದಿಂದಲೂ ರೂಢಿಯಲ್ಲಿದೆ. 'ಶತರುದ್ರೀಯ'ದಲ್ಲಿ 'ಶಿವ' ಶಬ್ದ ಅನೇಕ ಕಡೆಗಳಲ್ಲಿ ಬಂದಿದೆ. ವೀರಶೈವರಲ್ಲಿ ಮಕ್ಕಳಿಗೆ 'ಶಿವರುದ್ರಪ್ಪ' ಎಂದು ಹೆಸರಿಡುವ ಪದ್ಧತಿ ಇದೆ. ರುದ್ರ ಮತ್ತು ಶಿವ ಇವು ಒಂದೇ ದೇವತೆಯ ಹೆಸರುಗಳಾಗಿದ್ದು ಅವು ಭಿನ್ನ ಭಾಷಾವರ್ಗಗಳಿಗೆ ಸೇರಿದವುಗಳಾಗಿವೆ. 'ರುದ್ರ'ಶಬ್ದ ಆರ್ಯಭಾಷಾವರ್ಗಕ್ಕೆ ಸೇರಿದ್ದದಾಗಿದ್ದರೆ 'ಶಿವ ' ಪತ್ತಿ ಜನರ ದ್ರಾವಿಡ ಭಾಷಾವರ್ಗಕ್ಕೆ ಸಂಬಂಧಿಸಿದ್ದಾಗಿದೆ.'' (ಜೋಶಿ ೧೯೯೦ : ೧೩೩)

ಇಂಗ್ಲಿಷ್ (Indian English) :

ಇಂಗ್ಲಿಷ್‌ದಲ್ಲಿ ಬ್ರಜ್‌ಕಾಚರು ಅವರು ಈ ಪ್ರಕ್ರಿಯೆಯನ್ನು ಗುರುತಿಸಿದ್ದಾರೆ. ಇದು ಭಾರತೀಯ ಇಂಗ್ಲಿಷ್‌ಗೆ ಮಾತ್ರ ಸಂಬಂಧಿಸಿದ್ದು.

"In a language contact situation sometimes two or more components with an 'identical' lexical meaning in the languages from which they are taken,are used as single formations. Such forms may be termed 'hybrid reduplication '. Consider for example, the following - lathi-stick, Cotton-Kapas,Curved-Kurki ". (Kachru ೧೯೮೩:೧೫೫-೫೬)

ಒಟ್ಟಿನಲ್ಲಿ ಪುನರುಕ್ತಿಗಳ ಬಗೆಗೆ ಹೇಳುವದಾದರೆ ಪುನರುಕ್ತಿಗಳು ಪರಿಸರದ ಅಗತ್ಯತೆಗೆ ಅನುಸಾರವಾಗಿ ಹುಟ್ಟಿಕೊಂಡಿವೆ. ಭಾಷಾ ಸಮುದಾಯ ತಮ್ಮ ಕಲ್ಪನೆಯನ್ನು ನೇರವಾಗಿ, ಯಥಾರ್ಥವಾಗಿ ತಿಳಿಯಪಡಿಸಲು ತಾವು ಉಪಯೋಗಿಸಿದ ಪದ ಸಫಲವಾದಾಗ ಅಥವಾ ಅಸಫಲವಾಗುತ್ತದೆ ಎನ್ನಿಸಿದಾಗ ಅದೇ ಅರ್ಥವುಳ್ಳ ಪರಭಾಷೆಯ ಪದದೊಂದಿಗೆ ತಮ್ಮ ಮಾತೃಭಾಷೆಯ ಅಥವಾ ಅಷ್ಟೇ ಪರಿಚಿತವಾದ ಭಾಷೆಯ ಪದವನ್ನು ಸೇರಿಸಿ ರಚಿಸುವ ಘಟಕಗಳೇ 'ಮಿಶ್ರಪುನರುಕ್ತಿ' ಎಂದು ಹೇಳಬೇಕು.

ಮಿಶ್ರ ಪುನರುಕ್ತಿಗಳ ಪಟ್ಟಿ

೧) ಶಂಭೋರು ನೂರು
೨) ದೊಡ್ಡ ಮಹಾ
೩) ಏಕ ಒಂದ
೪) ಒಂದ ಏಕ
೫) ಮಾಳಮಡ್ಡಿ
೬) Personal ವೈಯಕ್ತಿಕ
೭) ಒಂದ ಸವನ continuous
೮) ಒಟ್ಟು total
೯) Separate ಬ್ಯಾರೆ
೧೦) ಇಡೀ ಅಖಂಡ
೧೧) Just ಈಗ
೧೨) ಈಗ just
೧೩) ಇದ just
೧೪) just ಇದ
೧೫) best ಛಲೋ
೧೬) ಛಲೋ best
೧೭) Same ಹಂಗ
೧೮) ಹಂಗ Same
೧೯) notebook ವಹಿ
೨೦) last ಕಡೆ
೨೧) ಕಡೆ last
೨೨) ಅಖೇರ್ last
೨೩) Straight ಸೀದಾ
೨೪) Straight direct
೨೫) Compound ಗ್ವಾಡಿ
೨೬) gate ಬಾಗಲ
೨೭) ಸೀದಾ Straight
೨೮) ವಾಪಸ್ ಹೊಳ್ಳಿ
೨೯) Catch ಹಿಡಿ
೩೦) ಹೊಳ್ಳಿ return

೩೧) ಹೊಳ್ಳಿ ವಾಪಸ್

೩೨) ಇದ್ದ fact

೩೩) ಇದ್ದ ಹಕೀಕತ್

೩೪) ರೋಖ cash

೩೫) return back

೩೬) ಗುರತಖೂನ್

೩೭) ಕಹಿ ಜಾರು (ಜಹರ್)

೩೮) ಛಪ್ಪನ್ನೈವತ್ತಾರು

೩೯) ಅವಳಿಜವಳಿ

೪೦) ಹಳದಿ ಪೀತಾಂಬರ

೪೧) ಗಂಟು ಗದಡಿ (ಗಠಡಿ)

೪೨) ಹೊಲಸ ಘಾಣ

೪೩) ರೀತಿ ರಿವಾಜ್

೪೪) ನಡುಮಧ್ಯ

೪೫) ವ್ಯಾಪಾರ ಧಂಧೆ

೪೬) ಕೆಂಪಲಾಲ

೪೭) ಅಲ್ಪಸ್ವಲ್ಪ

೪೮) ಆಳುಮನುಷ್ಯ

೪೯) ಕಲ್ಲು ಪಾಷಾಣ

೫೦) ಕಾರ್ಯಕಲಾಪ

೫೧) ಕೂಡಲಸಂಗಮ

೫೨) ಕನ್ಯಾಕುಮಾರಿ

೫೩) ಶಿವರುದ್ರ

೫೪) ರಘುರಾಮ

೫೫) ಅಪರಾತಪರಾ/ಎಪರಾ ತಪರಾ

೫೬) ಅದಾಲತ್‌ಕೋರ್ಟು

೫೭) ಪರಗೆತ್ತಿ ಓಡು

೫೮) just ಇದ ಈಗ

೫೯) ಇದ ಈಗ just

೬೦) ಅಖೇರ್ ಕಡಿ last

೬೧) ಹೊಳ್ಳಿ return back

೬೨) ಮಲಯಗಿರಿ ಪರ್ವತ
೬೩) ಎಲ್ಲಾ ಪೂರ್ತಿ complete

ಅನುಬಂಧ :

ಈ ಪ್ರಕ್ರಿಯೆಯನ್ನು ಬಹಳ ದಿನಗಳ ಹಿಂದೆಯೇ ಗಮನಿಸಿದ್ದೆ ; ಇದನ್ನು ಒಂದು ಸಿದ್ಧಾಂತದ ಪಡಿಕಟ್ಟಿನಲ್ಲಿ ತರಲು ಇಲ್ಲಿಯ ವರೆಗೆ ಕಾಯಬೇಕಾಯಿತು. ಇಲ್ಲಿ ಉಪಯೋಗಿಸಿದ ದತ್ತವನ್ನು ಕ್ಷೇತ್ರಕಾರ್ಯ ಹಾಗೂ ಪಠ್ಯಗಳಿಂದ ಸಂಗ್ರಹಿಸಿದ್ದೇನೆ. ಪ್ರಶ್ನಾವಳಿಯನ್ನು ಸಿದ್ಧಪಡಿಸಿ ಕ್ಷೇತ್ರಕಾರ್ಯ ನಿರ್ವಹಿಸಿ ದತ್ತವನ್ನು ಸಂಗ್ರಹಿಸಿಲ್ಲ. ನಿತ್ಯದ ಕಾರ್ಯದಲ್ಲಿ ಗಮನಕ್ಕೆ ಬಂದ ಉಕ್ತಿಗಳನ್ನು ಸಂಗ್ರಹಿಸಿದ್ದೇನೆ. ಅನೇಕ ಬಾರಿ ದತ್ತವನ್ನು ಅಲ್ಲಲ್ಲಿ ಪರೀಕ್ಷಿಸಿದ್ದೂ ಉಂಟು.

ಈ ಲೇಖನ ಬರೆಯಲು ಮಾರ್ಗದರ್ಶನ ಮಾಡಿದ ಪ್ರೊ. ಕೀರ್ತಿನಾಥ ಕುರ್ತಕೋಟಿ ಮತ್ತು ಪ್ರೊ. ವಿಲ್ಯಂ ಮಾಡ್ತ ಅವರಿಗೆ ನಾನು ಋಣಿ.

ಆಕರ ಗ್ರಂಥಗಳು

ಕಿಟೆಲ್, ಎಫ್. 1889. ಹಳೆಗನ್ನಡ ವ್ಯಾಕರಣ ಸೂತ್ರಗಳು. ಮಂಗಳೂರು : ಬಾಸೆಲ್ ಮಿಶನ್ ಬುಕ್ ಆ್ಯಂಡ ಟ್ರ್ಯಾಕ ಡೆಪಾಜಿಟರಿ

ಕುಲಕರ್ಣಿ, ಪ್ರ. ಗೋ. 1967 ಕನ್ನಡ ಭಾಷೆಯ ಚರಿತ್ರೆ. ಬೆಳಗಾವಿ

ಕೃಷ್ಣಮೂರ್ತಿ, ಕೆ. 1967. ಕನ್ನಡ ಕಾವ್ಯಾಲಂಕಾರ ಸೂತ್ರ-ವೃತ್ತಿ. ಮೈಸೂರು: ಶಾರದಾ ಮಂದಿರ.

ಚಿದಾನಂದ ಮೂರ್ತಿ, ಎಂ. 1981 ವಾಗರ್ಥ. ಬೆಂಗಳೂರು : ಬಾಪ್ಕೊ.

ಜೋಶಿ, ಶಂ. ಭಾ 1971. ಕಂನುಡಿಯ ಹುಟ್ಟು. ಧಾರವಾಡ : ಸಮಾಜ ಪುಸ್ತಕಾಲಯ

1990 ಮರ್ಹಾಟೀ ಸಂಸ್ಕೃತಿ - ಕೆಲವು ಸಮಸ್ಯೆಗಳು. ಕೀರ್ತಿನಾಥ ಕುರ್ತಕೋಟಿ. ಬೆಂಗಳೂರು : ಕರ್ನಾಟಕ ಸಾಹಿತ್ಯ ಅಕಾಡೆಮಿ.

ಧಾರವಾಡಕರ, ರಾ. ಯ. 1951. ಕನ್ನಡ ಭಾಷಾಶಾಸ್ತ್ರ. ಧಾರವಾಡ: ಸಮಾಜ ಪುಸ್ತಕಾಲಯ.

ನರಸಿಂಹಾಚಾರ, ಡಿ.ಎಲ್.(ಸಂ) 1959. ಕೇಶಿರಾಜ ವಿರಚಿತ ಶಬ್ದಮಣಿದರ್ಪಣ. ಮೈಸೂರು: ಶಾರದಾ ಮಂದಿರ

ಸೀತಾರಾಮಯ್ಯ, ಎಂ.ವಿ. 1979. ಪ್ರಾಚೀನ ಕನ್ನಡ ವ್ಯಾಕರಣಗಳು. ಮೈಸೂರು: ಕನ್ನಡ ಅಧ್ಯಯನ ಸಂಸ್ಥೆ.

Abbii,Anvita.1980. Semantic Grammar of Hindi: A Survey in Reduplication. New Delhi : Bahari.

Andranov,M.S.1970. Dravidian Languages,Mascow : "NAUKA" Central Department of Oriental Literature.

Bright,William.1958. An Outline of Colloquial Kannada. Poona:Deccan College.

Emeneau,M.B.1938. An Echo-word Motif in Dravidian Folk Tales. JAOS 58. 553-70.-----1938 Echo-Words in Toda. New Indian Antiquary. 1.109-17.

Hiremath. R.C.1961. The Structure of Kannada. Dharwad: Karnatak University.

Kachru,B.B.1983. The Indianization of English : The English langauge in India. Delhi Oxford University Press:

Kedilaya,Shanker.A.1979. Foreign Loan Words in Kannada. (Arabic and Persian). Madras : University of Madras.

Kittel.F.1903. A Grammar of the Kannada Langauge : Comprising the Threo Dialects of the Language (Ancient. Mediaeval and Modern). Mangalore : Basel Mission Book Track Depository.

Matthews.P.T.1974. Morphology : An Introduction to the Theory of Word-structure, Cambridge : Cambridge University Press.

Nayak,H.M.1967. Kannada : Literary and Colloguial : A Study of Two loctyles. Mysore : Rao and Raghavan.

Rice, Lewis. (ed).1848. Nagavarma's Karnataka Bhasha Bhushana. Mysore : Mysore Government Press.

Schiffman, Harold.F.1983. A Reference Grammar of Spoken Kannada, Seattle and London : University of Washington Press.

Zaidi,Mujahid. Husain.1975. Word-borrowing and word-making in Modern South Asian Langauges : Urdu In Dhomotharan, Ayyadurai(ed). South Asian Digest of Regional Writing. South Asia Institute; Heidelberg : University of Heidelberg 4.98 -122.

Zvelebil,Kamil.V.1990. Dravidian Linguistics : An Introduction. Pondicherry : Pondicherry Institute of Linguistics and Culture.

ಮಹಾನಾಡಪ್ರಭುಗಳ ಏಳುಬೆಟ್ಟದ ನಾಯಕರು

★ ಬಿ.ಆರ್.ಹಿರೇಮಠ

ವಿಜಯನಗರೋತ್ತರ ಕಾಲದ ವೀರಶೈವ ಅರಸುಮನೆತನಗಳಲ್ಲಿ 'ಮಹಾನಾಡಪ್ರಭು'ಗಳ ಅರಸುಮನೆತನ ಅತ್ಯಂತ ಪ್ರಮುಖವಾದುದಾಗಿದೆ. ಈ ಅರಸು ಮನೆತನಕ್ಕೆ ಸಂಬಂಧಿಸಿದ ಸಮಗ್ರ ದಾಖಲೆಗಳ ಪರಿವೀಕ್ಷಣೆ,ಸಂಗ್ರಹ, ವಿವೇಚನೆ ಹಾಗೂ ಪ್ರಕಟನ ಕಾರ್ಯ ಇನ್ನೂ ಸರಿಯಾಗಿ ನಡೆದಿರುವುದಿಲ್ಲ. ತುಮಕೂರು ಜಿಲ್ಲೆಯ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಕೈಕೊಳ್ಳುವ ಕ್ಷೇತ್ರಕಾರ್ಯದಿಂದ ಈ ಮನೆತನಕ್ಕೆ ಸಂಬಂಧಿಸಿದ ಉಪಯುಕ್ತ ದಾಖಲೆಗಳು ದೊರೆಯುತ್ತವೆ. ತುಮಕೂರ ಜಿಲ್ಲೆಯ ಮಧುಗಿರಿ ತಾಲೂಕಿನ ಶಂಭೋನಹಳ್ಳಿಯಲ್ಲಿ ಮಹಾನಾಡ ಪ್ರಭುಗಳ ವಂಶಸ್ಥರಿದ್ದಾರೆ. ಇವರ ಮನೆಯಲ್ಲಿ ಹಲವಾರು ದಾಖಲೆಗಳಿರುತ್ತವೆ. ಮಹಾನಾಡಪ್ರಭುಗಳಿಗೆ ಸಂಬಂಧಿಸಿದ ದಾಖಲೆಗಳಲ್ಲಿ ಇದೂ ಒಂದು. ಅರಸುಮನೆತನದವರ ಮನೆಯಲ್ಲಿಯೇ ದೊರೆತ ಈ ದಾಖಲೆಗೆ ಚಾರಿತ್ರಿಕ ಮಹತ್ವವಿದೆ.

ಮಿಡಿಗೇಸಿದುರ್ಗಕ್ಕೆ ಮುಖ್ಯ ನಾಯಕರು :

ಚಿನ್ನಮಾಗಲೂರ ತಿಮ್ಮನಾಯ್ಕ, ದಾಸನಾಯ್ಕ, ವೀರನಾಯ್ಕ - ಇವರು ಮೂರು ಜನ ಪೋತಗೂಡುಪಟ್ಟಣದಸ್ಥಳದವರು. ಮಂದಲೂರ ದಾಸನಾಯ್ಕ, ಗಂಗನಾಯ್ಕ, ಮುಕುಂದನಾಯ್ಕ ಈ ಮೂರು ಜನ ಬಿಜ್ಜಾವರ ಸ್ಥಳದವರು. ಇವರಿಬ್ಬರಿಗೂ ಸಮವೀಳ್ಯೆ, ಸರಿಸಲಾಮು, ಬಲಬಾಜು ಮಂದಲೂರು, ಎಡಬಾಜು ಚಿನ್ನಮಾಗಲೂರು. ದೊಡ್ಡಚಿನ್ನ ನಾಯ್ಕ ಮಲ್ಲನಮಡು ಸ್ಥಳದವನು. ಮಧುಗಿರಿ ಗಿಡಗಾವಲು ಎರಿಹೋಬ ನಾಯ್ಕ ಸೂರೇನಹಳ್ಳಿ ಸ್ಥಳದವನು. ಮುಕುಂದಮನ ದಾಸೇನಾಯ್ಕ ತೊಟ್ಲುಕೆರೆ ಸ್ಥಳದವನು. ಜೆಡಗು ಮಂದಲೂರು ತೆಲಗೂರು ಕುಟ್ಟ ರಂಗನಾಯ್ಕ ಕತ್ತಿರಾಜನಹಳ್ಳಿ ಚಿಕ್ಕನಹಳ್ಳಿ ಸ್ಥಳದವನು. ಪುಟ್ಟಿನ ತಿಮ್ಮನಾಯ್ಕ ಕೂಡದಾಲೂರ ಸ್ಥಳದವನು. ತಮ್ಮಜ್ಜನಾಯ್ಕ ಘಟ್ಟಲಹಳ್ಳಿ ಸ್ಥಳದವನು.

ವೀರಣ್ಣನ ಬೆಟ್ಟದ ನಾಯಕರು :

ವೀರಣ್ಣನ ದುರ್ಗದ ಸೂರನಾಯ್ಕನು ಮುಲ್ಲೋನು ಭಾನುಕೋಟೆ ಸ್ಥಳದವನು. ಹೋಬನಾಯ್ಕ ಬೆಲ್ಲೂರು ಸ್ಥಳದವನು. ಬೆಳನೂರು ಒಕ್ಕಲಿಗರ ತಿಮ್ಮನಾಯ್ಕ ಮಣೂರು ಸ್ಥಳದವನು. ತೆಲುಗರ ವೀರನಾಯ್ಕ ಕೊಂಕಿಲು ಸ್ಥಳದವನು. ಅಗಸರ ಬಾಲೆನಾಯ್ಕ

ಮದ್ದಗಿನರಿ ಸ್ಥಳದವನು. ಕೆಲಸಿರ್ಗ ಬೆಟ್ಟತೋಣ ನಾಯ್ಕ ತೋಡ ಮಡುಗಿನ ಸ್ಥಳದವನು. ಬಿಳಿಬೆಟ್ಟದ ಗಿರನಾಯ್ಕ ಚಿನ್ನೇನಹಳ್ಳಿ ಸ್ಥಳದವನು. ನಾಯ್ಕನಗುಟ್ಟೆ ಕುರುಬರ ಕಾಳನಾಯ್ಕ ಬರಮದ್ಯಾವರ ಹಳ್ಳಿಯ ಸ್ಥಳದವನು. ಶಂಕರಬೆಟ್ಟತ್ತ ಕದರನಾಯ್ಕ ನಲ್ಲಿನ ಹಳ್ಳಿಯ ಸ್ಥಳದವನು. ನೇರಲಕೆರೆ ಮಂದಲೂರು ಬೂದಿ ಬೆಟ್ಟದ ಗಿರನಾಯ್ಕ ಚಿನ್ನೇನಹಳ್ಳಿ ಸ್ಥಳದವನು. ಕೊಡಗಾರಲಗುಟ್ಟೆ ಕಂಕೋಬ ನಾಯ್ಕ ಪೆನ್ನನಾಯ್ಕ ಮುದಕೂರು ಸ್ಥಳದವರು.

ಬೆನಕನ ಬೆಟ್ಟದ ನಾಯ್ಕರು :

ಒಕ್ಕಲಿಗರ ರಾಮನಾಯ್ಕ ಜಂಗಮರಹಳ್ಳಿ ಸ್ಥಳದವನು. ಊರಗೊಲ್ಲರ ಮೀಸೆ ಮಲ್ಲನಾಯ್ಕ ಬಸವನ ಹಳ್ಳಿಸ್ಥಳದವನು.

ಬೆಟದೂರ ನಾಯ್ಕರು :

ಮರಪೆನ್ನ ನಾಯ್ಕ ಬಿದರಕೆರೆ ಸ್ಥಳದವನು. ಲಿಂಗನಾಯ್ಕ ಉತ್ತದೇಶದವನು. ತಳವಾರ ಕದುರುನಾಯ್ಕ ರಾಗಿಕುಂಟೆ ಬೈರಾಪುರದ ಸ್ಥಳದವನು. ತಳವಾರ ಲಕ್ಕನಾಯ್ಕ ಅಂಕೆನೋರ ಗಂಜಲಗುಂಟೆ ಸ್ಥಳದವನು.

ಹೊಸಬೆಟ್ಟದ ನಾಯ್ಕರು :

ಕೊಡ್ಡದಾಸನಾಯ್ಕ ಚಿನ್ನೇನಹಳ್ಳಿ ಸ್ಥಳದವನು. ಹೊಸ ಬೆಟ್ಟದ ಚಿನ್ನನಾಯ್ಕ ತಿಪ್ಪಾಪುರ ಸ್ಥಳದವನು. ಬ್ರಹ್ಮಸಂದ್ರದ ಚಿಕ್ಕ ಹೋಬನಾಯ್ಕ ದೊಡ್ಡ ಹೋಬನಾಯ್ಕ ನೇಗಲಾಲಿ ಸ್ಥಳದವರು. ಮಂದಲೂರು ಪಾದಬೆಟ್ಟದ (ಓ)ಬೇನಾಯ್ಕ ಮಲ್ಲೂರು ಸ್ಥಳದವನು. .... ಕತ್ತಲರಾವುತಪುರ ಉತ್ತರಪಾಗಿ ನಿಂಗನಹಳ್ಳಿ ಸ್ಥಳದವರು.

ಅವರುಗಲ್ಲುಬೆಟ್ಟದ ನಾಯ್ಕರು :

ಲಕ್ಕನಾಯ್ಕ,ವೀರನಾಯ್ಕ ಮೇಲುಕೋಟೆ ಸ್ಥಳದವರು.

ಸಿದ್ಧಗಿರಿ ಬೆಟ್ಟದ ನಾಯ್ಕರು :

ತಿಮ್ಮನಾಯ್ಕ ಮಂದಲೂರ ಸ್ಥಳದವನು. ಗುಂಡುಮಲೆ ಬೆಟ್ಟದ ದಾಸನಾಯ್ಕ,ತಿಮ್ಮನಾಯ್ಕ ..... ಸ್ಥಳದವರು. ಗುರುಪುರಬೆಟ್ಟದ ಸೋಬನ ಮುದ್ದನಾಯ್ಕ,ತಿಮ್ಮನಾಯ್ಕ ...... ಇವರುಗಳು ಬೆಟ್ಟಗಳ ನಾಯ್ಕರತನದವರು.

ಪಂಪ-ನಾರಣಪ್ಪರ ಕೃತಿಗಳಲ್ಲಿ ವನವಿಹಾರ

★ ಎ.ಎಸ್.ಮಾಳಿ.

ಪಂಪ-ನಾರಣಪ್ಪರು ಕನ್ನಡದ ಕಣ್ಮಣಿಗಳು. ಪಂಪಭಾರತ ಮತ್ತು ಗದುಗಿನ ಭಾರತಗಳು ಕನ್ನಡ ಸಾಹಿತ್ಯಶ್ರೀಯ ಶ್ರೀಮುಡಿಯನ್ನು ಶ್ರೀಮಂತಗೊಳಿಸಿದ ಕಲಾಕುಸುಮಗಳು. ಕುಮಾರವ್ಯಾಸ ತನ್ನ ಪ್ರತಿಭಾಶಕ್ತಿಯನ್ನು ಭಗವದ್‌ಪಾರಮ್ಯಕ್ಕೆ ಮೀಸಲಿರಿಸಿದ ಭಕ್ತಕವಿ. ಅವನ ಭಾರತವಾದರೂ ಭಗವದ್ವಿಲಾಸ ಭೂಮಿಕೆ. 'ಹಲವು ಜನ್ಮಗಳ ಪಾಪರಾಶಿಗಳ ತೊಳೆವ ಪುಣ್ಯಜಲ. ಪಂಚಮಶ್ರುತಿ. ಕಾವ್ಯಯೋಗವನ್ನು ಆತ್ಮಯೋಗದೊಂದಿಗೆ ಬೆಸುಗೆ ಹಾಕಿದ ನಾರಣಪ್ಪನದು ದರ್ಶನ ಪ್ರತಿಭೆಯಾದರೆ ಪಂಪನ ಪ್ರತಿಭೆ, ನಿಸರ್ಗ ಪ್ರಭೆ ! ಪಂಚಮವೇದ ಸ್ವರೂಪದ ಭಾರತಕಥೆಯನ್ನು ಲೌಕಿಕವೆಂದು ಸಾರುವ ಜೈನಧರ್ಮದ ಪಂಪನ ಹೇಳಿಕೆಯನ್ನು ಹುಸಿಗೊಳಿಸಲೆಂದೇ 'ಕರ್ಣಾಟ ಭಾರತ ಕಥಾಮಂಜರಿ ' ರಚಿತಗೊಂಡಂತಿದೆ.

'ಕುಮಾರವ್ಯಾಸನು ವಿಶಿಷ್ಟ ಶಕ್ತಿಯ ಸ್ವತಂತ್ರ ಕವಿ' ಎಂಬ ವಿದ್ವಾಂಸರ ಮಾತು ಒಪ್ಪತಕ್ಕದ್ದು. '' ಪಂಪ ಶ್ರೇಷ್ಠತಮವಾಗಿ ಸೃಷ್ಟಿಸಿರುವ ಭಾಗಗಳನ್ನು ಇವನು ಅದಕ್ಕೆ ಸರಿಮಿಗಿಲಾಗುವಂತೆ, ತಾನು ಓದಿಲ್ಲದೆ ಬರೆಯುತ್ತಿರುವಂತೆ ಸೃಷ್ಟಿಸಿರುವುದನ್ನು ನೋಡಬಹುದು''.[೧] ಆದರೆ ನಾರಣಪ್ಪ ಪಂಪಭಾರತವನ್ನು ಓದಿಯೇ ಇಲ್ಲವೆಂದು ಹೇಳುವುದು ಸರಿಯೆನಿಸದು. ''ಓದಿದ್ದರೂ ಓದಿರಬಹುದು. ಓದದೆಯೂ ಇರಬಹುದು''[೨] ಎಂಬ ಹೇಳಿಕೆ ಬೇಜವಾಬ್ದಾರಿಯುತವೆನಿಸುವುದು. ಕುಮಾರವ್ಯಾಸನು ಪಂಪನ ವಿಕ್ರಮಾರ್ಜುನ ವಿಜಯವನ್ನು ಓದಿದ್ದನೆಂಬುದರಲ್ಲಿ ಸಂದೇಹವೇ ಇಲ್ಲ. ಇದರಿಂದ ಕುಮಾರವ್ಯಾಸನ ಪ್ರತಿಭೆಯ ಮಹತಿಗೆ ಯಾವ ಕಲಂಕದ ಲವಲೇಶವೂ ಅಂಟಿಕೊಳ್ಳಬಾರದು. ನಾರಣಪ್ಪನು ಪಂಪನ ಪಂಪಭಾರತವನ್ನು ಮಾತ್ರವಲ್ಲ, 'ಆದಿಪುರಾಣ'ವನ್ನು ಓದಿದ್ದಾನೆ. ಆದಿಪುರಾಣದಲ್ಲಿಯ ಭರತನ ವನವಿಹಾರದ ವೈಭವವನ್ನು ನಾರಣಪ್ಪ ನೋಡಿದ್ದಾನೆ. ಈ ದೆಸೆಯಲ್ಲಿ ಗಮನಹರಿಸಿ ಮಹಾಕವಿದ್ವಯರ ವನವಿಹಾರಗಳನ್ನು ಸಮೀಕ್ಷಿಸುವುದೇ ಈ ಲೇಖನದ ಉದ್ದೇಶ.

---

೧. ಕರ್ಣಾಟ ಭಾರತ ಕಥಾಮಂಜರಿ - ನಾರಣಪ್ಪ ಸಂಪಾದಕೀಯ ಪುಟ. ೩
೨. ಕುಮಾರವ್ಯಾಸ ಪ್ರಶಸ್ತಿ - ಪುಟ. ೧೪೭

ಆದಿಪುರಾಣದ ಏಕಾದಶಾಶ್ವಾಸದಲ್ಲಿಯ ಭರತನ ವನವಿಹಾರ ವರ್ಣನೆ ಪಂಪನ ರಸಿಕತೆಯ ಪಡಿಯಚ್ಚು. ಜೈನೇತರರೂ ತನ್ನ ಕಾವ್ಯವನ್ನು ಮೆಚ್ಚಿಕೊಳ್ಳಲೆಂದು ಈ ಶೃಂಗಾರ ಲತಾಕುಂಜವನ್ನು ಪೋಷಿಸಿ,ಬೆಳೆಸಿರಬೇಕು. ಪಂಪನಿಗೆ ಅತ್ಯಂತ ಪ್ರಿಯವಾದ ಮಾವು-ಮಲ್ಲಿಗೆಗಳ ಸೊಬಗನ್ನು ಸವಿಯಬೇಕಾದ ಸಹೃದಯರು ಇಲ್ಲಿ ವಿಹರಿಸಲೇಬೇಕು. ಒಟ್ಟಿನಲ್ಲಿ ಪಂಪನ ಕಾವ್ಯಶ್ರೀ ಶೃಂಗಾರದ ಮೋಡಿಹಾಕಿ ಓದುಗರ ತನು-ಮನಗಳನ್ನು ಸೂರೆಗೊಳ್ಳುತ್ತಾಳೆ. ಕರ್ಣಾಟ ಭಾರತ ಕಥಾ ಮಂಜರಿಯಲ್ಲಿ ನಾರಣಪ್ಪನಿಗೂ ವನವಿಹಾರವನ್ನು ಬಣ್ಣಿಸುವ ಅವಕಾಶ ಒದಗಿ ಬಂದಿತ್ತು. ಅದು ದುರ್ಯೋಧನನ ಘೋಷಯಾತ್ರೆಯ ಪ್ರಸಂಗದಲ್ಲಿ. ಆದರೆ ಯೋಗದ ಕವಿಗೆ ಭೋಗದ ಸವಿ ರುಚಿಸಲಿಲ್ಲ. ಪಂಪನ ನೆರವು ಪಡೆದರೂ ಕುಮಾರವ್ಯಾಸನ ಕಾವ್ಯಕನ್ನಿಕೆ .ಅರಳುವುದಂತೂ ದೂರವೇ ಉಳಿಯಿತು; ಬದಲಿಗೆ ಮುರುಟಿಕೊಳ್ಳುತ್ತಾಳೆ. ''ಕನ್ನಡ ಭಾರತದಲ್ಲಿ ಬಂದಿರುವ ಶೃಂಗಾರದ ಪರಿಮಿತ ಸನ್ನಿವೇಶಗಳಲ್ಲಿ ' ವಿರಹಿಗಳ ಶೃಂಗಾರವೇ ಹೆಚ್ಚಾಗಿದೆ. ಉಚಿತಜ್ಞದನಾದ ಕವಿ ಒಂದೊಂದು ಕಡೆಯಲ್ಲಿ ಇದರ ಒಂದೊಂದು ಬಗೆಯನ್ನು ನಿರೂಪಿಸಿದ್ದಾನೆ''[೩] ಆದರೆ '' ಇಲ್ಲಿ ಕಾಣಬಹುದಾದ ನ್ಯೂನತೆಯೆಂದರೆ -ಒಂದೊಂದು ಕಡೆ ಭಾವಕ್ಕೆ ನಯದ ಸಾಗೆ ಸಾಲದಿರುವುದು ''[೪] ಎಂದಿರುವುದು ಸರಿಯಾದ ನಿಷ್ಕರ್ಷೆ.

ಘೋಷಯಾತ್ರೆಯ ನೆಪದಲ್ಲಿ ಪಾಂಡವರ ಹೊಟ್ಟೆಯುರಿಸಲು ದುರ್ಯೋಧನನು ಪರಿವಾರ ಸಮೇತ ದ್ವೈತವನಕ್ಕೆ ಬರುತ್ತಾನೆ. ಗಣಿಕಾಸಮೂಹವೂ ಅಂತಃಪುರದ ಸ್ತ್ರೀಯರನ್ನು ಹಿಂಬಾಲಿಸಿತು. ನಾರಣಯಪ್ಪನು ಈ ಸನ್ನಿವೇಶವನ್ನು ಹೀಗೆ ರೇಖಿಸಿದ್ದಾನೆ.

ಸವಡಿಯಾನೆಯ ಮೇಲೆ ಗಣಿಕಾ
ನಿವಹ ದಂಡಿಗೆಗಳು ಕೆಲಬರು
ಯುವತಿಯರು ಕೆಲರಶಚಯದಲಿ ರಥನಿಕಾಯದಲಿ
ಯುವತಿಮಯವೋ ಸೃಷ್ಟಿ ಗಣಿಕಾ
ಯುವತಿಯರ ನೆಲನೀದುದೋ ದಿಗು
ವಿವರ ಕರೆದುದೊ ಕಾಂತೆಯರನೆನೆ ಕವಿದುದಗಲದಲಿ''[೫]

ವಯೋಮದದ ಕುಚೇಷ್ಟೆ ಕಪಿಚೇಷ್ಟೆಗಳಿಂದೊಡಗೂಡಿದ ಈ ಕೌರವ ಯುವತಿಯರ ವನವಿಹಾರವು ಯೋಗ ಕವಿ ನಾರಣಪ್ಪನ ಒಪ್ಪು ಪಡೆಯುವಲ್ಲಿ ವಿಫಲವಾಗಿದೆ. ಕವಿ ಪಾಂಡವ ಪಕ್ಷಪಾತಿಯಾಗಿರುವುದೇ ಇದಕ್ಕೆ ಕಾರಣ. ಹರೆಯದ ಯುವತಿಯರ ಒಂದೊಂದು ಲೀಲೆಗಳು ನಾರಣಪ್ಪನಿಗೆ ಕಸಿವಿಸಿಯನ್ನುಂಟು ಮಾಡಿವೆ. ''ವೇದನಿರ್ಘೋಷದ ಬದಲು ನೇಪುರದ ದನಿ ದಟ್ಟಿಸಿತು; ಯಾಗಗಳಿಗೆ ಬೇಕಾದ ಮಡಿ

---
೩. ಕುಮಾರವ್ಯಾಸ ಪ್ರಶಸ್ತಿ : ಪುಟ ೨೭೮
೪. ಅದೇ
೫. ಕ.ಭಾ.ಕ. -ನಾರಣಪ್ಪ, ಅರಣ್ಯಪರ್ವ ೧೭-೩೦

ಘುಟಿಯಾಯಿತು. ವನಿತೆಯರ ಶೃಂಗಾರಚೇಷ್ಟೆಗಳನ್ನು ವರ್ಣಿಸುವ ಈ ಸನ್ನಿವೇಶದ ಮೇಲೆ ಪಂಪನ ಆದಿಪುರಾಣದ ಛಾಪು ಎದ್ದು ಕಾಣುತ್ತದೆ. ಪ್ರಸ್ತುತ ಸಂದರ್ಭದ ಕೆಲವು ಪದ್ಯಗಳನ್ನು ಇಲ್ಲಿ ಅವಲೋಕಿಸಲಾಗಿದೆ.

''ಒದೆದು ಪದದಲಿ ಕೆಂದಳಿರ ತೋ
ರಿದೆವಶೋಕೆಗೆ ಮದ್ಯ ಗಂಡೂ
ಷದಲಿ ಬಕುಳದ ಮರನ ಬುಲ್ಲವಿಸಿದೆವು'' [೧] ಎಂಬೀ

ನಾರಣಪ್ಪನ ಪದ್ಯ ಆದಿಪುರಾಣದ ೧೦-೧೦೨ ಮತ್ತು ೧೧-೧೨೨, ಈ ಎರಡು ಕಂದ ಪದ್ಯಗಳ ಸರಳ ಸಾರಾಂಶ. ತೌಲನಿಕ ಅಧ್ಯಯನದಲ್ಲಿ ಕವಿಸಮಯಗಳನ್ನು ಗಂಭೀರ ಚರ್ಚೆಗೆ ಒಳಪಡಿಸುವುದು ಸೂಕ್ತವಲ್ಲವೆಂದು ತೋರಿದರೆ ಇದೇ ಷಟ್ಪದಿಯ ಮುಂದಿನ ಭಾಗವನ್ನು ಉದ್ಧರಿಸಬಹುದು -

''..........ಕುರುವಕಕೆ ತುದಿಮೊಲೆಯ ಸೋಂಕಿನಲಿ ಹೂದೋ
ರಿದೆವು ಕಣ್ಣೋರೆಯಲಿ ತಿಲಕವ
ಕದುಕಿದೆವು ನೀವಾವ ಘನವೆಂದರಬಲೆಯರು '' [೨]

ಇದನ್ನು ಆದಿಪುರಾಣದ ೧೧-೧೨೮ ನೆಯ ಪದ್ಯದ ನಂತರದ ವಚನದೊಂದಿಗೆ ಹೋಲಿಸುವುದು ಸೂಕ್ತ. ಅದನ್ನು ಇಲ್ಲಿ ಉಲ್ಲೇಖಿಸಲಾಗಿದೆ ; '' ಅಗಳಾಕೆಗಳಲಕ್ತಾರಕ್ತಮಣಿ ನೂಪುರ ಕ್ವಣಿತ ಸುಭಗ ವಾಮಪಾದ ಪ್ರಹರಣದೊಳಶೋಕತರುಗಳಂ ಕುಸುಮಿಸಿಯುಂ ವದನ ಸರಸಿಜಾಸವಸೇಕದೊಳೆ ವಕುಳ ಕುಜಂಗಳನಲರ್ಚಿಯುಂ, ಉನ್ನತ ಕುಚ್ ತಟಾಘಾತದೊಳೆ ಕುರುವಕಂಗಳಂ ಪುಷ್ಪಿತಂಗಳಂ ಮಾಡಿಯುಂ ಕ್ಷೀರಗಂಡೂಷ ಸೇಚನದೊಳೆ ಚಂಪಕ ವಿಟಪಗಳನಲರ್ಚಿಯುಂ, ಆಯತಧವಳಾಪಾಂಗ ಸಂಗದೊಳೆ ತಿಳಕಭೂರುಹಂಗಳಭಿನವ ಲತಾಂತಂಗಳೊಳ್ ಕೂಡಿಯುಂ-ಇಂತು ನಾನಾವಿಧ ಕ್ರೀಡೆಯಿಂದುಪವನ ಕ್ರೀಡೆಯಂ ನಿರ್ವರ್ತಿಸಿದರು.

ಪಂಪನ ಆದಿಪುರಾಣದಲ್ಲಿ ವರ್ಣಿತಗೊಂಡ ಭರತನ ಅಂತಃಪುರದ ಸ್ತ್ರೀಯರ ಅನೇಕ ಶೃಂಗಾರ ಕ್ರೀಡಾಭಂಗಿಗಳನ್ನು ಕುಮಾರವ್ಯಾಸಭಾರತದಲ್ಲಿ ಕಾಣಬಹುದಾಗಿದೆ. ''ಮಣಿಮಯದ ಕುಂಡಲವನಲುಗಿ । ಯೆಣಿಸುವಂತಿರೆ ಕೊರಳ ಹಾರವ । ಮಣಿಗಳನು ಮುತ್ತುಗಳ ಮೆರೆವರು ಮುರಿದ ಮೌಳಿಯಲಿ ''[೩] ಎಂಬೀ ಪದ್ಯಕ್ಕೆ ಆದಿಪುರಾಣದ ೧೧-೨೧ನೆಯ ಪದ್ಯವೇ ಸ್ಫೂರ್ತಿ ನೀಡಿರಬಹುದು. ಅಲ್ಲಿ ಯುವತಿಯೋರ್ವಳು-

---

೧. ಅದೇ ೧೮-೧೩

೨. ಅರಣ್ಯಪರ್ವ - ೧೮-೧೩

೩. ಅದೇ , ೧೮-೧೨

ಸಮಾಕುಳಗತಿ ಸ್ಖಲಿಚ್ಚಳನ ಸಂಚಳಿತ್ತಾರ ಹಾ
ರಮಂ ತಳದೊಳೊತ್ತುವೊಂದು ನೆವದಿಂದನಂಗಾಸ್ತ್ರ ವಿ
ದ್ಧಮಂ ಪಡೆದು ಗೂಡುವಾಯ್ವುದೆ೯ಯನ್ನೊತ್ತಿ '' ಹಿಡಿಯುತ್ತಾಳೆ.

'ಬಲುಮೊಲೆಗಳು ಅಳ್ಳಿರಿಯಲು ಏಕಾವಳಿಗಳನ್ನು ಕೆಲಕೊತ್ತುವ 'ಸ್ತ್ರೀಯರನ್ನು ನಾರಣಪ್ಪ ಹೀಗೆ ಚಿತ್ರಿಸುತ್ತಾನೆ :

'' ಬಲು ಮೊಲೆಗಳಳ್ಳಿರಿಯಲೇಕಾ
ವಳಿಗಳನು ಕೆಳಕೊತ್ತಿ ಮೇಲುದ
ಕಳಿಚಿ ನಡುಗಿಸಿ ನಡುವನಂಜಿಸಿ ಜಘನ ಮಂಡಲವ
ಅಳಕ ನಿಕರವ ಕುಣಿಸಿ ಮಣಿ ಕುಂ
ಡಲವಲುಗಿಸಿ ಹಣೆಯ ಮುತ್ತಿನ
ತಿಲಕವನು ತನಿಗೆದರಿ ನಡೆದುದು ಕೂಡೆ ಸತಿ ನಿವಹ ''[೯]

ಅವರು 'ಸರಿದಿಳಿವ ನಿರಿಯನ್ನು ಒಂದು ಕೈಯಲ್ಲಿಯೂ, ಸುರಿವರಳ ಮುಡಿಯನ್ನು ಮತ್ತೊಂದು ಕೈಯಲ್ಲಿ ಹಿಡಿದುಕೊಂಡು ಗಮನಸ್ವೇದ ಜಲದಿಂದ ಮಘಮಘಿಸುತ್ತಿದ್ದರು '' ನಾರಣಪ್ಪನ ಕಲ್ಪನೆಗೆ ಇಲ್ಲಿ ಉಲ್ಲೇಖಿಸಲಾಗುವ ಪಂಪನ ಈ ಪದ್ಯವೇ ಪ್ರೇರಣೆ ನೀಡಿರಬೇಕು :

''ನೊಸಲಂ ತೊಂಗಲ್ಗುರುಳ್ ಮೇಲುದನೊಗೆವ ಕುಚಂ ಬೆನ್ನನಾನೀಳಕೇಶ
ಪ್ರಸರಂ ಚೆಲ್ವಂ ಪೊದಱ್ದಾಳ್ದಿಱಿಯವೆಡದ ತೋಳ್ ಸೋಗೆಯಂ ನೂಲತೊಂಗಲ್
ದೆಸೆಯಂ ಕಣ್ ಕೆನ್ನೆಯಂ ಭ್ರೂಲತಿಕೆಗಳುರಮಂ ಸಂಚಳತ್ತಾರಹಾರಂ
ಪಸರಂ ಚೆತ್ತಿತ್ತ ಮೋಱಂತಲೆಯೆ ಭರತನಂ ನೋಡಲೈತಂದಳೊರ್ವಳ್ '[೧೦]

ಯುವತಿಯರ ಗಮನಸ್ವೇದವು ನಾರಣಪ್ಪನ ಮೂಗಿಗೆ ಗಬ್ಬುವಾಸನೆಯಾಗಿ ಪರಿಣಮಿಸಿದ್ದರೆ ಆಶ್ಚರ್ಯಪಡಬೇಕಿಲ್ಲ .ತನಗೆ ರುಚಿಸದ್ದಿದರೇನಾಯಿತು ? ತಪೋವನವೆಲ್ಲ ಘಮಘಮಿಸುತಲಿತ್ತು. ಅದನ್ನು ಕವಿ ಹೀಗೆ ಬಣ್ಣಿಸಿದ್ದಾನೆ.

---

೯. ಅದೇ ೧೮-೨೨
೧೦. ಆದಿಪುರಾಣ : ಪಂಪ ೧೧-೧೬

''ನಾರಿಯರ ದಳ ತಿರುಗಿದರೆ ತನಿ
ಸೌರಭದ ದಳ ತೆಗೆಯದಾ ಕಾಂ
ತಾರದೊಳಗೇನೆಂಬೆನಾ ಸೌಗಂಧ ಬಂಧುರವ''
ಪಂಪನಿಗೆ ಮಾತ್ರ ಪೊಸಗಂಪು ಸಂಸಾರಸಾರ ಸರ್ವಸ್ವ ಫಲ'

''ಕತ್ತುರಿಯ ಕಂಪುಮಂ ಬೆಮ
ರೊತ್ತರಿಸಿ ಪೊದಟ್ಟಿ ಕಂಪನೀಯುತ್ತಿರೆ ವೃ
ತ್ತೋತ್ತುಂಗ ಸ್ತನಿಯರ್ ಶ್ರಮ
ಮುತ್ತಮದೇಂ ಸುರಭಿಗಂಧಮಂ ಬೀಱಿದರೋ

ಎಂದು ಕವಿ ಪಂಪ ರೋಮಾಂಚಿತಗೊಳ್ಳುವನು. ಈ ಲೇಖನದಲ್ಲಿ ಉಲ್ಲೇಖಿತಗೊಂಡಿರುವ ಪದ್ಯಗಳಲ್ಲಿಯ ಸಾದೃಶ್ಯವು ಕಾಕತಾಳಿಯವೆನಿಸಲಾರದು. ಪಂಪನ ಅದೆಷ್ಟೋ ಭಾವ-ಭಂಗಿಗಳನ್ನು ನಾರಣಪ್ಪ ಅನುಮೋದಿಸಿದ್ದಾನೆ. ಮಹಾಕವಿಗಳು ತಮಗಿಂತಲೂ ಪೂರ್ವದ ಮಹಾಕಾವ್ಯಗಳ ಬಗ್ಗೆ 'ಮಚ್ಚರ ಪಡದೇ ಆಳವಾಗಿ ಅಧ್ಯಯನ ಮಾಡುವರು. ಕುಮಾರವ್ಯಾಸನು ಪಂಪನ ಎರಡೂ ಕಾವ್ಯಗಳನ್ನು ಓದಿರಲೇಬೇಕು.

ಆದಿಪುರಾಣ ಮತ್ತು ಗದುಗಿನ ಭಾರತಗಳು ಧರ್ಮಕಾವ್ಯಗಳೇ ಆಗಿದ್ದರೂ ಕವಿಗಳಿಬ್ಬರ ಕಾವ್ಯ ಧೋರಣೆಗಳಲ್ಲಿ ವ್ಯತ್ಯಾಸವಿದೆ. 'ಕುಮಾರವ್ಯಾಸ' ಪ್ರಥಮತಃ ಯೋಗಿ, 'ದೃಷ್ಟಾರ' ನಂತರ ಕವಿ. ಪಂಪ ಪ್ರಥಮತಃ ಕವಿ, ಯೋಧ ಅನಂತರ ಜಿನಸಮಯದೀಪಕ. ''ಪಂಪಕವಿ ಸಾನು ಪ್ರದೇಶದ ಎಷ್ಟೋ ಚೆಲುವುಗಳನ್ನೂ, ಅನುಭವಗಳನ್ನೂ ಕುಮಾರವ್ಯಾಸನಿಗಿಂತ ಸಮರ್ಥವಾದ ರೀತಿಯಲ್ಲಿ ಅನ್ಯಾದೃಶ್ಯವಾಗಿ ಕೊಟ್ಟಿದ್ದಾನೆಂಬುದರಲ್ಲಿ ಸಂಶಯವಿಲ್ಲ''[೧೧] ಇದಕ್ಕೆ ಕಾರಣ ಕವಿಗಳ ವೈಯಕ್ತಿಕ ಒಲವು-ನಿಲುವುಗಳು.

---

೧೧. ಸವಿ ನೆನವು ಸಿ.ಎ.ಕೆ. ಪುಟ ೩೭೧

ದಾಸರು (ಪಾತರದವರು) : ಒಂದು ಪರಿಚಯ

★ ಎಂ. ಎಸ್. ಪಾಟೀಲ

ಕನ್ನಡ ಜನಪದ ಜನಾಂಗ ಹಲವು ಸಾಂಸ್ಕೃತಿಕ ಸ್ತರಗಳಲ್ಲಿ ಬೆಳೆದುಬಂದಿದೆ. 'ದಾಸರು' ಒಂದು ವಿಶಿಷ್ಟ ಪಂಗಡಕ್ಕೆ ಸೇರುವಂತಹವರು. ತನ್ನದೇ ಆದ ಸಂಸ್ಕೃತಿಯೊಂದಿಗೆ ಪ್ರಾದೇಶಿಕ ಭಿನ್ನತೆಯಿಂದ ಕನ್ನಡ ನಾಡಿದಲ್ಲಿ ಬೆಳೆದು ಬಂದ ದಾಸರನ್ನು ಉತ್ತರ ಕರ್ನಾಟಕದಲ್ಲಿ ಪಾತರದವರು ಎಂದು ಕರೆಯುತ್ತಾರೆ. ದಕ್ಷಿಣ ಕರ್ನಾಟಕದಲ್ಲಿ ದಾಸರೆಂದೇ ಗುರುತಿಸುವುದುಂಟು.

ದಾಸರ ಮೂಲ :

ದಾಸರ ಮೂಲಪುರುಷ ಅಜಾಮಿಳನೆಂದು ಪ್ರತೀತಿ. ಅಜಾಮಿಳ ಕನ್ಯಾಕುಬ್ಜದಲ್ಲಿದ್ದ ಒಬ್ಬ ಬ್ರಾಹ್ಮಣ. ಅವನು ತಂದೆ-ತಾಯಿ, ಹೆಂಡತಿಯನ್ನು ಬಿಟ್ಟವನು. ಶೂದ್ರ ಹೆಣ್ಣಿನೊಂದಿಗೆ ಕೂಡಿಕೊಂಡು ಅನೇಕ ಮಕ್ಕಳನ್ನು ಹಡೆದನಂತೆ. ಆ ಮಕ್ಕಳೇ ದಾಸ ಕುಲದ ಮೂಲರೆಂದು ಹೇಳುತ್ತಾರೆ. ಕಂಚಿ ತಾತಾಚಾರ್ಯನೇ ತಮ್ಮ ಮೂಲಪುರುಷ ಎಂದು ಈ ಜನಾಂಗದವರು ಹೇಳಿಕೊಳ್ಳುತ್ತಾರೆ.

ಸಂಸ್ಕೃತದಲ್ಲಿ ದಾಸರನ್ನು ದಸ್ಯುಗಳೆಂದು ಕರೆಯುತ್ತಾರೆ. ಕ್ರೂಕ್ ಅವರು ದಾಸರನ್ನು ನಟನೆ (ನೃತ್ಯ) ಮಾಡುವವರೆಂದು ಹೇಳುವರು. ರಿಸ್ಲೆ ಅವರು ಇವರನ್ನು ಗುಡ್ಡಗಾಡು ಜನಾಂಗವೆಂದು ಕರೆದಿದ್ದಾರೆ. ದಾಸರದು ಅಲೆಮಾರಿ ಜನಾಂಗ. ಕಾಲಾನಂತರದಲ್ಲಿ ಒಂದೆಡೆ ನಿಂತು ಓಂದುಗಳೆಂದು ಕರೆಯಿಸಿಕೊಳ್ಳುತ್ತಾರೆ. ಎಚ್.ಎ. ಸ್ಟುವರ್ಟ್ ಅವರು ದಾಸರ ಮೂಲದ ಕುರಿತು ಈ ರೀತಿ ಹೇಳುತ್ತಾರೆ. 'ಉತ್ತರ ಜಿಲ್ಲೆಯೊಂದರಲ್ಲಿ ಶೂದ್ರನಾಖ್ಯಾತನಿದ್ದ. ಅವನಿಗೆ ಮಕ್ಕಳಿರಲಿಲ್ಲ. ತನಗೆ ಮಕ್ಕಳಾದರೆ ಒಬ್ಬನನ್ನು ದೇವರ ಸೇವೆಗೆ ಅರ್ಪಿಸುತ್ತೇನೆಂದು ಬೇಡಿಕೊಂಡ. ಮುಂದೆ ಅವನಿಗೆ ಅನೇಕ ಮಕ್ಕಳು ಹುಟ್ಟಿದರು. ಅದರಲ್ಲಿ ಒಬ್ಬನನ್ನು ದೇವರ ಸೇವೆಗೆಂದು ಒಪ್ಪಿಸಿದ. ಅಂದಿನಿಂದ ಅವನು ದೇವರ 'ದಾಸ' (ಸೇವಕ)ನಾದನು. ಹೀಗೆ ದಾಸನಾದವನು ತಂದೆಯ ಆಸ್ತಿಯಲ್ಲಿ ಪಾಲು ಕೇಳುವಂತಿಲ್ಲ. ದೇವಾಲಯದ ಆದಾಯದಲ್ಲಿಯೇ ಅವನು ಬದುಕಬೇಕಾಯಿತು. ಮುಂದೆ ಅವನ ಮಕ್ಕಳು ಪಿತ್ರಾರ್ಜಿತ ಆಸ್ತಿಯಲ್ಲಿ ಹಕ್ಕನ್ನು ಕಳೆದುಕೊಂಡು ಭಿಕ್ಷೆಯ ಮಾರ್ಗವನ್ನು ಅವಲಂಬಿಸಬೇಕಾಯಿತು. ಅವರೇ ಮುಂದೆ ದಾಸರಾದರೆಂದು ಸ್ಟುವರ್ಟ್ ಅವರ ಅಭಿಪ್ರಾಯ.

'ದಾಸರು ' ಯಾವುದೋ ಒಂದು ಜಾತಿಗೆ ಸೇರಿದವರಲ್ಲ. ಯಾವುದೇ ಜಾತಿಯವರು ದಾಸರಾಗಿರುವುದು ಕಂಡುಬರುತ್ತದೆ. ದೇವರ ಸೇವೆಗಾಗಿ ಹುಟ್ಟಿದವರು ಬರುಬರುತ್ತ ಕಲಾಸೇವಕರಾದರು.

ದಾಸರ ಪಂಗಡಗಳು :

ದಾಸರಲ್ಲಿ ಹಲವಾರು ಪಂಗಡಗಳಿವೆ. ಗಲ್ಲದಾಸರು, ಪ್ರೊಳ್ಳೆದಾಸರು, ತೆಲಗುದಾಸರು, ಗಂಡುದಾಸರು, ತಿರುಮಲದಾಸರು, ಬ್ಯಾಡದಾಸರು, ಹೊಲೆದಾಸರು, ದಂಡಿಗೆದಾಸರು, ಗರುಡಗಂಬದಾಸರು, ಡಂಗುಗಿದಾಸರು, ಕುಮಾರದಾಸರು, ಗೋಪಲಪತ್ತಿದಾಸರು, ದೊಂಬಿದಾಸರು, ಚೆನದಾಸರು, ಅರಿದಾಸರು, ದಾಸರಿಗಳು ಛತ್ರಿದಾಸರು ಎಂದು ಪಂಗಡಗಳುಂಟು.

ದಾಸರ ವೃತ್ತಿ:

ಗಲ್ಲದಾಸರು ಒಕ್ಕಲುತನ ವೃತ್ತಿಯವರು, ಬ್ಯಾಡದಾಸರು ದೀವಿಗೆ, ಗಂಟೆ, ಶಂಖ ಹಿಡಿದು ಭಿಕ್ಷೆ ಬೇಡಿ ಉಪಜೀವಿಸುವವರು. ಹೊಲೆದಾಸರು ಗೋಫಾಳಬುಟ್ಟಿಯನ್ನು ಹಿಡಿದುಕೊಂಡು ದೇವರ ಪದಗಳನ್ನು ಹಾಡುತ್ತ ಭಿಕ್ಷೆ ಬೇಡುವವರು. ತೆಲುಗುದಾಸರು ತಮ್ಮ ಹೆಂಗಸರಿಗೆ ಹಾಡು-ನಟನೆಯನ್ನು ಕಲಿಸಿ ಅದರಿಂದ ಉಪಜೀವಿಸುವವರು. ಗಂಡುದಾಸರು ತಮ್ಮ ಹೆಂಗಸರನ್ನು ಬಯಲಿಗೆ ತರದೆ ಗಂಡಸರಿಗೆ ಹೆಣ್ಣು ಸೋಗು ಹಾಕಿ ಆಟ ಮಾಡಿ ಅದರಿಂದ ಉಪಜೀವಿಸುವವರು. ಬ್ಯಾಡ ಮತ್ತು ಹೊಲದಾಸರು ಊರಿನ ಹನುಮಂತದೇವರ ಪೂಜೆಯ ಕಾಲಕ್ಕೆ ತಂಬೂರಿ ಬಾರಿಸುತ್ತ ಹಾಡುವವರು. ತಿರುಮಲದಾಸರು ರಾತ್ರಿ ಆಟ ಮಾಡುವರು. ಇವರ ಹೆಂಗಸರು ಪಾತರದವರ ಹಾಗೆ ನರ್ತನ-ಗಾಯನದಲ್ಲಿ ಜಾಣರು. ತೆಲುಗುದಾಸರು ಮೂರುನಾಮಗಳನ್ನು ಹಚ್ಚಿಕೊಂಡು ಕರದೀಪ, ಶಂಖ, ಜಾಗಟೆ ಹಿಡಿದುಕೊಂಡು ವೆಂಕಟರಮಣನ ಹೆಸರಿನಿಂದ ಭಿಕ್ಷೆ ಬೇಡುವವರು. ದಂಡಿಗದಾಸರು ಊರಿನ ಹನುಮಂತದೇವರ ಪೂಜಾರಿಗಳು. ದಂಡಿಗೆದಾಸರು ಹಗಲಿಗೆ ಗೋಪಾಳಬುಟ್ಟಿಯನ್ನು ಹಾಕಿಕೊಂಡು "ವೆಂಕಟರಮಣ ಗೋವಿಂದಾ ಗೋವಿಂದ" ಎಂದು ಭಿಕ್ಷೆ ಬೇಡುವರು. ದಾಸಗಳೆಲ್ಲ ವೈಷ್ಣವ ಗುರುವಿನಿಂದ ಮುದ್ರೆಯೊತ್ತಿಸಿ ಮನೆ ಮನೆಗೆ ಭಿಕ್ಷೆ ಬೇಡಿ ಉಪಜೀವಿಸುತ್ತಾರೆ. ದೊಂಬಿದಾಸರು ಏಕತಾರಿಯನ್ನು ಹಿಡಿದು ಹಾಡುತ್ತಾ ಭಿಕ್ಷೆ ಬೇಡುವರು. ಇವರು ಬಯಲಾಟಗಳನ್ನು ಕಟ್ಟಿ ಆಟವಾಡುತ್ತಿದ್ದರು. ದೊಂಬಿದಾಸರು ಹಾಡುವುದಕ್ಕೆ ಹೆಸರಾದವರು. ಅವರ ಕಂಠ ಮಧುರ. ಏಕತಾರಿಯನ್ನು ಹಿಡಿದು ಹಾಡಿಕೊಂಡು ಬರುವ ಇವರು ಪ್ರಸಿದ್ಧ ಜನಪದ ಕಲಾವಿದರು. ರಾಜಾ ಸತ್ಯವ್ರತ, ಶನಿಮಹಾತ್ಮೆ, ಸತ್ಯಹರಿಶ್ಚಂದ್ರ, ಮಾರ್ಕಂಡೇಯ,

ಸಾರಂಗಧರ, ಕೃಷ್ಣಪಾರಿಜಾತ, ಪ್ರೇಮ ಸತ್ಯಭೋಜ, ಗಿರಿಜಾಕಲ್ಯಾಣ, ಕರಿಬಂಟನ ಕಾಳಗ- ಇವು ಇವರ ಪ್ರಸಿದ್ಧ ಬಯಲಾಟಗಳು. ಇವರಾಡುವ 'ಗಂಗಿ-ಗೌರಿ' ಜಗಳ ಜನಪ್ರಿಯ ಬಯಲಾಟ. ಇವರು ವೇಷಗಾರರಂತೆ ದಮ್ಮಡಿ ಬಾರಿಸುತ್ತ ಏಕತಾರಿ ಮಿಡಿಯುತ್ತ ಅಭಿಮನ್ಯುವಿನ ಕತೆ, ರಾಮಲಕ್ಷ್ಮಣರ ಕತೆ, ಪಾಂಡವರ ಕತೆಗಳನ್ನು ಹೇಳುವರು. ಬಂಟರ ಹಾಡುಗಳನ್ನು ಕತೆಕಟ್ಟಿ ರಂಜನೀಯವಾಗಿ ಹಾಡುವ ಕಲೆಯಿಂದಲೂ ಇವರು ಪ್ರಸಿದ್ಧರು. ಸದ್ಯ ಇವರು ಬೆಂಗಳೂರು, ಕೋಲಾರ ತುಮಕೂರು ಜಿಲ್ಲೆಗಳಲ್ಲಿ ಅಧಿಕವಾಗಿ ಸಿಗುತ್ತಾರೆ.

ದಾಸರ ಮುಖ್ಯವಾದ ಕಸಬು ಶಂಖ, ಜಾಗಟೆ, ದಮ್ಮಡಿ, ಏಕತಾರಿ, ದೀಪ ಮೊದಲಾದವನ್ನು ಉಪಯೋಗಿಸಿಕೊಂಡು ಭಿಕ್ಷೆ ಬೇಡುವದು. ದಾಸರಲ್ಲಿ ಕೆಲವರು ದನದ ವ್ಯಾಪಾರ ಮಾಡುವವರಿದ್ದಾರೆ. ಕೆಲವರು ತಬಲಾ ಮುಂತಾದ ಚರ್ಮವಾದ್ಯಗಳನ್ನು ರಿಪೇರಿ ಮಾಡುವವರೂ ಇದ್ದಾರೆ. ಕೆಲವರು ಗಿಡಮೂಲಿಕೆಗಳಿಂದ ಔಷಧ ಕೊಡುತ್ತಾರೆ. ಹುಲ್ಲಿನ ಚಾಪೆ, ಹಣಿಗೆಗಳನ್ನು ಮಾರುತ್ತಾರೆ. ದಾಸರಾಟದಲ್ಲಿ ಬಗರಿ ಆಟ, ಜಾದೂ ಆಟಗಳನ್ನು ಕೆಲವರು ರೂಢಿಸಿಕೊಂಡಿದ್ದಾರೆ. ದಾಸರ ಹೆಣ್ಣುಮಕ್ಕಳು ಬರುವ ಆಮಂತ್ರಣ ಸ್ವೀಕರಿಸಿ ಆಟಗಳಲ್ಲಿ ಪಾತ್ರವಹಿಸುವವರೂ ಇದ್ದಾರೆ. ಇವರಿಗೆ ಪಾತರದವರು ಎಂದು ಕರೆಯಲಾಗುವುದು. ಈ ಪಾತರದವರ ಪರಂಪರೆ ಉತ್ತರ ಕರ್ನಾಟಕದಲ್ಲಿ ಬಹು ಸಂಖ್ಯೆಯಲ್ಲಿ ಕಾಣಿಸುತ್ತದೆ.

ಪಾತರದವರು :

ದೇವರ ಸೇವಾಕಾರ್ಯಕ್ಕೆ ನಿಂತ ಪುರುಷ ದಾಸ ; ಅದೇ ಕಾರ್ಯಕ್ಕೆ ನಿಂತ ಹೆಣ್ಣು ದೇವದಾಸಿ. ದೇವದಾಸಿಯರು ಮೊದಲಿನಿಂದಲೂ ನೃತ್ಯಗಾರ್ತಿಯರೆಂದು, ದೇವರ ಸೇವಕಿಯರೆಂದು ಹೆಸರುಗಳಿಸಿದ್ದಾರೆ. ಕರ್ನಾಟಕದಲ್ಲಿ ದೇವದಾಸಿಯರ ಇತಿಹಾಸ ಅತ್ಯಂತ ಹಳೆಯದು. ಕಾವ್ಯ ಹಾಗೂ ಕಲ್ಲಿನ ಮೇಲಿನ ಬರಹದಿಂದ ಇವರ ಇತಿಹಾಸ ಪ್ರಾಚೀನವೆಂಬುದು ತಿಳಿಯುತ್ತದೆ. ದೇವಾಲಯದ ಸೂಳೆ, ಪಾತ್ರದ ಸೂಳೆ, ಪಾತ್ರದವಳು ಎಂಬ ಪದಗಳು ದೇವದಾಸಿ ಅರ್ಥದಲ್ಲಿ ಬಳಕೆ ಆಗಿವೆ. ಪಾತ್ರ ಅಂದರೆ ನೃತ್ಯ .ಪಾತ್ರ/ ಪಾತರ, ಪಾತರದವಳು ಅಂದರೆ ನೃತ್ಯಗಾತಿ.

ದೇವರಿಗೆಂದು ಆಕಳು ಹೋರಿಗಳನ್ನು ಬಿಡುವ ರೂಢಿಯಿದೆ. ಅದಕ್ಕೆ ಗೂಳಿ, ಕಪಿಲಿ ಎಂದು ಕರೆಯುತ್ತಾರೆ ಹಾಗೆಯೇ ದೇವರಿಗೆ ಕನ್ಯೆಯರನ್ನು ಬಿಡುವ ಸಂಪ್ರದಾಯವಿತ್ತು. ಇವರಿಗೆ ದೇವದಾಸಿ(ಪಾತರದವರು) ಯರೆಂದು ಕರೆಯಲಾಗುತ್ತಿತ್ತು. ಪ್ರಾರಂಭದಲ್ಲಿ ದೇವಾಲಯದ ಪೂಜಾರಿಗಳು ಈ ಪದ್ಧತಿಯನ್ನು ವಿರೋಧಿಸಿದರೂ

ಅರಸರ ಒತ್ತಾಯಕ್ಕೆ ಮಣಿಯಬೇಕಾಯಿತು. ಮುಂದೆ ಇವರು ದೇವಾಲಯದ ಒಂದು ಭಾಗವಾದರು. ದೇವಾಲಯದ ಪೂಜಾರಿಯ ಸಹಾಯಕ ಕೆಲಸಗಾರರಾಗಿ, ಭಕ್ತಿಯಿಂದ ಬದುಕಿದವರು ದೇವದಾಸಿಯರು. ಇವರ ಉಪಜೀವನಕ್ಕಾಗಿ ಭೂಮಿಯನ್ನು ಇನಾಮಾಗಿ ಕೊಡಲಾಗುತ್ತಿತ್ತು.

ದೇವದಾಸಿಯರ ವಿವಾಹ ಮೊದಲಾದ ಸಂಪ್ರದಾಯಗಳು ಹಿಂದೂ ಧರ್ಮದಂತೆ ಇವೆ. ಹೆಣ್ಣು ಮೈನೆರೆದಾಗಲೇ ಅವಳನ್ನು ದೇವದಾಸಿಯನ್ನಾಗಿ ಮಾಡುವ ನಿಶ್ಚಿತಾರ್ಥದ ಕಾರ್ಯಗಳನ್ನು ಆ ದೇವರೆದುರೇ ಮಾಡುತ್ತಾರೆ. ಮುಂದೆ ದೊರೆಯನ್ನೋ ಒಬ್ಬ ಶ್ರೀಮಂತನನ್ನೊ ಹಿಡಿದು ಅವನಿಂದ ಲಗ್ನಕ್ಕೆ ಬೇಕಾಗುವ ಹಣ ಪಡೆದುಕೊಳ್ಳುತ್ತಾರೆ. ಸಾಂಕೇತಿಕವಾಗಿ ದೇವರ ಹೆಸರಿನ ಖಡ್ಗದೊಂದಿಗೆ ಅವಳ ಮದುವೆಯಾಗುತ್ತದೆ. ಇಲ್ಲಿ ದೇವದಾಸಿಯ ಗಂಡ ದೇವನೇ ಎಂಬ ನಂಬಿಕೆಯಿಂದ ಅವಳ ಮುತ್ತೈದೆತನಕ್ಕೆ ಹೆಚ್ಚಿನ ಬೆಲೆಯಿದೆ. ಊರಿನ ಪ್ರಮುಖ ಮದುವೆಗಳಿಗೆ ಇವಳೇ ತಾಳಿ ಪೋಣಿಸಿಕೊಡಬೇಕು. ಇವರು ತಮ್ಮ ಶೀಲ ಕಳೆದುಕೊಂಡರೂ ವ್ಯಭಿಚಾರವೆಂದು ತಿಳಿಯುತ್ತಿರಲಿಲ್ಲ. ಇನ್ನು ಕೆಲವು ಜನ ದೇವದಾಸಿಯರು ಬ್ರಹ್ಮಚಾರಿಣಿಯರಾಗಿಯೇ ಉಳಿದುಕೊಂಡ ಉದಾಹರಣೆ ಸಿಗುತ್ತವೆ.

ಬಸವಿಯರು ,ಪಾತರಬ್ಬೆವರು :

ಬಸವಿಯರೇ ಬೇರೆ, ದೇವದಾಸಿಯರೇ ಬೇರೆ, ಉಚ್ಚ ಕುಲದವರು ದೇವದಾಸಿ ಪದ್ಧತಿಯನ್ನು ಹುಟ್ಟಿಸಿದಂತೆ, ಕೆಳಕುಲದವರು 'ಬಸವಿ' ಪದ್ಧತಿಯನ್ನು ಹುಟ್ಟು ಹಾಕಿರಬಹುದು. ಈ ಬಸವಿ ಬಿಡುವ ಪದ್ಧತಿ ಕೆಳವರ್ಗದಲ್ಲಿ ದಟ್ಟವಾಗಿ ಕಾಣಿಸುತ್ತದೆ. ತಂದೆ -ತಾಯಿಗಳ ವೈಯಕ್ತಿಕ ಕಾರಣಕ್ಕೆ ಈ ಬಸವಿ ಪದ್ಧತಿ ನಮ್ಮಲ್ಲಿ ಹುಟ್ಟಿಕೊಂಡಿದೆ. ಹುಟ್ಟಿದ ಹೆಣ್ಣುಮಗುವಿಗೆ ರೋಗ ರುಜಿನಗಳಾದರೆ ಈ ಮಗು ಬದುಕಿದರೆ 'ನಿನಗೆ' ಬಿಡುವುದಾಗಿ ಬೇಡಿಕೊಳ್ಳುವರು. ಬೇಡಿಕೊಂಡಂತೆ ಬಿಡುವರು. ಆಶ್ಚರ್ಯವೆಂದರೆ ಗಂಡುಮಗುವಿಗೇನಾದರೂ ರೋಗ ರುಜಿನಗಳಾದರೆ, ಗಂಡು ಸಂತಾನ ಪಡೆಯಬೇಕಿದ್ದರೂ ಇದ್ದ ಹೆಣ್ಣು ಮಗುವನ್ನು 'ಬಸವಿ'ಯನ್ನಾಗಿಸಿದ ಉದಾಹರಣೆಗಳಿವೆ. ಇವಳು ವ್ಯಭಿಚಾರಿಯಾಗಿ ಮನೆತನದ ಆದಾಯದ ವ್ಯಕ್ತಿಯಾದಳು. ಸುಲಭ ಆದಾಯದ ಮಾರ್ಗವಾಗಿ ಈ ಪದ್ಧತಿ ಸಮಾಜದಲ್ಲಿ ಬೆಳೆದುಬಂದಿತು. ಅದಕ್ಕಾಗಿಯೇ 'ಬಸವಿ'ಯರನ್ನು ಕಸಬೆಯರು ಎಂದು ಕರೆಯುತ್ತಾರೆ. ದೇವದಾಸಿಯರು ಸೇವೆಗಾಗಿ ಬದುಕಿದವರು. ಬಸವಿಯರು ಗಳಿಕೆಗಾಗಿ ಬದುಕಿದವರು. ಕಲೆ ದೇವದಾಸಿಯರ ಉಸಿರು. ಬಸವಿಯರು ಕಲೆಯ ಗ್ರಂಥವಿಲ್ಲದವರು. ಯಾವುದೇ ಜಾತಿಯವರು ದೇವದಾಸಿಯರಾಗಬಹುದು. ಕೆಳವರ್ಗದವರು ಮಾತ್ರ ಬಸವಿಯರು. ದೇವದಾಸಿಯರ

(ಪಾತರದವರ) ಸಂಬಂಧ ಒಬ್ಬನ ಜೊತೆ. ಬಸವಿಯರ ಸಂಬಂಧ ಅನೇಕರ ಜೊತೆ . ಇಲ್ಲಿ ದೇವದಾಸಿಯರು (ಪಾತರದವರು) ಬೇರೆ, ಬಸವಿಯರು ಬೇರೆ ಬಸವಿಯರೇ ವೇಶ್ಯೆಯರಾಗಿ ದೇವದಾಸಿ ಪದ್ಧತಿಯ ವಿಕೃತರೂಪವಾಗಿ ತೋರುತ್ತಿರುವುದಾಗಲಿ, ಪರಿಗಣಿಸುತ್ತಿರುವುದಾಗಲಿ ತೀರ ತಪ್ಪು.

ಕಾಲ ಬದಲಾಯ್ತು; ದೇವರು, ಧರ್ಮದಲ್ಲಿ ನಂಬಿಕೆಯೂ ಕಡಿಮೆಯಾಯಿತು. ಕಲೆ ಕಲಾವಿದರಿಗೆ ಸ್ಥಾನವಿಲ್ಲದಾಯ್ತು. ದೇವಾಲಯಗಳ ಆದಾಯವೂ ನಿಂತಿತು. ಇನ್ನು ಕೆಲವು ದೇವಾಲಯಗಳ ಪೂಜೆಯೂ ನಿಂತಿತು. ಹೀಗಾಗಿ ದೇವದಾಸಿಯರ ಪೋಷಣೆ ನಿಂತು ಬದುಕು ಕಠಿಣವಾಯ್ತು. ದೇವದಾಸಿಯರನ್ನು ಸಮಾಜ ದುರುಪಯೋಗಪಡಿಸಿಕೊಂಡಿತು. ಅವರಿಗೂ ಬದುಕುವುದಕ್ಕೆ 'ಸೂಳೆ'ಗಾರಿಕೆ ಅನಿವಾರ್ಯವಾಯಿತು. ಆದರೆ ಕೆಲವರು ದೇವದಾಸಿ (ಪಾತರದವರು) ತಮ್ಮ ಮಡಿವಂತಿಕೆಯನ್ನು ಉಳಿಸಿಕೊಂಡು ಕಲೆಯನ್ನೆ ಆರಾಧಿಸಿ ಶ್ರೇಷ್ಠ ಸಂಗೀತಗಾರರಾಗಿದ್ದಾರೆ, ನಟರಾಗಿದ್ದಾರೆ.

ಪಾತರದವರು (ದೇವದಾಸಿಯರು) ಮೂಲತಃ ಸುಶೀಲರು. ಸಮಾಜದ ಕಣ್ಣಲ್ಲಿ ಸೂಳೆಯರಂತೆ ಕಂಡರೂ ಅವರು ಸೂಳೆಯರೆಂದೆನ್ನಿಸಿಕೊಳ್ಳದೆ ಬದುಕುತ್ತಿದ್ದಾರೆ. ಅವರಲ್ಲಿದ್ದ ನೃತ್ಯ ಸಂಗೀತ ಕಲೆ ಇನ್ನೂ ಸತ್ತಿಲ್ಲ. ಇಂದು ಅದಕ್ಕೆ ಸರಿಯಾದ ಪ್ರೋತ್ಸಾಹವಿಲ್ಲ. ಬದುಕು ಅನಿವಾರ್ಯವಾದಾಗ ಈ ಪಾತರದವರು ಇಟ್ಟುಕೊಂಡವನ ಜೊತೆ ನಿಷ್ಠೆಯಿಂದ ಬದುಕಿದ್ದಾರೆ. ಅವರು ವೇಶ್ಯೆಯರಂತಲ್ಲ. ಧರ್ಮದ ಬಲಿಪಶುಗಳಾದ ಈ ಒಂದು ವರ್ಗ ಸಮಾಜದಿಂದ ತೀರ ಕಡೆಗಣಿಸಲ್ಪಟ್ಟ ಗುಂಪಾಗಿ ಉಳಿದುಕೊಂಡಿರುವುದು ದುಃಖದ ಸಂಗತಿ. ಈ ಪಾತರದವರು ದಾಸರ ಒಂದು ಭಾಗವಾಗಿ ಕರ್ನಾಟಕದಲ್ಲಿ ಬೆಳೆದು ಬಂದಿದ್ದಾರೆ.

ದಾಸರ ಕಲೆ :

ದಾಸರು ಒಳ್ಳೆಯ ಕುಶಲ ಕಲೆಗಾರರು. ಹಾಡುಗಾರಿಕೆಯಲ್ಲಿ ಪ್ರವೀಣರು. ದಾಸರಾಟದಿಂದಲೇ ಕರ್ನಾಟಕದ ಬಯಲಾಟ ರೂಪುಗೊಂಡಿರುವ ಸಾಧ್ಯತೆಯಿದೆ. ಜಾನಪದ ರಂಗಭೂಮಿಯನ್ನು ಶ್ರೀಮಂತಗೊಳಿಸುವುದರಲ್ಲಿ ದಾಸರ ಪಾತ್ರ ದೊಡ್ಡದು. ವೃತ್ತಿರಂಗಭೂಮಿಯಲ್ಲಿ ಹೆಣ್ಣು ಪಾತ್ರ ಪರಿಚಯವಾದದ್ದೇ ಈ ಪಾತರದವರಿಂದ. ಇಂದಿಗೂ ಹಂಸನೂರು, ಇಲಕಲ್ಲು ಮುಂತಾದ ಕಡೆ ಪಾತರದವರು ಸಿಗುತ್ತಾರೆ. ದಾಸರಾಟದ ನೇರ ಪ್ರಭಾವ ಮಹಾರಾಷ್ಟ್ರದ ರಂಗಭೂಮಿಯ ಮೇಲಾಗಿ 'ತಮಾಷಾ' ಎಂಬ ಜಾನಪದ ರೂಪಕ ಪದ್ಧತಿ ಬೆಳೆಯಲು ಕಾರಣವಾಗಿದೆ. ಇದು ಅಭಿಮಾನದ

ಸಂಗತಿ . ದಾಸರ ಕಲೆ ಒಂದು ಕಾಲದಲ್ಲಿ ದೇವರ ಸೇವೆಗೆ ಮೀಸಲಾಯಿತು. ಕಾಲ ಬದಲಾದಂತೆ ಉಪಜೀವನದ ಮಾರ್ಗವಾಯಿತು. ಇಂದು ದಾಸರೂ ಇಲ್ಲ, ಕಲೆಯೂ ಇಲ್ಲವೆನ್ನುವಂತಾಗಿದೆ.

ದಾಸರ ವೇಷ :

ಶಂಖ, ಜಾಗಟೆ ,ಗಂಟೆ, ಭವನಾಶಿ, ಭಾಂಕಿ, ಗರುಡಗಂಬ, ಆಂಜನೇಯನ ಮೂರ್ತಿ ಇರುವ ಅಂಗೈಯಗಲದ ಹಿತ್ತಾಳೆ ಮೂರ್ತಿ ಇರುತ್ತವೆ. ತಲೆಯ ಮೇಲೆ ಕೆಂಪು ರುಮಾಲು, ಹಣೆಯ ಮೇಲೆ ಮೂರು ಗೂಟನಾಮಗಳು ದಾಸರ ಮುಖ್ಯ ಲಕ್ಷಣ. ಕೆಲವರು ಗೋಪಾಳ ಬುಟ್ಟಿಯನ್ನು ಹಿಡಿದಿರುತ್ತಾರೆ.

ದಾಸರ ಹೆಣ್ಣುಮಕ್ಕಳು ಹಿಂದೂ ಸ್ತ್ರೀಯರಂತೆ ಉಡುಪು ಧರಿಸುತ್ತಾರೆ. ಹಣೆಗೆ ಕುಂಕುಮ, ಕೈಗೆ ಕಾಜಿನ ಬಳೆ, ಕಾಲಲ್ಲಿ ಕಾಲುಂಗುರ ಹಾಕಿಕೊಳ್ಳುವರು. ಹಚ್ಚೆಬಟ್ಟನ್ನು ಇಟ್ಟುಕೊಳ್ಳುವರು. ಹಚ್ಚೆಬಟ್ಟಿನ ಚಿತ್ರಗಳು ಶಂಖ,ತುಳಸಿ, ರಥ,ಬಾಳೇಗಿಡ ಮುಂತಾದವು. ಅಂಗೈ ಮೇಲ್ಭಾಗ, ಹಣೆ, ತೋಳು, ಗಲ್ಲ ಹಾಗೂ ಗದ್ದ ಮುಂತಾದ ದೇಹಾಂಗಗಳ ಮೇಲೆ ಹಾಕಿಸಿಕೊಳ್ಳುವದುಂಟು. ನತ್ತು, ಕಾಲುಂಗುರ, ಕಾಲ್ಗಡಗ,ಡಾಬು,ತಾಳಿ ಆಭರಣಗಳನ್ನು ಹಾಕಿಕೊಳ್ಳುವರು.

ಆರನೆಯ ವಿಕ್ರಮಾದಿತ್ಯನ ಕೌಂಟಿಯ ಶಾಸನ

★ಹನುಮಾಕ್ಷಿ ಗೋಗಿ

ಗುಲ್ಬರ್ಗ ನಗರದಿಂದ ೧೭ ಕಿ.ಮೀ ದೂರದಲ್ಲಿರುವ ಫರಹತಾಬಾದದಿಂದ ಒಳಗೆ ಸುಮಾರು ೧೨ ಕಿ.ಮೀ. ಕ್ರಮಿಸಿದ ಮೇಲೆ ಭೀಮಾನದಿಯ ದಡದಲ್ಲಿರುವ ಕೌಂಟಿ ಮರಗಮ್ಮನೆಂದು ಕರೆಸಿಕೊಳ್ಳುವ ದೇವಿಯ ಗುಡಿಯ ಹಿಂದಿರುವ ಬಯಲುಭಾಗದಲ್ಲಿ ನಿಂತಿರುವ ಶಾಸನವೊಂದನ್ನು ಪ್ರಕಟಿಸುವುದು ಇಲ್ಲಿಯ ಉದ್ದೇಶ. ಇಂದು ಅಲ್ಲಿ ಯಾವುದೇ ಊರು-ಕೇರಿಗಳಿಲ್ಲದಿದ್ದರೂ ಹಿಂದೆ ಜನವಸತಿಯಿತ್ತು ಎಂಬುದರ ಕುರುಹುಗಳು ದೊರೆಯುತ್ತವೆ.

ಸುಮಾರು ೨ ೧/೨ ' x ೬' ಎತ್ತರದ ಕರಿಯ ಕಲ್ಲಿನ ಮೇಲೆ ಈ ಶಾಸನವನ್ನು ೧'' x ೧'' ಗಾತ್ರದ ಅಕ್ಷರಗಳಲ್ಲಿ ಕೆತ್ತಲಾಗಿದೆ. ಕಲ್ಲಿನ ಮೇಲ್ಭಾಗದ ೨' ಭಾಗದಲ್ಲಿ ಒಂದನೆಯ ಸ್ತರದಲ್ಲಿ ಬಸವಣ್ಣ-ಲಿಂಗ , ಸೂರ್ಯ-ಚಂದ್ರರಿದ್ದು, ಎರಡನೆಯ ಸ್ತರದಲ್ಲಿ ಖಡ್ಗ ಮತ್ತು ಆಕಳು-ಕರುಗಳ ಚಿತ್ರಗಳಿವೆ.

ಶಾಸನದ ೭-೮ನೆಯ ಸಾಲುಗಳಲ್ಲಿ ಬರುವ ''ಶ್ರೀ ಮಚ್ಚಾಳುಕ್ಯ ವಿಕ್ರಮ ವರ್ಷದ ೧೨ನೆಯ ಪ್ರಭವ ಸಂವತ್ಸರದ ವೈಶಾಖದಮವಾಸ್ಯೆ ಸೂರ್ಯಗ್ರಹಣ'' ಎಂಬ ಮಿತಿಯು ಕ್ರಿ.ಶ. ೧೦೮೭ನೆಯ ಸಾಲಿನ ಮೇ ೫ ಬುಧವಾರಕ್ಕೆ ಸರಿಹೊಂದುತ್ತದೆ.

ಕ.ಚಾ . ಅರಸು ತ್ರಿಭುವನಮಲ್ಲ ಆರನೆಯ ವಿಕ್ರಮಾದಿತ್ಯನು ಕಲ್ಯಾಣಪುರದಿಂದ ಆಳುತ್ತಿರುವಾಗ, ಆತನ ಮಹಾಮಂಡಳೇಶ್ವರ ಬಿಬ್ಬರಸನು ಭೀಮರಥಿಯ ದಡದ ಮೇಲಿರುವ ಕವಿಟಗೆಯ ಆಜ್ಜೇಶ್ವರ ದೇವರಿಗೆ ಬಿಟ್ಟ ಭೂದತ್ತಿಯನ್ನು ಈ ಶಾಸನ ವಿವರಿಸುತ್ತದೆ. ಶಾಸನದ ಪೂರ್ಣಪಾಠ ಕೆಳಗಿನಂತಿದೆ :

೧ ಸ್ವಸ್ತಿ ಸಮಸ್ತ ಭುವನಾಶ್ರಯಂ ಶ್ರೀಪೃಥ್ವೀವಲ್ಲಭಂ ಮಹಾರಾಜಾಧಿ
೨ ರಾಜಂ ಪರಮೇಸ್ವರ ಪರಮಭಟ್ಟಾರಕಂ ಸತ್ಯಾಶ್ರಯಕುಳತಿ
೩ ಳಕಂ ಚಾಳುಕ್ಯಾಭರಣಂ ಶ್ರೀಮತ್ರಿಭುವನಮಲ್ಲದೇವರ ವಿಜಯ
೪ ರಾಜ್ಯ ಮುತ್ತರೋತ್ತರಾಭಿವೃದ್ಧಿ ಪ್ರವರ್ದ್ಧಮಾನಮಾಚಂ

೫ ದ್ರಾರ್ಕ್ಕ ತಾರಂಬರಂ ಸಲುತ್ತಮಿರೆ ಕಲ್ಯಾಣಪೂರದ
೬ ನೆಲೆವೀಡಿನೊಳು ಸುಖಸಂಕಥಾ ವಿನೋದದಿಂ ರಾಜ್ಯಂಗೆಯ್ಯೆ
೭ ಶ್ರೀಮಚ್ಚಾಳುಕ್ಯ ವಿಕ್ರಮವರ್ಷದ ೧೨ನೆಯ ಪ್ರಭವಸಂವತ್ಸ
೮ ರದ ವೈಶಾಖದಮವಾಸ್ಯೆ ಸೂರ್ಯ್ಯಗ್ರಹಣ ನಿಮಿತ್ತದಿಂ
೯ ಸ್ವಸ್ತಿ ಸಮಧಿಗತ ಪಂಚಮಹಾಶಬ್ದ ಮಹಾಮಂಡಳೇಶ್ವರಂ ವಿಜಯಲ
೧೦ ಕ್ಷ್ಮೀಕಾನ್ತನ ಆನೆವೆಡಂಗಂ ಸಸ್ಯರಾಧೇಯಂ ಸೌಚಾಂಜನೇಯಂ ನೀತಿ
೧೧ ಚಾಣುಕ್ಯ ಪರೋಪಕಾರಮಾಚಾರಪಾರಾಯಣಂ ಚತುಸ್ಸಮ
೧೨ ಯಸಮುದ್ಧರಣ ಶ್ರೀಮತ್ತ್ರಿಭುವನಮಲ್ಲದೇವ ಪಾದಾಂ
೧೩ ಬೋಜಭ್ರಿಂಗಂ ಸಾಹಸೋತ್ತುಂಗಂ ನಾಮಾದಿ ಸಮಸ್ತ ಪ್ರಶಸ್ತಿ
೧೪ ಸಹಿತಂ ಶ್ರೀಮನ್ಮಹಾಮಂಡಳೇಶ್ವರಂ ಬಿಬ್ಬರಸರು. ಮಹಾ
೧೫ ನದಿ ಭೀಮರಥಿಯ ತಡಿಯ ಕವಿಟಗೆಯ ಆಜ್ಜೇಶ್ವ
೧೬ ರದೇವರ್ಗ್ಗೆ ನೈಷ್ಟಿಕಸ್ತಾನಮಾಗಿ ಸರ್ವ್ವನಮಸ್ಯದಿಂ ಧಾರಾಪೂ
೧೭ ರ್ವಕಂ ಮಾಡಿ ಬಿಟ್ಟ ಮತರು ೩॥ ಮಾದೇವರಾಯ್ತ ೨ ನೆಯ
೧೮ ನಿವೇಶಣದಗಲ ೧೮ ಕೈನೀಳ ೨೧ ತೋಂಟ ಮತ್ತ ೧ ಈ ಧರ್ಮ್ಮಮಂ ಪ್ರ
೧೯ ತಿಪಾಳಿಸಿದಂಗನಂತ ಪುಣ್ಯಮಕ್ಕುಮೀ ಧರ್ಮಕ್ಕಾವನೋರ್ವ್ವನಪಾ
೨೦ ಯಮಂ ಚಿನ್ತಿಸಿ, ಕುಳಿಪಂಗೆ ಭೀಮರಥಿನದಿಯೆನಿತಂ ಪರಿದು ದನಿ
೨೧ ತಱಿಕೊಮಿಣ್ಡ ಜೀವಧನಮುಮಂ ಬ್ರಾಹ್ಮಣಮುಮಂ ವಾಣರಾಸಿಯೆ
೨೨ ವಿದೆ ಗೆಯ್ದ ಪಾಪಮಕ್ಕುಂ ಸಾಮಾನ್ಯೋಯಂ ಧರ್ಮ್ಮಸೇತುರ್ನ್ನೃಪಾಣಾಂ
೨೩ ಕಾಲೇ ಕಾಲೇ ಪಾಲನಿಯೋ ಭವದ್ಭಿಃ ಸರ್ವ್ವಾನೇಯಾನ್ಭಾಗಿನಃ
ಪಾರ್ತ್ಥಿವೇಂದ್ರಾ
೨೪ ಭೂಯೋ ಭೂಯೋ ಯಾಚತೇ ರಾಮಚಂದ್ರಃ
೨೫ ಸ್ವದತ್ತಂ ಪರದತ್ತಂ ವಾಯೋಹರೇತಿ ವಸುಂಧರಾಂ
ಸಷ್ಟಿರ್ವ್ವರ್ಷಸಹಸ್ರಾಣಿವಿಷ್ಟಾ
೨೬ ಯಾಂ ಜಾಯತೀ ಕ್ರಿಮಿಃ॥ ಬಹುಭಿರ್ವ್ವಸುಧಾ ದತ್ತಾರಾಜಾಭಿಃ
೨೭ ಸಗರಾಜಭಿಃ ಯಸ್ಯಯಸ್ಯಯದಾ ಭೂಮಿತಸ್ಯ
೨೮ ತಸ್ಯ ತಥಾ ಫಳಂ ॥

ಕೃಷ್ಣಮೂರ್ತಿ ಪುರಾಣಿಕರ ಕಾದಂಬರಿಗಳು

★ ಸಿ.ಕೆ.ನಾವಲಗಿ

ಗದ್ಯಕಾವ್ಯ ಎನ್ನಿಸಿಕೊಂಡ ಕಾದಂಬರಿ ಪ್ರಕಾರ, ಲಲಿತ ಸಾಹಿತ್ಯ ಪ್ರಕಾರಗಳಲ್ಲಿಯೇ ಅತ್ಯಂತ ಜನಪ್ರಿಯವಾದುದು. ಪ್ರಾಥಮಿಕ ಅಭ್ಯಾಸಿಗೆ, ಅದರಲ್ಲಿಯೂ ಗೃಹಿಣಿಗೆ ಕಾದಂಬರಿ ತುಂಬ ರಂಜನೆಯನ್ನುಂಟು ಮಾಡುತ್ತ ಬಂದಿರುವುದೇ ಇದರ ಜನಪ್ರಿಯತೆಗಳಲ್ಲಿ ಒಂದು.

ಚರಿತ್ರೆಯ ದೃಷ್ಟಿಯಿಂದ ಕನ್ನಡ ಕಾದಂಬರಿ ಆರಂಭವಾದುದು ೧೮೭೦ರ ಸುಮಾರಿಗೆ. ಆರಂಭದ ಕೃತಿಗಳೆಂದು ಹೇಳಲಾದ ಯಾದವಕಟ್ಟಿಗನ ''ಕಲಾವತಿ ಪರಿಣಯ''(೧೮೧೫), ಕೆಂಪು ನಾರಾಯಣನ 'ಮುದ್ರಾಮಂಜೂಷ' (೧೮೨೪) ಮುಂತಾದವು ಸ್ವತಂತ್ರ ಕಾದಂಬರಿಗಳು. ಇವು ಆರಂಭದ ಕೃತಿಗಳಾದುದರಿಂದಲೋ ಏನೋ, ಇವುಗಳಲ್ಲಿ ಕಾದಂಬರಿಯ ಪೂರ್ಣಸ್ವರೂಪ ಕಾಣದೇ ಹೋಯಿತು. ಈ ಅವಧಿಯಲ್ಲಿ ಕನ್ನಡ ಸಾಹಿತ್ಯಕ್ಕೆ ಇಂಗ್ಲೀಷಿನ ಸಂಪರ್ಕ ಇರಲಿಲ್ಲ. ಕನ್ನಡದಲ್ಲಿ ಕಾದಂಬರಿಯ ಸ್ವಪ್ನರೂಪ ಮೂಡಿದ್ದು,ಬಂಗಾಲಿ ಮತ್ತು ಮರಾಠಿ ಅನುವಾದಗಳಿಂದ.

ಕರ್ನಾಟಕದಲ್ಲಿ ಬಿ.ವೆಂಕಟಾಚಾರ್ಯರು, 'ಬಂಕಿಮಚಂದ್ರ'ರ ಬಂಗಾಲಿ ಕಾದಂಬರಿಗಳನ್ನು ಕನ್ನಡಕ್ಕೆ ಅನುವಾದಿಸಿದಂತೆ, ಉತ್ತರ ಕರ್ನಾಟಕದಲ್ಲಿ ಗಳಗನಾಥರು 'ಹರಿನಾರಾಯಣ ಆಪ್ಟೆ' ಅವರ ಮರಾಠಿ ಕಾದಂಬರಿಗಳನ್ನು ಕನ್ನಡಿಸಿದರು. ತದನಂತರ ದಕ್ಷಿಣ ಕನ್ನಡ ಜಿಲ್ಲೆಯಿಂದ ಸ್ವತಂತ್ರ, ಸಾಮಾಜಿಕ-ಕಾದಂಬರಿಗಳು ಹೊರಬರತೊಡಗಿದವು. ದಕ್ಷಿಣ ಕನ್ನಡ ಜಿಲ್ಲೆಯ ಗುಲ್ವಾಡಿ ಅಣ್ಣರಾಯರು 'ರೋಹಿಣಿ'(೧೮೯೯), ಅದೇ ವರ್ಷ ಗುಲ್ವಾಡಿ ವೆಂಕಟರಾಯರು 'ಇಂದಿರಾಬಾಯಿ' ಅಥವಾ ಸದ್ಧರ್ಮವಿಜಯ, ೧೯೦೫ರಲ್ಲಿ ಬೋಳಾರ ಬಾಬುರಾಯರು 'ವಾಗ್ದೇವಿ' ಇವೇ ಮೊದಲಾದ ಸ್ವತಂತ್ರ ಕೃತಿಗಳನ್ನು ಕನ್ನಡಕ್ಕೆ ನೀಡಿದರು. ೧೯೧೫ರಲ್ಲಿ ಎಂ.ಎಸ್.ಪುಟ್ಟಣ್ಣ ಅವರು 'ಮಾಡಿದ್ದುಣ್ಣೋ ಮಹಾರಾಯ' ಮತ್ತು 'ಮುಸುಕು ತೆಗೆಯೇ ಮಾಯಾಂಗನೆ' ಸ್ವತಂತ್ರ ಕಾದಂಬರಿಗಳನ್ನು ರಚಿಸಿದರೆ, ಕೆರೂರು ವಾಸುದೇವಾಚಾರ್ಯರು 'ಇಂದಿರೆ'ಯನ್ನು ಬರೆದರು.

ಮುಂದೆ (೧೯೨೦-೩೦) ಆನಂದಕಂದರ 'ಸುದರ್ಶನ', 'ದೇವುಡು ಅವರ 'ಅಂತರಂಗ' ಕಾದಂಬರಿಗಳೊಂದಿಗೆ ಆಧುನಿಕ ಸಾಮಾಜಿಕ ಕಾದಂಬರಿಗಳು ಪ್ರಾರಂಭವಾದವು. ಇದೇ ಕಾಲಾವಧಿಯಲ್ಲಿ ಶಿವರಾಮ ಕಾರಂತರ 'ಚೋಮನದುಡಿ', ರಂ.ಶ್ರೀಮುಗಳಿಯವರ 'ಬಾಳುರಿ', ಅ.ನ.ಕೃ. ರವರ 'ಉದಯರಾಗ', ಶ್ರೀರಂಗರ 'ವಿಶ್ವಾಮಿತ್ರನ ಸೃಷ್ಟಿ', ವಿ.ಕೃ.ಗೋಕಾಕರ 'ಇಜ್ಜೋಡು', ಜಿ.ಬಿ.ಜೋಶಿ ಅವರ 'ಧರ್ಮಸೆರೆ', ಕುವೆಂಪು ಅವರ 'ಕಾನೂರು ಸುಬ್ಬಮ್ಮ ಹೆಗ್ಗಡತಿ'ಗಳು ಪ್ರಕಟಗೊಂಡು ಕನ್ನಡದಲ್ಲಿ ಕಾದಂಬರಿಯ 'ನವೋದಯ'ವೇ ಆರಂಭವಾಯಿತು. ಇವರೆಲ್ಲ ಉನ್ನತಮಟ್ಟದ ವಿಪುಲ ಕಾದಂಬರಿಗಳನ್ನು ನೀಡಿದ್ದರಿಂದ, ಕನ್ನಡ ಕಾದಂಬರಿ ಕ್ಷೇತ್ರ ಇಂಬುಗೊಂಡು, ಹೊಸ ಹಾದಿಯೇ ನಿರ್ಮಾಣವಾಯಿತು.

ಇವರಲ್ಲಿ ಅನೇಕರು ಸಾಹಿತ್ಯದ ಬೇರೆ ಬೇರೆ ಪ್ರಕಾರಗಳ ಸೃಷ್ಟಿಗೂ ಕೈಯಿಕ್ಕಿದರು. ಕಾದಂಬರಿಗಳನ್ನೇ ತಮ್ಮ ಮುಖ್ಯ ವ್ಯವಸಾಯವನ್ನಾಗಿ ಮಾಡಿಕೊಂಡ ಪ್ರಮುಖರೆಂದರೆ, ಅ.ನ.ಕೃ, ತ.ರಾ.ಸು, ಬಸವರಾಜ ಕಟ್ಟೀಮನಿ ಹಾಗೂ ಕೃಷ್ಣಮೂರ್ತಿ ಪುರಾಣಿಕರು.

ಶ್ರೀಕೃಷ್ಣಮೂರ್ತಿ ಪುರಾಣಿಕರು ಕಾದಂಬರಿ ರಂಗ ಪ್ರವೇಶಿಸಿದ್ದು ತೀರ ಆಕಸ್ಮಿಕ. ಪುರಾಣಿಕರದು ಮೂಲತಃ ಕವಿಹೃದಯ. ತಮ್ಮನ್ನು ಈ ಕಾವ್ಯಲೋಕದಿಂದ ಕಾದಂಬರಿ ಲೋಕಕ್ಕೆ ಕರೆದೊಯ್ದವರು ಶಿವರಾಮ ಕಾರಂತರೇ ಎನ್ನುತ್ತಾರೆ ಪುರಾಣಿಕರು. ಶಿವರಾಮ ಕಾರಂತರು ಗೋಕಾಕಕ್ಕೆ ನಾಡಹಬ್ಬದ ನಿಮಿತ್ತ ಉಪನ್ಯಾಸ ನೀಡಲು ಬಂದವರು, ಪುರಾಣಿಕರ ಮನೆಯಲ್ಲಿ ಉಳಿದಿದ್ದರು. ಆ ಪ್ರಸಂಗದಲ್ಲಿ ಪುರಾಣಿಕರು ತಾವು ಹೊಸದಾಗಿ ರಚಿಸಿದ 'ಅವತಾರ' ಎಂಬ ಕವಿತೆಯನ್ನು ಅವರ ಮುಂದೆ ಓದಿದರು. ಕವಿತೆಯನ್ನು ಕಾರಂತರು ಮೆಚ್ಚಿಕೊಂಡರಾದರೂ ಇನ್ನೂ ಹೆಚ್ಚಿನ ಜನಕ್ಕೆ ನಿಮ್ಮ ಸಾಹಿತ್ಯ ಅರ್ಥವಾಗಬೇಕಾದರೆ, ನೀವು ಹೇಳಬೇಕಾದುದನ್ನು ಕಾದಂಬರಿಯ ಮೂಲಕ ಹೇಳಬೇಕು. ಅದು ಜನಸಾಮಾನ್ಯರಿಗೆ ಅರ್ಥವಾಗುತ್ತದೆ. ಎಂದು ತಿಳಿಸಿದಾಗ ಇದು ಪುರಾಣಿಕರಿಗೆ ಸರಿ ಎನಿಸಿ, ಕಾದಂಬರಿ ಬರೆಯತೊಡಗಿದರು. ಕಾವ್ಯದಿಂದ ಕಾದಂಬರಿಯೆಡೆಗೆ ಅವರ ದೃಷ್ಟಿಯನ್ನು ತಿರುಗಿಸಿದ ಈ ಪ್ರಸಂಗವೇ ಪುರಾಣಿಕರನ್ನು ಜನಪ್ರಿಯ ಕಾದಂಬರಿಕಾರನನ್ನಾಗಿಸಲು ಪ್ರಮುಖ ಕಾರಣವಾಯಿತು.

೧೯೪೮ ರಲ್ಲಿ ಪುರಾಣಿಕರ ಪ್ರಥಮ ಕಾದಂಬರಿಯಾಗಿ ''ಮುಗಿಲ ಮಲ್ಲಿಗೆ'' ಹೊರಬಂದಂದಿನಿಂದ ಇಂದಿನವರೆಗೆ ಸುಮಾರು ೬೦ರಷ್ಟು ಕಾದಂಬರಿಗಳು ಅವರಿಂದ ಪ್ರಕಟಗೊಂಡಿವೆ. ಸುಮಾರು ೩೫ ವರುಷಗಳವರೆಗೆ (೧೯೩೬-೭೧) ಗೋಕಾಕದ ಪ್ರೌಢ ಶಾಲೆಯೊಂದರಲ್ಲಿ ಶಿಕ್ಷಕ ವೃತ್ತಿಯಲ್ಲಿದ್ದು, ಪ್ರವೃತ್ತಿಯಿಂದ ಸಾಹಿತಿಯಾಗಿ, ಸಾಹಿತ್ಯದ ಕಾವ್ಯ, ಕಥೆ, ಗೀತ ನಾಟಕ, ಕಾದಂಬರಿ ಮೊದಲಾದ ಪ್ರಕಾರಗಳಲ್ಲಿ ಕೃತಿಗಳು ೧೨೦ ಕೃತಿಗಳನ್ನು ಕನ್ನಡ ನಾಡಿಗೆ ನೀಡಿದ್ದು ಪುರಾಣಿಕರ ಸಾಹಿತ್ಯ ಸಾಮರ್ಥ್ಯಕ್ಕೆ ಹೆಗ್ಗುರುತಾಗಿದೆ.

ಪುರಾಣಿಕರ ಕಾದಂಬರಿ ಕೃಷಿ ಆರಂಭಗೊಂಡಂದಿನಿಂದ, ನಿರಂತರವಾಗಿ ಸಾಗಿ, ಒಂದರ ಮೇಲೊಂದರಂತೆ ಕಾದಂಬರಿಗಳು ೬೦ರವರೆಗೂ ಹೊರಬರುತ್ತಲೇ ಹೋದುದು, ಅವರಿಗೆ ಕಾದಂಬರಿ ಕ್ಷೇತ್ರದಲ್ಲಿರುವ ಪರಿಶ್ರಮ ಮತ್ತು ಅವರ ರಚನೆಯ ಕಲಾಕೌಶಲ್ಯಕ್ಕೆ ನಿದರ್ಶನವಾಗಿದೆ. ಇವರ ಎಲ್ಲ ಕಾದಂಬರಿಗಳ ಮೂಲ ಆಶಯ, ಸಾಮಾಜಿಕ, ಕೌಟುಂಬಿಕ ಸಮಸ್ಯೆಗಳ ಕಲಾತ್ಮಕ ಚಿತ್ರಣವೇ ಆಗಿದೆ. ಒಂದು ಸಣ್ಣ ಸಂಗತಿಯನ್ನು ಕಥೆ ಮಾಡುವ ಕಥೆಯನ್ನೇ ಹಿಗ್ಗಿಸಿ ಕಾದಂಬರಿ ಹೊಸೆಯುವ ಕಲಾತ್ಮಕತೆ ಪುರಾಣಿಕರಿಗೆ ಕರತಲಾಮಲಕ. ಇವರ ಮೊದಲ ಕಾದಂಬರಿ-'ಮುಗಿಲ ಮಲ್ಲಿಗೆ'ಯಿಂದ ಕೊನೆಯ ಕಾದಂಬರಿಯವರೆಗೂ ಕಂಡು ಬರುವುದು ಸಾಮಾಜಿಕ ಕೌಟುಂಬಿಕ ಪರಿಸರದ ಸುಂದರ ಚಿತ್ರಣವೇ, ಹಳ್ಳಿ ಪಟ್ಟಣಗಳ ಮಧ್ಯಮ ವರ್ಗದವರ ಸಮಸ್ಯೆಗಳನ್ನು ಕೌಟುಂಬಿಕ ಪರಿಸರದ ಅವರಲ್ಲಿಯೂ ಸ್ತ್ರೀವರ್ಗದ ಸಮಸ್ಯೆಗಳನ್ನು ತುಂಬಿ ಆತ್ಮೀಯವಾಗಿ ಮತ್ತು ಮಾರ್ಮಿಕವಾಗಿ ಚಿತ್ರಿಸಿದ್ದಾರೆ. ಪುರಾಣಿಕರು ಸ್ವತಃ ಮಧ್ಯಮ ವರ್ಗದ ಸಿಹಿ-ಕಹಿ ಅನುಭವಗಳನ್ನುಂಡವರಾದುದರಿಂದ, ತಮ್ಮ ಬಹುತೇಕ ಕಾದಂಬರಿಗಳಲ್ಲಿ ಅದನ್ನೇ ಪಡಿಮೂಡಿಸಲು ಪ್ರಯತ್ನಿಸಿದ್ದಾರೆ. ಪುರಾಣಿಕರು ಉತ್ತರ ಕರ್ನಾಟಕದ ಬಿಜಾಪುರ ಹಾಗೂ ಬೆಳಗಾವಿ ಜಿಲ್ಲೆಯ ಸುತ್ತಮುತ್ತಲಿನ ಮಧ್ಯಮವರ್ಗದ ಬದುಕಿನ ಏರು-ಪೇರು, ಅಂಕು-ಡೊಂಕು, ಸಿರಿತನ-ಬಡತನ, ಉನ್ನತಿ -ಅವನತಿ, ಹಕ್ಕುಗಳಿಗಾಗಿ ಬಡಿದಾಟ-ಹೊಡೆದಾಟ, ವರದಕ್ಷಿಣೆಯ ಸಮಸ್ಯೆಗಳನ್ನು ಒಂದೊಂದು ಕಾದಂಬರಿಯಲ್ಲಿ, ಎಳೆ ಎಳೆಯಾಗಿ ವಿಶ್ಲೇಷಿಸಿದ್ದಾರೆ. ತನ್ನ ಜನ ಮೆಚ್ಚಿದುದನ್ನು, ಮೆಚ್ಚಬಹುದಾದುದನ್ನು ಪುರಾಣಿಕರು ತಮ್ಮೆಲ್ಲ ಕಾದಂಬರಿಗಳಲ್ಲಿ ನೀಡುವ ಪ್ರಯತ್ನ ಮಾಡಿದ್ದಾರೆ. ಹಾಗಾಗಿ, ಅವರ ಕಾದಂಬರಿಗಳು ಮಧ್ಯಮ ವರ್ಗದವರನ್ನು ಮತ್ತು ಸ್ತ್ರೀಯರನ್ನು ಹೆಚ್ಚು ಆಕರ್ಷಿಸಿವೆ, ಸೆರೆಹಿಡಿದಿವೆ. ಇದು ಪುರಾಣಿಕರ ಜನಪ್ರಿಯತೆಯ ಗುಟ್ಟು ಆಗಿದೆ.

'ತುಂಬಿದ ಮನೆ', 'ಬರಿದ ಭೂಮಿ', ಹಸಿರುನೆಲ ' ಕಾದಂಬರಿಗಳು ಪುರಾಣಿಕರ ಜನ್ಮಸ್ಥಳವಾದ ಬೀಳಗಿ ತಾಲ್ಲೂಕಿನ ಬವಣೆಯ ಕಥಾ ಮಾಲಿಕೆಯಾಗಿದೆ. ಗೌಡರ ಮನೆಯ ಸಮಸ್ಯೆ ಇಲ್ಲಿದೆ. ಈ ವತನದಾರ ಮನೆತನದಲ್ಲಿ ಕುಟುಂಬದ ಐಕ್ಯತೆಯನ್ನು ಕಾಪಾಡಿಕೊಂಡು ಬರುವ ಕಷ್ಟದ ಪರಿಸ್ಥಿತಿಯ ದಾರುಣ ಚಿತ್ರವಿದೆ ಇಲ್ಲಿ. ಅವಿಭಕ್ತ ಕುಟುಂಬಗಳ ಅಳಿವನ್ನು ಪುರಾಣಿಕರು ವಿಶ್ಲೇಷಿಸಿದ್ದಾರೆ. ಇಲ್ಲಿಯ ಪಾತ್ರಗಳಲ್ಲಿ ಸಜೀವತೆ ಇರುವುದರಿಂದ, ಕಾದಂಬರಿ ತೊಡಕಿಲ್ಲದೆ ವಾಸ್ತವಿಕತೆಯಲ್ಲಿ ಬೆಳೆದು ನಿಂತಿದೆ.

'ರಂಗರೋಹಿಣಿ', 'ಬಿಂಕದ ಸಿಂಗಾರಿ', 'ಕಹಿಜೇನು', 'ಹೆಣ್ಣುಜೀವ' ಈ ನಾಲ್ಕು ಕಾದಂಬರಿಗಳ ಕಥಾವಸ್ತುವಿನ ಹಂದರ ಒಂದೇ ಆಗಿದೆ. ರಾಷ್ಟ್ರದ ಉನ್ನತಿಗೆ ಜೀವನಾಡಿ ಹಾಗೂ ಸಾಮಾಜಿಕ ಆಧಾರಸ್ತಂಭಗಳಾಗಬೇಕಾದ ವಿದ್ಯಾರ್ಥಿಗಳ ಹೊಣೆಗೇಡಿತನ, ಸಂಸ್ಕೃತಿ ಪರಂಪರೆಗಳಿಗೆ ವ್ಯತಿರಿಕ್ತವಾದ ಆಧುನಿಕ-ವಿದ್ಯಾರ್ಥಿಜೀವನದ ಲಾಸ್ಯ

ವ್ಯಾಮೋಹಗಳು ಈ ಕೃತಿಗಳಲ್ಲಿ ಜೀವತಳೆದಿವೆ. ಇಲ್ಲಿಯ ನಾಲ್ಕು ಕಾದಂಬರಿಗಳಲ್ಲಿ ಬರುವ ರಂಗನ ಪಾತ್ರ ಗಾಂಧೀಜಿಯವರ ಆದರ್ಶವನ್ನು ಪ್ರತಿಬಿಂಬಿಸುವಂತಿದೆ. ಇವು ಬದುಕಿನ ಕಠೋರ ನಗ್ನಸತ್ಯವನ್ನು ಬಿತ್ತರಿಸುವುದರಿಂದ ಓದಲು ಕುತೂಹಲಕಾರಿಯಾಗಿವೆ.

'ಹೇಮಂತನ ಮಗಳು' 'ಹೇಮಲತೆ', ಕೊನ್ನಾರ ಕಿಂಕಣಿ, ಈ ಮೂರು ಕಾದಂಬರಿಗಳು ಒಂದೇ ಕಥಾವಸ್ತುವಿನವು. 'ಹೇಮಂತನ ಮಗಳು' ಕಾದಂಬರಿಯ ದ್ವಿತೀಯ ಭಾಗವೇ 'ಹೇಮಲತೆ'. ಕಲಾವಿದನ ಜೀವನ, ಹೆಣ್ಣಿನ ವಿವಿಧ ಮುಖಗಳ ಪರಿಚಯದ ಚಿತ್ರಣ ಇದರಲ್ಲಿದೆ. 'ಕಲಾವಿದನು ಅಂತರಂಗ ಸೌಂದರ್ಯವನ್ನು ಕಾಣುತ್ತಾನಲ್ಲದೆ, ಬಹಿರಂಗ ಸೌಂದರ್ಯವನ್ನಲ್ಲ , ಹೀಗೆ ಕಲಾವಿದನ ಹಾಗೂ ಶಿಲ್ಪಕಲೆಯ ವಿಮರ್ಶೆಯನ್ನು ಪುರಾಣಿಕರು ತಮ್ಮದೇ ಕಾವ್ಯಮಯ ಕೋಮಲ ಶೈಲಿಯಲ್ಲಿ ಇಲ್ಲಿ ವಿಶ್ಲೇಷಿಸಿದ್ದಾರೆ. ಪುರಾಣಿಕರು 'ಒಂದಾದರೂ ಬೃಹತ್ ಕಾದಂಬರಿಯನ್ನು ಬರೆಯಬೇಕಾಗಿತ್ತು, ಎಂದು ವಿಮರ್ಶಕರು ಗೊಣಗಬಹುದು. ಆದರೆ ಒಂದೇ ಕಥೆಯ ಹಂದರದ ಮೇಲೆ, ಇಂಥ ಹಲವಾರು ಕಾದಂಬರಿಗಳನ್ನು ಹೆಣೆದುದು ಶ್ರೀ ಪುರಾಣಿಕರ ಬೃಹತ್ ಕಾದಂಬರಿಯ ಬೃಹತ್ ದೃಷ್ಟಿಯೇ.

'ಮಣ್ಣಿನ ಮಗಳು' ಪುರಾಣಿಕರ ಅತ್ಯುತ್ತಮ ಕಾದಂಬರಿಗಳಲ್ಲಿ ಒಂದು, ಇದು ರಾಜ್ಯ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ವಿಜೇತ ಕೃತಿ. ಬಿಜಾಪುರ ಜಿಲ್ಲೆಯ ಬರಗಾಲದ ಭೀಕರತೆಯನ್ನು ತುಂಬ ನೈಜವಾಗಿ ಇದರಲ್ಲಿ ಚಿತ್ರಿಸಲಾಗಿದೆ. ಮಳೆಯಿಲ್ಲದೆ ಬಿರುಕುಬಿಟ್ಟ ಭೂಮಿ, ನೀರಿಗೆ ಬಾಯ್ದೆರೆದಾಗ ರೈತ ಪಡುವ ಬವಣೆ, ಸಿರಿವಂತ ರೈತ ಹಾಗೂ ಶಾನುಭೋಗರಿಂದ ನಡೆಯುವ ಹಿಂಸೆ-ಶೋಷಣೆಗಳು ಇಲ್ಲಿ ಜೀವಂತವಾಗಿ ಮೂಡಿಬಂದಿವೆ.

'ಮದುವೆಯ ಹಾಡು' ವೈವಾಹಿಕ ಹೆಣ್ಣಿನ ಬದುಕಿನ ಅಸಹಾಯಕತೆಯ ಕಣ್ಣೀರಿನ ಕಥೆಯಾದರೆ, 'ಮನಸೋತ ಮನದನ್ನೆ' ವಿಧವಾ ವಿವಾಹ ಸಮಸ್ಯೆಯ ಮೇಲೆ ಬೆಳಕು ಚೆಲ್ಲುತ್ತದೆ. ಇಲ್ಲಿಯೂ ಹೆಣ್ಣಿನ ಕಣ್ಣೀರು ಕಡಲಾಗಿ ಹರಿದಿದೆ. ಇಲ್ಲಿಯ ಹೆಣ್ಣಿನ ಬದುಕಿನ ಬಣ್ಣ, ಕಥೆಯ ಉದ್ದಕ್ಕೂ ಕರುಣೆಯನ್ನುಂಟು ಮಾಡುತ್ತದೆ. ಭಾರತೀಯ ಸಂಸ್ಕೃತಿಯ ಆದರ್ಶನಾರಿಯ ಪ್ರತಿನಿಧಿಯಾಗಿ ಚಿತ್ರಿತಗೊಂಡಿದ್ದಾಳೆ. 'ಭಾಗೀರಥಿ', 'ಬನದಹುಣ್ಣಿಮೆ' ಕಾದಂಬರಿಯಲ್ಲಿ ಧರ್ಮಬೀರು ಜನಗಳ ಬದುಕು ಬಾದಾಮಿಯ ಬನಶಂಕರಿ ಪರಿಸರದಲ್ಲಿ ಮೂಡಿ ಬಂದಿದೆ. 'ಬಾಗೀರಥಿ' 'ಬನದ ಹುಣ್ಣಿಮೆ' ಮತ್ತು 'ಮದುವೆ ಹಾಡು'ಗಳಲ್ಲಿ ಗಂಡಹೆಂಡಿರ, ತಾಯಿಮಕ್ಕಳ, ಅಣ್ಣ-ತಮ್ಮಂದಿರ, ಅತ್ತೆ-ಮಾವ ತಾಯಿ-ತಂದೆ ಇವರೆಲ್ಲರ ಜೀವನದ ಸರಪಳಿ, ಅದರಿಂದ ಆಗಬಹುದಾದ ಪರಿಣಾಮ ಬಹಳ ಸುಂದರವಾಗಿ ನಿರೂಪಿತವಾಗಿದೆ.

ಹೆಸರೇ ಸೂಚಿಸುವಂತೆ 'ವೇಷಧಾರಿ' ಕಾದಂಬರಿ, ಸಮಾಜದಲ್ಲಿ ವಿವಿಧ ವೇಷ ತೊಟ್ಟು ಬದುಕಿನ ಮೌಲ್ಯಗಳನ್ನು, ಆದರ್ಶಗಳನ್ನು ಹಾಳು ಮಾಡುತ್ತಿರುವ ವ್ಯಕ್ತಿಗಳ ಚಿತ್ರಣವೇ ಆಗಿದೆ. ನಮ್ಮ ಸಮಾಜದಲ್ಲಿರುವ ವೇಷಧಾರಿಗಳಿಗೆ, ಇದು ಕನ್ನಡಿ ಹಿಡಿದಿದೆ. ಪುರಾಣಿಕರು ತಮ್ಮ ದೀರ್ಘಕಾಲದ ಶಿಕ್ಷಣ ರಂಗದ ಅನುಭವಗಳು ಹಾಗೂ ಶೈಕ್ಷಣಿಕ ಸಮಸ್ಯೆಗಳನ್ನು, ಜೊತೆಗೆ ಅಂತರ್ಜಾತೀಯ ವಿವಾಹದ ಬಗೆಗೂ 'ತೆರೆದ ಕಣ್ಣು' ಕಾದಂಬರಿಯಲ್ಲಿ ವಿವರಿಸಿದ್ದಾರೆ. 'ತೆರೆದ ಕಣ್ಣು' ಶಿಕ್ಷಕರ ಜೀವನದ ಚಿತ್ರ, ಅಂತರ್ಜಾತೀಯ ವಿವಾಹದ ಸಮಸ್ಯೆ, ಸಂಸ್ಥೆ ಸ್ಥಾಪನೆಯ ಮೇಲೆ ಬೆಳಕು ಬೀರಬಲ್ಲ ಒಂದು ಹೃದಯಸ್ಪರ್ಶಿ ಕಾದಂಬರಿ. ಇದೇ ಬಗೆಯ ವಿಜಾತೀಯ ವಿವಾಹದ ಸಮಸ್ಯೆ ಕುರಿತಾದ ಪುರಾಣಿಕರ ಜನಪ್ರಿಯ, ಯಶಸ್ವಿ ಕಾದಂಬರಿ 'ಹಾಲುಕೆನೆ', ಮಧ್ಯಮವರ್ಗದ ಬ್ರಾಹ್ಮಣ ಹಾಗೂ ವೀರಶೈವ ಸಂಪ್ರದಾಯ ಮನೆತನಗಳ ರಕ್ತ ಸಂಬಂಧ ಚಿತ್ರಣ ಈ ಕಾದಂಬರಿಯಲ್ಲಿ ಅಚ್ಚುಕಟ್ಟಾಗಿ ಒಡಮೂಡಿದೆ. ಕನ್ನಡ ಕಾದಂಬರಿಗಳಲ್ಲಿ ಬಾಲಕರ ಜೀವನಚಿತ್ರ ಅಪರೂಪ, ವಿರಳ, ಮಕ್ಕಳ ಮನಸ್ಸನ್ನು 'ಹಾಲುಕೆನೆ' ಯಲ್ಲಿ ಚೆನ್ನಾಗಿ ಚಿತ್ರಿಸಿದ್ದಾರೆ.

ಪುರಾಣಿಕರ ಕಾದಂಬರಿಗಳನ್ನು ಉದ್ದಕ್ಕೂ ಅವಲೋಕಿಸಿದರೆ, ಹೆಣ್ಣಿನ ಕಷ್ಟದ ನಾನಾ ಮುಖಗಳ ದರ್ಶನವಾಗುತ್ತದೆ. ನಾನಾ ಕಷ್ಟಗಳನ್ನು ಸಹಿಸಿಯೂ ಹೆಣ್ಣು ಆದರ್ಶವನ್ನೇ ಬಾಳಬೇಕು. 'ಧರ್ಮ ದೇವತೆ'ಯಲ್ಲಿಯೂ ಕೂಡ ಭಾರತೀಯ ಹೆಣ್ಣಿನ ಆದರ್ಶವನ್ನೇ ನೋಡುತ್ತೇವೆ. ಸ್ತ್ರೀಜೀವನದ ಕಷ್ಟ-ಸುಖಗಳ ವರ್ಣನೆಯೊಂದಿಗೆ ಅವರ ಆದರ್ಶವನ್ನೂ ವರ್ಣಿಸುವುದು ಪುರಾಣಿಕರ ಕಾದಂಬರಿಗಳ ವೈಶಿಷ್ಟ್ಯಗಳಲ್ಲೊಂದಾಗಿದೆ. ಇದೇ ಆಶಯದ ಇವರ ಇನ್ನೊಂದು ಕಾದಂಬರಿ 'ಕುಲವಧು', ಇದರಲ್ಲಿ ವರದಕ್ಷಿಣೆ ಸಮಸ್ಯೆಯೊಂದು ನವೀನವಾದುದು.

ಆಸ್ಪತ್ರೆ, ವೈದ್ಯರು, ನರ್ಸಗಳು ಹಾಗೂ ಕಾಯಿಲೆಗಳ ಸುತ್ತ ಹೆಣೆದ ಕಾದಂಬರಿ 'ಕಲ್ಯಾಣಧಾಮ'. ಕರ್ಮಯೋಗಿ ಹಾಗೂ ಕಾಯಕ ನಿಷ್ಠೆಯ ಡಾ॥ ಕಲ್ಯಾಣರಾಯರ ಚಿತ್ರ ಒಂದೆಡೆಯಾದರೆ, ಕೆಲವು ಖಾಸಗಿ ವೈದ್ಯರು ರೋಗಿಗಳಿಂದ ವೃಥಾ ಹಣದ ಸುಲಿಗೆ ಮಾಡುವ ಚಿತ್ರ ಇನ್ನೊಂದೆಡೆ ಜೀವಂತವಾಗಿ ಮೂಡಿದೆ. ವೈದ್ಯರು-ನರ್ಸಗಳಿಗೆ ಆದರ್ಶದ ಪಾಠ ಕಲಿಸುತ್ತದೆ. 'ಕಲ್ಯಾಣಧಾಮ', ''ಅಣ್ಣನ ಹೆಂಡತಿ''ಯಲ್ಲಿ ಅತ್ತಿಗೆಯ ರಾಕ್ಷಸೀಪ್ರವೃತ್ತಿ ಹೆಣ್ಣಿನ ಮತ್ತೊಂದು ಮುಖವನ್ನು ತೆರೆದು ತೋರಿಸುತ್ತದೆ. ಹಾಗೆಯೇ ''ಕವಲುದಾರಿ''ಯಲ್ಲಿ ಹೆಣ್ಣಿನ ಒಳ್ಳೆಯ ಮತ್ತು ಒಳ್ಳೆಯದಲ್ಲದ ಈ ದ್ವಿಮುಖಗಳನ್ನು ಕಾಣಬಹುದು ಮತ್ತು ಬಡತನದಲ್ಲಿ ನರಳುತ್ತಿದ್ದ ತಂದೆ ತಾಯಿಗಳಿಗೆ, ಸುಖವನ್ನುಂಟು ಮಾಡುವುದಾಗಿ ಧೀರಸಂಕಲ್ಪತಾಳಿದ ಬಡ ''ಸಾಂಬ'' ಅಧಿಕಾರದ ದಾಹದಿಂದ, ತನ್ನ ಆದರ್ಶಗಳನ್ನೆಲ್ಲ ಮಣ್ಣುಪಾಲು ಮಾಡಿ, ತಂದೆ ತಾಯಿಗಳನ್ನು ಹೊರಗಟ್ಟಿದ ಕಥಾಚಿತ್ರ '' ಕವಲು ದಾರಿ''ಯಲ್ಲಿ ಸೊಗಸಾಗಿ ಮೂಡಿ ಬಂದಿದೆ.

ಓರ್ವ ಹುಚ್ಚನ ಹಿನ್ನೆಲೆಯಲ್ಲಿ ಮೂಡಿಬಂದ ಕೃತಿ 'ದೇವರಕೂಸು', ಇಲ್ಲಿ ಭಿಕ್ಷುಕ ಹಾಗೂ ದಾನ ನೀಡುವವರ ಚಿತ್ರಣ ಸೊಗಸಾಗಿ ಮೂಡಿದೆ. ಇಲ್ಲಿ ವಿರುಪಾಕ್ಷಿಯ ಬೆಳವಣಿಗೆಯ ವಿವಿಧ ಸ್ತರಗಳನ್ನು ವಿಸ್ತರಿಸುವ ಈ ಕಾದಂಬರಿಯಲ್ಲಿ ವೀರಶೈವ ಧಾರ್ಮಿಕ ಸಂಪ್ರದಾಯಗಳು 'ಕರಡಿಮಜಲು', ಗುಗ್ಗಳ ಸಮಾರಂಭ ಜಾತ್ರೆ-ಉತ್ಸವಗಳು ತುಂಬ ನೈಜವಾಗಿ ಮೂಡಿಬಂದಿವೆ. ಪ್ರಾಚೀನ ಪದ್ಧತಿಗಳೂ ಚೆನ್ನಾಗಿ ಚಿತ್ರಿತವಾಗಿವೆ.

ಅತ್ತೆ ಸೊಸೆಯರ ನಡುವಿನ ಸಂಬಂಧದ ಚಿತ್ರಣವೇ 'ಹೊಸಬಾಳು' ಕೃತಿ. ಅತ್ತೆಯ ಕ್ರೌರ್ಯ, ಕಿರುಕುಳಗಳ ನೋವಿನಲ್ಲಿಯೇ, ಮೌನಿಯಾಗಿಯೇ ನಲಿವನ್ನು ಕಂಡ ಸಾಹಿತಿಯ ಪತ್ನಿ ತಾರಾ, ತನ್ನ ಬದುಕಿನಲ್ಲಿ ಕಲಂಕ ಬಾರದಂತೆ ಆದರ್ಶ ದಾಂಪತ್ಯ ಕಾಪಾಡಿಕೊಂಡು ಬಂದ ಆದರ್ಶ ಗೃಹಿಣಿಯಾಗಿ ಮೆಚ್ಚುಗೆಗೆ ಪಾತ್ರಳಾಗುತ್ತಾಳೆ. ಈ ಕಾದಂಬರಿಯಲ್ಲಿ ಅತ್ತೆ-ಸೊಸೆಯರಿರುವ ಸಂಸಾರದ ವಿವರಣೆಯ ಜೊತೆಗೆ, ಒಬ್ಬ ಸಾಹಿತಿಯ ಚಿತ್ರಣವನ್ನು ತುಂಬ ಮನಂಬಗುವಂತೆ ಕಟ್ಟಿ ಕೊಟ್ಟಿದ್ದಾರೆ ಲೇಖಕ ಪುರಾಣಿಕರು.

'ಕನ್ಯಾಮಣಿ', 'ಗಂಧದ ಬಳ್ಳಿ,' 'ಪಾವನಗಂಗಾ' ಮೊದಲಾದ ಕಾದಂಬರಿಗಳೂ ಕೂಡ ವಿವಾಹ ಸಮಸ್ಯೆ, ಧಾರ್ಮಿಕ ಕ್ಷೇತ್ರಗಳಲ್ಲಿಯ ಸುಲಿಗೆ, ಹೆಣ್ಣಿನ ಆದರ್ಶಗಳ ಕಡೆಗೇ ಬೆರಳು ಮಾಡುತ್ತವೆ.

ದೇಶವನ್ನುದ್ಧರಿಸುವ ಹೆಸರಿನಲ್ಲಿ, ಅಧಿಕಾರ ಲಾಲಸೆಯಿಂದ ಸಮಸ್ಯೆಗಳನ್ನು ಸೃಷ್ಟಿಸಿ, ನಾಡಿನ ಅಧೋಗತಿಗೆ ಕಾರಣರಾಗುವ ಸ್ವಾರ್ಥ-ಸೋಗಿನ, ನಯವಂಚಕ ರಾಜಕಾರಣಿಗಳನ್ನು ಅವರ ರಾಜಕೀಯವನ್ನು ನಿಷ್ಠುರವಾಗಿ ಚಿತ್ರಿಸಿದ್ದಾರೆ. ತಮ್ಮ 'ರಮಾರಮಣ' ಮತ್ತು 'ಕಾಂಚನ ಕಸ್ತೂರಿ'ಯಂಥ ಕೃತಿಗಳಲ್ಲಿ ಪುರಾಣಿಕರು.

ಇಲ್ಲಿ ''ಸಂತಾನ'' ''ಹೆಣ್ಣು'' ''ಗಯ್ಯಾಳಿಗರತಿ'' ಯಲ್ಲಿಯ ಕಥೆ 'ಮಧುರವೀಣೆ'ಯಲ್ಲಿ ಹರಿದು ಬಂದು ನೆಲೆನಿಂತಿದೆ. ಈ ಕೃತಿಗಳಲ್ಲಿ ಬದುಕಿನ ಅನಂತ ಮುಖಗಳ ಚಿತ್ರಣವಿದೆ.

'ಕಣ್ಣುತುಂಬಿದ ಕರುಣೆ', 'ಮಾತಿನಮಲ್ಲ' ಇವು ಕೂಡ ಬದುಕಿನ ಮೌಲ್ಯವನ್ನೇ ಬಿಂಬಿಸುತ್ತಿವೆ. ದಾನಶೀಲಗುಣವೂ ಒಮ್ಮೊಮ್ಮೆ ಶಾಪವಾಗಬಲ್ಲುದೆಂದು ''ಹಾಲುಂಡ ತವರು'' ಕಾದಂಬರಿಯುಲ್ಲಿ ಚಿತ್ರಣಗೊಂಡಿದೆ. ಇಲ್ಲಿ ಜನಪದ ಜೀವನ ತುಂಬ ಸೊಗಸಾಗಿ ಮೂಡಿದೆ.

''ಬದುಕು ಬೆಳದಿಂಗಳು'' ಕಾದಂಬರಿಯಲ್ಲಿ, ಹಣದ ಪ್ರಭಾವಕ್ಕೆ ಒಳಗಾದ ಸ್ವತಂತ್ರ ಆಲೋಚನೆಯ ನಿಷ್ಪನಡೆವಳಿಕೆಯ ಯುವಕನ ಆದರ್ಶಗಳು ಗಾಳಿ ಪಾಲಾಗುವ ಕಠೋರ ಸತ್ಯವನ್ನು ಕಾಣುತ್ತೇವೆ.

ಬಡತನದಲ್ಲಿ ಹುಟ್ಟಿ ಬೆಳೆದ, ಹಿಂದುಳಿದ ವರ್ಗದವರೂ ಕೂಡ ಆಧುನಿಕ ಶಿಕ್ಷಣದ ಪ್ರಭಾವದಿಂದ ಮಾನವತೆಯನ್ನು ಗಾಳಿಗೆ ತೂರಿಬಿಡುವ ಪ್ರಸಂಗಗಳನ್ನು ಸಮಾಜದಲ್ಲಿ ಕಾಣುತ್ತೇವೆ. ಕಲಿತ ಕೊರವನೊಬ್ಬ, ತನ್ನ ತಂದೆಯನ್ನೇ ಕೀಳಾಗಿ ಕಾಣುವ ಅಮಾನವೀಯ ಚಿತ್ರ 'ಸನಾದಿ ಅಪ್ಪಣ್ಣ' ಕಾದಂಬರಿಯಲ್ಲಿ ಹೃದಯಂಗಮವಾಗಿ ಚಿತ್ರಣಗೊಂಡಿದೆ.

ಮುಗ್ಧ ಅಸಹಾಯಕರನ್ನು ವಂಚಿಸುವ ಸಂಗತಿ 'ಅನಂತಸೀಮಾ'ದಲ್ಲಿ ವರ್ಣಿತವಾದರೆ, ಪರಿಸ್ಥಿತಿಯ ಕೂಸಾದ ಅಸಹಾಯಕ ಭಿಕ್ಷುಕರು ಕೂಡ, ಅವಕಾಶ ದೊರೆತರೆ ಅವರು ತಮ್ಮ ಪ್ರತಿಭೆಯ ಪ್ರದರ್ಶನ ಮಾಡಬಲ್ಲರೆಂಬ ಸಂದೇಶ ''ದೇವ ಸಂತಾನ''ದಲ್ಲಿದೆ. ''ಮಂಗಲಾಕ್ಷತೆ'' ವರದಕ್ಷಿಣೆಯ ಮತ್ತೊಂದು ಮುಖದ ಸಮಸ್ಯೆಯನ್ನು ಚಿತ್ರಿಸುವ ಕಾದಂಬರಿ.

ಕಪಟ ಸ್ವಾಮಿಗಳು, ಧರ್ಮ ಹಾಗೂ ದೇವರ ಹೆಸರಿನಲ್ಲಿ ಸಮಾಜದ ಸರಳ ಜೀವಿಗಳನ್ನು ಮೋಸಗೊಳಿಸುವ, ಶೋಷಿಸುವ ಚಿತ್ರಣ 'ಧರ್ಮಪರಾಯಣ'ದಲ್ಲಿದೆ. ವಾರದಮನೆಯ ಬ್ರಾಹ್ಮಣನೊಬ್ಬನನ್ನು ಯಶಸ್ವೀ ರೈತನನ್ನಾಗಿ ಮಾಡಿದ ಕಥೆಯೇ ''ಬೆವರಿನಬೆಲೆ'' ಕಾದಂಬರಿ. ವಾರದ ಮನೆಯ ಬ್ರಾಹ್ಮಣನನ್ನೂ ಅದರಿಂದ ಮುಕ್ತಗೊಳಿಸುವುದೇ, ಪುರಾಣಿಕರ ಇಲ್ಲಿಯ ಉದ್ದೇಶವಾಗಿದೆ. (ಶಾಲೆ ಕಲಿಯುವ ದಿನಗಳಲ್ಲಿ ಪುರಾಣಿಕರೂ ವಾರದಮನೆಯ ಬ್ರಾಹ್ಮಣರಾಗಿದ್ದರು.)

'ಸವಿತಾ ಸತ್ಯವತಿ'ಯ, ಕಲ್ಯಾಣಧಾಮದ ಮತ್ತೊಂದು ಮುಖ. ಎರಡರ ಕತೆ ಒಂದೇಯಾದರೂ ಚಿತ್ರಣ ಬೇರೆ ಬೇರೆ . ಪುರಾಣಿಕರ ದೃಷ್ಟಿಯಲ್ಲಿ ಜೀವನದ ರೀತಿಯೇ ಅರಿಕೆ. ಅದುವೇ ಜೀವನ ಪಥದಲ್ಲಿ ದಾರಿದೀಪ ಇದು ಗೊತ್ತಿಲ್ಲದೆ ಸಾಗಿಸುವ ಜೀವನ ಕುರುಡನ ದಾರಿಯೇ ಎಂಬುದರ ಹೂರಣವೇ 'ಸವಿತಾ ಸತ್ಯವತಿ'. ಒಂದು ಸಮಾಜದ ಕಟ್ಟು ಪಾಡುಗಳು, ಸಂಕುಚಿತ ಮನೋಭಾವನೆಗಳು ಅಜ್ಞಾನ ಮೊದಲಾದುವು ಜೀವಿಯ ಬದುಕನ್ನು ಕಂಗೆಡಿಸುತ್ತವೆ. ಕಂಗೆಟ್ಟ ಪರಿಸ್ಥಿತಿಯಲ್ಲಿ ಒಂದು ಜೀವ ಕಮರಿದರೆ, ಮತ್ತೊಂದು ಆ ಪರಿಸ್ಥಿತಿಯನ್ನು ಧೈರ್ಯದಿಂದ ಎದುರಿಸಿ ಅರಳಬಹುದು. ಇಲ್ಲಿ ಸೋಲು ಗೆಲುವು ಮುಖ್ಯವಲ್ಲ. ಬದುಕಿನ ಸಾಧನೆ ಮುಖ್ಯ. ಸಾಧನೆಗಾಗಿ ಹೋರಾಟ ಅನಿವಾರ್ಯ. ಆ ಹೋರಾಟದಲ್ಲಿಯೇ ಬಾಳಿನ ಸಾರ್ಥಕತೆ ಇದೆ ಎಂಬುದರ ಚಿತ್ರಣವೇ

'ಮಂಜುಳಾ' ಕಾದಂಬರಿಯದು. ವ್ಯಕ್ತಿಯ ಆ ಮೂಲಕ ಸಮಾಜದ ಪ್ರಗತಿಯನ್ನು ಸಾಧಿಸುವ ವ್ಯಕ್ತಿಗೆ, ಅನುವಂಶಿಕ ಶಕ್ತಿಯಾಗಬೇಕೆಂಬುದನ್ನು 'ಹಬ್ಬಿದ ಬಳ್ಳಿ'ಯಲ್ಲಿ ಕಾಣುತ್ತೇವೆ. ನಿಸ್ವಾರ್ಥಮೂರ್ತಿ ವಿಶ್ವೇಶ್ವರಭಟ್ಟರ ಪುಣ್ಯರಕ್ತವು ಅವರ ಮಕ್ಕಳು-ಮೊಮ್ಮಕ್ಕಳಲ್ಲಿ ಹರಿದು, 'ಗಂಗನಹಳ್ಳಿಯನ್ನು ಉದ್ಧರಿಸಿತು' ವಿಶ್ವೇಶ್ವರ ಭಟ್ಟರ ಈ ನಿಸ್ವಾರ್ಥ ಬಳ್ಳಿಯೇ ಮುಂದಿನ ದಿನಗಳಲ್ಲಿ 'ಹಬ್ಬದ ಬಳ್ಳಿ'ಯಾಗಿ ಪ್ರತಿಬಿಂಬಿತವಾದುದನ್ನು 'ಹಬ್ಬಿದ ಬಳ್ಳಿ'ಯಲ್ಲಿ ಲೇಖಕರು ಸೊಗಸಾಗಿ ಚಿತ್ರಿಸಿದ್ದಾರೆ.

ಊರ ಗೌಡನಿಂದ ತಮ್ಮ ಮೇಲೆ ನಡೆದ ಅನ್ಯಾಯವನ್ನು ಪ್ರತಿಭಟನೆಯ ಮೂಲಕ ಸರಿಪಡಿಸಲು ಹಳ್ಳಿಯ ಹೆಣ್ಣುಮಕ್ಕಳು ಮುಂದಾದ ಕಥೆಯೇ 'ಮಂದಾರ ಮಂದಾಕಿನಿ'. ಹಳ್ಳಿಯ ಮಂದಾರ-ಮಂದಾಕಿನಿಗಳೆಂದರೆ ಬಂಗಾರಿ ಮತ್ತು ಮತರವ್ವ. ಗಂಡಿನ ಅನ್ಯಾಯದ ವಿರುದ್ಧವಾಗಿ ಹೋರಾಡುವ ಬಂಗಾರವ್ವ (ಮಂದಾರ)ನ ದಿಟ್ಟತನ, ವೈರಿಯ ಹೆಂಡತಿಯಲ್ಲಿ ಮಂದಾಕಿನಿ ಇರಿಸಿದ ಅವ್ಯಾಜ್ಯ ಪ್ರೇಮ ಇವು ಓದುಗರಿಗೆ ಕುತೂಹಲವನ್ನುಂಟು ಮಾಡುವ ಅಂಶಗಳು. ಗೌಡನ ಕೈಯಲ್ಲಿ ಸಿಕ್ಕ ಆಸ್ತಿಯನ್ನು ವಶಪಡಿಸಿಕೊಳ್ಳುವಲ್ಲಿ ಹೆಣ್ಣುಮಕ್ಕಳು ಕೊನೆಗೆ ಜಯಶೀಲರಾಗುತ್ತಾರೆ. ಒಟ್ಟಿನಲ್ಲಿ ಒಲಿದರೆ ನಾರಿ, ಮುನಿದರೆ ಮಾರಿ (ಬಂಗಾರವ್ವ) ಎಂಬ ಸಾಂಪ್ರದಾಯಿಕ ಸಂದೇಶವನ್ನು ಸಾರುವಂತಿದೆ ಪ್ರಸ್ತುತ ಕಾದಂಬರಿ. ಹಳ್ಳಿಯ ಕರಡಿಮಜಲು, ಭಜಂತ್ರಿ, ಗಂಟೆ, ಕಾಳೆ, ಮೊದಲಾದ ಸಾಂಪ್ರದಾಯಿಕ ವಾದ್ಯಗಳನ್ನು ಸನ್ನಿವೇಶಕ್ಕನುಗುಣವಾಗಿ ಪುರಾಣಿಕರು ಬಳಿಸಿಕೊಂಡಿದ್ದಾರೆ.

ಗೋವೆಯ ಎರಡು ವಿಭಿನ್ನ ಮನೋಧರ್ಮದ ಹೆಣ್ಣುಗಳ ಕಥೆಯೇ 'ಹಸಿರು ತೋರಣ'. ಈರ್ವರಲ್ಲಿ ಓರ್ವಳು ಜೀವನವನ್ನು ಪ್ರೀತಿಸಿದಳು, ಇನ್ನೋರ್ವಳು ಜೀವನವೇ ತನ್ನನ್ನು ಪ್ರೀತಿಸಬೇಕೆಂದು ಬಯಸಿದವಳು. ಹರೆಯದ ಆಟದಲ್ಲಿ ವಿವೇಕದ ಅಂಕುಶ ಹೆಣ್ಣಿಗೆ ಅವಶ್ಯಕ. ಈ ವಿವೇಕಗಳ ಕಣ್ಣುಮುಚ್ಚಾಲೆಯಲ್ಲಿ ಕಣ್ಣುತೆರೆದವಳು ಒಬ್ಬಳು, ಪಿಳುಕಿಸಿದವಳು ಇನ್ನೊಬ್ಬಳು. ಈ ಇಬ್ಬರನ್ನೂ ತೂಗಿ ನೋಡುವುದೇ ಕತೆಗಾರನ ಇಲ್ಲಿಯ ಗುರಿಯಾಗಿದೆ.

'ಕೆನೆಯಾಯಿತು ಹಾಲು' ಅಥವಾ 'ಪ್ರಿಯಾರಾಧನೆ'ಯ ಕಥಾನಾಯಕಿ 'ರಾಧಾ' ತನ್ನ ರಮಣನ ಜೀವಕ್ಕೆ ತನ್ನ ಅಣ್ಣನಿಂದ ಗಂಡಾಂತರವಿದೆಯೆಂದು ಬಗೆದು ತನ್ನ ಭವಿಷ್ಯವನ್ನು ತಾನೇ ರೂಪಿಸಿಕೊಳ್ಳಲು ೧೪ನೇ ವಯಸ್ಸಿನಲ್ಲಿಯೇ ಮನೆಯನ್ನು ತ್ಯಜಿಸುತ್ತಾಳೆ. ತನ್ನ ಜೀವನದ ಹಾಲು ಕೆನೆಗಟ್ಟುವವರೆಗೂ ಕುದಿಸಿಯೇ ಕುದಿಸುತ್ತಾಳೆ. ಹೀಗೆ ರಾಧಾಳ ಜೀವನದ ಹಾಲು ಕೆನೆಯಾದ ಕಥೆಯೇ ''ಕೆನೆಯಾಯಿತು ಹಾಲು''. ಗೋಕಾವಿ ನಾಡಿನ ಗ್ರಾಮೀಣ ಹಿನ್ನೆಲೆಯನ್ನೊಳಗೊಂಡ ಕಾದಂಬರಿ, ಸಾವಂತ್ರಿ. ಸಾವಂತ್ರಿ ಚೆಲುವಯ್ಯರ ಜೀವನದ ಕಥೆಯೇ ಈ ಕಾದಂಬರಿಯ ಕಥಾವಸ್ತು. ನಿಜವಾದ

ತ್ಯಾಗ ನಾಗರಿಕರದಲ್ಲ. ಹಳ್ಳಿಗರದು ಎಂಬುದನ್ನು ಸಾವಂತ್ರಿ ಪಾತ್ರ ಬಿಂಬಿಸುತ್ತಿದೆ. ಹೆಣ್ಣುಮಕ್ಕಳ ದುರಂತದ ಕಥೆಯನ್ನು ವಿವರಿಸುವ ಮತ್ತೊಂದು ಕೃತಿ 'ಸ್ವಪ್ನ ಚಿತ್ರ' ದೇಶದ ಅದರಲ್ಲಿಯೂ ಕೇರಳದ ಸುಂದರ ತರುಣಿಯರನ್ನು ಮೋಸದಿಂದ ಪರದೇಶಕ್ಕೆ ಮಾರುವ ಪಾದ್ರಿಗಳೂ, ಹಳ್ಳಿಯ ರೂಪವತಿಯರನ್ನು ವಂಚಿಸಿ, ಹಾರಿಸಿಕೊಂಡು ಹೋಗಿ ಪಟ್ಟಣದ ವೇಶ್ಯಾವಾಟಿಕೆಗಳಿಗೆ ತಳ್ಳಿ ಅವರ ದುರಂತದಲ್ಲಿ ತಮ್ಮ ಹೊಟ್ಟೆ ಹೊರೆದುಕೊಳ್ಳುವ ದಲ್ಲಾಳಿಗಳೇ ಮೂಲಪ್ರೇರಣೆ ಈ ಕಾದಂಬರಿಗೆ. ಪರರ ಹೆಣ್ಣುಗಳನ್ನು ಮಾರಿ ಅವರ ಮೇಲೆ ತಮ್ಮ ಜೀವನ ಸಾಗಿಸುವ ದಲ್ಲಾಳಿಗಳನ್ನು ಅಡಗಿಸಬೇಕೆಂಬ ಧ್ವನಿಯೂ''ಸ್ವಪ್ನ ಚಿತ್ರ'' ದಲ್ಲಿದೆ . ವಿಭಿನ್ನ ವಾತಾವರಣಗಳಲ್ಲಿ ಬೆಳೆದು ವಿಭಿನ್ನ ಆವರಣಗಳಲ್ಲಿ ಬಾಳು ನಡೆಯಿಸಿದ ಮೂವರು ಮುತ್ತೈದೆಯರ ಜೀವನ ಕಥೆಯೇ ''ಮುತ್ತೈದೆ''.

'ತಂಪು ನೆಳಲು' ಒಬ್ಬ ಸಾಮಾನ್ಯ ಸಂಸಾರಿಗನ ಜೀವನ ಕಥೆಯನ್ನು ಚಿತ್ರಿಸಿದರೆ 'ವಸುಂಧರಾ' ಮಾನವ ನಿರ್ಮಿತ ಯುದ್ಧದ ಅನಾಹುತಗಳನ್ನು ಚಿತ್ರಿಸುವ ಕೃತಿಯಾಗಿವೆ.

'ದೇವಲಹರಿ' ಮತ್ತು 'ನೆಲದ ನೆರಳು' ಗಳಲ್ಲಿ ಕಲಾವಿದನ ಬದುಕಿನ ಸಮಸ್ಯೆಗಳು ಮತ್ತು ಆತನ ಹೋರಾಟ ಇವು ತುಂಬ ಮಾರ್ಮಿಕವಾಗಿ ಚಿತ್ರಿತವಾಗಿವೆ.

ತಮ್ಮ ಎಪ್ಪತ್ತೈದು ವರುಷಗಳಲ್ಲಿ ಎಂಬತ್ತರರಷ್ಟು ಸಾಮಾಜಿಕ ಕಾದಂಬರಿಗಳನ್ನು ಸೃಜಿಸಿ ಕನ್ನಡ ಕಾದಂಬರಿ ಕ್ಷೇತ್ರವನ್ನು ಹುಲುಸಾಗಿಸಿ ಕೃತಾರ್ಥರಾದ ಕೃಷ್ಣಮೂರ್ತಿ ಪುರಾಣಿಕರವರ ಎಲ್ಲ ಕೃತಿಗಳ ಬಗೆಗೆ ಇಲ್ಲಿ ಹೇಳುವುದು ಸಾಧ್ಯವಾಗಿಲ್ಲ. ಅವರ ಕೃತಿಗಳಲ್ಲಿ ಕೆಲವನ್ನು ಮಾತ್ರ ಸಂಕ್ಷಿಪ್ತವಾಗಿ ಹೇಳಲಾಗಿದೆ. 'ನವ್ಯ'ದ ವಿಮರ್ಶೆಯ ಮೂಲಕ, ಪುರಾಣಿಕರ ಕಾದಂಬರಿಗಳ ಮೌಲ್ಯಮಾಪನವಾಗಬೇಕಿದೆ. ಹಾಗೆ ಹೇಳುವಾಗ, ವಿಮರ್ಶಕ ಕೆಲವು ಎಚ್ಚರಿಕೆಯ ಮಾತುಗಳನ್ನು ಗಮನಿಸಬೇಕಾಗುತ್ತದೆ. ಪುರಾಣಿಕರು, ಕನ್ನಡ ಕಾದಂಬರಿಗೆ ಪರಿಪೂರ್ಣ ಸ್ವರೂಪ ಬಂದ ಮೇಲೆ, ಕನ್ನಡ ಕಾದಂಬರಿಗಳನ್ನು ಬರೆದ ಮೊದಲಿಗರಲ್ಲಿ ಒಬ್ಬರಾದುದರಿಂದ ಅವರ ಕಾದಂಬರಿಗಳಲ್ಲಿ ನಾವು ಆದರ್ಶದ ಹಾಗೂ ಸಾಂಸಾರಿಕ ಜೀವನದ ಸೀಳು ನೋಟಗಳನ್ನು ನೋಡುತ್ತೇವೆಯೇ ವಿನಃ ವೈಚಾರಿಕತೆ, ಧ್ವನಿ, ಸೂಚ್ಯತೆಗಳನ್ನು ವಿಶೇಷವಾಗಿ ಕಾಣಲಾಗುವುದಿಲ್ಲ ಅವರ ಕಾಲಕ್ಕೆ ಪ್ರಧಾನವೆನಿಸಿದ್ದ ಸಾಮಾಜಿಕ, ಸಾಂಸಾರಿಕ ಜೀವನದ ವಿಚಾರಗಳು, ಅವರೆಲ್ಲ ಕಾದಂಬರಿಗಳ ತಳಪಾಯವಾಗಿವೆ. ಪುರಾಣಿಕರ ಕಾದಂಬರಿಗಳಲ್ಲಿ ಜೀವನದರ್ಶನ, ಜೀವನಮೌಲ್ಯ, ಸಾಂಸ್ಕೃತಿಕ ಸತ್ವಗಳು, ನ್ಯಾಯಾನ್ಯಾಯ, ಮಾನವೀಯ ಸಂಬಂಧ, ಸಾಂಪ್ರದಾಯಿಕ ಶ್ರದ್ಧೆ, ಮೊದಲಾದವುಗಳು ಅವರ ಕಾದಂಬರಿಗಳಲ್ಲಿಯ ಘಟನೆಗಳ, ಪಾತ್ರಗಳ ಮೂಲಕ ಬಿಚ್ಚಿಕೊಳ್ಳುತ್ತ ಹೋಗುತ್ತವೆ.

ಅ.ನ.ಕೃ., ತ.ರಾ.ಸು., ಬಸವರಾಜ ಕಟ್ಟೀಮನಿ ಮತ್ತು ತ್ರಿವೇಣಿ ಅವರಂತೆ ಪುರಾಣಿಕರು ಕನ್ನಡ ಕಾದಂಬರಿ ಓದುಗರನ್ನು ಬೆಳೆಸಿದರು, ವಿಶೇಷವಾಗಿ ಗೌರವಾನ್ವಿತ ಸುಶಿಕ್ಷಿತ ಮಹಿಳೆಯರು ಯಾವ ಮುಚ್ಚುಮರೆಯಿಲ್ಲದೆ, ಸಂಕೋಚವಿಲ್ಲದೆ ಕಾದಂಬರಿಗಳನ್ನು ಓದುವ ಪರಿಸರ ನಿರ್ಮಾಣ ಮಾಡಿದರು. ಪುರಾಣಿಕರ ಕಾದಂಬರಿಗಳು ಅಶ್ಲೀಲವಿಲ್ಲದೆ, ಅವರ ಸಾತ್ವಿಕ ಪರಿಶುದ್ಧ ಮನದ ಕೃತಿಗಳಾದುದರಿಂದ ಸ್ತ್ರೀಯರಂತೆಯೇ ಮಕ್ಕಳೂ, ವಿದ್ಯಾರ್ಥಿಗಳೂ ಹೆಚ್ಚು ಸಂಖ್ಯೆಯಲ್ಲಿ ಓದುವಂತಾಯಿತು. ನೀತಿಪಾಠವನ್ನು ಕಲಿಯುವಂತಾಯಿತು ಈ ಮಾತಿಗೆ ಪುರಾಣಿಕರ 'ಮುಗಿಲ ಮಲ್ಲಿಗೆ' ಪ್ರಕಟವಾದಾಗ, ಹಾ.ಮಾ.ನಾಯಕರು, ತೀರ್ಥಹಳ್ಳಿಯಲ್ಲಿ ಪ್ರೌಢಶಾಲಾ ವಿದ್ಯಾರ್ಥಿಯಾಗಿದ್ದರು. ಆ ವಿದ್ಯಾರ್ಥಿ, ಇವರ ಈ ಕೃತಿ ಮೆಚ್ಚಿಕೊಂಡು ಕಾಗದ ಬರೆದುದೇ ನಿದರ್ಶನ. ನಾನು ಕೀಳು ದರ್ಜೆಯ ಕಾದಂಬರಿಗಳು ಹೆಚ್ಚಿರುವ ಈ ಕಾಲದಲ್ಲಿ ಓದಿ ನೋಡಿಯೇ ಹೆಣ್ಣು ಮಕ್ಕಳಿಗೆ ಓದಲು ಕೊಡುತ್ತೇನೆ. ಆದರೆ ಪುರಾಣಿಕ ಕಾದಂಬರಿಗಳನ್ನು ನೇರವಾಗಿ ಮಗಳ ಕೈಯಲ್ಲಿ ಕೊಡುತ್ತೇನೆ ಎಂದು ಒಂದು ಸಲ ರಂ.ಶ್ರೀ.ಮುಗಳಿ ಅವರು ಪುರಾಣಿಕರ ಕಾದಂಬರಿಗಳ ಬಗೆಗೆ ಆಡಿದ್ದಾರೆ. ಪುರಾಣಿಕರು ಕೂಡ, ಹೆಣ್ಣುಮಕ್ಕಳ ತಂದೆಯರಿಂದ ಬಂದ ಹಲವಾರು ಪತ್ರಗಳನ್ನು ಕುರಿತು ಸಾರರೂಪವಾಗಿ ಹೀಗೆ ಹೇಳಿದ್ದಾರೆ. "ಹೆಣ್ಣು ಮಕ್ಕಳ ತಂದೆಯವರು ನನಗೆ ವಿಶ್ವಾಸದಿಂಧ ಕಾಗದ ಬರೀತಾರ, ನಿಮ್ಮ ಕಾದಂಬರಿಗಳನ್ನು ಮಾತ್ರ ನಮ್ಮ ಹೆಣ್ಣುಮಕ್ಕಳು ಯಥೇಚ್ಛವಾಗಿ ಓದಬಹುದು" ಅಂತ. ಈ ವಿಶ್ವಾಸ ನನ್ನ ಕಾದಂಬರಿಗಳು ಗಳಿಸಿಕೊಂಡಿವೆ. ನನ್ನ ಕಾದಂಬರಿ ಪ್ರಪಂಚ ಮಧ್ಯಮವರ್ಗದ ಮನೆತನ ಅಂತ ಹೇಳ್ತಿನಿ, ನನ್ನ ಮುತ್ತೈದಿಯ ಜಾನಕಿ, ಬೆವರಿನ ಬೆಲೆಯ ಸಾವಿತ್ರಿ ಮತ್ತು 'ಮಣ್ಣಿನ ಮಗಳ' ವಸುಮತಿ ಇವರೆಲ್ಲ ನನ್ನ ಪರಿವಾರ ನೋಡ್ರಿ, ಇವರ ಸಂತೋಷ ನನ್ನ ಸಂತೋಷ ... ಪುರಾಣಿಕರು ಹುಟ್ಟಿ ಬೆಳೆದ ವಾತಾವರಣ, ಶಾರ್ಯಗೈದ ಪರಿಸರ, ಸುತ್ತಲಿನ ಬದುಕು, ಅವರ ಸಾತ್ವಿಕ ಬದುಕು, ಪ್ರಾಮಾಣಿಕ ಧ್ಯೇಯಗಳೇ, ಅವರ ಕಾದಂಬರಿಗಳಲ್ಲಿರುವ 'ಆದರ್ಶದ ಅತಿರೇಕ'ಕ್ಕೆ ಕಾರಣಗಳು. ಇವರ ಕಾದಂಬರಿಗಳಲ್ಲಿ ಈ ಶ್ರದ್ಧಾಭಾವನೆ ಪ್ರಾಮಾಣಿಕವಾಗಿ ಮೂಡಿ ಬಂದಿದೆ.

ಇವರ ಕೆಲವು ಕಾದಂಬರಿಗಳು ಪಠ್ಯಪುಸ್ತಕಗಳಾಗಿವೆ. ಕೆಲವು ಕಾದಂಬರಿಗಳ ಆಧಾರದ ಮೇಲೆ ರೇಡಿಯೋ ರೂಪಕಗಳು ಬಿತ್ತರಗೊಂಡಿವೆ. ಸುಮಾರು ಹನ್ನೊಂದು ಕಾದಂಬರಿಗಳು ಚಲನಚಿತ್ರಗಳಾಗಿ ಜನಮನ್ನಣೆ ಗಳಿಸಿವೆ. ಕನ್ನಡದಲ್ಲಿ ಪ್ರಥಮ ಕಾದಂಬರಿಯಾಧಾರಿತ ಚಿತ್ರ ಪುರಾಣಿಕರ ಕಾದಂಬರಿಯಿಂದಲೇ ಎಂಬುದು ಹೆಮ್ಮೆಯ

ಸಂಗತಿ. 'ಧರ್ಮದೇವತೆ' ಕಾದಂಬರಿ 'ಕರುಣೆಯೇ ಕುಟುಂಬದ ಕಣ್ಣು' ಎಂಬ ಹೆಸರಿನಿಂದ ಚಿತ್ರಿಸಲಾಗಿದೆ. 'ಪಾವನಗಂಗಾ', 'ಸನಾದಿ ಅಪ್ಪಣ್ಣ' ಇವರಿಗೆ ಖ್ಯಾತಿ ತಂದು ಕೊಟ್ಟವು.

ಒಟ್ಟಿನಲ್ಲಿ ವಸ್ತುವಿನ ಆಯ್ಕೆಯಲ್ಲಿ, ಪಾತ್ರ ಸಂಯೋಜನೆಯಲ್ಲಿ, ಕಲಾತ್ಮಕ ಬರವಣಿಗೆಯಲ್ಲಿ ಆದರ್ಶದ ವೈಭವೀಕರಣದಲ್ಲಿ, ಅವಾಸ್ತವತೆ-ಅಶ್ಲೀಲರಹಿತ ಬರವಣಿಗೆಯಲ್ಲಿ, ಕೋಮಲಭಾವಗಳ ನಿರೂಪಣೆಯಲ್ಲಿ ಎಲ್ಲದರಲ್ಲಿಯೂ ಸೊಗಸು ವೈವಿಧ್ಯ ಪುರಾಣಿಕರ ಕಾದಂಬರಿಗಳಲ್ಲಿ ಗುರುತಿಸಬಹುದು. ಪುರಾಣಿಕರು ಹುಟ್ಟಿದ್ದು, ಬಿಜಾಪುರ ಜಿಲ್ಲೆ. ಬೆಳೆದದ್ದು ಬೆಳಗಾವಿ ಜಿಲ್ಲೆ. ಆದರೆ ಹುಟ್ಟಿ ಬೆಳೆದ ನೆಲದ ಭಾಷೆಯನ್ನು ಪುರಾಣಿಕರು ಸ್ಪಷ್ಟವಾಗಿ ಕಾದಂಬರಿಗಳಲ್ಲಿ ತಾರದೇ ಇದ್ದುದು ಸೋಜಿಗವೆನಿಸುತ್ತದೆ. ಕೆಲವು ಕಾದಂಬರಿಗಳಲ್ಲಿ ಪುನರುಕ್ತಿದೋಷ, ಅವಾಸ್ತವತೆಗಳೂ ಹಣಿಕಿಕ್ಕಿವೆ. 'ಏನೇ ಆದರೂ ತಮ್ಮ ಸುಲಭ ಹಾಗೂ ಮೋಹಕ ಶೈಲಿಯಲ್ಲಿ ರಸವತ್ ಕಾದಂಬರಿ ಕೃತಿಗಳನ್ನು ಬರೆದು ಕನ್ನಡ ಜನತೆಯಲ್ಲಿ ಸ್ಫೂರ್ತಿ ಹಾಗೂ ಚೈತನ್ಯ ತುಂಬಿದ, 'ಕಾದಂಬರಿ ಶ್ರೀ ಕೃಷ್ಣಮೂರ್ತಿ ಪುರಾಣಿಕ ಅವರು ಕೃತಾರ್ಥರು.

ಗ್ರಂಥಋಣ

೧) ಶ್ರೀ ಕೃಷ್ಣಮೂರ್ತಿ ಪುರಾಣಿಕ : ಶ್ರೀನಿವಾಸ ಉಡುಪ

೨) ಶ್ರೀ ಕೃಷ್ಣಮೂರ್ತಿ ಪುರಾಣಿಕರು : ಶ್ರೀ ಶಂಕರ ಪಾಟೀಲ

೩) ಶ್ರೀ ಕೃಷ್ಣಮೂರ್ತಿ ಪುರಾಣಿಕ : ಶ್ರೀ ದು.ನಿಂ.ಬೆಳಗಲಿ

ಕಾದಂಬರಿಗಳು (ಅಪ್ರಕಟಿತ ಲೇಖನ)

ಕೆಳದಿ ಭದ್ರಪ್ಪನಾಯಕನ ಅಪ್ರಕಟಿತ ಎರಡು ಶಾಸನಗಳು

★ ಕೆಳದಿ ವೆಂಕಟೇಶ ಜೋಯಿಸ

ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲೂಕಿನಲ್ಲಿ ಸಾವಿರದೊಂಬೈನೂರ ತೊಂಭತ್ತೊಂದನೆ ಮಾರ್ಚದಲ್ಲಿ ತಾಡಯೋಲೆ ಹಸ್ತಪ್ರತಿ, ಐತಿಹಾಸಿಕ ದಾಖಲೆಗಳು, ಸ್ಮಾರಕಗಳು ಮೊದಲಾದುವನ್ನು ಕೆಳದಿ ವಸ್ತು ಸಂಗ್ರಹಾಲಯಕ್ಕೆ ಸಂಗ್ರಹಿಸುವ ಸಲುವಾಗಿ ಸರ್ವೇಕ್ಷಣೆ ನಡೆಸಿದಾಗ ತೀರ್ಥಹಳ್ಳಿ ತಾಲೂಕಿನ ಮಂಡಗದ್ದೆ ಸಮೀಪದ ದೂರ್ವಾಸಪುರಂನಲ್ಲಿರುವ ಶ್ರೀ ಶಾಮಾಚಾರರವರಲ್ಲಿದ್ದ ಒಂದು ಪುಸ್ತಕ ನನ್ನ ಗಮನ ಸೆಳೆಯಿತು. ಮೋಡಿ ಲಿಪಿಯಲ್ಲಿರುವ ಕ್ರಿ.ಶ. ೧೭೫೪ ರಿಂದ ೧೮೩೭ ರ ವರೆಗೆ ಪ್ರತಿ ಮಾಡಲ್ಪಟ್ಟಿರುವ, ಸುಮಾರು ೬೦ ಪುಟಗಳಿರುವ (ಎರಡು ಪಕ್ಕಗಳು ಸೇರಿ) ಈ ಪುಸ್ತಕದಲ್ಲಿ ಕೆಳದಿ ಅರಸರು ಮತ್ತು ಇತರರಿಗೆ ಸಂಬಂಧಿಸಿದ ಮೂವತ್ತೆರಡಕ್ಕೂ ಹೆಚ್ಚು ಶಾಸನಗಳಿವೆ. ಇವುಗಳು ಈವರೆಗೆ ಅಪ್ರಕಟಿತವಾಗಿಯೇ ಉಳಿದಿವೆ. ಇಲ್ಲಿ ಕೆಳದಿ ಭದ್ರಪ್ಪನಾಯಕನ ಎರಡು ಅಪ್ರಕಟಿತ ಶಾಸನಗಳನ್ನು ಕೊಡಲಾಗಿದೆ[೧].

ಶಿವಪ್ಪನಾಯಕನ ನಂತರ ಕ್ರಿ.ಶ. ೧೬೬೨ ರಲ್ಲಿ ಪಟ್ಟಕ್ಕೆ ಬಂದ ಭದ್ರಪ್ಪನಾಯಕನು ಆಡಳಿತ ಮುತ್ಸದ್ದಿ; ಧಾರ್ಮಿಕ ಮತ್ತು ಸಾಂಸ್ಕೃತಿಕ ಕ್ಷೇತ್ರದಲ್ಲಿ ಹೆಚ್ಚಿನ ಆಸಕ್ತಿ ಹೊಂದಿದವನು. ಇವನ ಕಾಲಕ್ಕೆ ಸೀಯರ್, ಹೊನ್ನವಳ್ಳಿ ಬೂದಿಹಾಳ, ಚಿಕ್ಕನಾಯಕನಹಳ್ಳಿ ಮೊದಲಾದವು ಕೆಳದಿ ರಾಜ್ಯಕ್ಕೆ ಸೇರಿದ್ದವು. ಕೊಲ್ಲೂರು, ಶೃಂಗೇರಿ, ಉಡುಪಿ, ಶಂಕರನಾರಾಯಣ, ಈ ಮೊದಲಾದ ಕಡೆಗಳಲ್ಲಿ ಇವನು ದೇವಾಲಯಗಳಲ್ಲಿ ಪೂಜಾ ವ್ಯವಸ್ಥೆ ಮಾಡಿದ್ದನು[೨]. ತೀರ್ಥರಾಜಪುರದಲ್ಲಿ ಹಿರಣ್ಯಗರ್ಭದಾನ, ರಾಮಚಂದ್ರಾಪುರದಲ್ಲಿ[೩] ತುಲಾಪುರುಷದಾನ, ಮೊದಲಾದವುಗಳನ್ನು ಮಾಡಿದ್ದನು. ಹಲವು ಅಗ್ರಹಾರ, ಮಠಗಳು ಇವನ ಕಾಲಕ್ಕೆ ನಿರ್ಮಾಣವಾಗಿದ್ದವು. ಕ್ರಿ.ಶ. ೧೬೬೭ರಲ್ಲಿ ಇವನ ಆಡಳಿತವು ಕೊನೆಗೊಂಡಿತು[೪].

---

೧ ಮಿತಿಕ್ ಸೊಸೈಟಿ ಜರ್ನಲ್ ವಾಲ್ಯೂಂ Lx x xIII ಇಶ್ಯು ೪, ಅಕ್ಟೋಬರ್, ಡಿಸೆಂಬರ್ ೧೯೯೨ರಲ್ಲಿ ಒಂದು ಶಾಸನ ಪ್ರಕಟವಾಗಿದೆ. ಪುಟ ೪೨೨-೨೨೭

೨ ಕೆ.ನೃ.ವಿ. ಪುಟ ೧೨೧

೩ ಹೊಸ ನಗರ ತಾಲೂಕಿನ ಕಾರ್ಗಡಿ ಸಮೀಪ ರಾಮಚಂದ್ರಪುರ ಮಠವಿದೆ.

೪ ಕೆ.ನೃ.ವಿ. ಪುಟ ೧೨೧-೧೨೨ ಮತು ಕೆಳದಿ ಅರಸರ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಅಪ್ರಕಟಿತ ಮಹಾಪ್ರಬಂಧ ಪುಟ ೬೪(ಮುಂಬೈ ವಿ ವಿ)

ಶಾಸನಗಳು ಶಿವಸ್ತುತಿಯೊಂದಿಗೆ ಪ್ರಾರಂಭವಾಗುತ್ತವೆ. ಕ್ರಿ.ಶ. ೧೫೮೫ ಮತ್ತು ೧೫೮೭ರ ಕಾಲದ ಶಾಸನಗಳಿವು. ಅಂದರೆ ಒಂದು ಶುಭಕೃತ್ತು ಸಂವತ್ಸರದ ವೈಶಾಖ ಶು. ೧೫ರಲ್ಲಿ ಮತ್ತು ಎರಡನೆಯದು ಶುಭಕೃತ್ತು ಸಂವತ್ಸರದ ಕಾರ್ತಿಕ ಶು. ೧೫. ರಲ್ಲಿ ಕೊಟ್ಟಿರುವಂತಹದು. ಇವುಗಳು ಚಿನ್ನಭಂಡಾರದ ರಾಮಕೃಷ್ಣಪ್ಪಯ್ಯನು ಬಾಂಧ್ಯದಲ್ಲಿ ಕಟ್ಟಿಸಿದ ಮಠದ ಧರ್ಮಕ್ಕೆ ಮತ್ತು ಇಕ್ಕೇರಿಯಲ್ಲಿ ಪ್ರತಿಷ್ಠೆಯ ಮಾಡಿಸಿದ ವಿಶ್ವೇಶ್ವರ ದೇವರಕಟ್ಟಲೆ,ಕಂದಾಚಾರಗಳಿಗೆ ಬಿಟ್ಟ ದಾನದತ್ತಿ ವಿವರವನ್ನು ತಿಳಿಸುತ್ತವೆ. ಕ್ರಿ.ಶ. ೧೬೬೧-೬೩ರ ವರೆಗೆ ಆಡಳಿತ ನಡೆಸಿದ ಭದ್ರಪ್ಪನಾಯಕನ ಕಾಲದವು. ಈ ಶಾಸನಗಳಲ್ಲಿ ಕಂಡುಬರುವ ತೆಂಗಿನ ಮರ ಕುರಿತು ಬರುವ ಉಲ್ಲೇಖ ಗಮನಾರ್ಹವಾಗಿದೆ.

ಕೆಳದಿ ಅರಸರ ವಂಶಾವಳಿ: ಶಾಸನ ಆಧಾರದಿಂದ

ಸಂಕಂಣ ನಾಯಕ
|
ಶಿದ್ದಪ್ಪ ನಾಯಕ
|
ಶಿವಪ್ಪ ನಾಯಕ
|
ಭದ್ರಪ್ಪ ನಾಯಕ

ಕೆಳದಿ ಅರಸರ ಶಾಸನಸಂಪುಟ ಆಧಾರದಿಂದ [೨]

ಚೌಡಪ್ಪ ನಾಯಕ
|
ಸದಾಶಿವ ನಾಯಕ
|
ದೊಡ್ಡಸಂಕಂಣ ನಾಯಕ
|
ಚಿಕ್ಕಸಂಕಂಣ ನಾಯಕ
|
ರಾಮರಾಜನಾಯಕ
|
ಹಿರಿಯವೆಂಕಟಪ್ಪನಾಯಕ
|
ವೀರಭದ್ರನಾಯಕ
|

---

೧. ಇಕ್ಕೇರಿಯ ಹತ್ತಿರದ ಬ್ರಾಹ್ಮಣ್ಯ ಬೇದೂರು ಎಂಬ ಗ್ರಾಮದಲ್ಲಿ ಈ ದೇವಾಲಯವಿದೆ.

೨. ಕೆಳದಿ ವೆಂಕಟೇಶ ಜೋಯಿಸ,(ಸಂ) ಕೆಳದಿ ಅರಸರ ಶಾಸನ ಸಂಪುಟ, ಶ್ರೀ ತೋಂಟದಾರ್ಯ ಮಠ ಗದಗ-ಡಂಬಳ -೧೯೯೨ ಪುಟ xi

ಶಿವಪ್ಪನಾಯಕ
|
ಇಮ್ಮಡಿ ವೆಂಕಟಪ್ಪನಾಯಕ
|
ಭದ್ರಪ್ಪನಾಯಕ (ಕ್ರಿ.ಶ.೧೬೬೧-೧೬೬೩)

ಚಿನ್ನಭಂಡಾರ ವಂಶದವರ ವಂಶವೃಕ್ಷ : ಶಾಸನದ ಆಧಾರದಿಂದ

ರಾಮಕೃಷ್ಣಯ್ಯ
|
ಪುರುಷೋತ್ತಮಯ್ಯ
|
ರಾಮಕೃಷ್ಣಯ್ಯ
|
ಹೂವಯ್ಯ

ಪುರುಷೋತ್ತಮರಾಯರು ಇನಾಂ ಕೋರ್ಟಿನಲ್ಲಿ ಸಾದರಪಡಿಸಿದ ದಾಖಲೆಯ ಪ್ರಕಾರ :

ಚಿನ್ನಭಂಡಾರದ ರಾಮಕೃಷ್ಣಪ್ಪ[1]

ಚಿಕ್ಕ ಲಕ್ಷ್ಮೀಪತಿ   ಪುರುಷೋತ್ತಮಯ್ಯ   ನರಸಪ್ಪಯ್ಯ   ದೊಡ್ಡನರಸಪ್ಪಯ್ಯ

ರಾಮಕೃಷ್ಣಪ್ಪಯ್ಯ   ಮೃತ್ಯುಂಜಯ   ರಾಮಕೃಷ್ಣಪ್ಪಯ್ಯ

ಪುರುಷೋತ್ತಮಯ್ಯ   ಅನಂತಯ್ಯ   ಹೂವಯ್ಯ

ಶಾಸನ ಪಾಠಗಳು :

ಬಾಂಡ್ಯದ ಶಾಸನ ಪ್ರತಿ ೨: ೧.

೧. ನಮಸ್ತುಂಗ ಶಿರಚುಂಬಿ ಚಂದ್ರಚಾಮರ ಚಾರವೆ ತ್ರೈಲೋ ।

೨. ಕ್ಯನಗರಾರಂಬ ಮೂಲಸ್ತಂಬಾಯ ಶಂಬವೇ ಸ್ವಸ್ತಿ ಶ್ರೀ

೧. ಕೆಳದಿ ವೀರಭದ್ರದೇವಾಲಯದ ಎದುರಿನಲ್ಲಿರುವ ಧ್ವಜಸ್ತಂಭದ ಜಗತಿಯ ಮೇಲಿರುವ ಶಾಸನದಲ್ಲಿ ಮೇಲಿರುವ ಶಾಸನದಲ್ಲಿ ಕಂಡುಬರುವ ' ಬೊಕ್ಕಸದ ಸಿದ್ಧಬಸವಯ್ಯ ' ಎಂಬ ಹೆಸರು ಸಂಶೋಧನೆಗೆ ಆಕರವಾಗಿದೆ. ಕೆಳದಿ ಅರಸರ ಶಾಸನ ಸಂಪುಟ ಪುಟ ೧೭೬.

೩. ಜಯಾಭ್ಯುದಯ ಶಾಲ್ಲಿವಾಹನ.ಶಕ ವರುಷ ೧೫೮೫

೪. ಯ ಶುಬಕ್ರುತ್ತು ಸಂವತ್ಸರದ ವೈಶಾಖ ಶು ೧೫ ಲ್ಲು

೫. ಶ್ರೀಮದೆಡವ ಮುರಾರ್ರಿ,ಕೊಟೆ ಕೊಲಾಹಲ ವಿಶುದ್ಧ

೬. ವೈದಿಕಾದ್ವೈತ ಸಿದ್ಧಾಂತ್ತ ಪ್ರತ್ತಿಷ್ಟಾಪಕ ಶಿವಗುರುಭಕ್ತಿ

೭. ಪರಾಯಣರಾದ ಕೆಳದಿ ಸಂಕಂಣನಾಯಕರು

೮. ಪ್ರಪಉತ್ತ್ರರಾದ ಸಿದ್ದಪ್ಪನಾಯಕರ ಪಉತ್ತ್ರರಾದ

೯. ಶಿವಪ್ಪನಾಯಕರ ಪುತ್ತ್ರರಾದ ಭದ್ರಪ್ಪನಾಯಕರು,

೧೦. ಚಿಂನಭಂಡಾರದ ರಾಮಕ್ರುಷ್ಣಪ್ಪಯ್ಯನು ಬಾಂಡ್ಯ

೧೧. ದಲ್ಲು ಕಟ್ಟಿಸಿದ ಮಠದರ್ಮಕೆ ಕೊಟ್ಟ ಧರ್ಮ ಶಾ ।

೧೨. ಸನ ಕ್ರಮವೆಂತ್ತೆಂದರೆ, ಕಗ್ಗದ ಶಿಮೆಯಿಂದಲ್ಲೂ।

೧೩. ಚಿತ್ರಬಾನು ಸಂವತ್ಸರದಲ್ಲೂ ಬಿಟ್ಟದ್ದು ।

೧೪. ಪ್ಲವ ಸಂವತ್ಸರದಲ್ಲೂ ಬಿಟ್ಟದು ಗ ೨೪ ॥ ೨ ॥೦ ಉಬ

೧೫. ಯಂ ಗ ೨೧೯೨ ॥೦ ವಿವರ್ರ ಅಜಿತಿಕೊಡಲಾದ್ದಿ ಗ್ರಾಮದಿಂದ

೧೬. ಕೊಡಲಾದ್ರಿವಳಗಣ ಬಾಂಡ್ಯದಯಡೆಹೂನ ಸ್ವಾಸ್ಥೆ

೧೭. ಯಿಂದ ಗ ೨೯೦ ತ್ತಿಂಮಪ್ಪಸ್ವೆಟ್ಟ ಸ್ವಾಸ್ಥೆಯಿಂದ ೩॥೦

೧೮. ಮಾಕನಾಯಕ ತ್ತಿಪಾಲು ।ಗ ೩॥೦ ಅಂತ್ತೂ ಗ ೧೩೯೦

೧೯. ಕೆ ವಿವರ್ರಾತ್ತೆರುಗ ೪೯೪ ನಾಲ್ಕು ವರಹಾಉ ನಾಲ್ಕು ಹಣ

೨೦. ಬೆಡ್ಡಿಕೆ ಗ ೨. ಹಬಗಾಣಿಕೆ ೯೨ ಬಕ್ತರೆಖು ಮು ೨೬ ॥೩॥

೨೧. ಕೆ ಮುಡ್ಡಿಗ ೬॥॥೦ ಲ್ಲು ಗ ೩॥ ೪ ತ್ತೆಂಗಿನ ಮ ೧೫ಕ್ಕೆ ಜಾಕು

೨೨. ಮರಳಿನ್ನುಳಿದು ಶುದಮರ ೧೧ರ್ಕೆ ೩॥। = ಕೊಟ್ಟಾ ಬಿ

೨೩. ರಾಡ ೯೨೧ = ಪಾಳೆಕೊಡಲನಷ್ಟದ ಬಗೆಯಲು ಗ॥೨॥೦

೨೪. ಅಂತ್ತು ಗ ೧೩ ಬಾಂಡ್ಯದಲ್ಲು ಬಸವತ್ತೆಗಿಸಿದ ಕೆರೆ,

೨೫. ಒಳಗಾದ ಯಡೆಹೂನ ಸ್ವಾಸ್ಥೆಯಿಂದ ಗ ೧ ನುಳಿದು

೨೬. ಶುಧಗ, ೧೨ ಕೊಡಲಾದ್ರಿಯಿಂದ ಹಲಗೊಳ ನಷ್ಟಾ
೨೭. ಸ್ಥತೆರ್‍ರಿದಿಂದ ಗ ||೦ ಹಬಗಾಣಿಕೆ ೯೨ ಬೆದ್ದಿಗೆ ಗ ೩
೨೮. ಬಕ್ತಮುಡಿ ೩೩||೦ ಗ ೫೯೧ ಚೌಡಗಳನ ಸ್ವಾಸ್ಥೆ
೨೯. ಬಕ್ತಮುಡಿ ೪೭ಕ್ಕೆ ಗ ೬||೪ ಕೊಟ್ಟ ಬಿರಾಡ ೯೦||೦
೩೦. ತೆಂಗಿನಮರ ೧೦ಕ್ಕೆ ೠಕು ಮರಳಿ ಸುಳಿದು ಶುದ್ದ
೩೧. ಮರ ೬ಕೆ ೯೨ ಅಂತ್ತೂ ಗ ೧೫ ||೪||೦ ಉಬಯಂ
೩೨. ಗ ೨೭||೪||೦ ಬಾಂಡ್ಯದ ಅಂಗದ್ದಿತ್ತೆರ್‍ರಿ
೩೩. ಗಿಯಿಂದ ಗ ೩೯೩ ಉಬಯಂ ಗ ೩೧೯೨||೦ ಮೂ
೩೪. ವತೊಂದು ವರಹ ಯರಡು ಹಣ ಅಡದ ಯಿೊ ।
೩೫. ಮಿಯಂನ್ನು ಶಿವಾರ್ಪಿತ್ತವಾಗಿ ಬಿಟ್ಟೆಲಾಗಿ ।ಯಿೊ।
೩೬. ಭೂಮಿಗೆ ಸಲುವ ಸರ್ವಮಾಂನ್ಯವಂನ್ನು ಪೂರ್ವ
೩೭. ಮರಿಯಾದೆಯಲ್ಲಿ ಆಗುಮಾಡಿಕೊಂಡು ಯಿೊ
೩೮. ಮಠದಲ್ಲು ಹೊಸಬರ್‍ರುವ ಬ್ರಾಹ್ಮರ್‍ರು ಪರಮ
೩೯. ಹಂಸ್ರರು, ಮುಂತ್ತಾದವರ್‍ರಿಗೆ ನಡೆಸುವ ಧರ್ಮ
೪೦. ಮಠದ ದೆವತ್ತಾ ಪೂಜೆ ಸಹಾ ಹೂ ವ್ಯಯನ ಮು
೪೧. ಖಾಂತ್ರ ನಡೆಸಿಕೊಂಡು ಆ ಚಂದ್ರಾರ್ಕಸ್ಥಾಯಿ
೪೨. ಗಳಾಗಿ ಮಠದರ್ಮಕ್ಕೆ ನಡೆಸಿಕೊಂಡು ಬಾಹ
೪೩. ದೆಂದು ಕೊಟ್ಟ ಧರ್ಮಶಾಸನ ಸಾಕ್ಷಿಗಳು ದೆವ ಸಾ
೪೪. ಕ್ಷಿಗಳು । ಆದಿತ್ಯ ಚಂದ್ರಾವನಿಲೊನಲಶ್ಚದ್ಯೌ
೪೫. ಭೂರ್ಮಿರಾಪೊಹೃದ ಯಂ ಯಮಶ್ಚ ಆಹ
೪೬. ಶ್ಚರಾತ್ರಿಶ್ಚ ಉಭಚಸಂಧ್ಯೆ ಧರ್ಮಸ್ಯಜಾನಾ
೪೭. ತ್ತಿನರಸ್ಯ ಉ್ರತ್ತಂ ಶ್ರೀ ಸದಾಯಂತಾx
೪೮. ಶಿಯಿಧೆ.೩.

ವಿಶೇಷ : ಶಾಸನದ ಕಾಲ : ಶಾ.ಶ.೧೫೮೫ ಅಂದರೆ ಕ್ರಿ.ಶ.೧೬೬೩. ಇದು ಭದ್ರಪ್ಪನಾಯಕನ ಆಡಳಿತದ ಕಾಲಕ್ಕೆ ಸರಿಹೋಗುತ್ತದೆ. ಬಾಂಡ್ಯದ ಮಠದ ಮಠ ಧರ್ಮಕ್ಕೆ ಬಿಟ್ಟ ದಾನದ ವಿವರ ಈ ಶಾಸನದ ಪಾಠ.

ಯಿಕೆರ್‍ರಿ ಶ್ಯಾನ ಪ್ರತಿ : ೨

೦೧ ⁝ ॥ ನಮಸ್ತುಂಗ ಶಿರಶುಚಂಬಿ ಚಂದ್ರಚಾಮರ ಚಾರವೆ ॥
೦೨. ತ್ರೈಲೋಕ್ಯ ನಗರಾರಂಬ ಮೂಲ ಸ್ತಂಬಾಯ ಶಂಬವೇ ।
೦೩. ಸ್ವಸ್ತಿ ಶ್ರೀ ಜಯಾಭ್ಯುದಯ ಶಾಲವಾಹನ ಶಕವರುಷ
೦೪. ೧೫೮೭ನೆಯ ಶುಬಕ್ರುತ್ತು ಸಂವತ್ಸರದ ಕಾರ್ತಿ ಶು.೧೫
೦೫. ಲೂ। ಶ್ರೀಮತು ಯಿಕೆರ್‍ರಿ ಬ್ರಾಂಹ್ಮಣಗೆರ್‍ರಿಯಲ್ಲು ಚಿಂನ
೦೬. ಬಂಡಾರದ ರಾಮಕೃಷ್ಣಪ್ಪಯನ್ನು ಪ್ರತಿಷ್ಟೆಮಾಡಿದ ವಿಶ್ವೆ
೦೭. ಶ್ವರದೆವರ ಕಟಲೆ ಕಂದಾಚಾರಕ್ಕೆ ಶ್ರೀಮದ್ವೈಡವ ಮು
೦೮. ರಾರ್‍ರಿಕೊಟಿ ಕೊಲಾಹಲ ವಿಶುದ್ಧ ವೈದಿಕಾದ್ವೈತ್ತ ಸಿದ್ದಾಂ
೦೯. ತ್ತ-ಪ್ರತಿಷ್ಟಾಪಕ-ಶಿವಗುರ್‍ರು ಬಕ್ತಿಪಾರಾಯಣರಾದ ಕೆಳ
೧೦. ದಿ ಸಂಕಂಣನಾಯಕರ ಪ್ರಉತ್ತ್ರರಾದ ಶಿವಪ್ಪನಾಯಕರ
೧೧. ಪಉತ್ತ್ರರಾದ ಶಿವಪ್ಪನಾಯಕರ ಪುತ್ರರಾದ ।
೧೨. ಭದ್ರಪ್ಪನಾಯಕರೂ ಕೊಟ ತ್ತಾಂಬ್ರದರ್ಮ ಶಾಸನಕ್ರಮ
೧೩. ಧಮ ವೆತ್ತೆಂದಕ್ರಿ ಪ್ರಕುಉತ್ತಾರವಾಸಿ ಬರುತ್ತಿದ್ದ ಸ್ವಾಸ್ಥೆ ।
೧೪. ಅವಿನಹಳಿ ಶಿಮೆ ಶುದ್ರವಾಡದಿಂದ ಕುಣಿಕೆರ್‍ರಿಪಾಲ।
೧೫. ಬೊಂಮನಾಯಕನ ಕೊಪದಿಂದ ಗ್ರಾಮ ೧ ಕ್ಕೆ ರೆಖೆ ಕು
೧೬. ಳಗ ೨೨ ೯೨॥೦ ಕುಳ ೧ ಕೆ ಗ೩ ೯೧॥ಕೆ ಸಲುವದುಗ
೧೭. ೭೯೪।೦ ಬಿರಾಡ ಗ ॥೦॥। =ಲ್ಲು ಗ ೧೨ ॥೪ ॥।ಂನಷ್ಟ
೧೮. ಬಿರಾಡ ಗ ೧೧॥೧ ವಕ್ಕೆ x ಗ ೧ ಅಂತು ರೆಖೆ ಗ ೯೬೯೦

೧೯. ರ್ಕನಿಲ್ಲಿಸಿದು ನಷ್ಟ ಬಿರಾಡ ಗ ೧೧।।೧ ಕಾಳಿಯುಕ್ತಾಕ್ಷಿ

೨೦. ಸಂವತ್ಸರದಲ್ಲೂ ಹೊಳೆಹರಿದು ಕುಳ ೧ ರ್ಕ ಗ ೩ ।।೨।।

೨೧. ಉಬಯಂಗ 15 ೯೩।।೦ ಹದಿನೈದು ವರಹಾಉಮು

೨೨. ರು ಹಣ ಅದನ್ನುಳಿದು ಶುಧ ಶಿಸ್ತು ಗ ೮೦ ।।೧।।೦

೨೩. ಯಂಬತ್ತು ವರಹಾಉ ಆರ್ರುಹಣ ಆಡರ ಭೂ

೨೪. ಮಿಯಂನ್ನು ಶಿವಾರ್ಪಿತ್ತವಾಗಿ ಬಿಟ್ಟಧೆವೆ ।ಯಿೂ ಭೂ

೨೫. ಮಿಗೆ ಸಲುವ ಚತುಶಿಮೆವಳಗುಳ್ಳ ನಿಧಿ ನಿಕ್ಷೆಪ

೨೬. ಜಲಪಾಷಾಣ ಅಕ್ಷಿಣಿ ಆಗಮಿಸಿದ ಸಾದ್ಯಂ

೨೭. ಗಳೆಂಬ ಅಷ್ಟಬೊಗತ್ತೆಜಸ್ವಾಮ್ಯವಂನ್ನು

೨೮. ಆಗುಮಾಡಿಕೊಂಡು ದೆವತ್ತಾಸೆವೆಯಂನ್ನು ಸಾಂಗವಾ

೨೯. ಗಿ ನಡಶಿ ಕೊಂಡು ಬಾಹದೂಯಂದು ಕೊಟ ಶಾಸನಾ ।।

೩೦. ಆದಿತ್ಯ ಚಂದ್ರಾವನಿಲೊನಲಶ್ಚ ದ್ಯೌರ್ಭೂಮಿ ।

೩೧. ರಾಪೊಹೃದಯಂ ಯಮಶ್ಚ ಆಹಶ್ಚ ರಾತ್ರಿಶ್ಚ

೩೨. ಉಬೆಚಸಂಧ್ಯೆ ದರ್ಮಶ್ಚ ಜಾನಾತ್ತಿನರಸ್ಯಉ್ರ

೩೩. ತ್ತಾಂ । ಯಥಾಪ್ರತ್ತಿ ೨

ವಿಶೇಷ : ಈ ಶಾಸನ ಕ್ರಿ.ಶ.೧೫೮೭ರಲ್ಲಿ ಅಂದರೆ ಕ್ರಿ.ಶ.೧೬೬೫ರಲ್ಲಿ ಇಕ್ಕೇರಿಯ ಬ್ರಾಹ್ಮಣ ಕೇರಿಯಲ್ಲಿ ಚಿನ್ನಭಂಡಾರದ ರಾಮಕೃಷ್ಣಪ್ಪಯ್ಯನು ಕಟ್ಟಿಸಿದ ವಿಶ್ವೇಶ್ವರದೇವರ ಕಟಲೆ ಕಂದಾಚಾರಗಳಿಗೆ ಬಿಟ್ಟದಾನದ ವಿವರ.

ಕೆಳದಿ ಭದ್ರಪ್ಪನಾಯಕನ ಕಾಲದ ಈ ಎರಡು ಶಾಸನಗಳು ಆ ಕಾಲದ ಧಾರ್ಮಿಕ, ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿ-ಗತಿಗಳನ್ನು ಅಭ್ಯಾಸ ಮಾಡಲು ಜೊತೆಗೆ ಅಂದಿನ ಸ್ಥಳನಾಮಗಳ ಅಧ್ಯಯನ ಮಾಡಲು ತುಂಬಾ ಪ್ರಯೋಜನವಾಗಿವೆ[1].

---

೧. ತಮ್ಮಲ್ಲಿದ್ದ ಈ ಪುಸ್ತಕವನ್ನು ಸಂಶೋಧನೆಯಲ್ಲಿ ಬಳಸಿಕೊಳ್ಳಲು ಅನುಮತಿ ಇತ್ತ ದೂರ್ವಾಸಪುರದ ಶ್ರೀ ರಾಮಾಚಾರ ಇವರಿಗೂ ಲೇಖನ ತಯಾರಿಯಲ್ಲಿ ಸಹಕಾರ ನೀಡಿದ ಶ್ರೀ.ಕೆಳದಿ ಗುಂಡಾಜೋಯಿಸರಿಗೂ ಕೃತಜ್ಞನಾಗಿದ್ದೇನೆ.

ದ ಪವರ್ ಆ್ಯಂಡ್ ದ ಗ್ಲೋರಿ ಮತ್ತು ಸಂಸ್ಕಾರಗಳಲ್ಲಿಯ ಧಾರ್ಮಿಕ ಅವನತಿ : ತೌಲನಿಕ ಅಧ್ಯಯನ

★ ಬಸವರಾಜ ನಾಯ್ಕರ

ಇತ್ತೀಚಿನ ದಿನಗಳಲ್ಲಿ ಜಗತ್ತಿನ ಎಲ್ಲ ಪ್ರಮುಖ ವಿಶ್ವವಿದ್ಯಾಲಯಗಳಲ್ಲಿ ತುಲನಾತ್ಮಕ ಸಾಹಿತ್ಯಾಧ್ಯಯನಕ್ಕೆ ವಿಶೇಷ ಗಮನ ಕೊಡಲಾಗುತ್ತಿದೆ. ಯಾವುದೇ ಒಂದು ಕೃತಿಯ ಮೌಲ್ಯ ನಿರ್ಣಯ ಮಾಡಬೇಕಾದರೆ ಆ ಕೃತಿಯನ್ನು ಅದೇ ತರಹದ ಇನ್ನಿತರ ಕೃತಿಗಳೊಂದಿಗ ಹೋಲಿಸಿ ನೋಡಬೇಕೆಂಬುದು ಅತ್ಯಂತ ಮಹತ್ವದ ಜವಾಬ್ದಾರಿಯಾಗಿರುತ್ತದೆ. ಸಾಹಿತ್ಯ ವಿಮರ್ಶೆಯ ಪ್ರಶ್ನೆಗಳೆಲ್ಲ ಹೆಚ್ಚಾಗಿ ತುಲನಾತ್ಮಕ ವಿಮರ್ಶೆಯ ಪ್ರಶ್ನೆಗಳೇ ಆಗಿರುತ್ತವೆಂದು ಕೆನಡಾ ದೇಶದ ಸುಪ್ರಸಿದ್ಧ ವಿಮರ್ಶಕ ನಾರ್ತ್ರೊಪ್ ಫ್ರಾಯ್ ಹೇಳಿದ್ದು ಬಹಳ ಔಚಿತ್ಯಪೂರ್ಣವಾಗಿದೆ. ಅನೇಕ ಭಾಷೆಗಳುಳ್ಳ ಭಾರತ ದೇಶದಲ್ಲಿಯಂತೂ ತುಲನಾತ್ಮಕ ಸಾಹಿತ್ಯದ ಅಧ್ಯಯನ ಬಹಳ ಅವಶ್ಯವಾಗಿದೆಯೆಂಬುದನ್ನು ಮತ್ತೆ ಹೇಳಬೇಕಾಗಿಲ್ಲ. ಈ ಭಾರತೀಯ ತುಲನಾತ್ಮಕ ಸಾಹಿತ್ಯಾಧ್ಯಯನ ಕೊನೆಗೆ ಜಾಗತಿಕ ತುಲನಾತ್ಮಕ ಅಧ್ಯಯನಕ್ಕೆ ದಾರಿಮಾಡಿಕೊಡಬೇಕೆಂಬುದು ಎಲ್ಲ ಸಾಹಿತ್ಯ ವಿಮರ್ಶಕರ ಮಹದಾಶೆಯಾಗಿದೆ. ತುಲನಾತ್ಮಕ ಸಾಹಿತ್ಯಾಧ್ಯಯನದ ಗುರಿ ಸಾಂಸ್ಕೃತಿಕ, ಜನಾಂಗಿಕ, ಭೌಗೋಲಿಕ ಮತ್ತು ಚಾರಿತ್ರಿಕ ಮುಂತಾದ ವೈವಿಧ್ಯಗಳ ಮಧ್ಯದಲ್ಲಿಯೂ ಮಾನವ ಜೀವನದ, ಮಾನವ ಭಾವನೆಗಳ ಮತ್ತು ಪ್ರತಿಭೆಯ ಏಕತೆ ಅಥವಾ ಸಾದೃಶ್ಯತೆಯನ್ನು ತೋರಿಸುವುದೇ ಆಗಿದೆ.

ಈ ಲೇಖನದಲ್ಲಿ ಇಂಥದೊಂದು ಚಿಕ್ಕ ಪ್ರಯತ್ನವನ್ನು ಮಾತ್ರ ಮಾಡಿದೆ. ಇಲ್ಲಿ ಆರಿಸಿಕೊಂಡ ಕಾದಂಬರಿಗಳು ಎರಡು: ಒಂದನೆಯದು, ಗ್ರಹಾಮ್ ಗ್ರೀನರ ''ದ ಪವರ್ ಆ್ಯಂಡ್ ದ ಗ್ಲೋರಿ'', ಎರಡನೆಯದು, ಅನಂತಮೂರ್ತಿಯವರ ''ಸಂಸ್ಕಾರ''. ಇವೆರಡೂ ಕಾದಂಬರಿಗಳನ್ನು ತುಲನೆಗೆ ಆರಿಸಿಕೊಳ್ಳುವುದಕ್ಕೆ ಮುಖ್ಯ ಕಾರಣ ಅವೆರಡರಲ್ಲಿ ಸಾಮಾನ್ಯವಾಗಿ ಕಂಡುಬರುವ ಧಾರ್ಮಿಕ ಅವನತಿಯ ವಸ್ತು. ''ಶಕ್ತಿ ಮತ್ತು ಕೀರ್ತಿ'' (The Power and the Glory) ಕಾದಂಬರಿಯಲ್ಲಿ ಮೆಕ್ಸಿಕೊ ದೇಶದಲ್ಲಿದ್ದ ಕ್ರಿಶ್ಚಿಯನ್ ಪಾದ್ರಿಯೊಬ್ಬನ ಅವನತಿಯ ಚಿತ್ರಣವಿದ್ದರೆ, ''ಸಂಸ್ಕಾರ''ದಲ್ಲಿ ಹಳೆಯ ಮೈಸೂರಿನ ಬ್ರಾಹ್ಮಣ ಪಂಡಿತನೊಬ್ಬನ ಅವನತಿಯ ಚಿತ್ರಣವಿದೆ. ಹೀಗೆ ಎರಡೂ ಕಾದಂಬರಿಗಳಲ್ಲಿ ಎರಡು ಧಾರ್ಮಿಕ ಹಿನ್ನೆಲೆಗಳಲ್ಲಿ ನಡೆಯುವ ಘಟನೆಗಳನ್ನು ಚಿತ್ರಿಸಲಾಗಿದೆ. ಎರಡೂ ಧಾರ್ಮಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆಗಳು ಪರಸ್ಪರ ಭಿನ್ನವಾಗಿದ್ದರೂ ಕೂಡ, ಧಾರ್ಮಿಕ ಆದರ್ಶಗಳನ್ನು ಅಪವಿತ್ರಗೊಳಿಸುವ ಕಾರ್ಯವು ಅವೆರಡಕ್ಕೂ ಸಾಮಾನ್ಯವಾದ ಅಂಶವಾಗಿದೆ. ಆದ್ದರಿಂದ ಅವೆರಡೂ ಕಾದಂಬರಿಗಳು ಮಾನವ ಜೀವನದ ಸಾರ್ವಕಾಲಿಕತೆಯನ್ನು ಎತ್ತಿತೋರಿಸುತ್ತವೆ.

''ಶಕ್ತಿ ಮತ್ತು ಕೀರ್ತಿ'' ಕಾದಂಬರಿಯಲ್ಲಿ ಮೆಕ್ಸಿಕೊ ದೇಶದ ಹಿನ್ನೆಲೆಯಿದೆ. ಮೆಕ್ಸಿಕೊ ದೇಶದಲ್ಲಿ ಕಮ್ಯುನಿಷ್ಟ್ ಸರಕಾರವು ಆಳುತ್ತಿರುವುದರಿಂದ ಅವರು ತಮ್ಮ ದೇಶದಲ್ಲಿ ಎಲ್ಲ ತರಹದ ಧಾರ್ಮಿಕ ಚಟುವಟಿಕೆಗಳನ್ನು, ಧಾರ್ಮಿಕ ವ್ಯಕ್ತಿಗಳನ್ನು ಮತ್ತು ಧಾರ್ಮಿಕ ಸಂಸ್ಥೆಗಳನ್ನು ಬಹಿಷ್ಕರಿಸಿದ್ದಾರೆ. ಮೊದಲು ಕ್ರೈಸ್ತ ದೇವಾಲಯಗಳಾದ ಮಂದಿರಗಳನ್ನು ಈಗ ಹೋಟೆಲ್ಲು ಅಥವಾ ಕ್ಯಾಬರೆ ಹಾಲ್‌ಗಳನ್ನಾಗಿ ಪರಿವರ್ತಿಸಿದ್ದಾರೆ. ಅವರೆಲ್ಲ ಅಪ್ಪಟ ಭೌತಿಕವಾದಿಗಳಾಗಿದ್ದು, ಯಾವ ತರಹದ ಧಾರ್ಮಿಕ ಅಥವಾ ಆಧ್ಯಾತ್ಮಿಕ ಕಾರ್ಯಗಳನ್ನೂ ಅವರು ಸಹಿಸುವದಿಲ್ಲ. ಇಂಥ ನಾಸ್ತಿಕ ಪರಿಸರದಲ್ಲಿ ಧಾರ್ಮಿಕ ವೃತ್ತಿಯನ್ನು ಮುಂದುವರಿಸುವದು ಒಂದು ದೊಡ್ಡ ಅಪರಾಧವಾಗಿದೆ. ಸದ್ಯ ವ್ಹಿಸ್ಕಿ ಪಾದ್ರಿಯೊಬ್ಬನೇ ಅಲ್ಲಿ ಉಳಿದಿದ್ದು ಆತ ರೋಮನ್ ಕ್ಯಾಥೋಲಿಕ್ ಧರ್ಮದ ಆದರ್ಶಗಳನ್ನು ಎತ್ತಿಹಿಡಿಯಲು ಪ್ರಯತ್ನಿಸುತ್ತಾನೆ. ಅದರಂತೆ ''ಸಂಸ್ಕಾರ''ದಲ್ಲಿ ಚಿತ್ರಿತವಾದ ಪ್ರಾಣೇಶಾಚಾರ್ಯ ದೂರ್ವಾಸಪುರದ ಪ್ರಮುಖ ನಿವಾಸಿಯಾಗಿದ್ದು, ಕಾಶಿಯಲ್ಲಿ ಕಲಿತು ವೇದಾಂತ ಶಿರೋಮಣಿಯೆಂಬ ಬಿರುದನ್ನು ಸಂಪಾದಿಸಿದ್ದಾನೆ. ಮಾಧ್ವಬ್ರಾಹ್ಮಣ ಮತದ ಆದರ್ಶಗಳನ್ನು ಎತ್ತಿಹಿಡಿಯುವ ಜವಾಬ್ದಾರಿಯನ್ನು ಹೊಂದಿದ ಆತನನ್ನು ಆ ಊರಿನ ಇತರ ಬ್ರಾಹ್ಮಣರು ಗೌರವದಿಂದ ಕಾಣುತ್ತಾರೆ. ಹೀಗೆ ಇಬ್ಬರೂ ಧಾರ್ಮಿಕ ವ್ಯಕ್ತಿಗಳು ತಮ್ಮ ಧರ್ಮಗಳ ಆದರ್ಶಗಳ ಸಾಕಾರ ಮೂರ್ತಿಗಳಾಗಿರಬೇಕಾಗಿದೆ. ಪಾದ್ರಿಯನ್ನು ಸರ್ಕಾರಿ ಸೈನ್ಯಾಧಿಕಾರಿ ಬೆನ್ನತ್ತಿ ಅರಸುತ್ತಿದ್ದರೂ ಕೂಡ, ಆತ ಹಳ್ಳಿಯಿಂದ ಹಳ್ಳಿಗೆ ಸಂಚರಿಸುತ್ತ ಅವರ ಧಾರ್ಮಿಕ ವಿಧಿಗಳಾದ ಸಾಮೂಹಿಕ ಪ್ರಾರ್ಥನೆ (mass), ಕ್ರಿಶ್ಚಿಯನ್ ದೀಕ್ಷೆ (Baptism) ಮತ್ತು ತಪ್ಪೊಪ್ಪಿಗೆ (Confession) ಮುಂತಾದವುಗಳನ್ನು ನೆರವೇರಿಸುತ್ತಾನೆ. ಏಕೆಂದರೆ ಜನರಿಗೆ ಧರ್ಮದ ಅವಶ್ಯಕತೆ ಇರುವುದರಿಂದ ಪಾದ್ರಿಯು ಅವರಿಗೆ ದೇವರ ಅನುಗ್ರಹವನ್ನು ದೊರಕಿಸಿಕೊಡುವ ಜವಾಬ್ದಾರಿಯನ್ನು ಹೊಂದಿದ್ದಾನೆ. ಅದರಂತೆ ದೂರ್ವಾಸಪುರದ ನಿವಾಸಿಯಾದ ಪ್ರಾಣೇಶಾಚಾರ್ಯನು ಕಾಶಿಯಲ್ಲಿ ವೇದಾಂತವನ್ನು ಕಲಿತು ವೇದಾಂತ ಶಿರೋಮಣಿಯೆಂಬ ಪದವಿಯನ್ನು ಪಡೆದಿದ್ದು, ಬ್ರಾಹ್ಮಣ ಸಮಾಜಕ್ಕೆ ನೀತಿಮಾರ್ಗದರ್ಶಕನಾಗಿದ್ದಾನೆ.

ಆದರೆ ಈ ಇಬ್ಬರೂ ಕಥಾನಾಯಕರು ತಮ್ಮ ಧರ್ಮಗಳ ಆದರ್ಶಗಳ ಎತ್ತರಕ್ಕೆ ಏರದೆ, ತಮ್ಮ ಮಾನವ ಸಹಜವಾದ ಕೊರತೆಗಳಿಂದಾಗಿ ಈ ಆದರ್ಶಗಳನ್ನು ಅಪಮೌಲ್ಯಗೊಳಿಸಿ ತಮಗೂ, ತಮ್ಮ ಧರ್ಮಗಳಿಗೂ ಕೆಟ್ಟ ಹೆಸರನ್ನು ತಂದುಕೊಳ್ಳುತ್ತಾರೆ. ಉದಾಹರಣೆಗೆ ''ಶಕ್ತಿ ಮತ್ತು ಕೀರ್ತಿ'' ಕಾದಂಬರಿಯಲ್ಲಿ ಪಾದ್ರಿಯು ಅನೇಕ ಕ್ಷುದ್ರ ಪಾಪಗಳನ್ನೂ (Venial sins) ಮತ್ತು ಮಹಾಪಾಪ (mortal sin) ವನ್ನೂ ಎಸಗಿದ್ದಾನೆ. ಆತ ತಾನು ಸೈನ್ಯಾಧಿಕಾರಿಯ ಕೈಯಿಂದ ಪಾರಾಗುವುದಕ್ಕಾಗಿ ತನ್ನ ಹೆಸರನ್ನು ಮುಚ್ಚಿಟ್ಟುಕೊಂಡು ಮಾಂಟೆ ಎಂಬ ಸುಳ್ಳು ಹೆಸರನ್ನು ಹೇಳುತ್ತ ಹೋಗುತ್ತಾನೆ. ಆತ

ಪಾದ್ರಿಯಾದರೂ ಕುಡಿತದ ಚಟಕ್ಕೆ ಬಲಿಯಾಗಿದ್ದಾನೆ. ಆತ ಹೋದ ಹೋದಲ್ಲೆಲ್ಲ ವಿಸ್ಕಿ ಅಥವಾ ಸುರೆಯನ್ನು ಬಾಟಲಿಯಲ್ಲಿ ಮುಚ್ಚಿಕೊಂಡು ಹೋಗುತ್ತಾನೆ. ಇಲ್ಲವೆ ಜನರಿಂದ ಕೇಳಿ ಪಡೆಯುತ್ತಾನೆ. ಆದ್ದರಿಂದಲೇ ಅವನಿಗೆ "ವಿಸ್ಕಿ ಪಾದ್ರಿ" ಎಂಬ ವ್ಯಂಗ್ಯ ಹೆಸರು ಬಿದ್ದುಬಿಟ್ಟಿದೆ. ಸುಳ್ಳು ಹೇಳುವುದು ಮತ್ತು ಕುಡಿಯುವಂಥ ಕ್ಷುದ್ರಪಾಪಗಳಲ್ಲದೆ ಆತ ವ್ಯಭಿಚಾರದಂಥ ಮಹಾಪಾಪವನ್ನೂ ಮಾಡಿದ್ದಾನೆ. ಕೆಲವು ವರುಷಗಳ ಹಿಂದೆ ಆತ ಕುಡಿತದ ಅಮಲಿನಲ್ಲಿದ್ದು ಏಕಾಕಿಯಾಗಿದ್ದಾಗ ಮೇರಿಯಾ ಎಂಬ ತರುಣಿಯೊಂದಿಗೆ ಲೈಂಗಿಕ ಸಂಬಂಧವನ್ನು ಹೊಂದಿ ಅವಳಿಂದ ಬ್ರಿಜಿತಾ ಎಂಬ ಮಗಳನ್ನೂ ಪಡೆದಿದ್ದಾನೆ. ಪಾದ್ರಿಯಾಗಿದ್ದೂ ಇಂಥ ಪಾಪಗಳನ್ನೆಸಗಿದ್ದಕ್ಕಾಗಿ ಆತನ ವಿರೋಧಿಗಳು ಗೇಲಿಮಾಡುತ್ತಾರೆ. ಅಷ್ಟೇ ಏಕೆ, ಆತನೊಂದಿಗೆ ಪಾಪದಲ್ಲಿ ಸಹಭಾಗಿಯಾದ ಮೇರಿಯಾಳೇ ಸ್ವತಃ ಅವನನ್ನು ಗೇಲಿಮಾಡುತ್ತಾಳೆ:

> ನೀನೊಬ್ಬ ಕೆಟ್ಟ ಪಾದ್ರಿಯೆಂಬುದು ನನಗೆ ಗೊತ್ತು. ನಾವಿಬ್ಬರೂ ಕೂಡಿ ಇದ್ದೆವಲ್ಲ. ನೀನು ಮಾಡಿದ್ದು ಇದೊಂದೇ ಅಲ್ಲವೆಂದು ನಾನು ಜಿದ್ದುಕಟ್ಟಿ ಹೇಳುತ್ತೇನೆ. ನಾನು ನಿನ್ನ ಬಗೆಗೆ ಅನೇಕ ವಿಷಯಗಳನ್ನು ಕೇಳಿದ್ದೇನೆ. ನಿನ್ನಂಥ ವಿಸ್ಕಿ ಪಾದ್ರಿ ಈ ಭೂಮಿಯ ಮೇಲೆ ಬಾಳಿರಬೇಕೆಂದು ದೇವರು ಬಯಸುತ್ತಾನೆಯೆ? ಒಂದು ವೇಳೆ ನೀನು ಸತ್ತರೆ ನೀನೊಬ್ಬ ಹುತಾತ್ಮನಾಗುತ್ತಿ ಹೌದಲ್ಲೊ? ನೀನೆಂಥ ಹುತಾತ್ಮನಾಗುತ್ತಿ ಎಂದು ತಿಳಿದಿದ್ದಿ? ಹಾಗಾದರೆ ನೀನು ಜನರ ಅಪಹಾಸ್ಯಕ್ಕೆ ಗುರಿಯಾಗುತ್ತಿ. (ಶಕ್ತಿ ಮತ್ತು ಕೀರ್ತಿ, ಪು 79)

ಅದೇ ರೀತಿಯಲ್ಲಿ ಪ್ರಾಣೇಶಾಚಾರ್ಯನು ಧರ್ಮಶಾಸ್ತ್ರದಲ್ಲಿ ಪಾರಂಗತನಾಗಿದ್ದು, ನಾರಣಪ್ಪನ ಅಂತ್ಯಸಂಸ್ಕಾರವನ್ನು ಮಾಡಬೇಕೊ ಬೇಡವೊ ಎಂಬುದರ ನಿರ್ಣಯ ಮಾಡಬೇಕಾಗಿದೆ. ಆದರೆ ನಾರಣಪ್ಪನು ಬ್ರಾಹ್ಮಣ ಧರ್ಮದ ಆದರ್ಶಗಳನ್ನೆಲ್ಲ ಗಾಳಿಗೆ ತೂರಿದ್ದರಿಂದ ಆತನ ಬಗೆಗೆ ಪ್ರಾಣೇಶಾಚಾರ್ಯನಿಗೆ ಮತ್ತು ಇತರ ಬ್ರಾಹ್ಮಣರಿಗೆ ಬಹಳಷ್ಟು ತಿರಸ್ಕಾರವಿದೆ. ನಾರಣಪ್ಪನು ಮುಸ್ಲಿಮರೊಡನೆ ಮೀನು, ಮಾಂಸಗಳನ್ನು ತಿಂದು, ಮಾದಕ ಪೇಯಗಳನ್ನು ಕುಡಿದು, ಕೆಳಜಾತಿಯ ಚಂದ್ರಿಯೊಡನೆ ಲೈಂಗಿಕ ಸಂಬಂಧವನ್ನು ಹೊಂದಿದ್ದರಿಂದ ದೂರ್ವಾಸಪುರದ ಬ್ರಾಹ್ಮಣರೆಲ್ಲ ಆತನನ್ನು ತಿರಸ್ಕಾರದಿಂದ ನೋಡುತ್ತಾರೆ. ಆದರೆ ವಿಪರ್ಯಾಸವೆಂದರೆ ಪ್ರಾಣೇಶಾಚಾರ್ಯನು ಕೂಡ ನಾರಣಪ್ಪನ ಅಂತ್ಯಸಂಸ್ಕಾರದ ಬಗೆಗೆ ಯಾವ ನಿರ್ಧಾರವನ್ನೂ ತೆಗೆದುಕೊಳ್ಳಲಾಗುವುದಿಲ್ಲ. ಕಾಶಿಯಲ್ಲಿ ಕಲಿತು ಬಂದ ಧರ್ಮಶಾಸ್ತ್ರ ಅಥವಾ ವೇದಾಂತದ ಜ್ಞಾನವನ್ನು ಆತ ಸರಿಯಾಗಿ ಉಪಯೋಗಿಸಿಕೊಳ್ಳುವುದಿಲ್ಲ. ಅಷ್ಟೇ ಅಲ್ಲ,

ಅವನ ನಿರ್ಧಾರಕ್ಕಾಗಿ ಕಾಯ್ದುಕುಳಿತ ಚಂದ್ರಿ ರಾತ್ರಿ ಕತ್ತಲಲ್ಲಿ ಆತನ ಕೈಗಳನ್ನು ತನ್ನೆದೆಗಳಿಗೆ ಹಚ್ಚಿಕೊಂಡಾಗ ಆತನ ಧರ್ಮಶಾಸ್ತ್ರದ ಜ್ಞಾನವೆಲ್ಲ ಗಾಳಿಗೆ ಹಾರಿಹೋಗಿ ಆತ ಹುಚ್ಚೆದ್ದು ಅವಳ ತೊಡೆ, ನಿತಂಬಗಳನ್ನು ಶೋಧಿಸಿ, ಅವಳೊಡನೆ ರತಿಕ್ರೀಡೆಯಲ್ಲಿ ತೊಡಗುತ್ತಾನೆ. ಹೀಗೆ ಅನೇಕ ವರುಷಗಳಿಂದ ಶ್ರಮಪಟ್ಟು ಪಡೆದ ಧರ್ಮ ಅಥವಾ ನೀತಿ ಲೈಂಗಿಕ ಸುಖದೆದುರಿಗೆ ಮಂಜುಕರಗಿದಂತೆ ಮಾಯವಾಗಿ ಬಿಡುತ್ತದೆ. ಈಗ ಆತನಿಗೂ ನಾರಣಪ್ಪನಿಗೂ ಗುಣಾತ್ಮಕವಾಗಿ ಯಾವ ಅಂತರ ಉಳಿಯುವುದಿಲ್ಲ. ಹೀಗೆ ವ್ಹಿಸ್ಕಿ ಪಾದ್ರಿ ಮತ್ತು ಪ್ರಾಣೇಶಾಚಾರ್ಯ ಇಬ್ಬರೂ ವ್ಯಭಿಚಾರವೆಂಬ ಮಹಾಪಾಪದಲ್ಲಿ ತೊಡಗಿದ್ದಾರೆ. ಆದರೆ ಅದಕ್ಕೆ ಕಾರಣವಾದ ಸಂದರ್ಭಗಳು ಭಿನ್ನವಾಗಿವೆ. ವ್ಹಿಸ್ಕಿಪಾದ್ರಿಯು ಮೇರಿಯಾಳೊಡನೆ ವ್ಯಭಿಚಾರ ಮಾಡಲಿಕ್ಕೆ ಕಾರಣ ಆತನ ಏಕಾಕಿತನ ಮತ್ತು ಕುಡಿತದ ಅಮಲುಗಳಾಗಿದ್ದರೆ, ಪ್ರಾಣೇಶಾಚಾರ್ಯ ಚಂದ್ರಿಯೊಡನೆ ಮಾಡುವ ವ್ಯಭಿಚಾರಕ್ಕೆ ಇಂಥ ಯಾವ ಕ್ಷಮ್ಯ ಕಾರಣಗಳಿಲ್ಲ. ಇಡೀ ಊರಿಗೆ ಊರೇ ಆತನ ನಿರ್ಧಾರಕ್ಕಾಗಿ ಕಾಯ್ದುಕುಳಿತಾಗ, ಆತ ಪ್ರಜ್ಞಾಪೂರ್ವಕವಾಗಿಯೇ ಅವಳ ಪ್ರಚೋದನೆಗೆ ಒಳಪಟ್ಟು ಪಾಪದಲ್ಲಿ ತೊಡಗುತ್ತಾನೆ. ಹೀಗೆ ತುಲನಾತ್ಮಕವಾಗಿ ನೋಡಿದಾಗ ವ್ಹಿಸ್ಕಿ ಪಾದ್ರಿಯ ವ್ಯಭಿಚಾರಕ್ಕಿಂತ ಪ್ರಾಣೇಶಾಚಾರ್ಯನ ವ್ಯಭಿಚಾರ ಹೆಚ್ಚು ಅಕ್ಷಮ್ಯವೆನಿಸುತ್ತದೆ. ಈ ಪಾಪವೆಸಗಿದ ನಂತರ ಅದನ್ನು ತನ್ನ ಮನಸ್ಸಿನಲ್ಲಿ ತಾನೇ ಸಮರ್ಥಿಸಿಕೊಳ್ಳುವುದಕ್ಕಾಗಿ ನಾರಣಪ್ಪ ಮತ್ತು ಚಂದ್ರಿಯ ಅನೈತಿಕ ಸಂಬಂಧ, ಮಹಾಬಲ ತನ್ನ ತತ್ವಜ್ಞಾನವನ್ನೆಲ್ಲ ಗಾಳಿಗೆ ತೂರಿ ಕಾಶಿಯಲ್ಲಿ ವೇಶ್ಯೆಯೊಂದಿಗೆ ಜೀವಿಸಿದ್ದು ಮತ್ತು ಕೆಳಜಾತಿಯ ಬೆಳ್ಳಿಯೊಡನೆ ಶ್ರೀಪತಿ ಹೊಂದಿದ ಅನೈತಿಕ ಸಂಬಂಧ ಮುಂತಾದ ಅನುಕೂಲಕರ ಉದಾಹರಣೆಗಳನ್ನು ನೆನಪಿಸಿಕೊಳ್ಳುತ್ತಾನೆ. ಹೀಗೆ ಪ್ರಾಣೇಶಾಚಾರ್ಯ ತನ್ನ ಬ್ರಾಹ್ಮಣ್ಯದ ಆದರ್ಶದಿಂದ ಕೆಳಗೆ ಜಾರಿ, ಅವನತಿ ಹೊಂದುತ್ತಾನೆ. ಅವನಲ್ಲಿ ಪ್ರಕೃತಿಯು ವಿವೇಕದ ಮೇಲೆ ವಿಜಯ ಸಾಧಿಸುತ್ತದೆ.

ಹೀಗೆ ವ್ಯಭಿಚಾರವು ವ್ಹಿಸ್ಕಿಪಾದ್ರಿ ಮತ್ತು ಪ್ರಾಣೇಶಾಚಾರ್ಯ ಮಾಡಿದ ಸಮಾನ ಪಾಪವಾಗಿದ್ದರೂ ಕೆಲವು ವಿವರಗಳಲ್ಲಿ ಭಿನ್ನತೆ ಕಂಡುಬರುತ್ತದೆ. ಅದೇನೆಂದರೆ ವ್ಹಿಸ್ಕಿಪಾದ್ರಿಯು ಮೇರಿಯಾಳೊಂದಿಗೆ ನಡೆಸಿದ ವ್ಯಭಿಚಾರವು ಹಲವು ವರುಷಗಳ ಹಿಂದೆಯೇ ನಡೆದಿದ್ದು ಈಗ ಅದರ ಶುಷ್ಕ ನೆನಪು ಮಾತ್ರ ಅವನ ಮನಸ್ಸಿನಲ್ಲಿ ಉಳಿದಿದೆ. ಆದರೆ ಪ್ರಾಣೇಶಾಚಾರ್ಯ ಚಂದ್ರಿಯ ಜೊತೆಗೆ ನಡೆಸಿದ ಲೈಂಗಿಕ ಸಂಬಂಧ ಆತನ ನೆನಪಿನಲ್ಲಿ ಇನ್ನೂ ಹಸಿಹಸಿಯಾಗಿಯೇ ಉಳಿದಿದ್ದು, ಅದು ಆಗಾಗ ಆತನ ವಿಕಾರವನ್ನು ಉಲ್ಬಣಿಸುತ್ತದೆ.

ಎರಡೂ ಕಾದಂಬರಿಗಳ ಕಥಾನಾಯಕರಲ್ಲಿರುವ ಇನ್ನೊಂದು ಸಾಮ್ಯಾಂಶವೆಂದರೆ ಅವರಿಬ್ಬರೂ ವ್ಯಭಿಚಾರದಂಥ ಮಹಾಪಾಪವಲ್ಲದೆ, ಇನ್ನಿತರ

ಕೆಲವು ಕ್ಷುದ್ರ ಪಾಪಗಳನ್ನೂ ಎಸಗಿದ್ದಾರೆ. ಉದಾಹರಣೆಗೆ ವ್ಹಿಸ್ಕಿಪಾದ್ರಿಯು ಮಧ್ಯಪಾನದ ದಾಸನಾಗಿ ಬಿಟ್ಟಿದ್ದಾನೆ. ಆತನೆಲ್ಲಿ ಹೋದರೂ ವ್ಹಿಸ್ಕಿ ಅಥವಾ ಉತ್ತಮ ಸುರೆಯೇ ಬೇಕೆಂದು ಬಯಸುತ್ತಾನೆ. ಅದಕ್ಕಾಗಿ ಜನರನ್ನು ವಿನಂತಿಸಿಕೊಳ್ಳುತ್ತಾನೆ. ಜನರು ಕಾಫಿ, ಚಹ ವಗೈರೆ ಕೊಟ್ಟರೆ ಅವುಗಳನ್ನು ಸ್ವೀಕರಿಸದೆ, ವ್ಹಿಸ್ಕಿಯನ್ನೇ ಕೊಡಿರೆಂದು ಒತ್ತಾಯಿಸುತ್ತಾನೆ. ಕೊನೆಗೆ ಒಮ್ಮೆ ಕಿಸೆಯಲ್ಲಿ ವ್ಹಿಸ್ಕಿ ಬಾಟಲಿಯನ್ನು ಮುಚ್ಚಿಟ್ಟುಕೊಂಡು ಪಾರಾಗಿ ಹೋಗುವಾಗಲೇ ಪೋಲೀಸರ ಕೈಯ್ಯಲ್ಲಿ ಸಿಕ್ಕುಕೊಂಡು ಸೆರೆಮನೆಯಲ್ಲಿ ಕೊಳೆಯಬೇಕಾಗುತ್ತದೆ. ಅದೇ ರೀತಿ ಪ್ರಾಣೇಶಾಚಾರ್ಯನು ಇದೇ ಅಲ್ಲದಿದ್ದರೂ, ಇಂಥದೇ ತರಹದ, ಬ್ರಾಹ್ಮಣ ನೀತಿಗೆ ವಿರುದ್ಧವಾದ ಪಾಪವನ್ನು ಮಾಡುತ್ತಾನೆ. ಆತನ ಹೆಂಡತಿ ಸತ್ತನಂತರ ಸೂತಕದ ಅವಧಿಯಲ್ಲಿದ್ದಾಗಲೇ ಆತ ಚಂದ್ರಿಯೊಡನೆ ನಡೆಸಿದ ಕಾಮಕೇಳಿಯ ಹಸಿ ನೆನಪಿನಿಂದ ಪ್ರಚೋದಿತನಾಗಿ, ನಾರಣಪ್ಪನ ಅಂತ್ಯ ಸಂಸ್ಕಾರದ ಬಗೆಗೆ ಯಾವ ನಿರ್ಧಾರವನ್ನೂ ಕೈಕೊಳ್ಳದೆ, ತನ್ನ ಹಳ್ಳಿಯನ್ನು ಬಿಟ್ಟು, ಧರ್ಮಸ್ಥಳಕ್ಕೆ ಹೋಗಿ, ಅಲ್ಲಿ ಮಠದಲ್ಲಿ ಇನ್ನಿತರ ಬ್ರಾಹ್ಮಣರೊಂದಿಗೆ ಪಂಕ್ತಿಯಲ್ಲಿ ಕುಳಿತು ಊಟಮಾಡುವುದರಿಂದ ಮಠದ ಪಾವಿತ್ರ್ಯ ಹಾಳಾಗುತ್ತದೆಂಬುದು ತಿಳಿದಿದ್ದರೂ, ಅವರೊಂದಿಗೆ ಊಟ ಮಾಡುತ್ತಾನೆ. ಅದಕ್ಕೆ ಕಾರಣವೆಂದರೆ ಆತನಿಗೆ ಹಸಿವನ್ನು ತಾಳಿಕೊಳ್ಳುವ ಸಾಮರ್ಥ್ಯವಿಲ್ಲದುದೇ ಆಗಿದೆ. ಈ ಪಾಪವನ್ನು ಮಾಡಿದ ನಂತರ ಅದನ್ನೊಂದು ಆಪದ್ಧರ್ಮವೆಂದು ತನಗೆ ತಾನೇ ಸಮರ್ಥಿಸಿಕೊಳ್ಳುತ್ತಾನೆ.

ಇಬ್ಬರೂ ಕಥಾನಾಯಕರು ಎಸಗುವ ಇನ್ನೊಂದು ಸಾಮಾನ್ಯ ಕ್ಷುದ್ರ ಪಾಪ (Venial sin) ಎಂದರೆ ಸುಳ್ಳುಹೇಳುವದು. ವ್ಹಿಸ್ಕಿ ಪಾದ್ರಿಯನ್ನು ಹಳ್ಳಿಯಿಂದ ಹಳ್ಳಿಗೆ ಹುಡುಕುತ್ತ ಬಂದ ಸೈನ್ಯಾಧಿಕಾರಿಗೆ ಪಾದ್ರಿಯು ತನ್ನ ಹೆಸರು ಮಾಂಟೆ ಎಂದೂ, ತಾನೊಬ್ಬ ಗೃಹಸ್ಥನೆಂದೂ, ತನಗೊಬ್ಬ ಹೆಂಡತಿ ಮತ್ತು ಒಬ್ಬ ಮಗಳಿದ್ದಾಳೆಂದೂ ಸುಳ್ಳು ಹೇಳುತ್ತಾನೆ. ಅದರಂತೆ ಕೀಳುಜಾತಿಯ ನಿಗ್ರೊನೊಬ್ಬ ಆತನಿಗೆ ಗಂಟುಬಿದ್ದು ತನ್ನ ಪಾಪಗಳನ್ನು ಕೇಳಿಸಿಕೊಳ್ಳಬೇಕೆಂದು ವಿನಂತಿಸಿಕೊಂಡಾಗ ಪಾದ್ರಿಯು ತಾನು ಪಾದ್ರಿಯಲ್ಲವೆಂದು ಸುಳ್ಳು ಹೇಳಿ ಜಾರಿಕೊಳ್ಳಲು ಪ್ರಯತ್ನಿಸುತ್ತಾನೆ. ಅದರಂತೆ ಪ್ರಾಣೇಶಾಚಾರ್ಯನೂ ದೂರ್ವಾಸಪುರದ ಮತ್ತು ಇತರ ಅಗ್ರಹಾರಗಳ ಬ್ರಾಹ್ಮಣರಿಗೆ ತಾನಾರು, ತಾನೆಲ್ಲಿ ಹೋಗುತ್ತಿದ್ದೇನೆಂಬುದನ್ನು ಸರಿಯಾಗಿ ಹೇಳದೆ ಸುಳ್ಳುಹೇಳುತ್ತ ಹೋಗುತ್ತಾನೆ. ದಾರಿಯಲ್ಲಿ ಅತ್ಯಂತ ಸ್ನೇಹಪರನಾದ ಪುಟ್ಟನು ಬೆನ್ನತ್ತಿದಾಗಲೂ ಪ್ರಾಣೇಶಾಚಾರ್ಯ ಆತನಿಗೆ ತನ್ನ ಹೆಸರು, ದೆಸೆ, ಪ್ರಯಾಣದ ಉದ್ದೇಶ ಅಥವಾ ದಿಕ್ಕುಗಳನ್ನು ಹೇಳದೆ, ಸುಳ್ಳುಹೇಳುತ್ತಲೆ, ಅವನಿಂದ ಪಾರಾಗಿ ಹೋಗುವ ಪ್ರಯತ್ನ ಮಾಡುತ್ತಾನೆ.

ಇಬ್ಬರೂ ಕಥಾನಾಯಕರು ತಾವು ಮಾಡಿದ ಪಾಪಕ್ಕಾಗಿ ಒಂದು ತರಹದ ಶಿಕ್ಷೆಯನ್ನು ಅನುಭವಿಸಬೇಕಾಗುತ್ತದೆ. ಅದುವೆ ನರಕ ಸದೃಶ ಅನುಭವ. ವ್ಹಿಸ್ಕಿಪಾದ್ರಿಯು

ಸೆರೆಮನೆಯಲ್ಲಿ ವಾಸವಾಗಿದ್ದಾಗ ಆತ ಅಲ್ಲಿ ಅನೇಕ ತರಹದ ತೊಂದರೆಗಳನ್ನು ಅನುಭವಿಸಬೇಕಾಗುತ್ತದೆ. ಉದಾಹರಣೆಗೆ ಕತ್ತಲಾದ ಆ ಸೆರೆಮನೆಯಲ್ಲಿ ಮಲಮೂತ್ರಗಳ ಹೊಲಸು ವಾಸನೆ, ಸೊಳ್ಳೆಗಳ ಕಾಟ, ಜನಸಂದಣಿಯಲ್ಲಿಯೆ ನಿರ್ಲಜ್ಜವಾಗಿ ನಡೆಸುವ ಕಾಮಕ್ರೀಡೆ, ವಿಭಿನ್ನ ತರಹದ ಅಪರಾಧ ಪ್ರಜ್ಞೆ, ನಾಸ್ತಿಕತೆ ಮುಂತಾದ ಅಸಹ್ಯ ವಸ್ತು ಅಥವಾ ಘಟನೆಗಳನ್ನು ನಿರೀಕ್ಷಿಸಿದಾಗ ಆತನಿಗೆ ಒಂದು ಚಿಕ್ಕಗಾತ್ರದ ನರಕವನ್ನೇ ನೋಡಿದಂತೆನಿಸುತ್ತದೆ. ಅವನಿಗೆ ಕೆಲವು ಕ್ಷಣ ತಾನೂ ಅವರಲ್ಲಿ ಒಬ್ಬನಾಗಿದ್ದೆನೆಂಬ ಸಮಾಧಾನವುಂಟಾದರೂ, ಒಟ್ಟಿನ ಮೇಲೆ ಆತನಿಗೆ ಅಲ್ಲಿ ಸಾಂಕೇತಿಕವಾದ ನರಕದರ್ಶನವೇ ಆಗುತ್ತದೆಂದು ಅನೇಕ ವಿಮರ್ಶಕರು ವ್ಯಾಖ್ಯಾನಿಸಿದ್ದಾರೆ. ಅದೇ ಪ್ರಕಾರ ಪ್ರಾಣೇಶಾಚಾರ್ಯನು ಚಂದ್ರಿಯೊಡನೆ ಸಂಗಮಾಡಿ, ತನ್ನ ನೈತಿಕ ಜವಾಬ್ದಾರಿ ಮತ್ತು ಘನತೆಯನ್ನು ಕಳೆದುಕೊಂಡ ನಂತರ ಒಂದು ತರಹದ ಅಪರಾಧಪ್ರಜ್ಞೆಯಿಂದ ಬಳಲಿ, ದೂರ್ವಾಸಪುರವನ್ನು ಬಿಟ್ಟು, ತನಗೆ ಪರಿಚಿತವಿದ್ದ ಇತರ ಅಗ್ರಹಾರದ ಬ್ರಾಹ್ಮಣರನ್ನು ತಪ್ಪಿಸುತ್ತ ಹೊರಟಾಗ, ದಾರಿಯಲ್ಲಿ ಪುಟ್ಟನೆಂಬ ಮಾತಿನಮಲ್ಲ ಆತನನ್ನು ಭೇಟಿಯಾಗಿ ಆತನಿಗೆ ರಾಕ್ಷಸಿ ಅಥವಾ ತಾಮಸಿಕ ಜಗತ್ತನ್ನು ಪರಿಚಯಿಸುತ್ತಾನೆ. ಧರ್ಮಸ್ಥಳದ ಜಾತ್ರೆಯಲ್ಲಿ ಹುಂಜಗಳ ಕಾದಾಟ, ತಿನ್ನುವದು, ಕುಡಿಯುವದು ಮತ್ತು ಸೂಳೆಗಾರಿಕೆ ಮುಂತಾದ ತಾಮಸಿಕ ಚಟುವಟಿಕೆಗಳನ್ನು ಪ್ರಾಣೇಶಾಚಾರ್ಯನಿಗೆ ತೋರಿಸುತ್ತಾನೆ. ಪ್ರಾಣೇಶಾಚಾರ್ಯನು ಈ ತಾಮಸಿಕ ಜಗತ್ತಿನಲ್ಲಿ ಬಹಳ ಸಮಾಧಾನ ಪಟ್ಟುಕೊಳ್ಳದಿದ್ದರೂ, ಅದನ್ನು ನೋಡಿ ಸಹಿಸಿಕೊಳ್ಳುವಷ್ಟಾದರೂ ಗಟ್ಟಿಯಾಗುತ್ತಾನೆ. ಅದು ಅವನಿಗೆ ಒಂದು ನರಕ ದರ್ಶನವನ್ನು ಮಾಡಿಸುತ್ತದೆ ಎನ್ನಬಹುದು.

ಎರಡೂ ಕಾದಂಬರಿಗಳಲ್ಲಿ ಕಥಾನಾಯಕರುಗಳ ಪತನವನ್ನು ಅವರ ವಿರೋಧಿಗಳು ಸಂದರ್ಭಕ್ಕೆ ತಕ್ಕಂತೆ ಸೂಕ್ಷ್ಮವಾಗಿ ಅಥವಾ ಒರಟಾಗಿ ಖಂಡಿಸುತ್ತಾರೆ. ಮೆಕ್ಸಿಕೊ ದೇಶದ ಭೌತಿಕವಾದಿ ವಿಚಾರಧಾರೆಯನ್ನು ಪ್ರತಿನಿಧಿಸುವ ಸೈನ್ಯಾಧಿಕಾರಿಯು ವ್ಹಿಸ್ಕಿಪಾದ್ರಿಯನ್ನು ಮತ್ತು ಧಾರ್ಮಿಕ ಸಂಸ್ಥೆಯನ್ನು ಬಲವಾಗಿ ಖಂಡಿಸುತ್ತಾನೆ. ಅದಕ್ಕೆ ಕಾರಣವೇನೆಂದರೆ ಈ ವ್ಯಕ್ತಿಗಳು ತಾವು ಸಾಂಕೇತಿಸಬೇಕಾದ ಆದರ್ಶಗಳನ್ನು ಅಪಮೌಲ್ಯಗೊಳಿಸಿದ್ದಾರೆ. ವ್ಹಿಸ್ಕಿ ಪಾದ್ರಿಯನ್ನು ಶೋಧಿಸಲು ಹಳ್ಳಿಗೆ ಬಂದ ಸೈನ್ಯಾಧಿಕಾರಿ ಆ ಹಳ್ಳಿಗರಿಗೆ ಹೀಗೆ ಹೇಳುತ್ತಾನೆ :

> ''ನಾವು ಹುಡುಕುತ್ತಿರುವ ಇನ್ನೊಬ್ಬ ಅಪರಾಧಿ ಒಬ್ಬ ಪಾದ್ರಿಯಾಗಿದ್ದಾನೆ''. ಆತ ತನ್ನ ಧ್ವನಿಯನ್ನು ಎತ್ತರಿಸಿ ಹೇಳಿದ : ''ಹಾಗೆಂದರೇನೆಂಬುದು ನಿಮಗೆ ಗೊತ್ತಿದೆ ತಾನೆ-ಆತನೊಬ್ಬ ದೇಶದ್ರೋಹಿಯಾಗಿದ್ದಾನೆ. ಆತನಿಗೆ ಆಶ್ರಯ ಕೊಡುವವನೂ ದೇಶದ್ರೋಹಿಯೆ''. ಹಳ್ಳಿಗರು ಮೌನವಾಗಿಯೆ ನಿಂತುದನ್ನು ನೋಡಿ ಆತನಿಗೆ ಕೋಪಬಂದಂತೆ

ತೋರಿತು. ಆತ ಮತ್ತೆ ಹೇಳಿದ : ''ಪಾದ್ರಿಗಳು ಹೇಳಿದುದೆಲ್ಲವನ್ನು ನೀವು ಈಗಲೂ ನಂಬಿದರೆ ನಿಮಗೆ ಮೂರ್ಖರೆನ್ನುತ್ತಾರೆ. ಅವರಿಗೆ ಬೇಕಾಗಿರುವುದೆಲ್ಲ ನಿಮ್ಮ ದುಡ್ಡು ಮಾತ್ರ. ದೇವರು ನಿಮ್ಮ ಸಲುವಾಗಿ ಏನನ್ನಾದರೂ ಒಳ್ಳೆಯದನ್ನು ಮಾಡಿದ್ದಾನೆಯೆ? ನಿಮಗೆ ತಿನ್ನಲು ಸಾಕಷ್ಟು ಆಹಾರ ನಿಮ್ಮ ಹತ್ತಿರವಿದೆಯೆ? ನಿಮ್ಮ ಮಕ್ಕಳು ಮರಿಗಳಿಗೆ ಸಾಕಷ್ಟು ಅನ್ನವಿದೆಯೆ? ಈ ಪಾದ್ರಿಗಳು ನಿಮಗೆ ಅನ್ನವನ್ನು ಕೊಡುವುದರ ಬದಲು ಸ್ವರ್ಗದ ಬಗೆಗೆ ಮಾತನಾಡುತ್ತಾರೆ. ನಾವೆಲ್ಲ ಸತ್ತನಂತರ ಎಲ್ಲವೂ ಬಹಳ ಕ್ಷೇಮಕರವಾಗಿರುವುದೆಂದು ಅವರು ಹೇಳುತ್ತಾರೆ. ಆದರೆ ಈ ಪಾದ್ರಿಗಳೆಲ್ಲ ಸತ್ತನಂತರ ಈ ಜಗತ್ತಿನಲ್ಲಿ ಎಲ್ಲವೂ ಕ್ಷೇಮಕರವಾಗಿರುತ್ತದೆ ಎಂದು ನಾನು ಹೇಳುತ್ತೇನೆ. ಈ ಕಾರ್ಯದಲ್ಲಿ ನೀವೆಲ್ಲ ನಮಗೆ ನೆರವಾಗಬೇಕು.

(ಶಕ್ತಿ ಮತ್ತು ಕೀರ್ತಿ, ಪು ೭೧)

ಅದರಂತೆ ಧರ್ಮವೆಂಬ ವ್ಯವಸ್ಥೆಯಲ್ಲಿ ಅಥವಾ ಧಾರ್ಮಿಕ ವ್ಯಕ್ತಿಗಳಲ್ಲಿ ಒಂದು ತರಹದ ಕಪಟತನ ಕಂಡುಬರುವುದರಿಂದ ಅದನ್ನು ಅಥವಾ ಅವರನ್ನು ನಂಬಬಾರದೆಂದು ಭೌತಿಕವಾದಿ ಮೆಕ್ಸಿಕೊ ಸರಕಾರ ವಾದಿಸುತ್ತದೆ. ಅದೇ ಪ್ರಕಾರ ಪ್ರಾಣೇಶಾಚಾರ್ಯನ ಸಂಶಯಾಸ್ಪದ ಬ್ರಾಹ್ಮಣ್ಯವನ್ನು ಅವನ ವೈರಿಗಳು, ಅದರಲ್ಲಿಯೂ ವಿಶೇಷವಾಗಿ ನಾರಣಪ್ಪನು ಖಂಡಿಸುತ್ತಾನೆ:

ಸುಖ ಕೊಡದ ಹುಡುಗಿಯ ಕೂಡ ಯಾರು ತಾನೇ ಸಂಸಾರ ಮಾಡ್ತಾರೆ ಆಚಾರ್ಯರೆ, ಗೊಡ್ಡು ಬ್ರಾಹ್ಮಣರನ್ನ ಬಿಟ್ಟರೆ-ಎಂದು ಮೂದಲಿಸಿದ 'ಸಂಬಂಧಾಂತ ನನಗೆ ಭ್ರಾಂತಿ ಹಿಡಿದ ಹುಡುಗಿನ್ನಕಟ್ಟಿ ಹಾಳುಮಾಡ ಬೇಕೂಂತ ಇದ್ದೀರಲ್ಲ-ನೀವು-ಬ್ರಾಹ್ಮಣರು-ನಿಮ್ಮ ಧರ್ಮ ನಿಮಗೇ ಇರಲಿ- ಇರೋದು ಒಂದು ಆಯುಷ್ಯ. ನಾನು ಚಾರ್ವಾಕ ವಂಶದವ. 'ಋಣಂ ಕೃತ್ವಾ ಘೃತಂ ಪಿಬೇತ್'-ಎಂದ. ಈ ಭೌತಶರೀರ ಶಾಶ್ವತವಲ್ಲಪ್ಪ ಎಂದು ಬೋಧಿಸಿದೆ; ಬೇಡಿದೆ; 'ನೀನು ಏನೇ ಮಾಡು, ಹುಡುಗರನ್ನಾದರೂ ಹಾಳು ಮಾಡಬೇಡ' ಎಂದು ಅಂಗಲಾಚಿದೆ. ಅದಕ್ಕೂ ನಕ್ಕು ಬಿಟ್ಟ. 'ಮುಂಡೆಯರ ಆಸ್ತಿಗೆ ಮುಟ್ಟುಗೋಲು ಹಾಕಿ, ಮಾಟ ಮಂತ್ರ ಮಾಡಿಸಿ, ಕೆಟ್ಟಿದ್ದೀ

> ಬಗೆಯುವ ಗರುಡ ನಿಮ್ಮ ಪ್ರಕಾರ ಬ್ರಾಹ್ಮಣನೊ?' ಎಂದು ಗೇಲಿಮಾಡಿದ. 'ಕೊನೆಯಲ್ಲಿ ಗೆಲ್ಲೋದು ನಾನೋ, ನೀವೋ? ನೋಡುವ ಆಚಾರ್ಯರೆ, ಎಷ್ಟುದಿನ ಈ ಬ್ರಾಹ್ಮಣ್ಯ ಉಳಿಯುತ್ತೆ ಅಂತ? ಈ ಬ್ರಾಹ್ಮಣ್ಯದ ಮರ್ಯಾದೆನೆಲ್ಲ ನಾನು ಬೇಕಾದರೆ ಒಂದು ಹೆಣ್ಣಿನ ಸುಖಕ್ಕೆ ಸುಳಿದು ಹಾಕಿ ಬಿಡ್ತೇನೆ. ನೀವಿನ್ನು ಹೊರಡಿ. ಹೆಚ್ಚಿಗೆ ಮಾತಾಡಿ ನಿಮ್ಮನ್ನ ನೋಯಿಸೋಕೆ ಇಷ್ಟವಿಲ್ಲ''. (ಸಂಸ್ಕಾರ, ಪು.೩೩)

ಹೀಗೆ ಎರಡೂ ಕಾದಂಬರಿಗಳಲ್ಲಿ ಧಾರ್ಮಿಕ ಆದರ್ಶಗಳನ್ನು ಪ್ರತಿನಿಧಿಸುವ ಕಥಾನಾಯಕರುಗಳು ಮತ್ತು ಧರ್ಮವನ್ನು ವಿರೋಧಿಸುವ ಅವರ ವೈರಿಗಳ ನಡುವೆ ಒಂದು ತರಹದ ವೈಚಾರಿಕ ಸಂಘರ್ಷ ಕಂಡು ಬರುತ್ತದೆ. ದುರ್ವ್ಯವದಿಂದ ಈ ಕಥಾನಾಯಕರುಗಳು ಐಂದ್ರಿಕ ಸುಖಗಳಿಗೆ ಬಲಿಯಾಗಿ, ತಮ್ಮ ಉನ್ನತವಾದ ಧಾರ್ಮಿಕ ಆದರ್ಶಗಳನ್ನು ಅಪವಿತ್ರಗೊಳಿಸುತ್ತಾರೆ. ಹೀಗಾಗಿ ಅವರು ತಮ್ಮ ವೈರಿಗಳು ಮಾಡುವ ಅಪಾದನೆಗಳಿಗೆ ಗುರಿಯಾಗಬೇಕಾಗುತ್ತದೆ. ಗಮನಿಸಬೇಕಾದ ಒಂದು ಮುಖ್ಯಾಂಶವೆಂದರೆ ಇಬ್ಬರು ಕಥಾನಾಯಕರುಗಳಿಗೂ ತಮ್ಮ ಪಾಪಗಳ ಬಗೆಗೆ ಪ್ರಜ್ಞೆ ಜಾಗೃತವಾಗಿದ್ದು, ಒಂದು ತರಹದ ಅಪರಾಧ ಪ್ರಜ್ಞೆಯಿಂದ ಬಳಲುತ್ತಾರೆ. ಅಲ್ಲದೆ ತಮ್ಮ ಆತ್ಮ ಪರೀಕ್ಷೆಯನ್ನು ಮಾಡಿಕೊಳ್ಳುತ್ತಾರೆ. ತಮ್ಮ ಅಯೋಗ್ಯತೆಯ ಬಗೆಗೆ ತಮಗೇ ನಾಚಿಕೆಪಟ್ಟುಕೊಳ್ಳುವಂತಾಗಿದೆ. ಉದಾಹರಣೆಗೆ ವಿಸ್ಕಿಪಾದ್ರಿ ಇನ್ನೊಬ್ಬ ಪಾದ್ರಿಯಾದ ಪಾದ್ರಿಜೋಸೆನೊಂದಿಗೆ ತನ್ನನ್ನು ಹೋಲಿಸಿಕೊಳ್ಳುತ್ತ ಹೀಗೆ ತನ್ನ ಆತ್ಮಪರೀಕ್ಷೆ ಮಾಡಿಕೊಳ್ಳುತ್ತಾನೆ:

> ಆ ಇನ್ನೊಬ್ಬ ಪಾದ್ರಿ ಸರಿಯಾಗಿ ನಡೆದುಕೊಂಡ. ಆತ ಈ ವೃತ್ತಿಯನ್ನು ಬಿಟ್ಟುಹೋದ ನಂತರವೇ ನಾನು ಛಿದ್ರಛಿದ್ರಗೊಂಡೆ. ಹಂತಹಂತವಾಗಿ ನಾನು ಪತನಹೊಂದಿದೆ. ನಾನು ನನ್ನ ಕರ್ತವ್ಯವನ್ನು ನಿರ್ಲಕ್ಷಿಸತೊಡಗಿದೆ. ಸುರಾಪಾನಮಾಡಲಾರಂಭಿಸಿದೆ. ನಾನೂ ಅವನಂತೆ ಈ ವೃತ್ತಿಯನ್ನು ತೊರೆದಿದ್ದರೆ ಚೆನ್ನಾಗಿರುತ್ತಿತ್ತು. ಆಗ ನನ್ನಂತರಂಗದಲ್ಲಿ ಅಹಂಕಾರ ತಲೆಯೆತ್ತಿತ್ತು. ಆದರೆ ದೇವರ ಬಗೆಗೆ ಪ್ರೀತಿಯಿರಲಿಲ್ಲ... ಯಕ್ಷರೆಲ್ಲ ಈ ಅಹಂಕಾರದಿಂದಲೇ ಪತನ ಹೊಂದಿದರು. ಅಹಂಕಾರವೆಂಬುದು ಅತ್ಯಂತ ಕೀಳಾದ ಸ್ಥಿತಿಯಾಗಿದೆ. ಇತರ ಪಾದ್ರಿಗಳು ಈ ವೃತ್ತಿಯನ್ನು ತೊರದುಹೋದ ಮೇಲೆ ನಾನೊಬ್ಬನೇ ಉಳಿದಿದ್ದರಿಂದ ನಾನೊಬ್ಬ ಉತ್ತಮ ವ್ಯಕ್ತಿಯೆಂದು ತಿಳಿದುಕೊಂಡಿದ್ದೆ. ಆ ಮೇಲೆ ನಾನಷ್ಟು ದೊಡ್ಡವ್ಯಕ್ತಿಯೆಂದು ತಿಳಿದುಕೊಂಡಿದ್ದೆನೆಂದರೆ ನನ್ನ ನೀತಿಯನ್ನು ನಾನೇ ರೂಪಿಸಕೊಳ್ಳ

> ಬಹುದೆಂದು ತಿಳಿದಿದ್ದೆ. ನಾನು ಉಪವಾಸ ವ್ರತವನ್ನು ಮತ್ತು ಸಾಮೂಹಿಕ ಪ್ರಾರ್ಥನೆಯನ್ನು ನಿಲ್ಲಿಸಿದೆ. ನನ್ನ ಪ್ರಾರ್ಥನೆಗಳನ್ನು ನಿರ್ಲಕ್ಷಿಸಿದೆ. ಒಂದು ದಿನ ನಾನು ಕುಡಿತದ ಅಮಲಿನಲ್ಲಿದ್ದು ಏಕಾಕಿಯಾಗಿದ್ದರಿಂದ ಒಂದು ಮಗುವಿನ ತಂದೆಯಾದೆ. (ಶಕ್ತಿ ಮತ್ತು ಕೀರ್ತಿ, ಪು ೧೯೬)

ವ್ಹಿಸ್ಕಿಪಾದ್ರಿಯಂತೆ ಪ್ರಾಣೇಶಾಚಾರ್ಯನೂ ತನ್ನ ದೌರ್ಬಲ್ಯದ ಬಗೆಗೆ ಅಪರಾಧ ಪ್ರಜ್ಞೆ ಜಾಗೃತವಾದ ನಂತರ ಆತ್ಮಪರೀಕ್ಷೆ ಮಾಡಿಕೊಳ್ಳುತ್ತಾನೆ :

> ಕಾಡಿನಲ್ಲಿ ಕತ್ತಲಿನಲ್ಲಿ ಆ ಮುಹೂರ್ತ ಅಕಸ್ಮಾತ್ತಾಗಿ ಒದಗಿಬಂದಿತೆಂಬುದು ನಿಜ. ನಾನಾಗಿ ಬಯಸಿ ಅದನ್ನು ಪಡೆಯಲಿಲ್ಲವೆಂಬುದು ನಿಜ. ಚಾಚಿದ ಕೈಗಳು ಮೊಲೆಗಳನ್ನು ಮುಟ್ಟಿದವು-ಮತ್ತೆ ಆಸೆ ಹುಟ್ಟಿತು, ಮತ್ತೆ-ಅಲ್ಲಿದೆ 'ಗುಟ್ಟು. ನನ್ನ ಬಾಳು ಅತ್ತಲಿಗೋ, ಇತ್ತಲಿಗೋ ಎಂದು ನಿರ್ಧರಿತವಾಗಬೇಕಾಗಿದ್ದ ಗಳಿಗೆಯದು. ಅಲ್ಲ-ನಾನು ನಿರ್ಧಾರ ಮಾಡಬಹುದಾಗಿದ್ದ ಗಳಿಗೆಯದು. ನನ್ನ ದೇಹ ಅದಕ್ಕೆ ಒಪ್ಪಿತು ಎಂಬೋಂದು ಸಮಾಧಾನವಲ್ಲ, ಕತ್ತಲಿನಲ್ಲಿ ಅವಸರದ ಕೈಗಳು ಹುಡುಕಿದವು; ಚಂದ್ರಿಯ ಮೃದುವಾದ ತೊಡೆ ನಿತಂಬಗಳನ್ನೆಲ್ಲ-ಯಾವ ಧರ್ಮವನ್ನೂ ನಾನು ಹುಡುಕಾಡದ ಬಗೆಯಲ್ಲಿ-ಹುಡುಕಿದವು. ನನ್ನ ಬಾಳು ಅತ್ತಲಿಗೋ ಇತ್ತಲಿಗೋ ಎಂದು ನಿರ್ಧರಿತವಾಗಬೇಕಾಗಿದ್ದ ಗಳಿಗೆಯಲ್ಲಿ ಚಂದ್ರಿಯ ಜತೆ ಸಂಭೋಗಿಸುವ ನಿಶ್ಚಯ ಆಗಿಬಿಟ್ಟಿತು. ಸ್ವಾಧೀನ ತಪ್ಪಿದರೂ ನಿಶ್ಚಯ ಮಾಡುವ ಜವಾಬ್ದಾರಿ ನನ್ನ ಮೇಲೇ ಇತ್ತು. ಮನುಷ್ಯನ ನಿಶ್ಚಯಕ್ಕೆ ಬೆಲೆಯಿರುವುದು ಹೀಗೆ ಸ್ವಾಧೀನ ತಪ್ಪುವದು ಸಾಧ್ಯವಿರುವುದರಿಂದಲೇ ಹೊರತಾಗಿ ನಿಶ್ಚಯ ನೀರು ಕುಡಿದಷ್ಟು ಸರಾಗವಾದ್ದರಿಂದಲ್ಲ. ನಮ್ಮ ನಿಶ್ಚಯದ ಮೂಲಕ ನಮ್ಮನ್ನು ನಾವು ರೂಪಿಸಿಕೊಳ್ಳುತ್ತೇವೆ. ಈ ಘಟಕ್ಕೊಂದು ವ್ಯಕ್ತಿತ್ವದ ರೂಪುರೇಷೆ ತರುತ್ತೇವೆ. ಹೇಗಾಗಬೇಕೆಂದು ನಾರಣಪ್ಪ ನಿಶ್ಚಯಿಸಿ ಬದುಕಿದನೋ ಅಂತಹ ವ್ಯಕ್ತಿ ಅವನಾದ. ನಾನೂ ಇನ್ನೊಂದಾಗಬೇಕೆಂದು ನಿಶ್ಚಯಿಸಿ ಬದುಕಿದೆ. ಥಟ್ಟನೊಂದು ತಿರುವಿನಲ್ಲಿ ತಿರುಗಿಬಿಟ್ಟೆ. ತಿರುಗಿಬಿಟ್ಟದ್ದರ ಜವಾಬ್ದಾರಿಯೂ ನನ್ನದು ಎಂಬುದು ನನಗೆ ಸ್ಪಷ್ಟವಾಗುವ ತನಕ ಸ್ವಾತಂತ್ರ್ಯವಿಲ್ಲ. (ಸಂಸ್ಕಾರ. ಪು,೮೪)

ಹೀಗೆ ವ್ಹಿಸ್ಕಿಪಾದ್ರಿ ಮತ್ತು ಪ್ರಾಣೇಶಾಚಾರ್ಯ ಇಬ್ಬರೂ ತಮ್ಮ ಪಾಪಗಳ ಅಥವಾ ದೌರ್ಬಲ್ಯಗಳ ಬಗೆಗೆ ಆತ್ಮವಿಮರ್ಶೆ ಮಾಡಿಕೊಂಡು ಅವುಗಳ ಜವಾಬ್ದಾರಿಯನ್ನು ತಮ್ಮ ಮೇಲೆಯೆ ಪ್ರಾಮಾಣಿಕವಾಗಿ ಹಾಕಿಕೊಂಡು, ಅಂತರಂಗದಲ್ಲಿ ಒಂದು ತರಹದ ತಳಮಳವನ್ನು ಅನುಭವಿಸುತ್ತಾರೆ. ಈ ತಳಮಳವನ್ನು ನಾವು ಮಾನಸಿಕ ನರಕವೆಂದು

ಕರೆಯುಬಹುದು. ಅವರು ಅನುಭವಿಸುವ ಈ ಮಾನಸಿಕ ನರಕವು ಬೇರೆ ಕಡೆಗೆ ಅವರು ಅನುಭವಿಸುವ ವಸ್ತುನಿಷ್ಠ ನರಕ (ಸೆರೆಮನೆಯಲ್ಲಿ ಅಥವಾ ಜಾತ್ರೆಯಲ್ಲಿ)ಕ್ಕೆ ಸಮಾನಾಂತರವಾಗಿದೆಯೆಂದು ಹೇಳಬಹುದು.

ಹೀಗೆ ವ್ಹಿಸ್ಕಿಪಾದ್ರಿ ಮತ್ತು ಪ್ರಾಣೇಶಾಚಾರ್ಯ ಅವರಿಬ್ಬರನ್ನೂ ತುಲನಾತ್ಮಕವಾಗಿ ನೋಡಿದಾಗ ಅವರಿಬ್ಬರಲ್ಲಿ ಕಂಡು ಬರುವ ಒಂದು ಸಾಮಾನ್ಯ ಅಂಶವೆಂದರೆ ತಮ್ಮ ತಮ್ಮ ಧರ್ಮಗಳ ಮೌಲ್ಯಗಳನ್ನು ಅಪವಿತ್ರಗೊಳಿಸಿದ್ದು. ವ್ಹಿಸ್ಕಿ ಪಾದ್ರಿಯು ಕ್ಯಾಥೊಲಿಕ್ ಕ್ರಿಶ್ಚಿಯನ್ ಧರ್ಮದ ಸಂತನ ಆದರ್ಶಗಳ ಎತ್ತರಕ್ಕೆ ಏರಲು ಅಸಮರ್ಥನಾಗಿದ್ದಾನೆ. ಅದರಂತೆ ಪ್ರಾಣೇಶಾಚಾರ್ಯನು ವೇದಾಂತ ಶಿರೋಮಣಿಯೆಂಬ ಪದವಿಯನ್ನು ಪೊಂದಿ ಬ್ರಾಹ್ಮಣ ಸಮುದಾಯದ ಆದರ್ಶಗಳನ್ನು ಮೂರ್ತೀಕರಿಸುವ ವ್ಯಕ್ತಿಯಾಗಿದ್ದರೂ ಕೂಡ ಆತ ಒಂದು ದುರ್ಬಲ ಗಳಿಗೆಯಲ್ಲಿ ತನ್ನ ಬ್ರಾಹ್ಮಣ್ಯವನ್ನು ಅಥವಾ ಬ್ರಾಹ್ಮಣ್ಯದ ಆದರ್ಶಗಳನ್ನು ಗಾಳಿಗೆ ತೂರಿಬಿಡುತ್ತಾನೆ. ಹೀಗೆ ಇಬ್ಬರೂ ಅವನತಿಯ ಹಾದಿಯಲ್ಲಿ ಸಮಾನವಾಗಿ ನಡೆಯುತ್ತಾರೆ. ಇಲ್ಲಿಯವರೆಗೆ ಅವರಿಬ್ಬರಲ್ಲಿ ಸಮಾನಾಂಶಗಳು ಕಂಡುಬರುತ್ತವೆ. ಆದರೆ ಇದರ ಮುಂದಿನ ಹಂತದಲ್ಲಿ ಅವರಿಬ್ಬರ ಮಾರ್ಗದಲ್ಲಿ ಕವಲು ಕಂಡುಬರುತ್ತದೆ. ಅದೇನೆಂದರೆ ತುಲನಾತ್ಮಕವಾಗಿ ನೋಡಿದಾಗ ಪ್ರಾಣೇಶಾಚಾರ್ಯನಿಗಿಂತ ವ್ಹಿಸ್ಕಿಪಾದ್ರಿಯೇ ಉತ್ತಮ ವ್ಯಕ್ತಿಯೆನ್ನುವದು ಕಂಡುಬರುತ್ತದೆ. ಏಕೆಂದರೆ ವ್ಹಿಸ್ಕಿಪಾದ್ರಿಯು ತನ್ನ ವೈಯಕ್ತಿಕ ದೌರ್ಬಲ್ಯಗಳಿದ್ದರೂ ಕೂಡ, ತಾನು ಪ್ರತಿನಿಧಿಸುವ ಧರ್ಮವನ್ನು ಜೀವಂತವಾಗಿರಿಸಲಿಕ್ಕೆ ಅವ್ಯಾಹತವಾಗಿ ಪ್ರಯತ್ನಿಸುತ್ತಾನೆ. ತಾನೊಬ್ಬ ಅತ್ಯಂತ ದುರ್ಬಲ ಮಾಧ್ಯಮವಾಗಿದ್ದರೂ ಕೂಡ, ತಾನು ದೇವರ ಯೋಜನೆಯನ್ನು ಕಾರ್ಯಗತಗೊಳಿಸುವಲ್ಲಿ ನೆರವಾಗುತ್ತಾನೆಂಬ ಪ್ರಜ್ಞೆ ಆತನಿಗಿದೆ. ''ನಾನು ಹೇಡಿಯಾಗಿರುವುದೇನು ಅಷ್ಟೊಂದು ಸಮಸ್ಯೆಯಾಗುವುದಿಲ್ಲ. ಏಕೆಂದರೆ ನಾನು ಹೇಡಿ ಅಥವಾ ದುರ್ಬಲನಾಗಿದ್ದರೂ ಕೂಡ ನಾನು ಜನರ ಬಾಯಲ್ಲಿ ದೇವರ ನಾಮಸ್ಮರಣೆ ಬರುವ ಹಾಗೆ ಮಾಡಬಲ್ಲೆ. ಅವರಿಗೆ ದೇವರ ಕ್ಷಮೆಯನ್ನು ದೊರಕಿಸಿಕೊಡಬಲ್ಲೆ. ನಮ್ಮ ಧರ್ಮದ ಎಲ್ಲ ಪಾದ್ರಿಗಳೂ ನನ್ನಂತೆ ದುರ್ಬಲರಾಗಿದ್ದರೂ ಕೂಡ ಯಾವ ಹಾನಿ ಕಂಡುಬರುವುದಿಲ್ಲ'' ವೆಂದು ಆತ ಪ್ರಾಮಾಣಿಕವಾಗಿ ಒಪ್ಪಿಕೊಳ್ಳುತ್ತಾನೆ. ಆತ ಕ್ಯಾಥೊಲಿಕ್ ಸಂತ ಅಥವಾ ಸನ್ಯಾಸಿಯ ಎತ್ತರಕ್ಕೆ ಏರದಿದ್ದರೂ, ಆತ ಸಾಮಾನ್ಯ ಪಾದ್ರಿಯ ಕನಿಷ್ಠ ಕರ್ತವ್ಯಗಳನ್ನು ನೆರವೇರಿಸಬಲ್ಲವನಾಗಿದ್ದು, ತನ್ನ ಬಾಂಧವರಲ್ಲಿ ಧರ್ಮಪ್ರಜ್ಞೆಯನ್ನು ಸಜೀವವಾಗಿಡ ಬಲ್ಲವನಾಗಿದ್ದಾನೆ. ಗ್ರಹಾಮ್ ಗ್ರೀನ್‌ನ ದೇವಶಾಸ್ತ್ರದ ಪ್ರಕಾರ ದೇವನ ಪ್ರೀತಿ ಮತ್ತು ಕರುಣೆಗಳು ಎಷ್ಟು ಅಪಾರವಾಗಿವೆಯೆಂದರೆ ಆ ದೇವನು ವ್ಹಿಸ್ಕಿಪಾದ್ರಿಯಂಥ ಅತ್ಯಂತ ದುರ್ಬಲ ವ್ಯಕ್ತಿಯ ಮೇಲೂ ತನ್ನ ಪ್ರೀತಿ ಕರುಣೆಗಳನ್ನು ಹರಿಸಿ, ಆತನನ್ನೂ ತನ್ನ ಬ್ರಹ್ಮಾಂಡ ಯೋಜನೆಯ ಅವಿಭಾಜ್ಯ ಅಂಗವನ್ನಾಗಿ ಮಾಡಿಕೊಳ್ಳಬಲ್ಲ. ಹೀಗಾಗಿ ವ್ಹಿಸ್ಕಿಪಾದ್ರಿಯು ತನ್ನ

ದೌರ್ಬಲ್ಯಗಳಿದ್ದಾಗಲೂ ಕೂಡ ಒಂದು ಉನ್ನತವಾದ ದೈವೀ ಉದ್ದೇಶವನ್ನು ಸಾಧಿಸುವುದರ ಮಾಧ್ಯಮವಾಗುತ್ತಾನೆ. ತನ್ನ ಧರ್ಮದ ಸಲುವಾಗಿ ತನ್ನ ಪ್ರಾಣವನ್ನೇ ಬಲಿಕೊಡುತ್ತಾನೆ. ಆತ ಹೀಗೆ ಧನಾತ್ಮಕ ಕಾರ್ಯವನ್ನೆಸಗುವದು ಗ್ರಹಾಮ್‌ಗ್ರೀನ್‌ನ ಧನಾತ್ಮಕ ಜೀವನ ದರ್ಶನಕ್ಕೆ ಸಾಕ್ಷಿಯಾಗಿದೆ.

ಆದರೆ ''ಸಂಸ್ಕಾರ'' ಕಾದಂಬರಿಯಲ್ಲಿ ಚಿತ್ರಿತವಾದ ಅನಂತಮೂರ್ತಿಯವರ ಜೀವನ ದರ್ಶನ ನಕಾರಾತ್ಮಕವಾಗಿದೆ. ಲೇಖಕರು ಪ್ರಾಣೇಶಾಚಾರ್ಯನು ಬ್ರಾಹ್ಮಣ್ಯದ ಎತ್ತರದಿಂದ ಪತನ ಹೊಂದುವುದನ್ನು ಚಿತ್ರಿಸುವುದರಲ್ಲಿ ಸಂತೃಪ್ತಿ ಹೊಂದುತ್ತಾರೆ. ದೂರ್ವಾಸಪುರದ ಬ್ರಾಹ್ಮಣರು, ಅದರಲ್ಲಿಯೂ ವಿಶೇಷವಾಗಿ ಮಾಧ್ವಬ್ರಾಹ್ಮಣರು ಪ್ರಾಣೇಶಾಚಾರ್ಯನನ್ನೊಬ್ಬ ನೈತಿಕ ಗುರುವೆಂದು ಸ್ವೀಕರಿಸಿ, ನಂಬಿದ್ದಾರೆ. ಕಾಶಿಯಲ್ಲಿ ಕಲಿತು 'ವೇದಾಂತ ಶಿರೋಮಣಿ' ಯೆಂಬ ಬಿರುದು ಪಡೆದ ಆತ ನಾರಣಪ್ಪನ ಅಂತ್ಯ ಸಂಸ್ಕಾರದ ಬಗೆಗೆ ನೀತಿಪರ ನಿರ್ಧಾರವೊಂದನ್ನು ತೆಗೆದುಕೊಳ್ಳುತ್ತಾನೆಂದು ಅವರು ನಂಬಿಕುಳಿತಿದ್ದಾರೆ. ಆದರೆ ಅವರ ನಿರೀಕ್ಷೆಗಳನ್ನು ನಿಜವಾಗಿಸುವ ಬದಲು, ರಾತ್ರಿ ಕಾಡಿನಲ್ಲಿ ಕೀಳು ಜಾತಿಯ ಚಂದ್ರಿಯನ್ನು ಭೋಗಿಸಿ ತನಗೂ, ತನ್ನನ್ನು ನಂಬಿದ ಅಗ್ರಹಾರಕ್ಕೂ ಅಳುಕಿಸಲಾಗದ ಕಳಂಕವನ್ನು ತರುತ್ತಾನೆ. ಅನಂತರ ಆ ಅಗ್ರಹಾರದ ಮಾಧ್ವ ಬ್ರಾಹ್ಮಣರನ್ನು ಎದುರಿಸುವ ಧೈರ್ಯವಿಲ್ಲದೆ ತಾಮಸಿಕ ಜಗತ್ತಿನಲ್ಲಿ ಪ್ರವೇಶಿಸಿ ತನ್ನ ಪಾಪವನ್ನೆದುರಿಸುವ ಗಟ್ಟಿತನವನ್ನು ಪಡೆಯಲೆತ್ನಿಸುತ್ತಾನೆ ವಿನಃ ತನ್ನ ತಪ್ಪನ್ನು ತಿದ್ದಿಕೊಳ್ಳುವ ಗೋಜಿಗೆ ಹೋಗುವುದಿಲ್ಲ. ಆತ ಯಾವ ತರಹದ ಪುನರುತ್ಥಾನಕ್ಕೆ ಪ್ರಯತ್ನ ಪಡುವದಿಲ್ಲ. ತನ್ನನ್ನೇ ನಂಬಿದ ದೂರ್ವಾಸಪುರದ ಬ್ರಾಹ್ಮಣರಿಗೆ, ಅಥವಾ ನಾರಣಪ್ಪನ ಶವಕ್ಕೆ, ಅಥವಾ ಚಂದ್ರಿಗೆ ಏನಾಯಿತೆಂಬುದರ ಬಗೆಗೆ ಯೋಚಿಸದಷ್ಟು ಬೇಜವಾಬ್ದಾರಿತನ ಆತನ ವರ್ತನೆಯಲ್ಲಿ ಕಂಡುಬರುತ್ತದೆ. ಆದರೆ ವ್ಹಿಸ್ಕಿಪಾದ್ರಿಯು ತನ್ನ ವೈಯಕ್ತಿಕ ಪತನವಾಗಿದ್ದರೂ ಕೂಡ ತನ್ನ ಧರ್ಮದ ಕೆಲವು ಆದರ್ಶಗಳಿಗಾದರೂ ಹೋರಾಡುತ್ತಾನೆ. ಆತ ಮೆಕ್ಸಿಕೊ ದೇಶದ ನಾಸ್ತಿಕ ಜಗತ್ತಿನಲ್ಲಿ ಕ್ಯಾಥೊಲಿಕ್ ಧರ್ಮವನ್ನು ಜೀವಂತವಾಗಿರಿಸಲಿಕ್ಕೆ ಪ್ರಯತ್ನಪಟ್ಟು, ಹಳ್ಳಿಹಳ್ಳಿಗೆ ಹೋಗಿ ಧಾರ್ಮಿಕ ವಿಧಿಗಳನ್ನು ನೆರವೇರಿಸಿ ಜನರಿಗೆ ಧಾರ್ಮಿಕ ಪ್ರಜ್ಞೆಯನ್ನು ಕೊಡುವುದರಲ್ಲಿ ಸಫಲನಾಗುತ್ತಾನೆ. ಕೊನೆಗೆ ತನ್ನ ಧರ್ಮಕ್ಕಾಗಿ ಪ್ರಾಣ ಕಳೆದುಕೊಂಡು ಹುತಾತ್ಮನಾಗುತ್ತಾನೆ. ತನ್ನಲ್ಲಿ ದೌರ್ಬಲ್ಯಗಳಿದ್ದರೂ ಕೂಡ ಆತ ಧೀರೋದಾತ್ತ ನಾಯಕನಾಗಿ ಕಂಗೊಳಿಸುತ್ತಾನೆ. ಈ ಕಥಾವಸ್ತುವಿನ ಮೂಲಕ ಗ್ರಹಾಮ್ ಗ್ರೀನರ ದೇವಪರ, ಧರ್ಮಪರ ಮತ್ತು ಆದರ್ಶಗಳ ಪರವಾದ ನಿಲುವು ಸ್ಪಷ್ಟವಾಗಿ ಗೋಚರಿಸುತ್ತದೆ. ವ್ಹಿಸ್ಕಿಪಾದ್ರಿ ನಮ್ಮೆಲ್ಲರ ಅನುಕಂಪವನ್ನು ಗಳಿಸಿದಂತೆ ಪ್ರಾಣೇಶಾಚಾರ್ಯ ಓದುಗರ ಅನುಕಂಪವನ್ನು ಪಡೆಯಲು ಅಸಮರ್ಥನಾಗುತ್ತಾನೆ. ಅಲ್ಲದೆ ಇಬ್ಬರೂ ಕಥಾನಾಯಕರು ಅನುಭವಿಸುವ ಶಿಕ್ಷೆಯ

ಗುಣಮಟ್ಟ ಮತ್ತು ಪ್ರಮಾಣದಲ್ಲಿಯೂ ಸಾಕಷ್ಟು ಭಿನ್ನತೆ ಕಂಡುಬರುತ್ತದೆ. ಪ್ರಾಣೇಶಾಚಾರ್ಯನ ನೋವೆಲ್ಲ ಹೆಚ್ಚಾಗಿ ಮಾನಸಿಕ ಸ್ತರಕ್ಕೆ ಸೀಮಿತವಾಗಿದ್ದು, ಆತ ವ್ಹಿಸ್ಕಿ ಪಾದ್ರಿ ಅನುಭವಿಸಿದ ಪ್ರಮಾಣ ಮತ್ತು ಗುಣಮಟ್ಟದ ನೋವುಗಳನ್ನು ಅನುಭವಿಸಿಲ್ಲ. (ಉದಾ : ಹಸಿವಿನಿಂದ ಬಸವಳಿಯುವದು, ಭಂಗಿ ಬಳಿಯುವದು, ಸೆರೆಮನೆಯಲ್ಲಿ ವಾಸವಾಗಿರುವದು, ಕೆಳಜಾತಿಯುವನಿಂದ ವಂಚಿಸಲ್ಪಡುವದು, ಗುಂಡಿಗೆ ಆಹುತಿಯಾಗುವದು ಮುಂತಾದವುಗಳು) ವ್ಹಿಸ್ಕಿಪಾದ್ರಿಯಾದರೊ ಗಂಭೀರವಾದ ದೈಹಿಕ ತೊಂದರೆಗಳನ್ನಲ್ಲದೆ, ಮಾನಸಿಕ ಯಾತನೆಗಳನ್ನೂ ಅನುಭವಿಸುತ್ತಾನೆ. ಈ ದೃಷ್ಟಿಯಿಂದ ನೋಡಿದಾಗ, ವ್ಹಿಸ್ಕಿಪಾದ್ರಿಯು ಅನೇಕ ಅನುಭವಗಳಲ್ಲಿ ಪಾಲ್ಗೊಳ್ಳುವವನಾಗಿದ್ದರೆ, ಪ್ರಾಣೇಶಾಚಾರ್ಯನು ಅನುಭವಗಳನ್ನು ದೂರದಿಂದಲೇ ವೀಕ್ಷಿಸುವ ನಿರೀಕ್ಷಕನಂತೆ ಕಾಣಿಸುತ್ತಾನೆ. ಈ ಕಾದಂಬರಿಯಲ್ಲಿ ಬ್ರಾಹ್ಮಣ ಆಚಾರ್ಯನೊಬ್ಬ ತನ್ನ ಬ್ರಾಹ್ಮಣ್ಯವನ್ನು ಮರೆತು ಶೂದ್ರನಾಗುವ ಪ್ರಕ್ರಿಯೆಯನ್ನು ಅನಂತಮೂರ್ತಿಯವರು ಕೀರ್ತಿಸುವಂತೆ ತೋರುತ್ತದೆ. ಅನೇಕ ನವ್ಯಲೇಖಕರಂತೆ ಅವರೂ ಜೀವನದ ಕುರೂಪವನ್ನು ಮತ್ತು ಇಳಿಮುಖವನ್ನು ಅಥವಾ ಅವನತಿಯನ್ನು ಚಿತ್ರಿಸುವುದರಲ್ಲಿ ಸಂತೃಪ್ತಿ ಪಡೆಯುತ್ತಾರೆ. ಅನೇಕ ನವ್ಯ ಲೇಖಕರಂತೇ ಅವರೂ ಅರ್ಧಸತ್ಯವನ್ನು ಮಾತ್ರ ತೋರಿಸುವುದರಲ್ಲಿ ಆಸಕ್ತಿ ಹೊಂದಿದಂತೆ ತೋರುತ್ತದೆ. ನೆರಳಾಚೆಯ ಬೆಳಕಿನತ್ತ ಅವರ ಲಕ್ಷ್ಯವಿಲ್ಲ. ಆದರೆ ತುಲನಾತ್ಮಕವಾಗಿ ನೋಡಿದಾಗ ಗ್ರಹಾಮ್ ಗ್ರೀನ್ ಅವರು ಪಾದ್ರಿಯ ಅವನತಿಯೊಂದಿಗೆ ಆತನ ಪುನರುತ್ಥಾನವನ್ನೂ ತೋರಿಸುವುದರಿಂದ ಅವರ ಕಥೆ-ಅರ್ಧವೆನಿಸದೆ, ಸಂಪೂರ್ಣವೆನಿಸುತ್ತದೆ. ಹೀಗಾಗಿ ಅವರ ಜೀವನ ದರ್ಶನಕ್ಕೆ ಅನಂತಮೂರ್ತಿಯವರ ಜೀವನದರ್ಶನದಲ್ಲಿಲ್ಲದ ಸಮತೋಲ ಮತ್ತು ಸಮಗ್ರತೆ ಕಂಡುಬರುತ್ತದೆ. ಆದರೆ ಅನಂತಮೂರ್ತಿಯವರ ಕಾದಂಬರಿಯಲ್ಲಿ ಸಮಸ್ಯೆಯನ್ನು ಇತ್ಯರ್ಥಗೊಳಿಸದೆ, ಯಾವ ಸಮಾಧಾನಕ್ಕೂ ಬರದೆ, ಅದನ್ನು ನೇತಾಡುವಂತೆ ಬಿಟ್ಟು ಬಿಟ್ಟಿದೆ. ಗ್ರಹಾಮ್‌ಗ್ರೀನರ ಜೀವನ ದರ್ಶನ ಸಮಗ್ರ, ನಿರ್ಣಾಯಕ ಮತ್ತು ಸಕಾರಾತ್ಮಕವಾಗಿದ್ದರೆ, ಅನಂತಮೂರ್ತಿಯವರ ದರ್ಶನ ಅಸಂಪೂರ್ಣ, ಅನಿರ್ಣಾಯಕ ಮತ್ತು ನಕಾರಾತ್ಮಕವಾಗಿದ್ದುದು ಸ್ಪಷ್ಟವಾಗುತ್ತದೆ.

ಎರಡೂ ಕಾದಂಬರಿಗಳ ಸನ್ನಿವೇಶಗಳನ್ನು ಹೋಲಿಸಿ ನೋಡಿದಾಗಿ ಗ್ರೀನರ ಕಾದಂಬರಿಯ ಹರವು ಮಹಾಕಾವ್ಯದ ಹರವನ್ನು ಹೋಲುತ್ತದೆ. ಅದು ಇಡೀ ಮೆಕ್ಸಿಕೋ ದೇಶದ ಸಮಾಜವನ್ನೂ, ಸರಕಾರವನ್ನು ಮತ್ತು ಇಡೀ ಕ್ಯಾಥೋಲಿಕ್ ಧರ್ಮವನ್ನು ವ್ಯಾಪಿಸಿಕೊಂಡಿದೆ. ಆದರೆ ''ಸಂಸ್ಕಾರ''ಕಾದಂಬರಿಯ ಹರವು ಬಹಳ ಸೀಮಿತವಾಗಿದ್ದು, ಅದು ಇಡೀ ಭಾರತದ ಹಿಂದೂಧರ್ಮವನ್ನು ಒಳಗೊಳ್ಳುವುದಿಲ್ಲ. ಅಷ್ಟೇ ಅಲ್ಲ ಇಡೀ ಬ್ರಾಹ್ಮಣ ಸಮಾಜವನ್ನೂ ಕೂಡ ಒಳಗೊಳ್ಳುವುದಿಲ್ಲ. ಅದು ಕೇವಲ ಮಾಧ್ವಬ್ರಾಹ್ಮಣರ

ಜೀವನಕ್ಕೆ ಮಾತ್ರ ಸೀಮಿತವಾಗಿದ್ದು, ಬ್ರಾಹ್ಮಣರ ಅಂತರ್ಮತೀಯ ಸಮಸ್ಯೆಗಳಿಗೆ ಹೆಚ್ಚು ಒತ್ತುಕೊಡುವುದರಿಂದ ಕಾದಂಬರಿಯಲ್ಲಿ ಧಾರ್ಮಿಕ ವಾತಾವರಣಕ್ಕಿಂತ ಮತೀಯ ವಾತಾವರಣವೇ ಹೆಚ್ಚು ಒಡೆದುಕಾಣುತ್ತದೆ. ಭೌಗೋಲಿಕವಾಗಿಯೂ ಗ್ರಹಾಮ್‌ಗ್ರೀನರ ಕಾದಂಬರಿಯ ವಿಸ್ತಾರವಾದ ಮೆಕ್ಸಿಕೊ ದೇಶವನ್ನು ಚಿತ್ರಿಸಿದರೆ, ಅನಂತಮೂರ್ತಿಯವರು ಕೇವಲ ದೂರ್ವಾಸಪುರ, ಕುಂದಾಪುರ ಮತ್ತಿತರ ಒಂದೆರಡು ಹಳ್ಳಿಗಳಿಗೆ ಸೀಮಿತವಾದ ಜೀವನವನ್ನು ಮಾತ್ರ ಚಿತ್ರಿಸುತ್ತಾರೆ. ವ್ಹಿಸ್ಕಿಪಾದ್ರಿಯು ಒಂದು ಮೂಲಮಾದರಿಯ (Archetypal symbol) ಮಟ್ಟಕ್ಕೇರಿದರೆ, ಪ್ರಾಣೇಶಾಚಾರ್ಯನೊಬ್ಬ ಸಾಮಾನ್ಯಮಟ್ಟದ ಪಾತ್ರನಾಗಿ ಉಳಿದುಬಿಡುತ್ತಾನೆ.

ಎರಡೂ ಕಾದಂಬರಿಗಳ ತಂತ್ರವನ್ನು ತುಲನಾತ್ಮಕವಾಗಿ ನೋಡಿದಾಗ ''ಶಕ್ತಿ ಮತ್ತು ಕೀರ್ತಿ''ಕಾದಂಬರಿಯು ''ಸಂಸ್ಕಾರ''ಕ್ಕಿಂತ ಉತ್ತಮಕೃತಿಯೆಂಬುದು ಸ್ಪಷ್ಟವಾಗುತ್ತದೆ. ಗ್ರೀನರ ಕಾದಂಬರಿಯಲ್ಲಿ ಎರಡು ಆಯಾಮಗಳು ಸಮಸಮವಾಗಿ ಕಾರ್ಯಗೈಯುತ್ತವೆ. ಉದಾಹರಣೆಗೆ ಮೆಕ್ಸಿಕೊ ದೇಶದ ಸೈನ್ಯಾಧಿಕಾರಿಯೂ ವ್ಹಿಸ್ಕಿಪಾದ್ರಿಯನ್ನು ಕೊನೆಗೂ ಬೆನ್ನಟ್ಟಿ, ಕೊನೆಗೆ ಕೊಂದು ಭೌತಿಕವಾಗಿ ವಿಜಯಿಯಾಗುತ್ತಾನೆ. ಅದೇ ಕಾಲಕ್ಕೆ ಪಾದ್ರಿಯೂ ತನ್ನ ಧರ್ಮಕ್ಕಾಗಿ ಪ್ರಾಣತೆತ್ತು ಆಧ್ಯಾತ್ಮಿಕವಾಗಿ ವಿಜಯಿಯಾಗುತ್ತಾನೆ. ಭೌತಿಕ ಸ್ತರದಲ್ಲಿ ಈ ಕಾದಂಬರಿಯನ್ನು ಪತ್ತೇದಾರಿ ಕಾದಂಬರಿಯಾಗಿಯೂ, ಆಧ್ಯಾತ್ಮಿಕ ಸ್ತರದಲ್ಲಿ ಅದನ್ನೊಂದು ಗಂಭೀರ, ಧಾರ್ಮಿಕ ಕಾದಂಬರಿಯೆಂದೂ ಪರಿಗಣಿಸಬಹುದು. ಹೀಗೆ ಗ್ರೀನರ ಕಾದಂಬರಿಯು ಏಕಕಾಲಕ್ಕೆ ಎರಡು ತೆರನಾಗಿ ಓದುಗರನ್ನು ಸಂತೋಷಪಡಿಸಬಲ್ಲುದಾಗಿದೆ. ಆದರೆ ''ಸಂಸ್ಕಾರ'' ಕಾದಂಬರಿಯು ಒಂದೇ ಆಯಾಮವನ್ನು ಪಡೆದಿದ್ದು, ಅದು ಆತ್ಮದ ಸೋಲನ್ನೂ, ದೇಹದ ಗೆಲುವನ್ನೂ, ಬ್ರಾಹ್ಮಣ್ಯದ ಅವನತಿಯನ್ನೂ, ಶೂದ್ರತ್ವದ ಗೆಲುವನ್ನೂ ತೋರಿಸುವುದರಿಂದ ಒಂದು ಗುಂಪಿನ (ನವ್ಯಾಭಿರುಚಿಯ) ಓದುಗರಿಗೆ ಸಂತೋಷವನ್ನುಂಟುಮಾಡಿದರೆ, ಸಂಪ್ರದಾಯವಾದಿಗಳಿಗೆ ಕೋಪ ಮತ್ತು ಅವಮಾನವನ್ನುಂಟುಮಾಡುತ್ತದೆ.

ಎರಡೂ ಕಾದಂಬರಿಗಳಲ್ಲಿ ಲೇಖಕರು ಕೆಲವು ಸಾಂಕೇತಿಕ ಆಶಯಗಳನ್ನು ಉಪಯೋಗಿಸಿದ್ದು ಕಂಡುಬರುತ್ತದೆ. ''ಶಕ್ತಿ ಮತ್ತು ಕೀರ್ತಿ'' ಕಾದಂಬರಿಯಲ್ಲಿ ರಣಹದ್ದುಗಳು ಅನಿಷ್ಟ ಮತ್ತು ಸಾವುಗಳನ್ನು ಸಾಂಕೇತಿಸಿದರೆ, ''ಸಂಸ್ಕಾರ''ದಲ್ಲಿ ಅವು ಸಾವು ಮತ್ತು ಬ್ರಾಹ್ಮಣ್ಯದ ಅವನತಿಯನ್ನು ಸಾಂಕೇತಿಸುತ್ತವೆ. ಅದರಂತೆ ಗ್ರೀನರ ಕಾದಂಬರಿಯಲ್ಲಿ ಸೊಳ್ಳೆಗಳು ಮತ್ತು ವಿಷಮಜ್ವರಗಳು ಮೆಕ್ಸಿಕೊ ದೇಶದಲ್ಲಿದ್ದ ದೈಹಿಕ ರೋಗಗಳನ್ನು ಮತ್ತು ನೀತಿಯ ಭ್ರಷ್ಟತೆಯನ್ನು ಸೂಚಿಸಿದರೆ, ಅನಂತಮೂರ್ತಿಯವರ ಕಾದಂಬರಿಯಲ್ಲಿ ಇಲಿಗಳು ಮತ್ತು ಪ್ಲೇಗ್ ದೂರ್ವಾಸಪುರದ ದೈಹಿಕ ರೋಗಗಳನ್ನು

ಮತ್ತು ಬ್ರಾಹ್ಮಣ್ಯದ ಭ್ರಷ್ಟತೆಯನ್ನು ಸೂಚಿಸುತ್ತವೆ. ಪ್ಲೇಗಿನಿಂದ ಪಟಪಟನೆ ಸಾಯುವ ಇಲಿಗಳು ಮತ್ತು ಮನುಷ್ಯರ ವರ್ಣನೆಯನ್ನು ಅನಂತಮೂರ್ತಿಯವರು ಫ್ರೆಂಚ್ ಲೇಖಕನಾದ ಅಲ್ಬರ್ಟ ಕಮೂನ ''ದ ಪ್ಲೇಗ್'' ಎಂಬ ಕಾದಂಬರಿಯಿಂದ ಎರವಲು ಪಡೆದದ್ದನ್ನು ಇಲ್ಲಿ ಗಮನಿಸಬಹುದು.

ಶೈಲಿಯ ದೃಷ್ಟಿಯಿಂದ ಎರಡೂ ಕಾದಂಬರಿಗಳನ್ನು ಹೋಲಿಸಿದಾಗ ಅವುಗಳಲ್ಲಿ ಭಿನ್ನತೆ ಕಂಡುಬರುತ್ತದೆ. ಗ್ರಹಾಮ್‌ಗ್ರೀನರ ಕಾದಂಬರಿಯ ಶೈಲಿಯು ಶುಷ್ಕವೆಂದೆನಿಸುತ್ತದೆ. ಅದಕ್ಕೆ ಕಾರಣವೇನೆಂದರೆ ಗ್ರೀನ್ ಅವರು ಚಲನಚಿತ್ರಗಳಿಗೆ ಸಂಭಾಷಣೆ ಬರೆಯುವ ಅಭ್ಯಾಸವುಳ್ಳವರಾಗಿದ್ದರಿಂದ ಅವರು ಕಲ್ಪನೆಗೆ ಅವಕಾಶವಿಲ್ಲದ, ಶುಷ್ಕವಾದ, ತಂತಿಸಂದೇಶಗಳನ್ನು ಕಳಿಸಲು ಬಳಸಬಹುದಾದಂಥ ಮೊಟಕಾದ ಭಾಷೆಯನ್ನು ಉಪಯೋಗಿಸುತ್ತಿದ್ದರಂತೆ. ಭಾವಾತಿರೇಕಕ್ಕೆಡೆಗೊಡದ ಭಾವನೆಗಳ ಅಲ್ಲೋಲಕಲ್ಲೋಲವನ್ನು ಅಭಿವ್ಯಕ್ತಿಸುವ ಉದ್ದೇಶ ಅವರದಾಗಿತ್ತೆಂದು ವಿಮರ್ಶಕರು ಅಭಿಪ್ರಾಯಪಟ್ಟಿದ್ದಾರೆ. ಆದರೆ ತುಲನಾತ್ಮಕವಾಗಿ ನೋಡಿದಾಗ ''ಸಂಸ್ಕಾರ''ದ ಭಾಷೆಯು ಹೆಚ್ಚು ಓತಪ್ರೋತವಾಗಿ ಹರಿಯುತ್ತಿದ್ದು, ರಮ್ಯವೂ, ಚಿತ್ರಮಯವೂ ಆಗಿದ್ದುದು ಕಂಡುಬರುತ್ತದೆ.

ಇಬ್ಬರೂ ಕಾದಂಬರಿಕಾರರು ತಮ್ಮ ಕಥಾನಾಯಕರುಗಳನ್ನು ನಿಜಜೀವನದ ವ್ಯಕ್ತಿಗಳ ಮೇಲೆಯೆ ಆಧರಿಸಿದ್ದಾರೆ. ಗ್ರೀನರ ವಿಸ್ಕಿಪಾದ್ರಿಯು ಅವರು ಮೆಕ್ಸಿಕೋ ದೇಶದಲ್ಲಿ ನೋಡಿದ ಒಬ್ಬ ನಿಜವಾದ ಪಾದ್ರಿಯ ಮೇಲೆ ಆಧರಿಸಲ್ಪಟ್ಟಿದ್ದಾರೆ. ಅನಂತಮೂರ್ತಿಯವರು ''ರುಜುವಾತು'' ಪತ್ರಿಕೆಯಲ್ಲಿ ಒಪ್ಪಿಕೊಂಡಂತೆ, ಅವರ ಪ್ರಾಣೇಶಾಚಾರ್ಯನು ದಕ್ಷಿಣಭಾರತದಲ್ಲಿ ಜೀವಿಸಿದ್ದ ಒಬ್ಬ ನಿಜವಾದ ಬ್ರಾಹ್ಮಣ ಆಚಾರ್ಯನ ಮೇಲೆ ಆಧರಿಸಲ್ಪಟ್ಟಿದ್ದಾನಂತೆ. ಇಂಥ ಕಾದಂಬರಿಯನ್ನು ಬರೆಯಲು ಅನಂತಮೂರ್ತಿಯವರು ಬರ್ಮಿಂಗಮ್‌ನಲ್ಲಿ ನೋಡಿದ ಒಂದು ರಶಿಯನ್ ಚಲನಚಿತ್ರವೆಂಬುದನ್ನು ಪ್ರಾಮಾಣಿಕವಾಗಿ ಬಹಿರಂಗಪಡಿಸಿದ್ದಾರೆ★ .

★ಈ ಲೇಖನವನ್ನು ಸಿದ್ಧಪಡಿಸಲು ಈ ಕೆಳಗಿನ ಆವೃತ್ತಿಗಳನ್ನು ಉಪಯೋಗಿಸಲಾಗಿದೆ

೧. ''ಶಕ್ತಿ ಮತ್ತು ಕೀರ್ತಿ''. ಗ್ರಹಾಮ್‌ಗ್ರೀನ್. ಪೆಂಗ್ವಿನ ಬುಕ್ಸ್. ಹಾರ್ಮಂಡ್ಸ್‌ವರ್ತ್. ೧೯೬೨.

೨. ''ಸಂಸ್ಕಾರ'', ಯು.ಆರ್ ಅನಂತಮೂರ್ತಿ. ಅಕ್ಷರಪ್ರಕಾಶನ, ಹೆಗ್ಗೋಡು. ೧೯೬೫.

ವಚನ ಸಾಹಿತ್ಯ ಮತ್ತು ಹರ್ಡೇಕರ ಮಂಜಪ್ಪ

★ ಎಸ್. ಕೆ. ಕೊಪ್ಪಾ

ವಚನ, ವಚನ ಸಾಹಿತ್ಯದ ಸಂಪಾದನೆ, ಪ್ರಕಟಣೆ, ಪ್ರಸಾರಗಳಲ್ಲಿ ವಿಜಾಪುರ ಜಿಲ್ಲೆಗೆ ವಿಶಿಷ್ಟವಾದ ಸ್ಥಾನವಿದೆ. ಈ ಜಿಲ್ಲೆ ವಚನಕಾರರಾದ ಬಾಗೇವಾಡಿಯ ಬಸವಣ್ಣ, ಹಿಪ್ಪರಗೆಯ ಮಾಚಯ್ಯ, ಹಾವಿನಾಳ ಕಲ್ಲಯ್ಯರ ಜನ್ಮಸ್ಥಳವಾಗಿರುವಂತೆ ೨೦ ನೇ ಶತಮಾನದಲ್ಲಿ ವಚನ ಪಿತಾಮಹ ಫ. ಗು. ಹಳಕಟ್ಟಿ, ರಾಷ್ಟ್ರಧರ್ಮ ದೃಷ್ಟಾರ ಹರ್ಡೇಕರ ಮಂಜಪ್ಪನವರ ಕಾರ್ಯಕ್ಷೇತ್ರವಾಗಿ ವಚನ ಸಾಹಿತ್ಯದ ಸಂಪಾದನೆ, ಪ್ರಕಟಣೆ, ಪ್ರಸರಣೆಗೆ ನೆಲೆಯಾದುದು ಒಂದು ಯೋಗಾಯೋಗವೆನ್ನಬೇಕು.

ನಮ್ಮ ದೇಶದ ಸ್ವಾತಂತ್ರ್ಯ ಚಳುವಳಿಯ ಮುಂಬೆಳಗಿನಲ್ಲಿ, ಸಾಮಾನ್ಯ ಬಡಕುಟುಂಬದಲ್ಲಿ ಜನಿಸಿದ ಹರ್ಡೇಕರ ಮಂಜಪ್ಪನವರು ಓದಿದುದು ಮರಾಠಿ ಮುಲ್ಕಿ ಪರೀಕ್ಷೆ ಮಾತ್ರ! ಈ ಶತಮಾನದ ಪೂರ್ವಾರ್ಧದಲ್ಲಿ ವಚನ ಸಾಹಿತ್ಯ ಸಂಪಾದನೆ ಮತ್ತು ಅಧ್ಯಯನಕ್ಕೆ ತೊಡಗಿದ ಫ. ಗು. ಹಳಕಟ್ಟಿ ಮತ್ತು ಶಿ. ಶಿ. ಬಸವನಾಳ ಅವರಿಗಿರುವ ಸಾಮಾಜಿಕ ಶೈಕ್ಷಣಿಕ ಹಿನ್ನೆಲೆ ಮಂಜಪ್ಪನವರಿಗೆ ಇದ್ದಿರಲಿಲ್ಲ. ಕೌಟುಂಬಿಕ, ಆರ್ಥಿಕ, ಸಾಮಾಜಿಕ ಶೈಕ್ಷಣಿಕ - ಈ ಎಲ್ಲ ಸೌಲಭ್ಯಗಳಿಂದ ವಂಚಿತರಾಗಿ, ಅಂದಿನ ವೀರಶೈವ ಸಮಾಜದ ಹಿಂಸೆ, ಅವಮಾನ, ಕ್ರೌರ್ಯಗಳನ್ನು ನುಂಗಿಕೊಂಡು ಸಮಾಜ ಮತ್ತು ರಾಷ್ಟ್ರಕಾರ್ಯಕ್ಕೆ ಅವರು ತಮ್ಮನ್ನು ಸಮರ್ಪಿಸಿಕೊಂಡುದು ರೋಮಾಂಚಕಾರಿಯಾದ ಇತಿಹಾಸ.

ಮೊದಮೊದಲು ಆರ್ಯಸಮಾಜದಿಂದ ಪ್ರಭಾವಿತರಾದ ಮಂಜಪ್ಪನವರು ಆ ಕಾಲದ ಹಿರಿಯ ರಾಜಕೀಯ ಮುಖಂಡರೂ ಸಮಾಜ ಸುಧಾರಕರೂ ಆದ ಬಾಲಗಂಗಾಧರ ತಿಲಕ, ದಯಾನಂದ ಸರಸ್ವತಿ, ಮಹಾತ್ಮಾ ಗಾಂಧೀಜಿಯವರ ವಿಚಾರಗಳಿಂದ, ಧ್ಯೇಯ-ಧೋರಣೆಗಳಿಂದ ಪ್ರಭಾವಿತರಾಗಿದ್ದರು. ಆದರೆ ಕಾಲಾಂತರದಲ್ಲಿ ಬಸವಣ್ಣನವರ ಸಮಾಜ ಸುಧಾರಣೆ, ವಚನಗಳ ಶ್ರೇಷ್ಠತೆ ಅರಿತು ಆ ಹಿನ್ನೆಲೆಯಲ್ಲಿ ಸ್ವತಂತ್ರ ವ್ಯಕ್ತಿತ್ವ ರೂಪಿಸಿಕೊಂಡರು. ಅಂತೆಯೇ ಅಂದಿನ ಸಾಮಾಜಿಕ - ರಾಷ್ಟ್ರೀಯ ಮೌಲ್ಯಗಳು ಮತ್ತು ಗಾಂಧೀವಾದದ ಸತ್ಯಾಗ್ರಹ ಸರ್ವೋದಯದ ಎಲ್ಲ ತತ್ವಗಳು ಶಿವಶರಣರ ವಚನಾಂತರ್ಗತವಾಗಿರುವುದನ್ನು ಅವರು ತೋರಿಸಿಕೊಟ್ಟಿದ್ದಾರೆ. ಇದರಿಂದ ಗಾಂಧೀಜಿಯವರ ತತ್ವಗಳನ್ನು ವಚನ ಪರಂಪರೆಯ ಹಿನ್ನೆಲೆಯಲ್ಲಿ ಎತ್ತಿ ಹಿಡಿದು ಬೆಂಬಲಿಸಲು ಅವರಿಗೆ ಅನುಕೂಲವಾಯಿತು. ಇಲ್ಲಿ ಮಂಜಪ್ಪನವರ ಸಾಮಾಜಿಕ

ಮತ್ತು ರಾಷ್ಟ್ರೀಯ ಚಟುವಟಿಕೆಗಳ ಪರಿಚಯ ಉಳ್ಳವರಿಗೆ ಅವರೊಬ್ಬರು ಗಾಂಧೀಜಿ ಹೆಸರಿನಲ್ಲಿ ವೀರಶೈವ ಶರಣ ಸಿದ್ಧಾಂತದ ಪ್ರಚಾರಕರಂತೆ ಮತ್ತು ಶರಣರ ಹೆಸರಿನಲ್ಲಿ ಗಾಂಧಿ ಸಿದ್ಧಾಂತದ ಪ್ರಸಾರಕರಂತೆ ಕಂಡುಬಂದರೆ ಅದಕ್ಕೆ ಕಾರಣ ಅವೆರಡೂ ಸಿದ್ಧಾಂತಗಳಲ್ಲಿ ಅವರು ಕಂಡುಕೊಂಡ ಸಮನ್ವಯವೇ ಆಗಿದೆ.

ಮಂಜಪ್ಪನವರು ಬಸವಣ್ಣನವರಲ್ಲಿ ಗಾಂಧೀಜಿಯವರನ್ನು ಕಂಡ ಕಾರಣ, ಬಸವ ತತ್ವದರ್ಶನದಲ್ಲಿ ಸಮಾಜವನ್ನು ಕಟ್ಟಲು, ರಾಷ್ಟ್ರವನ್ನು ರೂಪಿಸಲು ಕಂಕಣಬದ್ಧರಾದರು. ಇನ್ನೂ ಮುಂದುವರೆದು ಡಾ|| ಎಂ. ಎಂ. ಕಲಬುರ್ಗಿಯವರು ಹೇಳುವಂತೆ '' ವಚನ ಸಂಸ್ಕೃತಿಯ ಹಿನ್ನೆಲೆಯಲ್ಲಿ ಸಮಗ್ರ ಸಮಾಜವನ್ನೇ ತಮ್ಮ ಅಧ್ಯಯನ ವಸ್ತುವಾಗಿಟ್ಟುಕೊಂಡು, ಅದರ ಎಲ್ಲ ಮುಖಗಳ ಉನ್ನತಿಗಾಗಿ ಆಚಾರ - ವಿಚಾರ - ಪ್ರಚಾರ - ಈ ಎಲ್ಲ ಮಾರ್ಗಗಳಲ್ಲಿ ಶ್ರಮಿಸಿದರು'' ಎನ್ನಬಹುದು. ತಮ್ಮ ಕ್ರಿಯಾಶೀಲ ಬದುಕಿನಿಂದ ಈ ಮನುಷ್ಯ ತಿಳಿಯದ ವಿಷಯ ಕ್ಷೇತ್ರ ಯಾವುದೂ ಇರಲಿಲ್ಲ ಅನ್ನುವಷ್ಟು ಪ್ರಗಲ್ಭತೆಯನ್ನು ಮಂಜಪ್ಪನವರು ಸಾಧಿಸಿದ್ದರು. ಅಂತೆಯೇ ಅಂದಿನ ಉತ್ತರ ಕರ್ನಾಟಕದಲ್ಲಿ ಅವರಿಂದ ಪ್ರಭಾವಿತವಾಗದ ಜೀವನಕ್ಷೇತ್ರ ಯಾವುದೂ ಇರಲಿಲ್ಲ. ಅಂದು ಅವರು ಪ್ರಕಟಪಡಿಸಿದ ಸುಮಾರು ೮೦ ಚಿಕ್ಕ ದೊಡ್ಡ ಪುಸ್ತಕಗಳ ಮೇಲೆ ಕಣ್ಣಾಡಿಸಿದರೆ ಅವರ ಕಾರ್ಯಕ್ಷೇತ್ರದ ವೈಶಿಷ್ಟ್ಯ, ಹಮ್ಮಿಕೊಂಡ ಚಟುವಟಿಕೆಗಳ ಮಹಾದರ್ಶನವಾಗುತ್ತದೆ. ವಚನ ಸಾಹಿತ್ಯದ ಗುಣಲಕ್ಷಣಗಳು ಅವರ ಬರಹಗಳಲ್ಲಿ, ಬಸವಣ್ಣನವರ ಜೀವನಾದರ್ಶ ಅವರ ವ್ಯಕ್ತಿತ್ವದಲ್ಲಿ ಎದ್ದುತೋರುತ್ತದೆ. ವಚನಕಾರರಂತೆಯೇ ''ಮಂಜಪ್ಪನವರದು ಪೂರ್ಣದೃಷ್ಟಿಯ ಸಂಪೂರ್ಣ ಕ್ರಾಂತಿಯ ಪರಿಕಲ್ಪನೆ'' ಎಂಬ ಸಿದ್ಧಯ್ಯ ಪುರಾಣಿಕರ ಮಾತು ಇಲ್ಲಿ ಅರ್ಥವತ್ತಾಗಿ ಕಾಣಿಸುತ್ತದೆ.

ವ್ಯಕ್ತಿ - ಸಮಾಜ - ರಾಷ್ಟ್ರದ ಉನ್ನತಿಯೇ ಭಾರತ ಸ್ವಾತಂತ್ರ್ಯದ ಹಾದಿಯೆಂದು ತಿಳಿದ ಮಂಜಪ್ಪನವರು ವ್ಯಕ್ತಿಯನ್ನು ಸುಸಂಘಟಿತ ಸಮಾಜದ ಘಟಕವನ್ನಾಗಿ ಮಾಡಲು ವೀರಶೈವ ಧರ್ಮತತ್ವ ಯೋಗ್ಯವೆಂದು ನಿರ್ಣಯಿಸಿದರು. ವೀರಶೈವ ದೀಕ್ಷೆಯಲ್ಲಿ ಜಾತಿಭೇದ ನಿರಾಕರಣೆ, ಕಾಯಕ, ದಾಸೋಹಗಳಲ್ಲಿ ಶೋಷಣೆರಹಿತ ಸಮಾಜವನ್ನು ಗುರುತಿಸಿದ ಮಂಜಪ್ಪನವರು ಇಂಥ ಶುದ್ಧ ತಾತ್ವಿಕ ತಳಹದಿಯ ಮೇಲೆ ರಾಷ್ಟ್ರನಿರ್ಮಾಣವಾಗಬೇಕೆಂದು ಹಂಬಲಿಸಿದರು. ಅಂತೆಯೇ ವೀರಶೈವ ಧರ್ಮದ ಸಂಘಟನೆ ಅವರಿಗೆ ಹೆಚ್ಚು ಅಗತ್ಯವೆನಿಸಿತು. ಇದರಿಂದಾಗಿ ಕ್ರಿ. ಶ. ೧೯೧೧ ರಲ್ಲಿ ಭಜನಾ ಸಂಘ, ಶ್ರಾವಣಮಾಸ ಉಪನ್ಯಾಸಮಾಲೆ, ೧೯೧೩ ರಲ್ಲಿ ಬಸವ ಜಯಂತಿಯ ಆಚರಣೆ, ೧೯೧೫ ರಲ್ಲಿ ವೀರಶೈವ ಹಿತೋಪದೇಶ ಸಂಘ, ೧೯೧೭ ರಲ್ಲಿ ವೀರಶೈವ ವಿದ್ಯಾಲಯ ಸ್ಥಾಪನೆ, ೧೯೩೨ ರಲ್ಲಿ ವೀರಶೈವ ತತ್ವಪ್ರಚಾರಕ ಸಂಘ, ೧೯೩೫ ರಲ್ಲಿ ಅಕ್ಕಮಹಾದೇವಿ ಜಯಂತಿ ಆಚರಣೆ-ಮೊದಲಾದುವುಗಳು ಅವರಿಂದ ಸ್ಥಾಪಿತವಾಗಿ ಪ್ರಾರಂಭಗೊಂಡವು.

ಈ ಎಲ್ಲ ಕ್ರಿಯಾತ್ಮಕ ಚಟುವಟಿಕೆಗಳೊಂದಿಗೆ ೧೯೧೩ ರಿಂದ ವಚನಸಾಹಿತ್ಯದ ಪ್ರಕಟಣ - ಪ್ರಚಾರವನ್ನು ತಮ್ಮ ಜೀವನದುದ್ದಕ್ಕೂ ಮುನ್ನಡೆಸಿಕೊಂಡು ಬಂದರು. ಸಧ್ಯ ಮಂಜಪ್ಪನವರ ಕೃತಿಸಂಖ್ಯೆ ಇನ್ನೂ ನಿರ್ಣತವಾಗಿಲ್ಲವಾದರೂ ಅವರು ಬರೆದು, ಸಂಪಾದಿಸಿ ಪ್ರಕಟಿಸಿದ ವಚನ, ವಚನಕಾರರ ಕುರಿತಾದ ಕೃತಿಗಳ ಸಂಖ್ಯೆ ೨೫ ನ್ನು ಮೀರುತ್ತದೆ. ಅವುಗಳಲ್ಲಿ ಬಸವೇಶ್ವರನ ನೈತಿಕ ವಚನಗಳು (೧೯೧೩), ಶ್ರೀಬಸವ ಚರಿತ್ರೆ (೧೯೨೩), ಸತ್ಯಾಗ್ರಹೀ ಬಸವೇಶ್ವರ ಸಂಪಾದಿತ ಕೃತಿ (೧೯೨೪), ಬಸವ ಬೋಧಾಮೃತ (೧೯೨೬), ಪ್ರಭುದೇವರ ಕಥೆ, ಕಾಯಕವೇ ಕೈಲಾಸ, ವೀರಶೈವ ಮತತತ್ವ, ವೀರಶೈವ ಮತಬೋಧೆ, ಪ್ರಮಥಾಚಾರ ದೀಪಿಕೆ (೧೯೩೫), ಬಸವಣ್ಣನವರ ಶುದ್ಧಿ ಮತ್ತು ಸಂಘಟನೆ, ಬಸವಸಂದೇಶ (೧೯೩೩), ವೀರಶೈವ ಏಕೀಕರಣ (೧೯೩೩), ಭಕ್ತಿಯ ಬೆಳಕು (೧೯೩೪), ಚೆನ್ನಬಸವಣ್ಣನವರ ಉಪದೇಶ, ಸಿದ್ಧರಾಮಶಿವಯೋಗಿಗಳ ಉಪದೇಶ, ವಚನಕಾರರ ಸಮಾಜರಚನೆ ಸಂಪಾದಿತ ಕೃತಿ, ಅಕ್ಕನ ಉಪದೇಶ, ಅಣ್ಣನವರ ಅರ್ಪಣಯೋಗ, ಲಿಂಗಪೂಜೆಯ ಐತಿಹಾಸಿಕ ವಿವೇಚನೆ, ಅಣ್ಣನ ಕ್ರಾಂತಿ, ಬಸವಭಕ್ತಿ ಬಸವಣ್ಣನವರ ಚರಿತ್ರೆ, ಸುಬೋಧಸಾರ - ಸಂಪಾದಿತ ಕೃತಿ, ಮಹಾನುಭಾವರಾದ ಬಸವಣ್ಣನವರ ಉಪಮೆಗಳು ಮೊದಲಾದವುಗಳು ಸೇರಿವೆ.

೧೯೧೩ ರಲ್ಲಿ ಮೊದಲಬಾರಿಗೆ ದಾವಣಗೇರಿಯಲ್ಲಿ ಬಸವಜಯಂತಿಯನ್ನು ಆಚರಿಸಲಾಯಿತು. ಆ ದಿನ ಬಸವೇಶ್ವರ ವಚನಗಳಲ್ಲಿಯ ನಾಲ್ಕಾರು ನೈತಿಕ ವಚನಗಳನ್ನು ಒಂದು ಚಿಕ್ಕ ಪ್ರಕಟಣೆಯಾಗಿ ಮುದ್ರಿಸಿ ಹಂಚಿಸಿದರು. ಅದೇ ಮಂಜಪ್ಪನವರ ವಚನ ಸಾಹಿತ್ಯ ಕುರಿತ ಮೊದಲ ಪ್ರಕಟಣೆಯಾಗಿದೆ. ಬಸವ ಚರಿತ್ರೆ ಮಂಜಪ್ಪನವರ ಶ್ರೇಷ್ಠ ಕೃತಿಗಳಲ್ಲೊಂದು. ಬಸವಣ್ಣನವರ ಬಗ್ಗೆ ಕೇವಲ ಅಂಧಶ್ರದ್ಧೆ ತುಂಬಿದ್ದ ಅಂದಿನ ದಿನಮಾನಗಳಲ್ಲಿ ಮಂಜಪ್ಪನವರು ವಚನ, ಕಾವ್ಯ, ಪುರಾಣ, ಶಾಸನ, ಜನಮನ ನಂಬಿಕೆಗಳನ್ನು ಚೆನ್ನಾಗಿ ಪರಿಶೀಲಿಸಿ ಅತ್ಯಂತ ವಸ್ತುನಿಷ್ಠವಾಗಿ ನನ್ನು ಬರೆಯಲು ಪ್ರಯತ್ನಿಸಿದ್ದಾರೆ. ಇದಕ್ಕೆ ಪೂರಕವಾದ ಕೃತಿ ಬಸವಣ್ಣನವರು ಶುದ್ಧಿ ಮತ್ತು ಸಂಘಟನೆ. ಸಾಮಾಜಿಕ ಮತ್ತು ಧಾರ್ಮಿಕ ಹಿನ್ನೆಲೆಯಲ್ಲಿ ಬಸವಣ್ಣನವರ ಮಹತ್ವವನ್ನು ತಿಳಿಸುವ ವೈಚಾರಿಕ ಕೃತಿ.

ಬಸವಭಕ್ತಿ, ಅಣ್ಣನಕ್ರಾಂತಿ, ಅಣ್ಣನವರ ಅರ್ಪಣಯೋಗ ಇವು ಬಸವಣ್ಣನವರ ವ್ಯಕ್ತಿ ವಿಶಿಷ್ಟತೆಯನ್ನು ತಿಳಿಸುವ ಅವರ ಚಿಕ್ಕ ಕೃತಿಗಳು. ಮಕ್ಕಳಿಗೆ ದೇಶದ ಮಹಾಪುರುಷರ ಜೀವನಚರಿತ್ರೆ ಗೊತ್ತಾಗಬೇಕೆಂದು ಸುಲಭ ಭಾಷೆಯಲ್ಲಿ, ದೊಡ್ಡ ಅಕ್ಷರಗಳಲ್ಲಿ ಪ್ರಕಟಿಸಿದ ಪುಸ್ತಕಗಳಲ್ಲಿ ಬಸವಣ್ಣನವರ ಚರಿತ್ರೆ, ಅಕ್ಕನ ಉಪದೇಶ, ಪ್ರಭುದೇವರ ಕಥೆಗಳು ಸೇರಿವೆ. ಬಸವಣ್ಣನವರ ದಿವ್ಯ ಚರಿತ್ರೆಯನ್ನು ಪದ್ಯರೂಪದ ೬೫ ನುಡಿಗಳಲ್ಲಿ ಚಿಕ್ಕಮಕ್ಕಳಿಗೆ

ಕಂಠಪಾಠ ಮಾಡಲು ಅನುಕೂಲವಾಗುವಂತೆ ರಚಿಸಿದ ನೂತನ ಕೃತಿ ಸಂಗನಬಸವ ಸ್ತುತಿ. ವಚನ ಮತ್ತು ವಚನಕಾರರ ಬಗೆಗಿನ ಅವರ ಶ್ರದ್ಧೆ, ವಿಶ್ವಾಸ ಇಷ್ಟಕ್ಕೇ, ನಿಲ್ಲಲಿಲ್ಲ. ೧೯೨೪ ರಲ್ಲಿ ಬೆಳಗಾವಿಯಲ್ಲಿ ಸೇರಿದ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನ ಸಂದರ್ಭದಲ್ಲಿ 'ವೀರಶೈವ ಪರಿಷತ್ತನ್ನು' ಸಂಘಟಿಸಿ ಲಕ್ಷ್ಮಣರಾವ ಭಿಡೆಯವರಿಂದ ಹಿಂದಿ ಮತ್ತು ಮರಾಠಿ ಭಾಷೆಯಲ್ಲಿ 'ಸತ್ಯಾಗ್ರಹಿ ಬಸವೇಶ್ವರ' ಎಂಬ ಚಿಕ್ಕ ಪುಸ್ತಕ ಮುದ್ರಿಸಿ ಅದರ ಪ್ರತಿಗಳನ್ನು ಅಧಿವೇಶನದ ಅಧ್ಯಕ್ಷರಾದ ಗಾಂಧೀಜಿಯವರೊಂದಿಗೆ ಪರಪ್ರಾಂತದಿಂದ ಬಂದ ಮುಖಂಡರಿಗೂ ಹಂಚಿದರು. ಅದೇ ಸಮಯದಲ್ಲಿ ಬಸವಣ್ಣನವರ ವ್ಯಕ್ತಿತ್ವ, ತತ್ವದರ್ಶನಗಳು ಸಮಕಾಲೀನ ಸಂದರ್ಭದಲ್ಲಿ ಪ್ರಸ್ತುತವೆಂಬುದನ್ನು ಮನವರಿಕೆ ಮಾಡಿ, ಗಾಂಧೀಜಿಯವರ ತತ್ವಗಳು ಬಸವ ತತ್ವಗಳ ಪ್ರತಿಧ್ವನಿಯೆಂಬುದನ್ನು ಸ್ಪಷ್ಟಪಡಿಸಿದರು. ಕೇವಲ ಕರ್ನಾಟಕದ ಒಂದು ಸಮಾಜ ವಲಯದಲ್ಲಿ ಬಂಧಿತನಾದ ಬಸವಣ್ಣನನ್ನು ಮೊಟ್ಟಮೊದಲು ರಾಷ್ಟ್ರಕ್ಕೆ ಪರಿಚಯಿಸಿದ ಕೀರ್ತಿ - ಶ್ರೇಯಸ್ಸು ಮಂಜಪ್ಪನವರಿಗೆ ಸಲ್ಲಬೇಕು.

ಬಸವ ಬೋಧಾಮೃತ, ಬಸವ ಸಂದೇಶ ಮತ್ತು ಭಕ್ತಿಯ ಬೆಳಕು ಮೊದಲಾದ ಕೃತಿಗಳಲ್ಲಿ ಬಸವಣ್ಣನವರ ವಚನಗಳ ಸಾರಸಂಗ್ರಹದ ಜೊತೆಗೆ ಮಂಜಪ್ಪನವರ ವಚನ ಸಾಹಿತ್ಯ ಕುರಿತಾದ ಅಧ್ಯಯನ - ಅನುಸಂಧಾನವನ್ನು ಗುರುತಿಸಬಹುದಾಗಿದೆ. ಶಿವಾನುಭವಿಗಳಾದ ಕಿಣಗಿ ಬಸವಲಿಂಗಪ್ಪನವರು ಅರ್ಥವಿವರಣೆ ಬರೆದು ಮುದ್ರಿಸಲು ಹೇಳಿ ಕೊಡಮಾಡಿದ ಬಸವಣ್ಣನವರ ಸ್ವಟೀಕ ಕೈಬರಹದ ಪ್ರತಿಯಿಂದ ಬೇರೆ ವಿಷಯಗಳಿಗೆ ಸಂಬಂಧಿಸಿದ ೧೦೮ ವಚನಗಳನ್ನಾಯ್ದುಕೊಂಡು ಸರಳ ಕನ್ನಡದಲ್ಲಿ ಅರ್ಥವಿವರಣೆ ಬರೆದು ಬಸವ ಬೋಧಾಮೃತ ಹೆಸರಿನಿಂದ ಪ್ರಕಟಿಸಲಾಯಿತು. ಈ ಕೃತಿ ಜನಪ್ರಿಯಗೊಂಡು ಹಲವು ಮುದ್ರಣ ಕಂಡುದಲ್ಲದೇ ಮರಾಠಿಗೂ ಅನುವಾದವಾಯಿತು.

ಮಂಜಪ್ಪನವರು ಆ ಕಾಲದಲ್ಲಿ ಪ್ರಾರಂಭಿಸಿದ ಬಸವಜಯಂತಿಯು ಕರ್ನಾಟಕದಲ್ಲಿ ಒಂದು ಹೊಸ ಜಾಗೃತಿಯ ಮಹೋತ್ಸವವಾಗಿ ಪರಿಣಮಿಸಿತು. ಅಂದು ಬಸವತತ್ವ ಪ್ರಸಾರಕ್ಕೆ ಒಂದು ಹೊಸ ಅನುಕ್ರಮಣಿಕೆ ಪ್ರಾಪ್ತವಾಗಲು ಜಯಂತಿಯ ಕಾಲಕ್ಕೆ ಚಿಕ್ಕ ಚಿಕ್ಕ ಪುಸ್ತಕಗಳನ್ನು ಉಚಿತವಾಗಿ ಹಂಚುವ ಪದ್ಧತಿಯನ್ನು ೧೯೩೩ ರಲ್ಲಿ ಪ್ರಾರಂಭಿಸಿದರು. ಬಸವಣ್ಣನವರ ವಚನಗಳಿಂದಾಯ್ದುಕೊಂಡ ೧೦೧ ವಚನಗಳ ಚಿಕ್ಕ ಪುಸ್ತಕ 'ಬಸವ ಸಂದೇಶ' ಆ ವರ್ಷದ ಬಸವಜಯಂತಿಗೆ ಎಲ್ಲ ಕಡೆ ಹಂಚಲು ಪ್ರಕಟವಾಯಿತು. ಆ ಬಾರಿ ೫೦ ಸಾವಿರ ಪ್ರತಿಗಳು ಹಂಚಲ್ಪಟ್ಟು ಕರ್ನಾಟಕದಲ್ಲಿಯೇ ಅದೊಂದು ಅಭೂತಪೂರ್ವ ಪ್ರಸಂಗವೆನಿಸಿತು. ೧೯೩೪ ರ ಬಸವಜಯಂತಿಯಂದು ಬಸವಣ್ಣನವರ ಕೆಲವು ವಚನಗಳಿಗೆ ಅರ್ಥಬರೆದ 'ಭಕ್ತಿಯ ಬೆಳಕು' ಎಂಬ ಚಿಕ್ಕ ಕೃತಿಯ

೨೦ ಸಾವಿರ ಪ್ರತಿಗಳು ವಿತರಣೆಗೊಂಡವು. ಹೀಗೆಯೇ ಶ್ರಾವಣ ಮಾಸದಲ್ಲಿಯೂ ಪುಸ್ತಕ ಹಂಚಲು ಜನರಲ್ಲಿ ವಿಜ್ಞಾಪಿಸಿಕೊಂಡು 'ವೀರಶೈವ ಏಕೀಕರಣ', ಎಂಬ ಪುಸ್ತಕವನ್ನು ಸಂವಾದ ರೂಪದಲ್ಲಿ ಬರೆದರು. ವೀರಶೈವರಲ್ಲಿಯ ಜಾತಿಯ ಮೇಲು - ಕೀಳುಗಳ ಕೊಳೆಯನ್ನು ತೆಗೆದು ಹಾಕುವ ವಿಷಯ ಇದರಲ್ಲಿ ಪ್ರತಿಪಾದಿತವಾಗಿದ್ದು ಆ ವರ್ಷ ಅದರ ೧೫ ಸಾವಿರ ಪ್ರತಿಗಳು ಹಂಚಲ್ಪಟ್ಟವು. ಇದೇ ತೆರನಾಗಿ ಚೆನ್ನಬಸವಣ್ಣನವರ ಉಪದೇಶ ಸಿದ್ಧರಾಮ ಶಿವಯೋಗಿಗಳ ಉಪದೇಶ ಎಂಬ ಚಿಕ್ಕ ಪುಸ್ತಕಗಳು ಪ್ರಕಟಗೊಂಡವು. ಇಲ್ಲಿನ ವರ್ಷದ ಅವಧಿಯಲ್ಲಿ ಸಾಧಾರಣ ಒಂದು ಲಕ್ಷ ಚಿಕ್ಕ ಪುಸ್ತಕಗಳು ಪ್ರಸಾರವಾದುದನ್ನು ಮಂಜಪ್ಪನವರು ಪ್ರಸ್ತಾಪಿಸಿದ್ದಾರೆ.

ಅವರ ವೀರಶೈವ ಮತಬೋಧೆ, ವೀರಶೈವ ಮತತತ್ವ ಇವು ವೀರಶೈವ ಮತ, ತತ್ವಗಳನ್ನು ಸಂಕ್ಷಿಪ್ತವಾಗಿ ವಿವರಿಸುವ ಚಿಕ್ಕ ಕೃತಿಗಳು. ಇದರಲ್ಲಿ ' ವೀರಶೈವ ಮತಬೋಧೆ' ಮರಾಠಿ, ತೆಲುಗು ಭಾಷೆಗಳಿಗೆ ಅನುವಾದಗೊಂಡು ನಾಲ್ಕೈದು ಮುದ್ರಣಗಳನ್ನು ಕಂಡ ಜನಪ್ರಿಯ ಕೃತಿಯಾಗಿದೆ. ಶ್ರೀ ಬಸವಾದಿ ಶರಣರ ಸಾಮಾಜಿಕ ವಿಚಾರಗಳು ಒಂದೇ ಕಡೆಗೆ, ಎಲ್ಲರಿಗೂ ಸುಲಭದಲ್ಲಿ ತಿಳಿಯುವಂತಾಗಬೇಕು ಎಂಬ ಉದ್ದೇಶದಿಂದ ಆರ್. ಆರ್. ದಿವಾಕರರ 'ವಚನಶಾಸ್ತ್ರ ರಹಸ್ಯ', ಎಂ. ಆರ್. ಶ್ರೀನಿವಾಸಮೂರ್ತಿಯವರ ''ಭಕ್ತಿಭಂಡಾರಿ ಬಸವಣ್ಣ'' ಗ್ರಂಥಗಳು ಮತ್ತು ಟಿ. ಎಸ್. ವೆಂಕಣ್ಣಯ್ಯನವರ 'ಬಸವಯುಗದ ವಚನಕಾರರು' ಭಾಷಣಗಳು ಕೆಲವು ಸಾಮಾಜಿಕ ವಿಚಾರಗಳನ್ನು ಒಗ್ಗೂಡಿಸಿ ''**ವಚನಕಾರರ ಸಮಾಜ ರಚನೆ**'' ಪುಸ್ತಕ ಪ್ರಕಟಿಸಿದರು. ಆಗಿನ ಹಿಂದೂ ಸಮಾಜ ಸುಧಾರಕರು ಯಾವ ತತ್ವಗಳನ್ನು ಜನಾಂಗದ ಉದ್ಧಾರಕ್ಕೆಂದು ಹೇಳುತ್ತಿದ್ದರೋ ಅವುಗಳನ್ನೆ ೮೦೦ ವರ್ಷಗಳ ಹಿಂದೆ ವಚನಕಾರರು ಆಚರಿಸಿ ತೋರಿಸಿದ್ದನ್ನು ಮಂಜಪ್ಪನವರು ಇಲ್ಲಿ ಗುರುತಿಸಿದ್ದಾರೆ. ಅಂತೆಯೇ ಅವರು ''ಆ ನಾಡಿನ ಚರಿತ್ರೆಯ ಸರ್ವಾಂಗಗಳನ್ನು ತಿಳಿದುಕೊಳ್ಳಲಪೇಕ್ಷಿಸುವವರು ಯಾವ ಧರ್ಮ, ಮತ, ಪಂಥ ಅಥವಾ ದೇಶದವರಿದ್ದರೂ ಆ ಶರಣರ ಕಾರ್ಯಗಳ ಕಡೆಗೆ ಲಕ್ಷಿಸಬೇಕಾಗುವುದು'' ಎಂದಿದ್ದಾರೆ. ತುಂಬ ಪ್ರಸಿದ್ಧವಾದ ಈ ಕೃತಿ ಇಂಗ್ಲೀಷ ಭಾಷೆಗೆ ಅನುವಾದಗೊಂಡು ಬಿ. ಎಂ. ಶ್ರೀಕಂಠಯ್ಯನವರಿಂದ ಮೆಚ್ಚುಗೆಯನ್ನು ಪಡೆದಿದೆ. ಹೀಗೆ ವಚನ ಸಾಹಿತ್ಯದ ಅಧ್ಯಯನ -ಅನುಸಂಧಾನದೊಂದಿಗೆ ಸ್ವತಃ ವಚನಗಳನ್ನು ರಚಿಸಿದ ಕೀರ್ತಿಯೂ ಮಂಜಪ್ಪನವರಿಗಿದೆ. ಪ್ರಭುದೇವ ಅಂಕಿತದಲ್ಲಿ ಬರೆದ ಅವರ ೩೨ ವಚನಗಳು. 'ಜನಸೇವಕನ ವಚನಗಳು' ಹೆಸರಿನಲ್ಲಿ ಸಂಕಲಿತಗೊಂಡಿವೆ. ಆಧುನಿಕ ವಚನಕಾರರಲ್ಲಿ ಮೊದಲಿಗರಾದ ಅವರ ವಚನಗಳಲ್ಲಿ ಲೋಕಾನುಭವ, ಶಿವಾನುಭವ ಹಾಗೂ ಸಮಾಜ ಸೇವಾಭಾವಗಳು ಮುಪ್ಪುರಿಗೊಂಡಿವೆ. ಉದಾಹರಣೆಗೆ ಒಂದು ವಚನವನ್ನಿಲ್ಲಿ ನೋಡಬಹುದು.

ಧರ್ಮವು ಮನಕಲ್ಲದೆ ತನುವಿಗುಂಟೆ ಅಯ್ಯಾ
ಮನ ಭಿನ್ನವಿರುವ ಪರಿ ಧರ್ಮ ಭಿನ್ನವಾಗಿಪ್ಪುದು ಸಹಜ ನೋಡಾ
ಗೋವಿಗೆ ನಾನಾ ವರ್ಣಗಳಲ್ಲದೆ ಕ್ಷೀರಕೆ ನಾನಾ ವರ್ಣಗಳುಂಟೆ
ಧರ್ಮ ಭಿನ್ನವಾಗಿರ್ದೊಡೆ ದಯ ಭಿನ್ನವಾಗಿರಬಹುದೆ
ಪ್ರಭುದೇವಾ ಜನಸೇವಕರಿಗೆ ಗೋವರ್ಣ ಕಾಣದೆ
ಕ್ಷಿರವೊಂದೇ ಕಾಣುವಂತೆ ಮಾಡಯ್ಯ

ಹೀಗೆ ಒಂದೆಡೆ ಕೃತಿಗಳ ಮೂಲಕ ವಚನ ಧರ್ಮವನ್ನು ಸಾರಿದ ಮಂಜಪ್ಪನವರು ಮತ್ತೊಂದೆಡೆ ಪತ್ರಿಕೆಗಳ ಮೂಲಕ ಆ ಕಾರ್ಯ ಸಾಧಿಸಿದರು. ಬಸವಾದಿ ಪ್ರಮಥರ ನಿಷ್ಠೆ, ತತ್ವಪ್ರಚಾರ ಕಾರಣವಾಗಿ ನಂತರದ ತಮ್ಮ ಪತ್ರಿಕೆಗೆ ''ಶರಣ ಸಂದೇಶ' ವೆಂದೇ ಹೆಸರಿಟ್ಟು ನಡೆಸಿದರು. 'ನಾಯ್ಯನಿಷ್ಠುರಿ, ದಾಕ್ಷಿಣ್ಯಪರನು ನಾನಲ್ಲ, ಲೋಕವಿರೋಧಿ ಶರಣನಾರಿಗೂ ಅಂಜುವನಲ್ಲ, ಕೂಡಲ ಸಂಗಮದೇವರ ರಾಜತೇಜದಲ್ಲಿಪ್ಪನಾಗಿ' ಎಂಬ ಬಸವನ ಧೀರವಾಣಿಯನ್ನು ತನ್ನ ಶಿರೋಭಾಗದಲ್ಲಿ ಧರಿಸಿದ ವಾರಪತ್ರಿಕೆ ವೀರಶೈವ ಸಮಾಜದಲ್ಲಿ ವಿಶೇಷ ಜಾಗೃತಿಯನ್ನುಂಟು ಮಾಡಿತು. ವಚನ ತತ್ವಗಳನ್ನು ವಿವರವಾಗಿ ವಿಮರ್ಶಿಸಿ ವಿವೇಚಿಸುವ, ವೀರಶೈವ ಒಳಪಂಗಡಗಳ ಕೊಳೆಯನ್ನು ತೊಳೆದು ಶುದ್ಧಿ ಸಂಘಟನೆ ಮಾಡುವ ಈ ಪತ್ರಿಕೆಯ ೮೦೦ ಪ್ರತಿಗಳು ಪ್ರಕಟಗೊಂಡು ಅಂದಿನ ಮುಂಬೈ ಕರ್ನಾಟಕದಲ್ಲಿ ಪ್ರಸಾರಗೊಳ್ಳುತ್ತಿದ್ದುದು ಮೆಚ್ಚತಕ್ಕ ಸಂಗತಿಯಾಗಿದೆ.

ಇದು ಮಂಜಪ್ಪನವರು ಬರೆದು ಪ್ರಕಟಿಸಿದ ವಿಚಾರವಾದರೆ ಅವರು ಕರ್ನಾಟಕದುದ್ದಕ್ಕೂ ಸಂಚರಿಸಿ ನೀಡಿದ ಉಪನ್ಯಾಸ - ಭಾಷಣಗಳ ಸಂಖ್ಯೆ ಎರಡು ಸಾವಿರವನ್ನು ಮೀರುತ್ತದೆ. ಅವರು ಉದ್ಬೋಧಕ ಹೃದಯಸ್ಪರ್ಶಿ ಭಾಷಣಗಳನ್ನು ಕುರಿತು ವಚನ ಪಿತಾಮಹ ಫ. ಗು. ಹಳಕಟ್ಟಿಯವರು '' ಕರ್ನಾಟಕದಲ್ಲಿ ಈ ವರೆಗೆ ಆಗಿಹೋದ ಅತ್ಯುತ್ತಮ ಭಾಷಣಕಾರರಲ್ಲಿ ನಾವು ಅವರನ್ನು ಪ್ರಥಮ ತರಗತಿಯವರೆಂದು ಗಣಿಸಬಹುದು ----- ಅವರ ಇಡೀ ಆಯುಷ್ಯವೆಲ್ಲ ಜನಸಮುದಾಯವನ್ನು ಎಚ್ಚರಿಸುವುದರಲ್ಲಿಯೇ ಹೋಯಿತು'' ಎಂದಿದ್ದಾರೆ. ಮನುಷ್ಯರು ಜನಾಂಗದ ಹಿತಕ್ಕಾಗಿ ತನ್ನ ಸ್ವಭಾವಕ್ಕನುಗುಣವಾದ ಕಾರ್ಯಗಳನ್ನು ಸತ್ಯತೆಯಿಂದಲೂ ಧೈರ್ಯದಿಂದಲೂ ನಿರಂತರ ಮಾಡುತ್ತಿರಬೇಕು ಎನ್ನುವ ಮಂಜಪ್ಪನವರು ತಮ್ಮ ಜೀವನದುದ್ದಕ್ಕೂ ಅದನ್ನು ಪಾಲಿಸಿಕೊಂಡು ಹೋಗಿದ್ದಾರೆ. ಒಮ್ಮೆ ಫ. ಗು. ಹಳಕಟ್ಟಿಯವರು ಹತ್ತಾರು ವರುಷದಿಂದ ಪರಿಶೋಧಿಸಿದ ಅನೇಕ ವಚನಗಳು ಹಣದ ಕೊರತೆಯಿಂದ ಅಚ್ಚಾಗದ ಸಂಗತಿ ಮಂಜಪ್ಪನವರಿಗೆ ತಿಳಿಯಿತು. ಅವರು ತಡಮಾಡದೇ ವಿಜಾಪುರ ಜಿಲ್ಲೆಯ ಕೆಲ ಸ್ಥಳಗಳಿಗೆ ಹೋಗಿ ೧೫ ದಿನ ಪ್ರಯತ್ನಿಸಿ ೭೭೦ ರೂಪಾಯಿಗಳನ್ನು ಕೂಡಿಸಿ ೨೬-೮-೧೯೩೫

ರಂದು ಬಾಗಿಲುಕೋಟೆಯಲ್ಲಿ ಸಮಾರಂಭವನ್ನೇರ್ಪಡಿಸಿ ಹಳಕಟ್ಟಿಯವರಿಗೆ ಅದನ್ನು ಅರ್ಪಿಸಿದರು. ಹಾಗೆ ಅವರ ಎಲ್ಲ ಕಾರ್ಯಚಟುವಟಿಕೆಗಳಿಗೆ ಪೋಷಕರಾಗಿ ಪ್ರೇರಣೆ ನೀಡಿದ ಧಾರವಾಡದ ಶ್ರೀಮೃತ್ಯುಂಜಯ ಮಹಾಸ್ವಾಮಿಗಳು, ಅಥಣಿಯ ಶ್ರೀಮುರುಘೇಂದ್ರ ಸ್ವಾಮಿಗಳು, ಚಿತ್ರದುರ್ಗದ ಶ್ರೀಜಯದೇವ ಜಗದ್ಗುರುಗಳು, ಬಂಥನಾಳದ ಶ್ರೀ ಸಂಗನಬಸವ ಶಿವಯೋಗಿಗಳನ್ನು ಮಂಜಪ್ಪನವರು ಕೃತಜ್ಞತೆಯಿಂದ ಸ್ಮರಿಸಿಕೊಂಡಿದ್ದಾರೆ, ಲೋಕವಿರೋಧವನ್ನು ಲೆಕ್ಕಿಸದೇ ತಮಗೆ ಸರಿಕಂಡದ್ದನ್ನು ಸಾಧಿಸಿದ ಮಂಜಪ್ಪನವರನ್ನು ನಮ್ಮ ಸಮಾಜ ಗುರುತಿಸಲಿಲ್ಲ. ಆದರೂ ಅವರು ತಮ್ಮ ಪೂರ್ಣದೃಷ್ಟಿಯ ಸಮಾಜ ಕಲ್ಪನೆಯನ್ನು ನಮ್ಮ ಮುಂದೆ ಇಟ್ಟುಹೋಗಿದ್ದಾರೆ. ಅವರ ಕೊನೆಯ ಮನವಿಯಂತೆ ಧೀರರಾಗಿ, ಪವಿತ್ರರಾಗಿ, ಸ್ವತಂತ್ರ ರಾಷ್ಟ್ರವೀರರಾಗಿ ಅದನ್ನುಳಿಸಿಕೊಳ್ಳುವ ಕಾಲವೀಗ ವಿಹಿತವಾಗಿದೆ.

ಗ್ರಂಥಋಣ

೧) ರಾಷ್ಟ್ರಧರ್ಮದ್ರಷ್ಟಾರ ಹರ್ಡೇಕರ ಮಂಜಪ್ಪ: (ಸಂ). ಗ.ಸ.ಹಾಲಪ್ಪ
ಹರ್ಡೇಕರ ಮಂಜಪ್ಪ ಸ್ಮಾರಕ ಗ್ರಂಥಮಾಲೆ, ಧಾರವಾಡ - ೧೯೬೬

೨) ಹರ್ಡೇಕರ ಮಂಜಪ್ಪನವರು : ಸಿದ್ದಯ್ಯ ಪುರಾಣಿಕ
ವೀರಶೈವ ಅಧ್ಯಯನ ಸಂಸ್ಥೆ, ಗದಗ - ೧೯೭೮

೩) ಹರ್ಡೇಕರ ಮಂಜಪ್ಪನವರು : ಜೀವನ ಹಾಗೂ ವ್ಯಕ್ತಿತ್ವ : (ಸಂ)
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ - ೧೯೮೦

೪) ಕರ್ನಾಟಕದ ಗಾಂಧಿ ಹರ್ಡೇಕರ ಮಂಜಪ್ಪ : (ಸಂ). ಎಂ.ಎಂ.ಕಲಬುರ್ಗಿ
ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು - ೧೯೮೯

೫) ವಚನಕಾರರ ಸಮಾಜರಚನೆ : (ಸಂಗ್ರಹ). ಹರ್ಡೇಕರ ಮಂಜಪ್ಪನವರು-
೧೯೩೬.

ಮನಮೋಹಕ ರತ್ನ : ಮಾಣಿಕ್ಯ ಮತ್ತು ನೀಲಮಣಿ

★ ಎಂ. ಮುನಿಸ್ವಾಮಯ್ಯ

ವಸುಂಧರೆಯ ಗರ್ಭದಲ್ಲಿ ಮಿನುಗುತ್ತಿರುವ ಮನಮೋಹಕ ಮಾಣಿಕ್ಯ, ನೀಲ ಮಣಿಗಳು ಸಿಗುವ ದೇಶಗಳು, ಇವುಗಳನ್ನು ಕತ್ತರಿಸಿ ಸಂಸ್ಕರಿಸುವ ವಿಧಾನ ಕೆಳದರ್ಜೆಯ ರತ್ನಗಳನ್ನು ಕಾಯಿಸಿ ರತ್ನಗಳ ಸ್ವಚ್ಛತೆ ಮತ್ತು ಬಣ್ಣವನ್ನು ಅಧಿಕಗೊಳಿಸುವ ವಿಧಾನ, ಕೃತಕ ತಯಾರಿಕೆ ಹಾಗೂ ರತ್ನಗಳ ಪ್ರಮುಖ ಮಾರುಕಟ್ಟೆ ನೈಜ-ಕೃತಕ ರತ್ನಗಳ ಮೌಲ್ಯಮಾಪನ ಬಹಳ ಜನಕ್ಕೆ ತಿಳಿದಿರಲಿಕ್ಕಿಲ್ಲ. ಆದಕಾರಣ ಈ ರತ್ನಗಳು ವಿವಿಧ ಕ್ಷೇತ್ರದ ಮಹತ್ತರ ಪರಿಚಯ ಇಲ್ಲಿದೆ.

ಭಾರತದ ಇತಿಹಾಸವನ್ನು ಅಭ್ಯಸಿಸಿದರೆ ರತ್ನಗಳ ಬಳಕೆ ವೇದಗಳ ಕಾಲದಿಂದಲೂ ಇದೆಯೆಂದು ತಿಳಿದುಬರುತ್ತದೆ. ಮನುಷ್ಯನು ಮೂಲತಃ ಅಪರೂಪ ವಸ್ತುಗಳ ಆರಾಧಕ. ಪ್ರಪಂಚದಲ್ಲಿ ವಜ್ರದ ಹರಳುಗಳಿಗೆ ಕೊರತೆಯೇ ಇಲ್ಲ. ಆದರೆ ಗುಣಮಟ್ಟವುಳ್ಳ ರತ್ನಗಳಿಗೆ ಮಾತ್ರ ಅಪಾರ ಬೇಡಿಕೆ. ಒಂದು ಟನ್ ಮಣ್ಣನ್ನು ಸೋಸಿದರೆ ಆಕಸ್ಮಿಕವಾಗಿ ಸಿಕ್ಕಿದರೆ ಒಂದು ಕ್ಯಾರೆಟ್ ರತ್ನ ಇಲ್ಲದಿದ್ದರೆ ಇಲ್ಲವೇ ಇಲ್ಲ. ಈ ಅಪರೂಪದ ರತ್ನಗಳು ಕೆಂಪಾಗಿದ್ದರೆ ಮಾಣಿಕ್ಯ, ಪದ್ಮರಾಗವೆಂತಲೂ, ನೀಲಿಯಾಗಿದ್ದರೆ, ನೀಲ, ಇಂದ್ರ ನೀಲಮಣಿ ಎಂದೂ ಹಾಗೂ ಮನಮೋಹಕ ಹಳದಿ, ಕಿತ್ತಳೆ, ಹಸಿರು ಬಣ್ಣವಿದ್ದ ರತ್ನಗಳು ಸಹ ನೀಲಮಣಿಗಳೆಂದೇ (ಸಫೈರ್‌ಗಳೆಂದೇ) ಕರೆಯುತ್ತಾರೆ. ಆಂಗ್ಲ ಭಾಷೆಯಲ್ಲಿ ಮಾಣಿಕ್ಯಕ್ಕೆ '**ರೂಬಿ**' ಎಂದೂ ನೀಲಮಣಿಗಳಿಗೆ '**ಸಫೈರ್**' ಎಂದೂ ಕರೆಯುತ್ತಾರೆ. ಸಾವಿರಾರು ವರ್ಷಗಳು ಕಳೆದರೂ ನವರತ್ನಗಳಲ್ಲಿ ಕೊರಂಡಂನಿಂದ ರೂಪಿತಗೊಂಡ ಸುಂದರ ಮಾಣಿಕ್ಯ ಮತ್ತು ನೀಲಮಣಿಗಳಿಗೆ ಜನರು ಮನಸೋತು ಅವುಗಳಿಗೆ ಹೆಚ್ಚು ಬೆಲೆಯನ್ನು ಕೊಡಲು ಒಪ್ಪುತ್ತಾರೆ. ಏಕೆಂದರೆ ಸಾವಿರಾರು ವರ್ಷಗಳು ಕಳೆದರೂ ಅವುಗಳ ಆಕರ್ಷಣೆ, ಬಣ್ಣ, ಸೌಂದರ್ಯ, ಉಜ್ವಲಿಕೆ, ದೀರ್ಘ ಬಾಳ್ವಿಕೆ ಗುಣಗಳು ಇಂದಿಗೂ ಕುಂದಿಲ್ಲ. ಗಡಸುತನದಲ್ಲಿ ವಜ್ರ ಬಿಟ್ಟರೆ ಎರಡನೆಯ ಸ್ಥಾನ ಕೊರಂಡಂಗೆ ಸೇರಬೇಕು. ಆದಕಾರಣ, ಆಭರಣಗಳ ಪ್ರಿಯರು ಕೊರಂಡಂನಿಂದ ಆಕರ್ಷಿತ ಬಣ್ಣವುಳ್ಳ ಸ್ವಚ್ಛ ಮಾಣಿಕ್ಯ ಮತ್ತು ನೀಲಮಣಿಗಳನ್ನೇ ಹೆಚ್ಚಾಗಿ ಉಪಯೋಗಿಸುತ್ತಾರೆ.

ಕೊರಂಡಂ ಖನಿಜವು ಅಲ್ಯೂಮಿನಿಯಂ ಆಕ್ಸೈಡ್‌ನಿಂದ ಕೂಡಿದೆ. ಇದರ ಹರಳುಗಳು ಸ್ತಂಭಾಕೃತಿಯಂತಿದ್ದು, ಆರು ಮೂಲೆಗಳನ್ನು ಹೊಂದಿದೆ. ಇದು ಕೆಂಪು, ನೀಲಿ, ಕಿತ್ತಳೆ, ಹಸಿರು ಮತ್ತು ಕುಂಕುಮ ಬಣ್ಣಗಳಲ್ಲಿ ಸಿಗುತ್ತದೆ. ಶುದ್ಧ ಕೊರಂಡಂಗೆ ಬಣ್ಣವಿರುವುದಿಲ್ಲ. ಆದರೆ ಶುದ್ಧ ಅಲ್ಯೂಮಿನಿಯಂ ಆಕ್ಸೈಡ್ ಕರಗಿ ದ್ರವ ರೂಪದಲ್ಲಿದ್ದಾಗ ಮೂಲಾಂಶಗಳಾದ ಕ್ರೋಮಿಯಂ, ಟೈಟಾನಿಯಂ, ಕಬ್ಬಿಣ, ನಿಕ್ಕಲ್, ಕೋಬಾಲ್ಟ್ ಮುಂತಾದವುಗಳ ತೃಣಾಂಶವು ಅಲ್ಯೂಮಿನಿಯಂ ಆಕ್ಸೈಡ್ ಪಾಕಕ್ಕೆ ಸೇರಿದರೆ ಹಸಿರು, ನೀಲಿ, ಕೆಂಪು, ಕಿತ್ತಳೆ, ಮುಂತಾದ ಬಣ್ಣಗಳಿಂದ ಕೊರಂಡಂ ರೂಪಗೊಳ್ಳುತ್ತದೆ. ಹೀಗೆ ಕೊರಂಡಂ ರೂಪಗೊಳ್ಳುವಾಗ ಇದರ ಜೊತೆಯಲ್ಲಿ ಸೂಜಿಯಂತಿರುವ ಸೂಕ್ಷ್ಮ ರೊಟೈಲ್ ಸೂಜಿಯಾಕಾರದ ಸ್ತಂಭಾಕೃತಿಗೆ ಲಂಬವಾಗಿ ರೂಪಗೊಂಡಂತಹ ಕೊರಂಡಂ ಹರಳನ್ನು ಬೆರಳಿಗೆ ಒಡ್ಡಿದಾಗ, ಅದರಲ್ಲಿ ನಕ್ಷತ್ರದಂತೆ ಮಿನುಗುವ ಬೆಳಕು ಪ್ರತಿಬಿಂಬಿಸುವುದನ್ನು ಕಾಣಬಹುದು, ಈ ನಕ್ಷತ್ರ ಮಾಣಿಕ್ಯದಲ್ಲಿದ್ದರೆ ''ನಕ್ಷತ್ರ ಮಾಣಿಕ್ಯ'' ಎಂದೂ ನೀಲಮಣಿಯಲ್ಲಿದ್ದರೆ ''ನಕ್ಷತ್ರ ನೀಲಮಣಿ'' ಎಂದೂ ಕರೆಯುತ್ತಾರೆ.

ಹಿಂದಿನಿಂದಲೂ ಶ್ರೇಷ್ಠ ದರ್ಜೆಯ ನೀಲಮಣಿಗಳು (ಸಫೈರ್‌ಗಳು) ಕಾಶ್ಮೀರದಿಂದ ಬರುತ್ತಿದ್ದವು. ಇದೇ ಜಾತಿಗೆ ಸೇರಿದ ನೀಲಮಣಿಗಳು ಮ್ಯಾನಮಾರ್ (ಬರ್ಮಾ) ಮತ್ತು ಶ್ರೀಲಂಕಾದಲ್ಲಿ ಶ್ರೇಷ್ಠ ಮಾಣಿಕ್ಯಗಳ ಜೊತೆಯಲ್ಲಿ ದೊರಕುತ್ತಿದ್ದವು. ಈಗ ಥೈಲ್ಯಾಂಡ್, ಕಾಂಬೋಡಿಯಾ, ಆಸ್ಟ್ರೇಲಿಯಾ, ಟಾಂಜೇನಿಯಾ, ಕೆನ್ಯಾ, ನೈಜೀರಿಯಾ, ಮಂಟಾನ ಮುಂತಾದ ದೇಶಗಳಲ್ಲಿ ಸಿಗುತ್ತವೆ. ಶ್ರೇಷ್ಠ ದರ್ಜೆಯ ಮಾಣಿಕ್ಯದ ಹರಳುಗಳು (ರೂಬಿಗಳು) ಬರ್ಮಾ ದೇಶದ ಮೊಗಾಕ್ ಶಿಲಾಸ್ತರಗಳ ಸಮೂಹದಲ್ಲಿ ದೊರೆಯುತ್ತವೆ. ಇವು ಪಾರಿವಾಳದ ರಕ್ತದಂತೆ ಕೆಂಪಾಗಿವೆ. ಇವುಗಳನ್ನು ಬೇರೆ ದೇಶಗಳ ಮಾಣಿಕ್ಯಗಳಿಗೆ ಹೋಲಿಸಿದರೆ ತುಂಬಾ ಶ್ರೇಷ್ಠ ದರ್ಜೆಯುಳ್ಳವೆಂದು ಹೇಳಬಹುದು. ಮೊಗಾಕ್ ನಗರದಲ್ಲಿ ವಾಸಿಸುವ ಪ್ರತಿಯೊಬ್ಬ ನಾಗರಿಕನಿಗೂ ಈ ರತ್ನದ ವ್ಯಾಪಾರ ತಿಳಿದಿದೆ. ಈ ದೇಶದಲ್ಲಿ ಸಿಗುವ ಮೊದಲ ದರ್ಜೆಯ ರತ್ನಗಳನ್ನು ಆ ಸರ್ಕಾರ, ವಿಶ್ವ ವ್ಯವಹಾರ ಮಾರಾಟಕ್ಕೆ ಮೀಸಲಾಗಿಟ್ಟುಕೊಂಡು, ೨ ನೇ ಮತ್ತು ೩ ನೇ ದರ್ಜೆಯ ರತ್ನಗಳನ್ನು ತಮ್ಮ ದೇಶದ ರತ್ನ ವ್ಯಾಪಾರಿಗಳಿಗೆ ಮಾರಾಟ ಮಾಡುತ್ತಾರೆ. ಆದ ಕಾರಣ, ಬರ್ಮಾ (ಮ್ಯಾನಮಾರ್) ದೇಶದಲ್ಲಿರುವ ೪೦೦ ಚ. ಮೈಲು ವಿಸ್ತೀರ್ಣವುಳ್ಳ ಪರ್ವತ ಶ್ರೇಣಿಯಲ್ಲಿ ಸಿಗುವ ಮೊದಲ ದರ್ಜೆಯ ಮಾಣಿಕ್ಯಗಳನ್ನು ಕಪ್ಪು ಹಣದ ವ್ಯಾಪಾರಿಗಳು ಮತ್ತು ಕಳ್ಳ ಸಾಗಾಣಿಕೆದಾರರು, ಹೇಗಾದರೂ ಮಾಡಿ ಮಾಲನ್ನು ಬೇರೆ ಕಡೆಗೆ ತಿರುಗಿಸುತ್ತಿದ್ದರು. ಆದ್ದರಿಂದ ಈ ಕಳ್ಳ ದಂಧೆಯನ್ನು ತಪ್ಪಿಸಲು ಮ್ಯಾನಮಾರ್ ಸರ್ಕಾರವು ೧೯೯೦ ರಂದೀಚೆಗೆ, ತಮ್ಮ ದೇಶದಲ್ಲಿ ಮಾಣಿಕ್ಯಗಳ ಗಣಿ ಕೆಲಸದಲ್ಲಿ ತೊಡಗುವವರಿಗೆ, ಅವರು ಕೇಳಿದಷ್ಟು ಪ್ರದೇಶವನ್ನು ದೇಣಿಗಗೆ(ಲೀಜ್‌ಗೆ) ಕೊಟ್ಟು, ಗಣಿಯಲ್ಲಿ ಸಿಕ್ಕಿದ ಶ್ರೇಷ್ಠ ದರ್ಜೆಯ ರತ್ನಗಳನ್ನು ಸರ್ಕಾರವೇ ತೆಗೆದುಕೊಂಡಿತು, ತಾನು ಮಾರಿದ ಅರ್ಧ ಬೆಲೆಯನ್ನು ಗಣಿ ಮಾಲೀಕರಿಗೆ ಕೊಡುವ ಒಪ್ಪಂದದ ಯೋಜನೆಯನ್ನು ಜಾರಿಗೆ ತಂದರು. ಈ

ಯೋಜನೆಯನ್ನು ತಂದ ೬ ತಿಂಗಳೊಳಗಾಗಿ ಸುಮಾರು ೨೦೦ಗಣಿ ಮಾಲೀಕರು ೪೬,೨,೯೦೯ ಕ್ಯಾರೆಟ್ ರತ್ನಗಳನ್ನು ಗಣಿಗಳಲ್ಲಿ ಉತ್ಪತ್ತಿ ಮಾಡಿದರು. ಇದೇ ರೀತಿ ಇತ್ತೀಚೆಗೆ ಥೈಲ್ಯಾಂಡ್, ವಿಯಟ್ನಾಂ, ಶ್ರೀಲಂಕಾ ಸರ್ಕಾರಗಳು ಈ ಅಪೂರ್ವ ಮಾಣಿಕ್ಯ ಮತ್ತು ನೀಲಮಣಿಗಳಿಗೆ ಯೋಜನೆಯನ್ನು ರೂಪಿಸಿ ಜಾರಿಗೆತಂದಿದ್ದಾರೆ. ಕಚ್ಚಾ ರತ್ನಗಳನ್ನು ಕತ್ತರಿಸಿ, ಸಾಣೆಗೆ ಹಿಡಿದು ಹೊಳಪು ಕೊಡುವುದರಲ್ಲಿ ಬೇರೆ ದೇಶದವರಿಗಿಂತಾ ಥೈಲ್ಯಾಂಡಿನವರು ತುಂಬಾ ಪ್ರವೀಣರು. ಇವರು ವಿಯಟ್ನಾಂ, ಆಸ್ಟ್ರೇಲಿಯಾ ದೇಶಗಳಲ್ಲಿ ಮಾಣಿಕ್ಯ ಮತ್ತು ನೀಲಮಣಿಗಳನ್ನು ಸಫೈರಗಳನ್ನು ಕೊಂಡು, ಅವುಗಳನ್ನು ವೃತ್ತಾಕಾರವಾಗಿ, ಅಂಡಾಕೃತಿಯಾಗಿ, ಅಷ್ಟಮುಖಿ. ಚತುರ್ಮುಖಿ, ಗುಲಾಬಿ ಹೂವು ಮುಂತಾದ ಆಕೃತಿಗಳಾಗಿ ಕತ್ತರಿಸಿ ಸಾಣೆ ಹಿಡಿದು ಹೊಳಪು ಕೊಟ್ಟು ಮಾರುತ್ತಾರೆ. ಈ ವೃತ್ತಿಯಲ್ಲಿ ತೊಡಗುವವರು ಬ್ಯಾಂಕಾಕ್ ಮತ್ತು ಬಾತಬುರಿ ನಗರಗಳ ಎಲ್ಲಾ ಬೀದಿಗಳಲ್ಲಿ ನೋಡಬಹುದು.

ಈ ವೃತ್ತಿಯ ಪ್ರತಿಯೊಬ್ಬ ಕೆಲಸಗಾರನು ದಿನಕ್ಕೆ ೨ ರಿಂದ ೫ ಡಾಲರ್ ಸಂಪಾದಿಸುತ್ತಾನೆ. ಥೈಲ್ಯಾಂಡಿನಲ್ಲಿ ಸಂಸ್ಕರಿಸಿದ ರತ್ನಗಳನ್ನು ಕೊಳ್ಳುವ ಹೊರ ದೇಶದವರಿಗೆ ಸ್ಥಳೀಯ ಮಾರಾಟ ಕೇಂದ್ರ ಒಂದನ್ನು ತೆರೆದಿದ್ದಾರೆ. ಈ ರತ್ನಗಳ ವ್ಯಾಪಾರದಿಂದ ಈ ಸರ್ಕಾರಕ್ಕೆ ವರ್ಷಕ್ಕೆ ಅರ್ಧ ಬಿಲಿಯನ್ ಡಾಲರ್ ವರಮಾನ ಬರುತ್ತದೆ. ವಿಶ್ವದಲ್ಲಿ ಮಾರಾಟವಾಗುವ ಮಾಣಿಕ್ಯ ಮತ್ತು ನೀಲಮಣಿಗಳಲ್ಲಿ ಅರ್ಧದಷ್ಟು ರತ್ನಗಳು ಬ್ಯಾಂಕಾಕ್‌ನಲ್ಲಿ ಕತ್ತರಿಸಿ, ಸಂಸ್ಕರಿಸಿದವು ಎಂದರೆ ತಪ್ಪಾಗಲಾರದು.

ಭಾರತ ದೇಶದ ಕಾಶ್ಮೀರ ಮತ್ತು ಬರ್ಮಾ (ಮ್ಯಾನಮಾರ್) ದಲ್ಲಿ ಸಿಗುವ ಮಾಣಿಕ್ಯ (ರೂಬಿ) ಮತ್ತು ನೀಲಮಣಿ (ಸಫೈರ್‌ಗಳಿಗೆ) ಗಳು ಜಗತ್ತಿನಲ್ಲೇ ಶ್ರೇಷ್ಠ ದರ್ಜೆಯವೆಂದು ಹೇಳುಬಹುದು. ಥೈಲ್ಯಾಂಡ ಮತ್ತು ಶ್ರೀಲಂಕಾ ದೇಶದಲ್ಲಿ ಸಿಗುವ ರತ್ನಗಳಿಗೆ ೨ ನೇ ಸ್ಥಾನ ಬಂದರೆ, ೩ ನೇ ಸ್ಥಾನ ಆಫ್ರಿಕಾ ಮತ್ತು ಆಸ್ಟ್ರೇಲಿಯಾ ದೇಶದ ರಾಜ್ಯಗಳಿಗೆ ಬರುತ್ತವೆ. ಇನ್ನುಳಿದ ದೇಶಗಳಲ್ಲಿ ಸಿಗುವ ರತ್ನಗಳು ೪ ನೇ ದರ್ಜೆಯವು ಎಂದು ಹೇಳಬಹುದು. ಬರ್ಮಾ (ಮಾನ್ಯಮಾರ್) ದೇಶದವರು ಈ ಮಾಣಿಕ್ಯ ಮತ್ತು ನೀಲಮಣಿಗಳನ್ನು '' ಮ. ನವ. ಮ. ಯಾ.'' ಎಂದ ಮನುಷ್ಯ ಇಷ್ಟಾರ್ಥವನ್ನು ಕೊಡುವ ರತ್ನಗಳು ಎಂಬ ನಂಬಿಕೆ ಬರ್ಮಿಯರಲ್ಲಿದೆ. ಇವರು ಮಾಣಿಕ್ಯದ ಹರಳನ್ನು ರತ್ನಗಳ ರಾಜನೆಂದು ಕರೆಯುತ್ತಾರೆ. ಇವುಗಳನ್ನು ಹೊಂದಿದ್ದರೆ ಯಾವಾಗಲೂ ಯೌವ್ವನದಿಂದ ಧೃಡಕಾಯನಾಗಿ ಕಾಯಿಲೆ ಕೇಡು ಬರದಹಾಗೆ ನೋಡಿಕೊಳ್ಳುತ್ತದೆಂಬ ನಂಬಿಕೆ ಈಗಲೂ ಇದೆ.

೧೯೮೦ ನ ದಶಕದಲ್ಲಿ ಮಾಣಿಕ್ಯ ಮತ್ತು ನೀಲಮಣಿಗಳ ಬೇಡಿಕೆ ಹೆಚ್ಚಾದುದರಿಂದ ಇವುಗಳ ಬೆಲೆಯು ಇತರೆ ರತ್ನಗಳಿಗಿಂತ ದುಬಾರಿಯಾಯಿತೆಂದು ಹೇಳುತ್ತಾರೆ. ರತ್ನತಜ್ಞ ಅಬ್ರಾಹಮ್‌ರ ಪ್ರಕಾರ, ಈಗ ದೊಡ್ಡ ಸೈಜಿನ ಮಾಣಿಕ್ಯದ ಹರಳು, ೩೦ ರಿಂದ ೫೦ ಪಟ್ಟು ವಜ್ರಕ್ಕಿಂತ ಹೆಚ್ಚು ಬೆಲೆವುಳ್ಳದಾಗಿದೆ. ಶ್ರೇಷ್ಠ ದರ್ಜೆಯ ಮಾಣಿಕ್ಯವು ಕ್ಯಾರೆಟ್ ಒಂದಕ್ಕೆ

೨೦೦,೦೦೦ ಡಾಲರ್ ಬೆಲೆ ಬಾಳುತ್ತದೆ. ಅಂದರೆ, ದೋಷಮುಕ್ತ ವಜ್ರಕ್ಕಿಂತ ೪ ಪಟ್ಟು ಹೆಚ್ಚು ಬೆಲೆ ಮಾಣಿಕ್ಯಕ್ಕೆ ಬರುತ್ತದೆಂದು ಹೇಳಿದಂತಾಗುತ್ತದೆ.

ಹಿಂದೆ ರತ್ನ ವ್ಯಾಪಾರಿಗಳು ಹಾಗೂ ಕೊಳ್ಳುವವರು, ರತ್ನಗಳ ಆಕರ್ಷಣೀಯ ಬಣ್ಣಗಳ ಮೇಲೆ ಬೆಲೆ ಕಟ್ಟುತ್ತಿದ್ದರೇ ಹೊರತು, ಬಾಳ್ವಿಕೆ ಮೇಲಲ್ಲ. ಲಾಪಿಸ್ ಲಜುಲಿ (LAPIS LAZULII) ಹರಳನ್ನು ನೀಲಮಣಿ ಎಂದು ನಂಬಿದ್ದರು. ೨ನೇ ಶತಮಾನದಲ್ಲಿ ಅರಬರು ಬಣ್ಣದ ಜೊತೆಗೆ ಅವುಗಳ ಸೌಂದರ್ಯ, ತೂಕ, ಬಾಳ್ವಿಕೆ , ಉಜ್ವಲಿಕೆಯ ಮೇಲೆ ಮಾಣಿಕ್ಯಗಳಿಗೆ ಹೆಚ್ಚು ಬೆಲೆ ಕಟ್ಟಲು ಪ್ರಾರಂಭಿಸಿದರು. ಕ್ರಮೇಣ ಮಾಣಿಕ್ಯ ಮತ್ತು ನೀಲಮಣಿಗಳು ಅತಿ ವಿರಳವಾಗಿ ಸಿಗುವುದರಿಂದ ಹಾಗೂ ಇವುಗಳ ಬೆಲೆ ವಜ್ರಕ್ಕಿಂತ ಹೆಚ್ಚಾದುದರಿಂದ, ಆಧುನಿಕ ರಸವಾದಿಗಳು ಪ್ರಯೋಗಾಲಯದಲ್ಲಿ ಕೆಳದರ್ಜೆಯ ರತ್ನಗಳಿಗೆ ಕಾವು ಕೊಟ್ಟು ಬಣ್ಣವನ್ನು ಹೆಚ್ಚಿಸುವ ವಿಧಾನವನ್ನು ಕಲಿತರು. ಅಲ್ಲದೆ ಪ್ರಯೋಗಾಲಯದಲ್ಲಿ ನೈಜ ರತ್ನಗಳಂತೆ ಭೌತಿಕ ಹಾಗೂ ರಾಸಾಯನಿಕ ಗುಣಗಳನ್ನು ಹೊಂದಿರುವ ಕೃತಕ ರತ್ನಗಳನ್ನು ತಯಾರಿಸುವಲ್ಲಿ ತುಂಬಾ ಯಶಸ್ವಿಯಾದರು.

೧೯೯೦ ರ ರಿಂದೀಚೆಗೆ ''**ಶ್ರೀಲಂಕಾ ಸ್ಟೇಟ್ ಜೆಮ್ ಕಾರ್ಪೊರೇಶನ್**'' ತನ್ನ ದೇಶದವರಿಗೆ ಕೆಳದರ್ಜೆಯ ರತ್ನಗಳನ್ನು ಕಾಯಿಸಿ ಹೇಗೆ ಉತ್ತಮ ಬಣ್ಣ ಬರುವಂತೆ ಮಾಡಲು ಮತ್ತು ಅದನ್ನು ಕತ್ತರಿಸಿ, ಉಜ್ಜಿ ಹೊಳಪು ಕೊಟ್ಟು ಅಧಿಕ ಬೆಲೆಗೆ ಮಾರಾಟ ಮಾಡಬೇಕೆಂಬುದರ ಬಗ್ಗೆ ತರಬೇತಿ ಕೊಡುತ್ತಿದೆ. ಆದ್ದರಿಂದ ಈಗ ಶ್ರೀಲಂಕಾದಿಂದ ಥೈಲ್ಯಾಂಡಿಗೆ ರತ್ನಗಳ ರಫ್ತು ನಿಂತಿದೆ. ಆದರೂ ಜರ್ಮನಿಯವರು , ಸ್ವಿಟ್ಜರ್‌ಲ್ಯಾಂಡಿನವರು ಮತ್ತು ಆಸ್ಟ್ರೇಲಿಯಾದ ರತ್ನ ವ್ಯಾಪಾರಿಗಳು ಬ್ಯಾಂಕಾಕ್‌ನಲ್ಲಿ ಸಂಸ್ಕರಿಸಿದ ರತ್ನಗಳನ್ನೆ ಕೊಳ್ಳುವದು. ಥೈಲ್ಯಾಂಡಿನವರು, ಆಸ್ಟ್ರೇಲಿಯಾದ ಕೆಳ ದರ್ಜೆ ನೀಲಮಣಿಗಳನ್ನು ಕ್ಯಾರೆಟ್ ಒಂದಕ್ಕೆ ೨೦ ಸೆಂಟ್ಸ್‌ಗೆ ಕೊಂಡು ಕಾಯಿಸಿ ಬಣ್ಣದ ಗುಣಮಟ್ಟವನ್ನು ಅಧಿಕಗೊಳಿಸಿದ ನಂತರ ಅವುಗಳನ್ನು ಸಂಸ್ಕರಿಸಿ ಅಮೇರಿಕಾದವರಿಗೆ ಕ್ಯಾರೆಟ್ ಒಂದಕ್ಕೆ ೮ರಿಂದ ೫೦ ಡಾಲರಗೆ ಮಾರುತ್ತಾರೆ.

ಇತ್ತೀಚಿಗೆ ಚೀನಾ, ನೈಜೀರಿಯಾ ದೇಶದಿಂದ ಕೆಳದರ್ಜೆಯ ರತ್ನಗಳು ಅಧಿಕವಾಗಿ ಥೈಲ್ಯಾಂಡಿಗೆ ಬರುವುದರಿಂದ ಆಸ್ಟ್ರೇಲಿಯಾ ರತ್ನಗಳ ಮಾರಾಟವು ಕುಂಠಿತಗೊಂಡಿದೆ. ಭಾರತದಲ್ಲಿ ಮಾಣಿಕ್ಯ ಮತ್ತು ನೀಲಮಣಿಗಳ ಉತ್ಪಾದನೆಯಲ್ಲಿ ಕಾಶ್ಮೀರ ಬಿಟ್ಟರೆ, ತಮಿಳುನಾಡು, ಕರ್ನಾಟಕವನ್ನು ಹೆಸರಿಸಬಹುದು. ಕಚ್ಚಾ ರತ್ನಗಳಿಗೆ ಖಚಿತ ರೂಪು ಕೊಡುವ ಕಾರ್ಯದಲ್ಲಿ ನಮ್ಮ ರಾಷ್ಟ್ರ ಕೂಡ ಹಿಂದೆ ಬಿದ್ದಿಲ್ಲ. ಈ ರೀತಿ ರತ್ನಗಳನ್ನು ಕತ್ತರಿಸಿ, ಸಂಸ್ಕರಿಸಿ ಕಳುಹಿಸುತ್ತಿರುವುದು, ಮುಖ್ಯವಾಗಿ ರಾಜಸ್ಥಾನದ ಜಯಪುರ, ಗುಜರಾತಿನ ಸೂರತ್ ಮತ್ತು ಭಾವನಗರ, ಆಂಧ್ರಪ್ರದೇಶದ ಹೈದ್ರಾಬಾದ್, ತಮಿಳನಾಡಿನ ತಿರುಚಿ, ಕರೂರು, ಕರ್ನಾಟಕದಲ್ಲಿ ಮೈಸೂರು, ಬೆಂಗಳೂರು, ಚೆನ್ನಪಟ್ಟಣ ಅಲ್ಲೀಪುರ ರತ್ನಗಳನ್ನು ಸಂಸ್ಕರಿಸುವ ವಿಧಾನ ಬಾಂಬೆ, ಕೇರಳ, ಒರಿಸ್ಸಾ ರಾಜ್ಯಗಳಿಗೂ ವಿಸ್ತರಿಸಿಕೊಂಡಿದೆ.

ಕಳಪೆ ಬಣ್ಣದ ರತ್ನಗಳನ್ನು ಕಾಯಿಸಿ ಬಣ್ಣವನ್ನು ಅಧಿಕಗೊಳಿಸುವ ಕಾರ್ಯ ವಿಧಾನ

ಕೆಳದರ್ಜೆಯ ಮಾಣಿಕ್ಯ ನೀಲಮಣಿಗಳಾಗಲಿ ಅಥವಾ ಬೇರೆ ಜಾತಿಯ ರತ್ನಗಳಾಗಲಿ, ಕಳಪೆ ಬಣ್ಣದಿಂದ ಕಾಂತಿ ಹೀನವಾಗಿದ್ದರೆ, ಅವುಗಳನ್ನು ಕಾಯಿಸಿದರೆ, ರತ್ನಗಳ ಸ್ವಚ್ಛತೆ ಮತ್ತು ಬಣ್ಣವು ಅಧಿಕವಾಗುತ್ತದೆ. ನೀಲಮಣಿಯ ಕೊರಂಡಂ ಹರಳನ್ನು ಕಾಯಿಸಿದಾಗ ಅದರಲ್ಲಿದ ಟೈಟಾನಿಯಂ ಕರಗಿದ ಕಬ್ಬಿಣಾಂಶದೊಡನೆ ಮತ್ತೆ ವಿಲೀನವಾಗಿ ರತ್ನಗಳ ಸ್ವಚ್ಛತೆ ಮತ್ತು ನೀಲಿ ಬಣ್ಣವು ಆಕರ್ಷಿತವಾಗುತ್ತದೆ. ವಾಯ್‌ಲೆಟ್ ಬಣ್ಣವಿರುವ ಅಮತಿಸ್ಟ್‌ನ್ನು ೨೦೦ ಡಿಗ್ರಿ ಸೆಂಟಿಗ್ರೇಡಿನಲ್ಲಿ ಕಾಯಿಸಿದರೆ ತೆಳು ಹಳದಿ ಬಣ್ಣಕ್ಕೆ ಬರುತ್ತದೆ. ಹಸಿರು ಬಣ್ಣದ್ದಾಗಿದ್ದರೆ ಹಾಲು ಬಿಳುಪು ಬಣ್ಣಕ್ಕೆ ಬರುತ್ತದೆ. ೪೨೦ ಡಿಗ್ರಿ ಸೆಂಟಿಗ್ರೇಡಿನಲ್ಲಿ ಕಪ್ಪು ಬಣ್ಣದ ಟೂರ್ಮಲಿನ್ ಕಾಯಿಸಿದರೆ ಬೆಳ್ಳಗಾಗುತ್ತದೆ. ನೀಲಿಬಣ್ಣದ್ದಾಗಿದ್ದರೆ ಹಸಿರು ಬಣ್ಣಕ್ಕೆ ಬರುತ್ತದೆ. ಹೀಗೆ ಶಾಖದಿಂದಲ್ಲದೆ, ರತ್ನಗಳಿಗೆ ರೇಡಿಯಂ ಮತ್ತು ಎಕ್ಸ್‌ರೇ ವಿಕಿರಣಗಳನ್ನು ಕೊಡುವದರಿಂದ ಆಕರ್ಷಣೀಯ ಬಣ್ಣಕ್ಕೆ ತಿರಗಿಸಬಹುದಾಗಿದೆ. ಇತ್ತೀಚೆಗೆ ರತ್ನಗಳನ್ನು ಕಾಯಿಸಿ ಬಣ್ಣಕ್ಕೆ ತರುವುದು ಸಾಮಾನ್ಯವಾಗಿದೆ. ಈ ವಿಧಾನವನ್ನು ರತ್ನದ ವ್ಯಾಪಾರಿಗಳಲ್ಲಾಗಲಿ, ರತ್ನವನ್ನು ಸಂಸ್ಕರಿಸುವವರನ್ನಾಗಲಿ ಕೇಳಿದರೆ ಹೇಳುವದಿಲ್ಲ ಏಕೆಂದರೆ ಅದು ರತ್ನ ವ್ಯಾಪಾರಿಗಳ ಗುಟ್ಟು.

ಇದೇ ರೀತಿಯ ಇನ್ನೊಂದು ''ಡಿಫ್ಯೂಶನ್'' ನ ಹೇಳಿಕೆಯಂತೆ ನೀಲಮಣಿಗಳನ್ನು ೬೦೦ ಗಂಟೆಗಳ ಕಾಲ ೨೦೫೦ ಡಿಗ್ರಿ ಸೆಂಟಿಗ್ರೇಡ್‌ನಲ್ಲಿ ಬೇಯಿಸಿದಾಗ ಟೈಟಾನಿಯಂ ಮತ್ತು ಕಬ್ಬಿಣಾಂಶವು 0.40 ಮಿಲಿಮೀಟರ್ ವಿಸ್ತಾರಗೊಳ್ಳುತ್ತದೆ. ಬೆಂದ ರತ್ನದಲ್ಲಿ ತೆಳುವಾದ ನೀಲಿ ಬಣ್ಣದ ಪದರವು ಬರುತ್ತದೆ. ಇದನ್ನು ಮತ್ತೆ ಉಜ್ಜುವ ಗೋಜಿಗೆ ಹೋಗುವದಿಲ್ಲ. ಈ ರೀತಿ ಸಂಸ್ಕರಿಸಿದ ತಿಂಗಳಿಗೆ 10,000 ಕ್ಯಾರೆಟ್ ನೀಲಮಣಿಗಳನ್ನು ಈತನು ಮಾರುತ್ತಾನಂತೆ.

ಕೃತಕ ಮಾಣಿಕ್ಯ ಮತ್ತು ನೀಲಮಣಿಗಳನ್ನು ತಯಾರಿಸುವ ವಿಧಾನ

ಕೃತಕವಾಗಿ ತಯಾರಿಸಿದ ಹರಳುಗಳು ನೈಸರ್ಗಿಕವಾಗಿ ಗಣಿಯಿಂದ ಹೆಕ್ಕಿ ತೆಗೆದ ಹರಳಿನಂತೆ ಭೌತಿಕ ರಾಸಾಯನಿಕ ಗುಣಗಳನ್ನು ಹೊಂದಿರುತ್ತದೆ. ಆದರೆ ಜ್ಯೋತಿಷ್ಯ ಶಾಸ್ತ್ರದಲ್ಲಿ ಈ ಹರಳುಗಳನ್ನು ಅದೃಷ್ಟ ನಿರ್ಧಾರದಲ್ಲಿ ಪರಿಗಣಿಸುವುದಿಲ್ಲ.

ಆಧುನಿಕ ಯುಗದಲ್ಲಿ ರಸವಾದಿಗಳು ಪ್ರಯೋಗಾಲಯದಲ್ಲಿ ನೈಜ ರತ್ನಗಳಂತೆ ಭೌತಿಕ ಹಾಗೂ ರಾಸಾಯನಿಕ ಗುಣಗಳನ್ನು ಹೊಂದಿರುವ ಕೃತಕ ರತ್ನಗಳನ್ನು ತಯಾರಿಸುವಲ್ಲಿ ಯಶಸ್ವಿಯಾಗಿದ್ದಾರೆ. ಪ್ರಯೋಗಾಲಯದಲ್ಲಿ ಅಪ್ಪಟ ಅಲ್ಯೂಮಿನಿಯಂ ಆಕ್ಸೈಡ್ ಪೌಡರ ತೆಗೆದುಕೊಂಡು ಪ್ಲಾಟಿನಂ ಸಿಬೆಲ್‌ನಲ್ಲಿಟ್ಟು ೧೦೦೦ ಸೆಂಟಿಗ್ರೇಡಿನಲ್ಲಿ ಕಾಯಿಸಿದ ಪಾಕವಂತೆ ದ್ರವ ರೂಪಕ್ಕೆ ಬರುತ್ತದೆ. ಪಾಕದ ಸಮೀಪ ಮಾಣಿಕ್ಯದ ಹರಳುಗಳನ್ನು ಇಟ್ಟದ್ದರೆ ಕಾದ ಅಲ್ಯೂಮಿನಿಯಂ ಆಕ್ಸೈಡ್ ಪಾಕವು ಬೀಜದ ಹರಳಿನ ಸುತ್ತಲೂ ಆವರಿಸಿಕೊಂಡು ಅದರ ಮೇಲೆ ಬೀಜ ಮಾಣಿಕ್ಯದ ಹರಳುಗಳಂತೆ ಹರಳುಗಳನ್ನು ರೂಪಗೊಳ್ಳುವಂತೆ ಮಾಡುತ್ತಾರೆ. ಇದಕ್ಕೆ '' ಬೀಜ ಹರಳು'' (ಸೀಡ್ ಕ್ರಿಸ್ಟಲ್) ಕಾರ್ಯ ವಿಧಾನ ಅಥವಾ '' ಫ್ಲಕ್ಸ್ ಗ್ರೋತ್ ಕಾರ್ಯ ವಿಧಾನ'' ವೆಂದು ಕರೆಯುತ್ತಾರೆ.

ಅಲ್ಯೂಮಿನಿಯಂ ಆಕ್ಸೈಡ್ ಪಾಕಕ್ಕೆ ತೃಣಾಂಶ ಕ್ರೋಮಿಯಂ ಜೊತೆಗೂಡಿದರೆ ಕೆಂಪು ಹರಳು ರೂಪಗೊಳ್ಳುತ್ತದೆ. ಟೈಟಾನಿಯಂ ಮತ್ತು ಕಬ್ಬಿಣ ಸೇರಿದರೆ ನೀಲಿ ಬಣ್ಣಕ್ಕೆ ಬರುತ್ತದೆ. ಕೋಬಾಲ್ಟ್ ಸೇರಿದರೆ ಹಸಿರು ಅಥವಾ ಕಬ್ಬಿಣ ಸೇರಿದರೆ ಹಳದಿ ಬಣ್ಣ ಬರುತ್ತದೆ. ಬಹಳ ಹಿಂದಿನಿಂದಲೂ ಕೃತಕ ರತ್ನಗಳನ್ನು ಇದೇ ರೀತಿ ವರ್ನಿಯರ್ ಕಾರ್ಯವಿಧಾನದಿಂದ ತಯಾರಿಸುತ್ತಿದ್ದಾರೆ. ಈ ಕಾರ್ಯವಿಧಾನದಿಂದ ತಯಾರಾದ ಕೃತಕ ರತ್ನಗಳು ವರ್ತುಲ ಸ್ತಂಭಾಕೃತಿಯಂತಿರುತ್ತದೆ. ಹೆಚ್ಚಾಗಿ ಮಾಣಿಕ್ಯ (ರೂಬಿ), ನೀಲ (ಸಫೈರ್) ನಕ್ಷತ್ರ ಮಾಣಿಕ್ಯ ನಕ್ಷತ್ರ ನೀಲ, ಮರಕತ (ಎಮರಾಲ್ಡ್) ಮುಂತಾದ ಕೃತಕ ರತ್ನಗಳನ್ನು ತಯಾರಿಸುತ್ತಾರೆ. ನೈಜ ಕೃತಕ ರತ್ನಗಳನ್ನು ಬೇರೆ ಬೇರೆ ಎಂದು ಹೇಳಬೇಕಾದರೆ ಇವುಗಳನ್ನು ದೃಷ್ಟಿಜ್ಞಾನದ ಗುಣಗಳಿಂದ ಮಾಪನ ಮಾಡಿದರೆ ಮಾತ್ರ ಸಾಧ್ಯ, ಕೃತಕ ರತ್ನಗಳ ಪ್ರಯೋಗಾಲಯಗಳು ಅಮೇರಿಕಾ, ರಷ್ಯ, ಸ್ವಿಟ್ಜರ್‌ಲ್ಯಾಂಡ್, ಅರ್ಮೇನಿಯಾ, ಜಪಾನ್ ಮುಂತಾದ ದೇಶಗಳಲ್ಲೇ ಹೆಚ್ಚಾಗಿವೆ. ಅಮೇರಿಕೆಯ ರತ್ನ ವ್ಯಾಪಾರಿ ಟಾಮ್ ಹೇಳಿಕೆಯಂತೆ ಶ್ರೇಷ್ಠ ದರ್ಜೆ ನೈಜ ಮಾಣಿಕ್ಯ ನೀಲಮಣಿಗಳು ಕ್ಯಾರೆಟ್‌ಗೆ ೫೦೦೦ ಡಾಲರ್ ಇದ್ದರೆ ರಸಾಯನಿಕ ಸಂಯೋಜನೆಯಿಂದ ತಯಾರಾದ ಇದೇ ಈ ಗುಣವುಳ್ಳ ಮಾಣಿಕ್ಯ ಕ್ಯಾರೆಟ್‌ಗೆ ೨೫ ರಿಂದ 4೫೦ ಡಾಲರ್ ಆಗಬಹುದೆಂದು ಹೇಳುತ್ತಾರೆ.

ಮೇಲೆ ತಿಳಿಸಿದ ವಿಧಾನಗಳಿಂದ ಕೃತಕ ರತ್ನಗಳನ್ನು ಸಂಸ್ಕರಿಸುವ ಪದ್ಧತಿ ಬಹಳ ಹಿಂದಿನಿಂದಲೂ ಇದೆ. ವಿವಿಧ ರತ್ನಗಳ ರಸಾಯನಿಕ ವಿಜ್ಞಾನ ತಿಳಿಯದೆ ಇಲ್ಲದುದರಿಂದ ಮಹತ್ತರವಾದ ಪ್ರಪಂಚದ ಅನೇಕ ಶ್ರೇಷ್ಠ ವಜ್ರಗಳು ತಪ್ಪು ಹೆಸರಿನ ಪಟ್ಟಿಯಲ್ಲಿ ಈಗಲೂ ಇವೆ. ಈಗ ಲಂಡನ್ ಮ್ಯೂಸಿಯಂನಲ್ಲಿರುವ ೧೭೦ ಕ್ಯಾರೆಟ್ ಬ್ಲಾಕ್ ರೂಬಿ, ಯೂರೋಪಿನ ಬಲಾಸ್ ರೂಬಿ ಮತ್ತು ಲಂಡನ್ನಿನ ವಿಕ್ಟೋರಿಯಾ ಮತ್ತು ಅಲ್ಬರ್ಟ ಮ್ಯೂಸಿಯಂನಲ್ಲಿರುವ ಕೃತಕ ರೂಬಿಗಳು ಶ್ರೇಷ್ಠ ವಜ್ರಗಳ ಪಟ್ಟಿಯಲ್ಲಿ ಸೇರಿಬಿಟ್ಟಿವೆ. ಬ್ಲಾಕ್ ಪ್ರಿನ್ಸ್ ರೂಬಿ ಮತ್ತು ಬಲಾಸ್ ರೂಬಿಗಳು ಕೆಂಪು ಸ್ಪೈನೆಲ್‌ನಿಂದಾದ ಮಾಣಿಕ್ಯಗಳು ಆದಕಾರಣ ರತ್ನ ಶಾಸ್ತ್ರದಲ್ಲಿ ಒಳ್ಳೆಯ ತರಬೇತಿ ಜ್ಞಾನ ವೈಜ್ಞಾನಿಕ ಉಪಕರಣಗಳು ಇಲ್ಲದಿದ್ದರೆ ರತ್ನಗಳ ನೈಜತೆಯನ್ನು ಕಂಡು ಹಿಡಿಯುವುದು ಸಾಧ್ಯವಿಲ್ಲ.

ಜಗತ್ತಿನಲ್ಲಿ ದೊರೆಯುವ ಮಾಣಿಕ್ಯ ಮತ್ತು ನೀಲಮಣಿಗಳ ಪ್ರಮುಖ ಗಣಿಗಳು

ಮಾಣಿಕ್ಯ ನಿಕ್ಷೇಪಗಳು	**ನೀಲಮಣಿಗಳ ನಿಕ್ಷೇಪಗಳು**
ದೊಡ್ಡ ಪ್ರಮಾಣದವು	ದೊಡ್ಡ ಪ್ರಮಾಣದವು
ಸಣ್ಣ ಪ್ರಮಾಣದವು	ಸಣ್ಣ ಪ್ರಮಾಣದವು

ಸಂಸ್ಕರಿಸಿದ ಮನ ಮೋಹಕ ಮಾಣಿಕ್ಯ ಮತ್ತು ನೀಲಮಣಿಗಳು.

ಸಂಸ್ಕರಿಸಿದ ನಕ್ಷತ್ರ ಮಾಣಿಕ್ಯ ಮತ್ತು ನಕ್ಷತ್ರ ನೀಲಮಣಿಗಳು.

ಪಟ್ಟಣ ತೈಲವರ್ಮನ ಅಡತಾರೆ ಶಿಲಾಶಾಸನಗಳು

★ ಗಣಪತಿ ಗೌಡ ಎಸ್.

ಅಡತಾರೆ ಕುಮಟಾ ತಾಲೂಕಿನ (ಉತ್ತರ ಕನ್ನಡ ಜಿಲ್ಲೆ) ಕತಗಾಲದಿಂದ ಸುಮಾರು ೪ ಕಿ. ಮಿ. ದೂರದಲ್ಲಿದೆ. ಅಲ್ಲಿರುವ ಹಾಳಾದ ಶಿವದೇವಾಲಯದ ಬಲ ಹಾಗೂ ಎಡಪಾರ್ಶ್ವದಲ್ಲಿ ಒಂದೊಂದು ಶಿಲಾಶಾಸನವಿದೆ. ಕನ್ನಡ ಮತ್ತು ಪೂರ್ವಮಲಿಯಾಳಂ ಲಿಪಿಗಳೆರಡರಲ್ಲೂ ಬರೆಯಲ್ಪಟ್ಟಿರುವ ಈ ಎರಡು ಶಾಸನಗಳು ಕ್ರಿ. ಶ. ೧೨ ನೇ ಶತಮಾನದ ಲಿಪಿಯಲ್ಲಿವೆ. ಪ್ರಸ್ತುತ ಇಲ್ಲಿ ಕನ್ನಡ ಭಾಗವನ್ನಷ್ಟೇ ಪ್ರಕಟಸುತ್ತಿದ್ದೇನೆ. ಎಡಗಡೆಯ ಶಿಲಾಶಾಸನದ ಮೇಲ್ಭಾಗದಲ್ಲಿ ಶಿವಲಿಂಗ ಹಾಗೂ ಮಧ್ಯದಲ್ಲಿ ಹಸು ಕರುವಿಗೆ ಹಾಲುಣಿಸುವ ದೃಶ್ಯವಿದ್ದರೆ, ಬಲಗಡೆಯ ಶಾಸನದ ಮೇಲ್ಭಾಗದಲ್ಲಿ ಶಿವಲಿಂಗ ಮತ್ತು ಒಬ್ಬ ಯತಿಯನ್ನು ಚಿತ್ರಿಸಲಾಗಿದೆ. ಮೇಲ್ನೋಟದಿಂದಲೇ ಇವೆರಡು ಶಾಸನಗಳು ಶೈವ ಶಾಸನಗಳೆಂಬುದು ಸ್ಫುಟವಾಗುತ್ತದೆ.

ಏಕಕಾಲದಲ್ಲಿ ಹೊರಡಿಸಲಾದ ಈ ಎರಡೂ ಶಾಸನಗಳ ಕಾಲ ವಿವರ ಇಂತಿವೆ ಶಕವರ್ಷ ೧೦೮೯, ಸರ್ಬ್ಬಜಿತ್ ಸಂವತ್ಸರ, ಭಾದ್ರಪದ, ಶುದ್ಧ ಸಪ್ತಮಿ ಬುಧವಾರ. ಈ ವಿವರಗಳು ಕ್ರಿ. ಶ. ೧೧೬೭, ಅಗಸ್ಟ ೨೩ ಬುಧವಾರಕ್ಕೆ ಸರಿಹೊಂದುತ್ತದೆ.

ಶಾಸನದ ಸಾರಾಂಶ :

ಸ್ವಸ್ತಿ ಎಂದು ಆರಂಭವಾಗುವ ಈ ಶಾಸನ ನೇರವಾಗಿ **ಮಹಾಮಂಡಳೇಶ್ವರ ಬನವಾಸಿ ಪುರವರಾಧೀಶ್ವರ ಜಯಂತೀ ಮಧುಕೇಶ್ವರ ದೇವಲಬ್ಧವರ ಪ್ರಸಾದ ಶ್ರೀ ಗೋಕರ್ಣ ಮಹಾಬಳ ದೇವರ ದಿಬ್ಯ ಶ್ರೀ ಪಾದ ಪದ್ಮಾರಾಧಕ, ಸೋಮಕುಳ ತಿಲಕ ಶ್ರೀಮತು ಪಟ್ಟಣದ ತೈಲವರ್ಮದೇವನನ್ನು ಪರಿಚಯಿಸುತ್ತದೆ.** ಈತನು ಕ್ರಿ. ಶ. ೧೧೬೭ ಅಗಸ್ಟ ೨೩ ಬುಧವಾರದಂದು ಎಡತಾರೆಯ ಗ್ರಾಮವನ್ನು ಕಿಟ್ಟು ಸೋಮಯಾಜಿಯರು ಮೊದಲಾಗಿ ಅಶೇಷ ಮಹಾಜನಕ್ಕೆ ಧಾರಾಪೂರ್ವಕವಾಗಿ ಮಾಡಿಕೊಟ್ಟ ಧರ್ಮದ ಸಲುವಾಗಿ ಆತನ ತಮ್ಮ **ಮೂವುಲಿದೇವ** ಮತ್ತು ಮೊಮ್ಮಗ **ವೀರದೇವ** ಈ ಶಾಸನವನ್ನು ಪ್ರತಿಪಾಲಿಸಿದ ವಿಷಯವನ್ನು ಹೇಳುತ್ತದೆ. ಅಲ್ಲದೇ ಅಲ್ಲಿಯ ಕೇಶವ ದೇವರಿಗೆ ಕಿತ್ತಿಸಿದರು. ಆತನ ಮೊಮ್ಮಗ **ಕಾವುದೇವರಸ** ಮತ್ತು **ಕೀರ್ತಿನಾರಾಯಣ ದಂಡನಾಯಕರು** ಸಹಿತರಾಗಿ ಶಾಸನವನ್ನು ಪ್ರತಿಪಾದಿಸಿದ

ವಿಷಯವನ್ನು ಹೇಳುತ್ತದೆ. ಅಲ್ಲದೇ ಅಲ್ಲಿಯ ಕೇಶವ ದೇವರಿಗೆ ಪ್ರತಿನಿತ್ಯ ನೈವೇದ್ಯಕ್ಕೆ ವರ್ಷಂಪ್ರತಿ ೩೬ ಮೂಟೆ ಭತ್ತ ಮತ್ತು ನಂದಾದೀವಿಗೆಗ ೩೬ ಎಣ್ಣೆ ಕೊಳಗ ಮತ್ತು ಶಿವದೇವಾಲಯಕ್ಕೆ ಒಂದು ಗದ್ಯಾಣವನ್ನು ಆ ಗ್ರಾಮದವರು ನೀಡಬೇಕೆಂದು ಈ ಎರಡೂ ಶಾಸನಗಳಲ್ಲಿ ನಿಗದಿಪಡಿಸಲಾಗಿದೆ.

ಈ ಶಾಸನಗಳಲ್ಲಿ ಪರಿಚಯವಾಗುವ **ಪಟ್ಟಣದ ತೈಲವರ್ಮನು** ಯಾರು ಎನ್ನುವದೊಂದು ಪ್ರಶ್ನೆ.

ಇತ್ತಿತ್ತಲಾಗಿ **ಶಿಶುಗಲಿಯ** ಪಾಂಡ್ಯರೆಂಬ ಒಂದು ಸಾಮಂತ ಮನೆತನವು ಈ ಭಾಗದಲ್ಲಿತ್ತೆಂಬುದು ಬೆಳಕಿಗೆ ಬಂದಿದೆ[೧]. ಸೋಮವಂಶೀಯರಾದ ಇವರು ತಮ್ಮ ಶಾಸನಗಳಲ್ಲಿ ಗೋಕರ್ಣ ಮಹಾಬಳೇಶ್ವರ - ಪಾದ - ಪದ್ಮಾರಾಧಕ, ಬನವಾಸಿ ಪುರವರಾಧೀಶ್ವರ ಸೋಮಕುಳತಿಲಕ ಇತ್ಯಾದಿ ಬಿರುದಾವಳಿಗಳಿಂದ ಆಳುತ್ತಿದ್ದರು.

ಈ ಎರಡೂ ಶಾಸನಗಳು ಪಟ್ಟಣದ ತೈಲವರ್ಮನನ್ನು ಸೋಮವಂಶೀಯನೆಂದು ಹೇಳುವದರ ಜೊತೆಗೆ ಈ ಮೇಲಿನ ಬಿರುದಾವಳಿಗಳನ್ನು ಯಥಾಸ್ಥಿತಿಯಲ್ಲಿ ನೀಡಿರುವದರಿಂದ ಇವನು ಶಿಶುಗಲಿಯ ಪಾಂಡ್ಯ ಮನೆತನಕ್ಕೆ ಸೇರಿದವನಿರಬೇಕೆಂದು ಊಹಿಸಬಹುದು. ಆದರೆ ಇವನು ನೇರವಾಗಿ ಶಿಶುಗಲಿಯ ಪಾಂಡ್ಯರ ವಂಶಕ್ಕೆ ಸೇರಿದವನೇ ಅಥವಾ ರಕ್ತಸಂಬಂಧಿಯೇ ಎಂದು ಗುರುತಿಸಲಿಕ್ಕೆ ಸಾಕಷ್ಟು ಆಧಾರಗಳಿಲ್ಲ.

ಇದಕ್ಕೆ ಪೂರಕವಾಗಿ ಕ್ರಿ. ಶ. ೧೧೪೧-೪೩ ರ ತ್ರಿಭುವನ ಮಲ್ಲಿದೇವನ ಗುಂಡಬಾಳದ ಪದ್ಮಾವತಿ ಅಮ್ಮನವರ ದೇವಾಲಯದ ಶಾಸನವು ೧೧೪೧-೪೩ ಒಬ್ಬ **ಹಟ್ಟಣದ ತೈಲವರ್ಮನನ್ನು** ಇವನ ಅಳಿಯ **ಮಲ್ಲಿದೇವ** ಹಾಗೂ ಮಗಳು **ಹಂಪಾದೇವಿ** ಎಂದು ಹೇಳಿದೆ. ಪ್ರಸ್ತುತ ಅಡತಾರೆಂದು ಎರಡು ಶಾಸನದಲ್ಲಿ ಬರುವ ಪಟ್ಟಣದ ತೈಲವರ್ಮ ಮತ್ತು ಗುಂಡಬಾಳ ಶಾಸನದಲ್ಲಿ ಬರುವ ಹಟ್ಟಣದ ತೈಲವರ್ಮ ಒಂದೇ ಆಗಿರುವ ಸಾಧ್ಯತೆಗಳೇ ಹೆಚ್ಚು. ಅಡತಾರೆಯ ' ಶಿಲಾಶಾಸನಗಳು ನೀಡುವ ಪಟ್ಟಣ ತೈಲವರ್ಮನ ವಂಶಾವಳಿ ಈ ಕೆಳಗಿನಂತಿದೆ :

- ಪಟ್ಟಣದ ತೈಲವರ್ಮ
  - (ಮಗಳು)
    - ವೀರದೇವ
      - (ಮಗ) ಕಾಮದೇವ
- ಮಾವುಲಿದೇವ

ಗುಂಡಬಾಳ ಶಾಸನವು ನೀಡುವ ಹಟ್ಟಣ ತೈಲವರ್ಮನ ವಂಶಾವಳಿ ಹೀಗಿದೆ:

ಹಟ್ಟಣ ತೈಲ ಮಗಳು ಹಂಪಾದೇವಿ + ಮಲ್ಲಿದೇವ (ಅಳಿಯ)
(ಇವನು ಬಹುಶಃ ಹಾನಗಲ್ಲು ಕದಂಬ ವಂಶದವನಾಗಿರಬೇಕು)

ಈ ಮೇಲಿನ ಮೂರು ಶಾಸನಗಳ ಆಧಾರದಿಂದ ಈ ಕೆಳಗಿನಂತೆ ವಂಶಾವಳಿಯನ್ನು ಪರಿಷ್ಕರಿಸಬೇಕಾಗುತ್ತದೆ.

ಪಟ್ಟಣ ತೈಲವರ್ಮ ಮಾವುಲಿದೇವ

ಹಂಪಾದೇವಿ + ಕದಂಬ ಮಲ್ಲಿದೇವ

ವೀರದೇವ (ಚಂದಾವರ ಕದಂಬ ವಂಶಸ್ಥಾಪಕ)
(ಅನಾಪಮಧೇಯ) ಮಗ?
ಕಾಮದೇವ

ಶಾಸನದ ಮಹತ್ವ:

೧. ಇಲ್ಲಿಯವರೆಗೆ ದೊರೆತ ಆಧಾರಗಳಿಂದ ಪಟ್ಟಣದ ತೈಲವರ್ಮನು ಶಿಶುಗಲಿ ಪಾಂಡ್ಯರ ಕೊನೆಯ ದೊರೆಯಾಗುವನು. ಇವನು ತ್ರಿಭುವನಮಲ್ಲ ಮಲ್ಲಿದೇವನ ನಂತರ ರಾಜ್ಯಭಾರವನ್ನು ಪಟ್ಟಣದಿಂದ ಪ್ರಾರಂಭಿಸಿದನು.

೨. ಹಂಪಾದೇವಿಯನ್ನು ಮದುವೆಯಾದ ಮಲ್ಲಿಕಾರ್ಜುನ (ಮಲ್ಲಿದೇವ) ಹಾನಗಲ್ಲು ಕದಂಬ ಮಲ್ಲಿದೇವನಾಗಿರಬೇಕು. ಇವರಿಗೆ ಹುಟ್ಟಿದ ವೀರದೇವನೆ ಚಂದಾವರ ಕದಂಬ ಸ್ಥಾಪಕನಾದನು.

೩. ವೀರದೇವನನ್ನು ಚಂದ್ರಪುರದಲು ಇದ್ದ ವೀರದೇವ ಎಂದು ಕತಗಾಲ ಶಾಸನ ಹೇಳಿರುವದರಿಂದ ಇವನ ಆಳ್ವಿಕೆ ಚಂದ್ರಪುರ ಅಥವಾ ಚಂದಾವರದಿಂದ (ಹೊನ್ನಾವರ ತಾಲ್ಲೂಕ, ಕನ್ನಡ ಜಿಲ್ಲೆ) ಪ್ರಾರಂಭವಾಯಿತೆಂಬುದು ಸ್ಪಷ್ಟವಾಗುತ್ತದೆ.

೪. ಶಾಸನಗಳಲ್ಲಿ ಉಲ್ಲೇಖಿತವಾದ ಕೀರ್ತಿನಾರಾಯಣ ದಂಡನಾಯಕನು ಸುಮಾರು ಕ್ರಿ. ಶ ೧೨೪೫ ರ ವರೆಗೂ ದಂಡನಾಯಕನಾಗಿ ಮುಂದುವರಿದಿದ್ದನೆಂಬುದು ಸ್ಪಷ್ಟವಾಗುತ್ತದೆ.[೬]

೫. ಕ್ರಿ. ಶ. ೧೫ ನೇ ಶತಮಾನದಿಂದಲೇ ಈ ಭಾಗದಲ್ಲಿ ಮಲಿಯಾಳಂ ಲಿಪಿ ಪರಿಚಯವಿದ್ದುದು ವಿದಿತವಾಗುತ್ತದೆ.

೬. ಶಾಸನದಲ್ಲಿ ಉಲ್ಲೇಖಿಸಲ್ಪಟ್ಟ ಎಡತಾರೆಯು ಇಂದಿನ ಅಡತಾರೆಯಾಗಿದೆ. ಪಟ್ಟಣವು ಇಲ್ಲಿಯ ಉಪ್ಪಿನ ಪಟ್ಟಣವಾಗಿರಬೇಕು.

೭. ಶಾಸನದಲ್ಲಿ ಹೇಳಿರುವ ಶಿವದೇವಾಲಯವು ಅಲ್ಲಿರುವ ಇಂದಿನ ಭಗ್ನ ಸ್ಥಿತಿಯ ಶಿವಾಲಯವಾಗಿರಬೇಕು. ಕೇಶವ ದೇವಾಲಯ ಯಾವುದೆಂದು ತಿಳಿದು ಬಂದಿಲ್ಲ.

ಶಾಸನದ ಪಾಠ :★

೧. ಶ್ರೀ ಸ್ವಸ್ತಿ ಸಮಧಿಗತ ಪಂ (ಚ) ಮಹಶಬ್ದ ಮಹಾಮಂಡಳೇಶ್ವರ ಬನವಾಸಿ ಪುರವರಾಧೀ(ಶ್ವರ)
೨. ಜಯಂತೀ ಮಧುಕೇಶ್ವರ ದೇವಲಬ್ಧವರ ಪ್ರಸಾದ ಶ್ರೀ ಗೋಕರ್ಣ ಮಹಾಬಳ ದೇವ
೩. ರ ದಿಬ್ಯ ಶ್ರೀ ಪಾದ ಪದ್ಮಾರಾಧಕಂ ಪರಬಳ ಸಾಧಕಂ ಪರನಾರೀ ಸಹೋದರಂ ಸೋ-
೪. ಮ ಕುಳತಿಳಕಂ ಶ್ರೀಮತು ಪಟ್ಟಣದ ತೈಲವರ್ಮದೇವರು ಶಕವರ್ಷ ಸಾಸಿರದೆಂ
೫. ತ್ತೊಂಬತ್ತನೆಯ ಸರ್ಬ್ಬ (ಜಿ)ತು ಸಂವಂತ್ಸರದ ಭಾದ್ರಪದ ಶುದ್ಧ ಸಪ್ತಮಿ ಬುಧವಾ-
೬. ರಾಧ ನಕ್ಷತ್ರದಲು (ಎಡ) ತಾಱಿಯ ಗ್ರಾಮವನ್ನು ಕಿಚ್ಚು ಸೋಮಯಾ
೭. ಜಿಯರು ಮೊದಲಾಗಿ ಯಶೇಷ ಮಹಾಜನಕೆ ಸರ್ಬ್ಬೊದಯ ಮಾ-
೮. ಗಿ ಧಾರಪೂರ್ವಕವ ಮಾಡಿಕೊಟ್ಟನಾ ಧರ್ಮಮನಾತನ ತಮ್ಮ ಆಉಲಿದೇವ-
೯. ಆತನ ಮರ್ಮ್ಮ ವೀರದೇವ ಪ್ರತಿಪಾಳಿಸಿ ಸಿಲಾಶಸನಮಲ ಸ್ಥಾಪಿಸಿದರು ಆ-
೧೦. ತನ ಮರ್ಮ್ಮ (ಕಾ)ಮದೇವರಸರುಂ ಶ್ರೀ ಮತು ಮಹಾ ಪ್ರಧಾನ ಕೀರ್ತಿನಾರಾಯಣ ದಂ-
೧೧. ಡನಾಯಕರು ಸಹಿತರಾಗಿ ಶಾಸನವಂ ಪ್ರತಿಪಾಳಿಸಿದರು ಅಲ್ಲಿಯ ಶ್ರೀ ಕೇಶವ ದೇ-
೧೨. ವರ್ಗ್ಗೆಯಾ ಗ್ರಾಮದವರು [ರ್ಷಂ]ಪ್ರತಿ [ವೇದ್ಯಕ್ಕೆ] ಕೊಡುಗೆ ಭತ್ತ ಮೂಡೆ ಮೂವತ್ತಾ-.
೧೩. ರು ನಂದಾದೀವಿಗೆಗೆ ಎಣ್ಣೆಕೊಳಗ ಮೂವತ್ತಾಱು ಚಕ್ರಯನ ನಾರಾಯಣಂ
೧೪. .... ಯಮಲಂ ಅಗ್ರವೊಂದು ಅಲ್ಲಿಯ ಶಿವಾಲಯಕ್ಕೆ ಗ್ರಾಮ ಕೊಡುವ
೧೫. ಗದ್ಯಾಣವೊಂದು ಈ. ಧರ್ಮ್ಮಮಂ ಅವನೋರ್ಬನಳಿದಂತಹ ಕ್ಷತ್ರಿಯಗೆ ಗೋಕರ್ಣ ವಾ-
೧೬. ರಣಾಸಿಯಲು ಕೋಟ ಕಪಿಲಿಯ ಕೊಂದ ದೇಶಂ ಇಂತೀ ಧರ್ಮಮಂ (ಸಂಡು?)
೧೭. ತುನಾಡ ಅಶೇಷಮಹಾಜನಗಳು ಪ್ರತಿಪಾಳಿಸುವರು.

★ ಎರಡೂ ಶಾಸನಗಳಲ್ಲಿಯ ಪಾಠ ಒಂದೇ ಇರುವದರಿಂದ ಇಲ್ಲಿ ಒಂದನ್ನಷ್ಟೇ ಪ್ರಕಟಿಸಲಾಗಿದೆ.

ಅಡಿ ಟಿಪ್ಪಣಿಗಳು

೧. ಗಣಪತಿಗೌಡ ಎಸ್. The Problem of the so-called Kadambas of Chandavara A History of the Pandyas of sisugai) ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸಾದರ ಪಡಿಸಿದ ಅಪ್ರಕಟಿತ ಎಂ. ಫಿಲ್. ಪ್ರಬಂಧ ಧಾರವಾಡ ೧೯೯೦.

೨. ನಾಯಕ ಸದಾನಂದ, ಸಾಹಿತ್ಯ ಸಂಶೋಧನೆ ಮತ್ತು ಸಮಾಲೋಚನೆ, ಧಾರವಾಡ, ೧೯೭೪. ಪು. ೯೭

೩. ಅದೇ

೪. ಗೋಪಾಲ ಬಿ. ಆರ್. Minor Dynasties of South India ; Karnataka Vol.,] New Bra : Publications, ಮದ್ರಾಸು ೧೯೮೨. ಪು. ೪೭.

೫. ಈ ಅಪ್ರಕಟಿತ ಶಿಲಾಶಾಸನ ಸದ್ಯದಲ್ಲೇ ಪ್ರಕಟಸಲ್ಪಡಲಿದೆ.

೬. ಗಣಪತಿಗೌಡ, ಎಸ್. ಚಂದಾವರ ಕದಂಬ ವೀರಕಾವದೇವರಸನ ಕಬ್ಬಗಿ ಶಾಸನ " ಇತಿಹಾಸ ದರ್ಶನ " ಸಂಪುಟ ೮ ಬೆಂಗಳೂರು ೧೯೯೩ ಪು. ೧೫-೧೭

ಕೃತಜ್ಞತೆಗಳು : ಲೇಖನವನ್ನು ಸಿದ್ಧಪಡಿಸುವಲ್ಲಿ ಸಹಕರಿಸಿದ ಡಾ. ಎಸ್. ವಿ. ಪಾಡಿಗಾರವರಿಗೂ ಶಾಸನವನ್ನು ಸಂಶೋಧಿಸುವಲ್ಲಿ ಸಹಕರಿಸಿದ ಡಾ. ಎಲ್. ಜಿ. ಭಟ್ಟರಿಗೂ ಕೃತಜ್ಞನಾಗಿದ್ದೇನೆ.

ಗ್ರಂಥಾವಲೋಕನ

★ ರಾಮಕೃಷ್ಣ ಮರಾಠೆ

ಮಹಿಳಾ ಅಧ್ಯಯನ

ಸಂ. ವೀಣಾ ಶಾಂತೇಶ್ವರ

ಪ್ರ: ಎಚ್. ವಿ. ನಾಗೇಶ ಸನ್ಮಾನ ಸಮಿತಿ, ಧಾರವಾಡ ೧೯೯೩

ಪುಟ X ೨೬ + ೧೭೫, ಬೆಲೆ : ೫೦-೦೦.

ಸಮಾಜ ಶಾಸ್ತ್ರದ ಪ್ರಾಧ್ಯಾಪಕರಾಗಿ ಶೈಕ್ಷಣಿಕ ಕ್ಷೇತ್ರದಲ್ಲಿ ಹೆಸರು ಮಾಡಿದ ಎಚ್. ವಿ. ನಾಗೇಶ್ ಸೇವೆಯಿಂದ ನಿವೃತ್ತರಾಗುವಾಗ ಅಭಿಮಾನಿಗಳು ಅರ್ಪಿಸಿದ ಅಭಿನಂದನ ಗ್ರಂಥವೇ 'ಮಹಿಳಾ ಅಧ್ಯಯನ'. ಅಭಿನಂದನಾರ್ಹ ವ್ಯಕ್ತಿಯ ಆಸಕ್ತಿ ಕ್ಷೇತ್ರಕ್ಕೆ ಹೆಚ್ಚು ಆದ್ಯತೆ ನೀಡಿ ಅಧ್ಯಯನಪೂರ್ಣ ಲೇಖನಗಳನ್ನು ಒಳಗೊಂಡಿರುವುದರಿಂದ ಇದೊಂದು ಅರ್ಥಪೂರ್ಣ ಅಭಿನಂದನ ಗ್ರಂಥವಾಗಿ ಪರಿಣಮಿಸಿದೆ. ಇದರಲ್ಲಿ ಎರಡು ಭಾಗಗಳಿವೆ. ನಾಗೇಶ್ ಅವರ ಬದುಕು - ಬರಹ ಕುರಿತ ಲೇಖನಗಳನ್ನೊಳಗೊಂಡ 'ಅಭಿನಂದನ' ಮೊದಲ ಭಾಗವಾದರೆ, ಮಹಿಳಾ ಅಧ್ಯಯನ ಎರಡನೆಯದು, ಮೊದಲಿನದು ನಾಲ್ಕು ಲೇಖನಗಳಿಂದ ಮೂವತ್ತೂರು ಪುಟಗಳನ್ನು ವ್ಯಾಪಿಸಿದ್ದರೆ , ಎರಡನೆಯದು ಹದಿನೆಂಟು ಲೇಖನಗಳಿಂದ ನೂರಾ ಎಪ್ಪತ್ತೈದು ಪುಟಗಳನ್ನು ವ್ಯಾಪಿಸಿದೆ.

ಮಗಳು ಎಚ್. ಎನ್. ಸುಜಾತಾ ತಂದೆಯ ಕುಟುಂಬ ಜೀವನದ ಬಗ್ಗೆ ಹೇಳಿಕೊಂಡಿದ್ದರೆ, ಪ್ರಾಚಾರ್ಯ ವಜ್ರಕುಮಾರ ಅವರ ಲೇಖನದಲ್ಲಿ ನಾಗೇಶ್ ಅವರ ಸ್ನೇಹ ಸ್ವಭಾವ, ಉದಾರ ಗುಣ, ಶಿಸ್ತಿನ ಶಿಕ್ಷಕ, ನಿಷ್ಠುರ ಆಡಳಿತಗಾರನ ಪರಿಚಯವಿದೆ. ಇವುಗಳಿಗಿಂತ ಭಿನ್ನವಾದ್ದು, ವಿವರವಾದ್ದು ಹಾ ಮಾ ನಾ ಅವರ ಲೇಖನ. ವಿದ್ಯಾರ್ಥಿ ಜೀವನ, ವೃತ್ತಿ ಜೀವನ, ಹೋರಾಟ, ಅಲೆದಾಟ ಸ್ವಾಭಿಮಾನದಿಂದ ಬಾಳುತ್ತ ಬೆಳೆಯುತ್ತ ಬಂದ ನಾಗೇಶ್ ಅವರ ಬದುಕನ್ನು ಈ ಲೇಖನ ಆಪ್ತವಾಗಿ ನಿರೂಪಿಸುತ್ತದೆ.

ದಕ್ಷಿಣ ಕನ್ನಡ ಜಿಲ್ಲೆ ಹಾಲಾಡಿಯ ನಾಗೇಶರು ಸ್ವಸಾಮರ್ಥ್ಯದ ಮೇಲೆ ಬೆಳೆದು ಬಂದವರು. ಹದಿನಾರರ ಪ್ರಾಯದಲ್ಲಿಯೇ ಮನೆ ತೊರೆದರು. ಬಳ್ಳಾರಿಯಲ್ಲಿ ಹೊಸದಾಗಿ ಪ್ರಕಟವಾಗಬೇಕಿದ್ದ ಪತ್ರಿಕೆಯ ಉಪ ಸಂಪಾದಕರಾಗಿ ಕೆಲಸ ಆರಂಭ . ಪತ್ರಿಕೆ ನಿಂತಾಗ ಪ್ರೆಸ್ಸಿನಲ್ಲಿ ಕರಡು ಪ್ರತಿ ತಿದ್ದಿದರು. ಅಲ್ಲಿಂದ ಕಲ್ಬುರ್ಗಿಯ ಹೊಟೇಲೊಂದರಲ್ಲಿ ಕೆಲಸ.

ಅಲ್ಲಿದ್ದುಕೊಂಡೆ ಇಂಟರ ಮಿಡಿಯೇಟ ಸಾಯನ್ಸ ಅಭ್ಯಾಸ. ಅನಂತರ ಬಿ. ಎ. ಶಿಕ್ಷಕರ ನೆರವಿನಿಂದ ಎಂ. ಎ. ಮಾಡಲು ಧಾರವಾಡಕ್ಕೆ ಬಂದರು. ಉಪಜೀವನಕ್ಕಾಗಿ ಗೈಡು ಬರೆದರು. ಆಕಾಶವಾಣಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿದರು. ೧೯೬೦ ರಲ್ಲಿ ಎಂ. ಎ. ಮುಗಿಸಿದರು. ಬೀದರ ಕಾಲೇಜಿನಲ್ಲಿ ಉಪನ್ಯಾಸಕರಾಗಿ ವೃತ್ತಿ ಆರಂಭಿಸಿದರು. ಅಲ್ಲಿಂದ ಧಾರವಾಡದ ಜನತಾ ಶಿಕ್ಷಣ ಸಂಸ್ಥೆಯಲ್ಲಿ ಉಪನ್ಯಾಸಕರಾಗಿ ಸೇರಿ ಹಿರಿಯ ಪ್ರಾಧ್ಯಾಪಕರಾಗಿ ಬೆಳೆದು ನಿಂತರು.

ಸರಳ ಜೀವನ, ಉದಾರ ಮನಸ್ಸಿನ ನಾಗೇಶ್ ಬಡತನ ಉಂಡುಟ್ಟು ಬೆಳೆದು ಬಂದ ಸ್ವಾಭಿಮಾನಿ. ಗಂಭೀರ ಸ್ವಭ್ವಾದವರಾದರೂ ಸ್ನೇಹ ಜೀವಿ. ನೆರವಿನ ಅಗತ್ಯ ತೋರಿದಲ್ಲಿ ಅತಿ ಧಾರಾಳತನ ಸಾಲ ಕೊಡುವುದು ಇವರ ಗೀಳು. ಹಣದ ಬಗ್ಗೆ ಅಷ್ಟೊಂದು ಮೋಹವಿಲ್ಲ. ನಾಳಿನ ಬಗೆಗೂ ಚಿಂತೆ ಇಲ್ಲ. ಹೆಣ್ಣು - ಗಂಡಿನ ನಡುವೆ ಭೇದವೆಣಿಸಿದ ಸಮಭಾವ. ಜಾತಿಭೇದ ಒಪ್ಪದ ಮನಸ್ಸು. ಓದುವುದು, ಬರೆಯುವುದು. ಕಲಿಸುವುದು ಅವರ ಹವ್ಯಾಸಗಳು ಮಹಿಳೆಯರ ಸಮಸ್ಯೆಗಳು, ಸಾಮಾಜಿಕ ಸಮಸ್ಯೆಗಳು ಗ್ರಾಮೀಣ ಅಧ್ಯಯನ ಅವರು ಬರೆಯುವ ವಿಷಯಗಳು. ಇವರು ಬರೆದು - ಸಂಪಾದಿಸಿದ ಪುಸ್ತಕಗಳ ಸಂಖ್ಯೆ ಇಪ್ಪತ್ತೈದಕ್ಕೂ ಹೆಚ್ಚು.

'ಮಹಿಳಾ ಅಧ್ಯಯನ' ಭಾಗದಲ್ಲಿ ಎರಡು ಬಗೆಯ ವಿಷಯಗಳು ಅಡಕವಾಗಿವೆ. ಅಧ್ಯಯನದ ಸಮಸ್ಯೆಗಳನ್ನು, ನೆಲೆ - ಬೆಲೆಗಳನ್ನು ಗುರುತಿಸುವ ಲೇಖನಗಳು ಮೊದಲಿಗಿದ್ದರೆ, ಮುಂದಿನ ಭಾಗವಾಗಿ ಮಹಿಳಾ ಅಧ್ಯಯನದ ಫಲವಾಗಿ ಸಾಹಿತ್ಯ ಕ್ಷೇತ್ರದಲ್ಲುಂಟಾದ ಪರಿವರ್ತನೆ, ಸ್ತ್ರೀವಾದಿ ಸಾಹಿತ್ಯ ಹಾಗೂ ಸ್ತ್ರೀವಾದಿ ವಿಮರ್ಶೆಗೆ ಸಂಬಂಧಿಸಿದ ಲೇಖನಗಳಿವೆ.

ಇಂಗ್ಲಂಡಿನ ಔದ್ಯೋಗಿಕ ಕ್ರಾಂತಿಯ ಪರಿಣಾಮವಾಗಿ ಆರ್ಥಿಕ ರಂಗದಲ್ಲುಂಟಾದ ಪ್ರಗತಿಯ ಜೊತೆಗೆ ಸಾಮಾಜಿಕ ರಂಗದೊಳಗಿನ ಶೋಷಣೆಯ ವಿರುದ್ಧವೂ ಚಟುವಟಿಕೆಗಳು ಆರಂಭಗೊಂಡವು. ವರ್ಗಭೇದ, ಲಿಂಗಭೇದಗಳಿಂದ ಸಾಮಾಜಿಕ ರಂಗದಲ್ಲಿ ನಿರ್ಮಾಣವಾದ ಅಸಮಾನತೆ ತೊಡೆದು ಹಾಕಿ ಮಾನವತಾವಾದ ಮಾನವ ಗೌರವಕ್ಕೆ ಅವಕಾಶ ದೊರೆಯಬೇಕೆಂಬ ಹೋರಾಟದ ಹಾದಿ ಹಿಡಿದ ಕೊಂಡೆ ಈ 'ಸ್ತ್ರೀವಾದ' ಅಸ್ತಿತ್ವ ಪಡೆಯಿತು. ಭಾರತದಲ್ಲಂತೂ ಸರಿಯೆ ಜಗತ್ತಿನ ಬೇರೆ ಬೇರೆ ಭಾಗಗಳಲ್ಲಿಯೂ ಸ್ತ್ರೀ ಒಂದಿಲ್ಲೊಂದು ಬಗೆಯಲ್ಲಿ ಶೋಷಣೆಗೆ ಒಳಗಾಗಿದ್ದಾಳೆ. ಪುರುಷ ನಿರ್ಮಿತ ಸ್ವಾರ್ಥ ಸಂಕೋಲೆಗಳನ್ನು ತೊಟ್ಟುಕೊಂಡು ತನ್ನತನ ಕಳೆದುಕೊಂಡ ಮಹಿಳೆ ಆಧುನಿಕ ಶಿಕ್ಷಣದ ಪರಿಣಾಮವಾಗಿ ಈಗ ಎಚ್ಚತ್ತಿದ್ದಾಳೆ. ಸಮಾನತೆ, ಸೌಲಭ್ಯ ಅತ್ಮಗೌರವ ಕುರಿತು ಮಾತನಾಡುತ್ತಿದ್ದಾಳೆ. ಚಳುವಳಿ ಸಂಘಟಿಸುತ್ತಿದ್ದಾಳೆ. ಇದುವೇ ಸ್ತ್ರೀವಾದಿ ಆಂದೋಲನ-ಎನಿಸಿಕೊಂಡಿದೆ. ಸಾಮಾಜಿಕ ಬದುಕಿನ ಈ ಸಂಘರ್ಷ ಸಾಹಿತ್ಯ ಕ್ಷೇತ್ರದೊಳಗೂ ಹೊಸ ಸಂವೇದನೆಯಾಗಿ ಕಾಣಿಸಿಕೊಂಡು ಹೊಸ ವಿಮರ್ಶೆಗೆ ಹಾದಿ ಮಾಡಿರುವುದು ಇತ್ತೀಚಿನ ಬೆಳವಣಿಗೆಯಾಗಿದೆ.

ಲಿಂಗಭೇದವನ್ನು ಆಧರಿಸಿ ರಾಜಕೀಯ, ಆರ್ಥಿಕ, ಸಾಮಾಜಿಕ ನೆಲೆಗಳಲ್ಲಿ ಮಹಿಳೆಯನ್ನು ನಿರ್ಲಕ್ಷಿಸಿದ ಮತ್ತು ಅಸಮಾನತೆಯಲ್ಲಿ ನಿಲ್ಲಿಸಿದ ವ್ಯವಸ್ಥೆಯನ್ನು ಪ್ರಶ್ನಿಸುವ ಕೇವಲ ಭೋಗವಸ್ತುವನ್ನಾಗಿ ತನ್ನ ಅನುಕೂಲವರ್ತಿಯಾಗಿ ಪಳಗಿಸಿದ ಪುರುಷ ನಿರ್ಮಿತ ವ್ಯವಸ್ಥೆಯನ್ನು ಮಾರ್ಪಡಿಸುವ ಮತ್ತು ಅಸಮಾನ ಸಂಬಂಧಗಳನ್ನು ನಿರಾಕರಿಸಿ ಸಮಾನ ಸಂಬಂದಗಳನ್ನು ನೆಲೆಗೊಳಿಸುವ ದಿಶೆಯಲ್ಲಿ ಕ್ರಿಯಾಶೀಲವಾಗಿರುವಂಥದ್ದೆ ಸ್ತ್ರೀವಾದಿ ಆಂದೋಲನ. ಭಾರತದಲ್ಲಿ ಸ್ತ್ರೀವಾದಕ್ಕೆ ಕಾರಣ ಪ್ರೇರಣೆಗಳನ್ನಿತ್ತು ಇಂಗ್ಲೀಷ ಶಿಕ್ಷಣ ಮತ್ತು ಸುಧಾರಣಾವಾದಿ ಚಳುವಳಿಗಳ ಕುರಿತು ಐತಿಹಾಸಿಕ ದೃಷ್ಟಿ ಬೀರುವುದು ಎನ್. ಗಾಯಿತ್ರಿ ಅವರ 'ಸುಧಾರಣೆಯ ಯುಗದಿಂದ ಬದಲಾವಣೆ'ಗೆ ಲೇಖನ. ರಾಜಾರಾಮ ಮೋಹನರಾಯರಿಂದ ಧಾರವಾಡದ ಶ್ರೀಮತಿ ಭಾಗೀರಥಿಬಾಯಿಯವರೆಗೆ ನಡೆದ ಮಹಿಳಾ ಜಾಗೃತಿಯ ಚಟುವಟಿಕೆಗಳನ್ನು ಇವರು ವಿವರವಾಗಿ ದಾಖಲಿಸುತ್ತಾರೆ. ಕೊನೆಗೆ ಕುಟುಂಬವೆ ಮಹಿಳೆಯ ಮೇಲಿನ ದೌರ್ಜನ್ಯದ ಬೆನ್ನೆಲಬು ಎಂಬ ಕಾರಣದಿಂದ ಕುಟುಂಬವನ್ನು ನಾಶ ಪಡಿಸಬೇಕೆಂಬ ಉಗ್ರ ಸ್ತ್ರೀವಾದಿಗಳ ಕರೆ, ಕುಟುಂಬವನ್ನು ರಕ್ಷಿಸಬೇಕೆಂಬ ಸಂಪ್ರದಾಯವಾದಿಗಳ ಕರೆಯ ಹಿನ್ನೆಲೆಯಲ್ಲಿ ಕುಟುಂಬ ವ್ಯವಸ್ಥೆ ಬದಲಾಗಬೇಕಾದ ಅಗತ್ಯ ಕುರಿತು ಲೇಖಕಿಯ ಸಂಯಮಶೀಲ ಚಿಂತನೆ ಅರ್ಥಪೂರ್ಣವಾಗಿದೆ.

ರಾಜಸ್ತಾನದ ರೂಪಾ ಕನ್ವರಳು ಸತಿಯಾದ ಹಿನ್ನೆಲೆಯಲ್ಲಿ ಹೇಮಲತಾ ಮಹಿಷಿ ಅವರು ನಡೆಸಿದ 'ಸತಿ - ಒಂದು ವಿಶ್ಲೇಷಣೆ' ಯು ಸರಕಾರ, ಸಮಾಜ ಮತ್ತು ರಾಜಕೀಯ ಪಕ್ಷಗಳ ಅಪ್ರಾಮಾಣಿಕ ಪ್ರಯತ್ನದಿಂದಾಗಿ ಸ್ತ್ರೀ ಶೋಷಿತರು ಕಾಯ್ದೆಯ ಕಣ್ಣಿನಿಂದ ಹೇಗೆ ನುಸುಳಿಕೊಳ್ಳುತ್ತಾರೆಂಬುದನ್ನು ವಿವರಿಸುತ್ತದೆ. ಸವಿತ ಎ., ಸರಸ್ವತಿ ದು. ಮತ್ತು ಗಾಯತ್ರಿ ವಿ. ಇವರು 'ಮಹಿಳೆ ಮತ್ತು ಆರೋಗ್ಯ' ಕುರಿತು ಮಂಡಿಸಿದ ಸ್ತ್ರೀವಾದಿ ಚರ್ಚೆ ವೈದ್ಯಕೀಯ ಕ್ಷೇತ್ರದ ಕಣ್ಣು ತೆರೆಯಿಸುವಂತಿದೆ. ಗರ್ಭನಿರೋಧಕ ಮಾತ್ರೆಗಳಾಗಲೀ, ವಂಕಿಗಳಾಗಲಿ ಇನ್ನೂ ಸಂಶೋಧನೆಯ ಹಂತದಲ್ಲೆ ಇದ್ದು ಅದು ಭ್ರೂಣದ ಮೇಲೆ ಹೆಣ್ಣಿನ ದೇಹ ಅದರಲ್ಲೂ ಗರ್ಭಕೋಶದ ಮೇಲೆ ಯಾವ ರೀತಿ ಪರಿಣಾಮ ಬೀರಬಹುದೆಂಬುದನ್ನು ಯಾವ ಸಂಶೋಧನೆಯೂ ನಿಖರವಾಗಿ ಹೇಳಿಲ್ಲ. ಇದಕ್ಕೆ ಸ್ಪಷ್ಟವಾದ ವೈದ್ಯಕೀಯ ವಿವರಣೆ ದೊರೆತಿಲ್ಲ. ಇದುವರೆಗಿನ ಸರಕಾರದ ಎಲ್ಲ ಯೋಜನೆಗಳು ಹೆಣ್ಣನ್ನು ಬರೀ ಜನ್ಮದಾತೆಯಾಗಿ ಕಂಡವೆ ಹೊರತು ಇಡೀ ವ್ಯಕ್ತಿಯಾಗಿ ಪರಿಗಣಿಸಿಲ್ಲ. ಇವು ಜನನ ನಿಯಂತ್ರಣ ಸಾಧನಗಳಾದವೇ ಹೊರತು ಜನಪರ ಕಾರ್ಯಕ್ರಮಗಳಾಗಲಿಲ್ಲ - ಎಂಬುದು ಚರ್ಚೆಯ ಒಟ್ಟು ಧ್ವನಿಯಾಗಿರುವುದು ಗಮನಿಸಬೇಕಾದ ವಿಷಯ.

ಸರೋಜನಿ ಶಿಂತ್ರಿ ಅವರ 'ಸ್ತ್ರೀ ವಿಮೋಚನಾವಾದಿ ಮೇರಿ ವೋಲಸ್ಟನ್ ಕ್ರಾಫ್ಟ್‌ಳ ಕೆಲವು ವಿಚಾರಗಳು, ಲೇಖನವು ಸ್ತ್ರೀವಾದಿ ಚಿಂತನೆಯ ಉದಾರ ದೃಷ್ಟಿಕೋನವನ್ನು

ಕಲಿಸುತ್ತದೆ. ವೋಲಸ್ಟನ್ ಕ್ರಾಫ್ಟ್‌ಳ ' ಎ ಇಂಡಿಕೇಶನ್ ಆಫ್ ದಿ ರೈಟ್ಸ್ ಆಫ್ ವುಮೆನ್' (ಮಹಿಳೆಯರ ಹಕ್ಕುಗಳ ನ್ಯಾಯಸಮ್ಮತವಾದ ಸಮರ್ಥನೆ) ಕೃತಿಯ ವಿಚಾರಗಳನ್ನು ಪ್ರಸ್ತುತ ಲೇಖನದಲ್ಲಿ ಪರಾಮರ್ಶಿಸಲಾಗಿದೆ. ಪುರುಷ ವಿರೋಧಿ ಧೋರಣೆಯಿಂದ ಮಹಿಳೆಯ ಸರ್ವತೋಮುಖ ಏಳಿಗೆಯಾಗದು ಅವರಿಬ್ಬರು ಪರಸ್ಪರ ಸಮಾನತೆಯಿಂದ, ಸಹಯೋಗದಿಂದ ಬಾಳಬೇಕಾದ ಪ್ರಬುದ್ಧ ವಿಚಾರಗಳು ಈ ಕೃತಿಯಲ್ಲಿ ವ್ಯಕ್ತಗೊಂಡಿರುವುದನ್ನು ವಿವೇಚಿಸಲಾಗಿದೆ.

ಮಹಿಳಾ ಅಧ್ಯಯನದ ಮೂಲಭೂತ ಗುರಿಗಳು, ವ್ಯಾಪ್ತಿ ಮತ್ತು ಅಂತರ್‌ಶಿಸ್ತೀಯ ಅಭ್ಯಾಸ ಕ್ರಮಗಳಲ್ಲಿ ಅದು ಪಠ್ಯಕ್ರಮವಾಗಿ ಒಳಗೊಳ್ಳಬೇಕಾದ ವಿವರಗಳು ಜ್ಯೋತ್ಸ್ನಾ ಸಂಜನವಾಲಾ ಅವರ ಲೇಖನದ ವಿಷಯ. ಚಿ. ನ. ಮಂಗಳಾ ಅವರ 'ಜಾಗೃತ ಮಹಿಳೆ' ಪ್ರಫುಲ್ಲಾ ನಾಯಕ ಅವರ ' ಆಧುನಿಕ ಮಹಿಳೆ ' ಮತ್ತು ಸಾಮಾಜಿಕ ಶಾಸನ' ವಿನೀತಾ ಷೈ ಅವಗ 'ಮಹಿಳೆ ಅಬಲೆಯೆ? ಒಂದು ಸಾಮಾಜಿಕ ವಿಶ್ಲೇಷಣೆ', ಮಧುಮತಿ ಪಾಟೀಲ ಹಾಗೂ ಗೋದಾವರಿ ಪಾಟೀಲ ಅವರ ಹೆಣ್ಣು ಮಗು : ಕೆಲವು ಅಂಕಿ ಅಂಶಗಳು, ಶಾಂತಾದೇವಿ ಮಾಳವಾಡರ ಸಾಮಾಜಿಕ ಜೀವನದ ನನ್ನ ಅನುಭವಗಳು - ಈ ಲೇಖನಗಳು ಮಹಿಳಾ ಅಧ್ಯಯನಕ್ಕೆ ಉಪಯುಕ್ತ ವಾಗಬಲ್ಲ ವಿಪುಲ ಅಂಶಗಳನ್ನೊಳಗೊಂಡಿವೆ.

ಇನ್ನು ಸಾಹಿತ್ಯಿಕ ಹಿನ್ನೆಲೆಯಲ್ಲಿ ನಡೆಸಿದ ಮಹಿಳಾ ಅಧ್ಯಯನ ಕುರಿತು ಐದಾರು ಮಹತ್ವದ ಲೇಖನಗಳು ಗ್ರಂಥದ ಕೊನೆಗೆ ಹೊಂದಿಕೊಂಡಿವೆ. ಬಿ. ಎನ್. ಸುಮಿತ್ರಾಬಾಯಿ ಅವರ 'ಸಾಹಿತ್ಯದಲ್ಲಿ ಸ್ತ್ರೀವಾದ ' ವು ' ಸ್ತ್ರೀ ಸಂವೇದನೆ 'ಯ ಸೂಕ್ಷ್ಮ ನೆಲೆಗಳನ್ನು ಗುರುತಿಸುತ್ತದೆ. ಅಂಥ ಸಂವೇದನೆಯಿಂದ ರಚಿತವಾಗುವ ಸಾಹಿತ್ಯದ ರೂಪ, ಭಾಷೆ, ಶೈಲಿ, ಸಂಕೇತಗಳ ಸ್ವರೂಪವನ್ನು ಚರ್ಚಿಸುತ್ತದೆ. 'ಕನ್ನಡ ಸಾಹಿತ್ಯ ಚಳುವಳಿಗಳಿಗೆ ಲೇಖಕಿಯರು ಸ್ಪಂದಿಸಿದ ಹಾಗೂ ತೊಡಗಿಸಿಕೊಂಡ ಬಗೆಯನ್ನು ಮತ್ತು ಪ್ರವಾಹದ ಜೊತೆಗೆ ನಡೆದೂ ಸ್ತ್ರೀ ವಾದಿ ದೃಷ್ಟಿಕೋನವನ್ನು ವ್ಯಕ್ತಪಡಿಸಿದ ರೀತಿಯನ್ನು ವಿಜಯಾ ದಬ್ಬೆ ಅವರ ಲೇಖನ ವಿವರಿಸುತ್ತದೆ.

ಸ್ತ್ರೀವಾದಿ ಚಿಂತನೆ, ಸ್ತ್ರೀವಾದಿ ಚಳುವಳಿಗಳ ಹಿನ್ನೆಲೆಯಲ್ಲಿ ಹೊಸ ಅರ್ಥ ಹೊಸ ಆಯಾಮ ಪಡೆದುಕೊಳ್ಳುತ್ತಿರುವ ಮಹಿಳಾ ಸಾಹಿತ್ಯದ ವಿಶ್ಲೇಷಣೆ, ವೈಶಿಷ್ಟ್ಯಗಳ ಬಗ್ಗೆ ಹಾಗೂ ಲೇಖಕಿಯರ ಸೃಜನಶೀಲ ಸಾಧನೆಗಳ ಬಗ್ಗೆ ಎಚ್. ಎಸ್. ರಾಘವೇಂದ್ರರಾವ್ ಅವರ 'ಕನ್ನಡ ಸಾಹಿತ್ಯದಲ್ಲಿ ಎಚ್ಚೆತ್ತ ಮಹಿಳೆ ' ಲೇಖನ ಮಹತ್ವದ ಅಂಶಗಳನ್ನು ದಾಖಲಿಸುತ್ತದೆ. ಸಾಹಿತ್ಯ ಪ್ರಕಾರಗಳಲ್ಲಿ ಸಣ್ಣ ಕಥೆ, ಕಾದಂಬರಿ ಮತ್ತು ಕವಿತೆಯ ಮಾಧ್ಯಮಗಳಲ್ಲಿ ಮಹಿಳೆಯರು ತೋರಿದ ಎಚ್ಚರ ನಿರ್ವಹಿಸಿದ ಜವಾಬ್ದಾರಿಯನ್ನು ಈ ಲೇಖನ ಸಾಧಾರಣವಾಗಿ ವಿವರಿಸುತ್ತದೆ. ಹಸನಬಿ ಬೀಳಗಿ ಅವರ 'ಶಿವಶರಣೆಯರ ಸ್ತ್ರೀಪರ ನಿಲುವು' , ಶಾಂತಾದೇವಿ

ಇಮ್ರಾಪೂರ ಅವರ ಅಕ್ಕಮಹಾದೇವಿಯ ವಚನಗಳಲ್ಲಿ ಸ್ತ್ರೀವಾದಿ ದೃಷ್ಟಿಕೋನ, ಶಾಲಿನಿ ರಘುನಾಥರ 'ಭಾರತೀಯ ಸಾಹಿತ್ಯದಲ್ಲಿ ಮಹಿಳಾ ಆತ್ಮ ಚರಿತ್ರೆಗಳು' ಜಿ.ಎಂ. ಹೆಗಡೆ ಅವರ ಪರಿಚಯಾತ್ಮಕ ಲೇಖನಗಳಿವೆ.

ಈಚಿನ ದಿನಗಳಲ್ಲಿ ಅಭಿನಂದನ ಗ್ರಂಥಗಳೆಂದರೆ ವಂದಿಮಾಗಧರಿಂದ ಬರೆಯಿಸಲ್ಪಟ್ಟ ಶ್ಲೇಷೆಗಳಿಂದ ಅತಿಶಯೋಕ್ತಿಗಳಿಂದ ತುಂಬಿದ, ಪ್ರಶಂಸಾ ಲೇಖನಗಳ ಸಂಗ್ರಹಗಳೇ ಆಗಿರುತ್ತವೆ. ಆದರೆ ಪ್ರಸ್ತುತ ಗ್ರಂಥವು ಭಿನ್ನವಾದ ಆಶೋತ್ತರಗಳನ್ನು ಹೊಂದಿದ್ದಾಗಿದೆ ಎಂಬ ಸಂಪಾದಕರ ಮಾತಿಗೆ ತಕ್ಕಂತೆ ಇದು ಅರ್ಥಪೂರ್ಣ ಮತ್ತು ಆಕರ ಕೃತಿಯಾಗಿ ಗಮನ ಸೆಳೆಯುವಂಥದ್ದಾಗಿದೆ.

ಒರೆಗಲ್ಲು

★ ಯು. ಶಂಕರ ನಾರಾಯಣ ಭಟ್ಟ

ಗದಾಯುದ್ಧದ ಒಂದು ಪದ್ಯ

ಮಾನವಧನನೆನಸಿ ನಿನ್ನಭಿ
ಮಾನಕ್ಷತಿ ಮಾಡದಯ್ ಸುಯೋಧನ ನೀಂ ಮು ॥
ತ್ತೀ ನೀರೊಳಗೆಸಡಿರ್ಕುಂ
ಮೀನಿರ್ಕುಂ ಕಪ್ಪೆಯಿರ್ಕುಮಿರ್ಪರೆ ಗಂಡರ್ ॥

ಪ್ರೊ. ಸುಬ್ರಾಯ ಭಟ್ಟರು ತಮ್ಮ ಗದಾಯುದ್ಧ ದರ್ಪಣದಲ್ಲಿ ಸಪ್ತಮಾಶ್ವಾಸದ ಆರನೇ ಪದ್ಯಕ್ಕೆ ಈ ರೀತಿ ವ್ಯಾಖ್ಯಾನಿಸಿದ್ದಾರೆ - ಸುಯೋಧನ। ನೀಂ ಮಾನಧನಂ ಎನಿಸಿ ನಿನ್ನ ಅಭಿಮಾನ ಕ್ಷತಿ ಮಾಡಿದಯ್ - ನೀನು ಮಾನಧನನೆಂದು ಎಲ್ಲರಿಂದ ಹೊಗಳಿಸಿಕೊಂಡವನು ಆ ಸ್ವಾಭಿಮಾನವನ್ನು ನಾಶಮಾಡಿಕೊಂಡೆಯಲ್ಲಾ! ಮುತ್ತ ಈ ನೀರೊಳಗೆ - ಬಹುಕಾಲದಿಂದ ತಂಗಿದ್ದ ಈ (ಹೊಲಸು) ನೀರಿನಲ್ಲಿ ಎಸಡಿ ಇರ್ಕುಂ = ಏಡಿಗಳಿವೆ ಮೀನಿರ್ಕುಂ = ಮೀನುಗಳಿವೆ. ಕಪ್ಪೆ ಇರ್ಕುಂ = ಕಪ್ಪೆಗಳಿವೆ (ಎಸಡಿ, ಮೀನು, ಕಪ್ಪೆ ಎಂಬಲ್ಲಿ ಜಾತ್ಯೇಕ ವಚನ ಪ್ರಯೋಗ) ಗಂಡರ್ = ಶೂರರು, ಇರ್ಪರೆ - ಇರುವರೇ ? (ಗ, ಯು. ದ ಪು. ೨೫೫)

ಪೂಜ್ಯ ತೀ ನಂ. ಶ್ರೀಯವರು ತಮ್ಮ 'ಗದಾಯುದ್ಧ ಸಂಗ್ರಹ' ದಲ್ಲಿ
ಮಾನಧನನೆನಿಸಿ ನಿನ್ನಭಿ
ಮಾನಕ್ಷತಿ ಮಾಡಿದಯ್ ಸುಯೋಧನ ನೀಂ (ಮ) ೧
ತ್ತೀ ನೀರೊಳಗೆ । ಸಡ್ತಿರ್ಕುಂ
ಮೀನಿರ್ಕು ಕಪ್ಪೆಯಿರ್ಕುಮಿ ಪಿರ್ಪರೆ ಗಂಡರ್''

ಗ. ಯು. ಸಂಗ್ರಹ = ಆಶ್ವಾಸ - ೭ - ಭೀಮಸೇನಾಡಂಬರಂ - ಪದ್ಯ ೨೭, ಪು ೫೯ ಇಲ್ಲಿ ನೀಂ (ಮ) ಎಂಬಲ್ಲಿ ' ಮ' ಊಹಾಪರಿಷ್ಕರಣ ।ಸೆದಿ। ಎಂಬುದು ಮತ್ತೊಂದು ಪಾಠಾಂತರ.

೨೩ - ೯ -೧೯೨೨ ರಲ್ಲಿ ಬೈಂಡ್ ಮಾಡಿದ, ನಮ್ಮಲ್ಲಿರುವ ' ಮಹಾಕವಿ ರನ್ನ ಪ್ರಣೀತಂ ಗದಾಯುದ್ಧಂ' ಎಂಬ ಶೀರ್ಷಿಕೆಯ (ಗ್ರಂಥದ ಆದಿ, ಅಂತ್ಯ ಬಲವಾಗಿದೆ) ೧೭೬ ಪುಟಗಳಲ್ಲಿ ಕೃತಿ ಸಂಪೂರ್ಣವಾಗಿದ್ದು ಕೃತಿಯ ಏಳನೇ ಆಶ್ವಾಸದ ಆರನೇ ಪದ್ಯ

ಮಾನಧನನೆನಿಸಿ । ನಿನ್ನಭಿ
ಮಾನಕ್ಷತಿ ಮಾಡಿದೈ ಸುಯೋಧನ ನೀಂ ಮು।
ತ್ತೀ ನೀರೊಳಗೆಸೆದಿರ್ಕುಂ
ಮೀನಿರ್ಕುಂ ಕಪ್ಪೆಯಿರ್ಕುಮಿರ್ಪರೆ ಗಂಡರ್॥

ಎಂದಿದ್ದು 'ನೆನಿಸಿ' ಎಂಬುದಕ್ಕೆ 'ನೆನಿಪ' ಎಂಬ ಒಂದೇ ಪಾಠಾಂತರ ಸೂಚಿತವಾಗಿದೆ.

ರನ್ನನು ವರ್ಣನೆ ಮಾಡಿದ ವೈಶಂಪಾಯನ ಸರೋವರವನ್ನೊಮ್ಮೆ ನೋಡಬೇಕು
ಗಗನಂ ಬಿಳ್ದುದೊ ಮೇಣ್ ನೆಲಕ್ಕೆ ನೆಲನೇಂ[೧] ಪತ್ತಿತ್ತೊ ಮೇಣಲ್ಲಿ ಪ
ನ್ನಗ ವೃಂದಾರಕರೆಂದುಮಿರ್ಪ ಬಿಲನೋ[೨] ಮೇಣಲ್ಲಿ ದಿಗ್ನಾಗ ರಾ
ಜಿಗೆ ಮೆಯ್ಗರ್ಚಿಕೊಳಲ್ಕಜಂ ಸಮೆದ ತೋಯೋದ್ದೇಶಮೋ ಸಂದೆಯಂ
ಬಗೆಗಾದತ್ತೆನಿರ್ದುದೇಂ ಪಿಂದೋ ವೈಶಂಪಾಯನಬ್ಜಾಕರಂ॥

(ಶ್ರೀ ಕೆ. ವಿ. ಕೃಷ್ಣಭಟ್ ಸಂಪಾದಿತ ಗದಾಯುದ್ಧ - ಆಶ್ವಾಸ ೬ ಪ೧೧)
೧. ಪುಟ್ಟಿತ್ತೊ ಮೇಣಪ್ಪ - ಪಾಠಾಂತರ.

ಅಮೇಯ ವಿಸ್ತಾರವಿರುವ ಈ ವಾರಿಧಿ। ನಾಗದೇವತೆಗಳು ವಾಸಿಸುವ ಸರೋವರ, ಅಷ್ಟ ದಿಗ್ಗಜಗಳಿಗೆ ಮೀಯುವುದಕ್ಕಾಗಿ ಬ್ರಹ್ಮನು ನಿರ್ಮಿಸಿದ ಜಲಾಶಯದ ನೀರು ಹೊಲಸಾಗಲು ಕಾರಣವಿಲ್ಲ. ಬಹುಕಾಲದಿಂದ ತಂಗಿದ್ದ ನೀರು ಅದಾಗಿರಬಹುದಾದರೂ ನೀರಿಗೆ ಹಳತನ ಎಂಬುದಿಲ್ಲ.

ಪ್ರೊ। ಭಟ್ಟರು - ಮುತ್ತ ಈ ನೀರೊಳಗೆ - ಬಹುಕಾಲದಿಂದ ತಂಗಿದ್ದ (ಹೊಲಸು) ಈ ನೀರಿನಲ್ಲಿ ಎಂಬ ವ್ಯಾಖ್ಯಾನ ಸಮರ್ಪಕವೂ ಉಚಿತವೂ ಆಗಿ ತೋರುತ್ತಿಲ್ಲ.

ಪೂಜ್ಯ ತೀ. ನಂ. ಶ್ರೀಯವರ ಮಾಡಿದ ಊಹಾ ಪರಿಷ್ಕರಣ

"ನೀಂ (ಮ) ತ್ತೀ ನೀರೊಳಗೆ। ಸಡಿ। ಕುಂ ಎಂಬಲ್ಲಿ" (ಮ) ಎಂಬುದರಿಂದ ಹೆಚ್ಚಿನ ವ್ಯಂಜಕ ಶಕ್ತಿಯಿಲ್ಲ.

ಆದುದರಿಂದ ಸಾಧುವಾದ ಪಾಠ -
ಮಾನಧನನೆನಿಸಿ ನಿನ್ನಭಿ
ಮಾನಕ್ಷತಿ ಮಾಡಿದ್ದಯ್ ನೀಂ ಮು।
ತ್ತೀ ನೀರೊಳಗೆಸೆದಿರ್ಕುಂ
ಮೀನಿರ್ಕುಂ ಕಪ್ಪೆಯಿರ್ಕುಮಿರ್ಪರೆ ಗಂಡರ್"

ಸುಯೋಧನ ! ನೀಂ ಮಾನಧನಂ ಎನಿಸಿ ನಿನ್ನ ಅಭಿಮಾನ ಕ್ಷತಿ ಮಾಡಿದಯ್ = ಮಾನಧನನೆಂದು ಹೊಗಳಿಸಿಕೊಂಡ ನೀನು ನಿನ್ನ ಆತ್ಮಾಭಿಮಾನವನ್ನು ನಾಶಮಾಡಿಕೊಂಡೆಯಲ್ಲ! ಮುತ್ತು ಈ ನೀರೊಳಗೆ ಎಸೆದಿರ್ಕುಂ = ಶ್ರೇಷ್ಠವಾದ ಮುತ್ತು ಸರೋವರದಲ್ಲಿ ಶೋಭಿಸುತ್ತದೆ (ಎಸೆ - ಶೋಭಾಯಾಂ, to shine - ಶ. ದ. ಧಾತು ಪ್ರಕರಣಂ - ಪ್ರ ೩೮೪ - ಧಾ - ೩೦೫) (ಅಂತೆಯೇ ಮೀನಿರ್ಕುಂ = ಮೀನುಗಳಿವೆ, ಕಪ್ಪೆ ಇರ್ಕುಂ = ಕಪ್ಪೆಗಳಿವೆ, ಗಂಡರ್ ಇರ್ಪರೆ? = ಶೂರರು ಇರುವರೇ ?

ಹಸ್ತಿನಾವತಿಯ ಅನಭಿಷಕ್ತ ಸಾಮ್ರಾಟನಾದ, ಕುರುಕುಲಾಂಬರ ಭಾನುವಾದ, ಛಲವೇ ಮೂರ್ತಿವೆತ್ತಂತಿರುವ ಸುಯೋಧನನಿಗೆ ಅಭಿಮಾನವೇ ಧನ, ಕುರುಕುಲಾನ್ವಯಕ್ಕೆ ಕಳಂಕವಾಗುವಂತೆ ಯಾವ ಕಾರ್ಯವನ್ನೂ ಆತ ಕೈಗೊಳ್ಳಲಾರ. ಸುಯೋಧನ ನೆಲಕ್ಕಾಗಿ ಇಱಿವನಲ್ಲ! ಛಲಕ್ಕಾಗಿ ಇಱಿವವನು ಛಲವನ್ನೇ ಮೆರೆಯುವವನು. ಅಂತಹ ಸುಯೋಧನ ಮಾನಧನ ಎನಿಸಿದ್ದು, ಎನಿಸುವುದು ವೈಶಂಪಾಯನ ಸರೋವರದಲ್ಲಿರುವ ಶ್ರೇಷ್ಠವಾದ ಮುತ್ತಿನ ಹಾಗೆ. ಅಭಿಮಾನ, ಕೀರ್ತಿ ಬೆಳ್ಳಗೆ ಎಂಬುದು ಕೇವಲ ಕವಿ ಸಮಯವಲ್ಲ. ಮುತ್ತಿನ ಹಾಗೆ ಅಭಿಮಾನ, ಕೀರ್ತಿ ಬೆಳ್ಳಗೆ ಎಂಬುದು ಕೇವಲ ಕವಿಸಮಯವಲ್ಲ. ಮುತ್ತಿಗೆ ಎಷ್ಟೇ ಸಣ್ಣ ಗೀರುಪಾರು ಆದರೂ ಅದು ಕಳಂಕವೇ. ಸುಯೋಧನನು ಅಭಿಮಾನ ಕ್ಷತಿ ಮಾಡಿದ್ದು ಅರ್ಥಾತ್ ಈ ವೈಶಾಂಪಾಯನ ಸರೋವರದಲ್ಲಿ ಮುಳುಗಿದ್ದುದು ಮೀನು, ಕಪ್ಪೆ ಮೊದಲಾದ ಜಲಚರ ಪ್ರಾಣಿಗಳಿರುವಂತೆ ಆಯಿತು. ಛಲದಂಕಮಲ್ಲನಾದ, ಶೂರನಾದ ಸುಯೋಧನನಿಗೆ ಇದು ಯೋಗ್ಯವು ಅಲ್ಲ, ಶೋಭಿಸುವುದು ಇಲ್ಲ.

ಈ ರೀತಿಯಾಗಿ ಸರೋವರದಲ್ಲಿ ಮುಳುಗಿರುವ ದುರ್ಯೋಧನನಲ್ಲಿ ಅರ್ಜುನ ಹೇಳುತ್ತಾನೆ.

ವ್ಯಾಜಸ್ತುತಿ ಮತ್ತು ಯಥಾಸಂಖ್ಯೆ ಅಲಂಕಾರ

ಉಕ್ತಿರ್ವ್ಯಾಜಸ್ತುತಿ ರ್ನಿಂದಾಸ್ತುತಿಭ್ಯಾಂ ಸ್ತುತಿ ನಿಂದಯೋಃ

(ಸ್ತೋತ್ರದ ರೂಪದಲ್ಲಿ ನಿಂದೆಯೂ, ನಿಂದೆಯ ರೂಪದಲ್ಲಿ ಸ್ತೋತ್ರವೂ ವರ್ಣಿತವಾದರೆ ವ್ಯಾಜಸ್ತುತಿ)

ಯಥಾಸಂಖ್ಯಂ ಕ್ರಮೇಣೈವ ಕ್ರಮಿ ಕಾಣಂ ಸಮನ್ವಯಃ (ಸಂಖ್ಯಾ ಕ್ರಮವನ್ನು ಅನುಸರಿಸಿರುವ ಅನ್ವಯ ಕ್ರಮವೇ ಯಥಾಸಂಖ್ಯಾಲಂಕಾರ)

ಗ್ರಂಥಋಣ

೧. ಗದಾಯುದ್ಧ ದರ್ಪಣಂ - ಪ್ರೊ.ಸುಬ್ರಾಯ ಭಟ್

೨. ಶಬ್ದಮಣಿ ದರ್ಪಣಂ - ಕಿಟ್ಟೆಲ್ ಸಂಪಾದಿತ

೩. ಗದಾಯದ್ಧ ಸಂಗ್ರಹ: ಪ್ರೊ.ತೀ.ನಂ.ಶ್ರೀ

೪. ೨೩-೯-೧೯೨೨ ರಲ್ಲಿ ಬೈಂಡ್ ಮಾಡಿದ ಗದಾಯುದ್ಧ ಪ್ರತಿ

೫. ಕನ್ನಡ ಕೈಪಿಡಿ - ಭಾಗ-೧.

ಪ್ರಸ್ತುತ

'ಕರ್ನಾಟಕ ಭಾರತಿ' ಈ ಸಂಚಿಕೆಯೊಂದಿಗೆ ೨೬ ವರ್ಷಗಳನ್ನು ಯಶಸ್ವಿಯಾಗಿ ಪೂರೈಸಿ ೨೭ ನೆಯ ವರ್ಷದಲ್ಲಿ ಪದಾರ್ಪಣ ಮಾಡುತ್ತಲಿದೆ. ಈ ಅವಧಿಯಲ್ಲಿ ಅದು ಕನ್ನಡ ಭಾಷೆ ಸಾಹಿತ್ಯ, ಸಂಶೋಧನೆ ವಿಮರ್ಶೆ, ಸಂಸ್ಕೃತಿಗಳಿಗೆ ಸಂಬಂಧಿಸಿದಂತೆ ಹಲವಾರು ಮೌಲಿಕ ವಿದ್ವತ್ಪೂರ್ಣ ಲೇಖನಗಳನ್ನು ಪ್ರಕಟಿಸಿ ಓದುಗರ ಜ್ಞಾನಕ್ಷಿತಿಜವನ್ನು ವಿಸ್ತರಿಸುವ ಕಾರ್ಯವನ್ನು ಸಮರ್ಥವಾಗಿ ನೆರವೇರಿಸುತ್ತ ಬಂದಿದೆ. ಕನ್ನಡದ ಉಪಭಾಷೆಗಳು ಹಾಗೂ ಆಧುನಿಕ ಕನ್ನಡ ಸಾಹಿತ್ಯ ರೂಪಗಳ ಬಗೆಗೆ ಇದು ಪ್ರಕಟಿಸಿದ ವಿಶೇಷ ಸಂಪುಟಗಳು ಸಂಶೋಧಕರಿಗೆ ಅಪೂರ್ವ ಆಕರಗ್ರಂಥಗಳೆನಿಸಿವೆ.

ಪ್ರಸ್ತುತ ಸಂಚಿಕೆಯೂ ಅದೇ ಮಾರ್ಗದಲ್ಲಿ ಮುನ್ನಡೆದಿದೆ. ಇದರಲ್ಲಿ ಕವನ, ವಿಮರ್ಶೆ, ಶಾಸನ, ಭಾಷೆ, ಜಾನಪದ, ತೌಲನಿಕ-ಅಧ್ಯಯನ, ಸಂಶೋಧನೆಗೆ ಸಂಬಂಧಿಸಿದ ೧೫ ಲೇಖನಗಳನ್ನು ಅಳವಡಿಸಲಾಗಿದೆ. ಇವು ಆಯಾ ಕ್ಷೇತ್ರಕ್ಕೆ ಸಂಬಂಧಿಸಿದ ನೂತನ ಬರಹಗಳಾಗಿರುವುದರಿಂದ ಓದುಗರಿಗೆ ಹೊಸ ಅರಿವನ್ನು ಮೂಡಿಸುವಲ್ಲಿ ಸಹಕಾರಿಯಾಗುತ್ತದೆ ಎಂದು ಭಾವಿಸಲಾಗಿದೆ. ಈ ಲೇಖನಗಳನ್ನು ಒದಗಿಸಿದ ವಿದ್ವಾಂಸರಿಗೆ 'ಭಾರತಿ' ಕೃತಜ್ಞತೆಯನ್ನು ಸಲ್ಲಿಸುತ್ತದೆ.

ವಿಶ್ವಚೇತನ ಉದ್ಘಾಟನೆ

ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ೧೯೯೧ ರಿಂದ ಅಸ್ತಿತ್ವಕ್ಕೆ ಬಂದ 'ವಿಶ್ವಚೇತನ' ಸಾಂಸ್ಕೃತಿಕ ವೇದಿಕೆ ತನ್ನ ಈ ಶೈಕ್ಷಣಿಕ ವರ್ಷದ ಕಾರ್ಯ ಚಟುವಟಿಕೆಗಳನ್ನು ದಿನಾಂಕ ೧೬-೭-೧೯೯೪ ರಂದು ಆರಂಭಿಸಿತು. ಖ್ಯಾತ ಸಾಹಿತಿಗಳಾದ ಶ್ರೀಮತಿ ಶಾಂತಾದೇವಿ ಮಾಳವಾಡ ಅವರು ಮುಖ್ಯ ಅತಿಥಿಗಳಾಗಿ ಆಗಮಿಸಿ ಈ ಚಟುವಟಿಕೆಗಳನ್ನು ಉದ್ಘಾಟಿಸಿ 'ಸಾಹಿತ್ತಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ಅರ್ಥಪೂರ್ಣವಾಗಿ ನೆರವೇರಲಿ, ಎಂದು ಹಾರೈಸಿದರು. ಮಾನ್ಯಕುಲಪತಿ -ಡಾ॥ ಎಸ್. ರಾಮೇಗೌಡ ಅವರು ಅಧ್ಯಕ್ಷತೆ ವಹಿಸಿ ಮಾಡನಾಡುತ್ತ -'ವರ್ಷದಿಂದ ವರ್ಷಕ್ಕೆ ಈ ವೇದಿಕೆ ಪ್ರವರ್ಧಮಾನಗೊಳ್ಳುತ್ತ ನಡೆದು ವಿಶ್ವವಿದ್ಯಾಲಯದ ಆವರಣದಲ್ಲಿ ಸಾಂಸ್ಕೃತಿಕ ಸೌಗಂಧವನ್ನು ಬೀರುತ್ತ ನಡೆದಿರುವುದು ಸಂತಸದ ಸಂಗತಿ. ಇದು ಇನ್ನೂ ಉನ್ನತಗೊಳ್ಳಬೇಕು' ಎಂದು ಆಶಿಸಿದರು. ಇದೇ ಸಂದರ್ಭದಲ್ಲಿ ಶ್ರೀಮತಿ ಮಾಳವಾಡ ಅವರನ್ನು ಸನ್ಮಾನಿಸಲಾಯಿತು. ಕೊನೆಯಲ್ಲಿ ಚಂಪಾ ಅವರು ಅನುವಾದಿಸಿದ 'ಜೂಜ್ಞಾ ಜಂಟಲ್‌ಮನ್' ಎಂಬ ನಾಟಕವನ್ನು ಪ್ರದರ್ಶಿಸಲಾಯಿತು.

ಪಾವಟೆ ಜನ್ಮದಿನಾಚರಣೆ

ದಿನಾಂಕ ೨-೮-೯೪ ರಂದು ಡಿ.ಸಿ.ಪಾವಟೆ ಅವರ ಜನ್ಮದಿನವನ್ನು 'ಶಿಕ್ಷಣ ತಜ್ಞ ದಿನ' ಎಂದು ಆಚರಿಸಲಾಯಿತು. ಮುಖ್ಯ ಅತಿಥಿಯಾಗಿ ಆಗಮಿಸಿದ ಡಾ। ಹಾ.ಮಾ.ನಾಯಕ ಅವರು 'ಸಾರ್ಥಕ ಶಿಕ್ಷಣ' ಎಂಬ ವಿಷಯದ ಮೇಲೆ ಮೌಲಿಕ ಉಪನ್ಯಾಸ ನೀಡಿದರು. ಕುಲಪತಿ ಡಾ। ಎಸ್. ರಾಮೇಗೌಡ ಅವರು ಅಧ್ಯಕ್ಷತೆ ವಹಿಸಿದ್ದರು.

ಸ್ವಾತಂತ್ರ್ಯೋತ್ಸವ

ದಿನಾಂಕ ೧೫-೮-೯೪ ರಂದು ೪೮ನೆಯ ಸ್ವಾತಂತ್ರ್ಯೋತ್ಸವವನ್ನು ನಾಡಿನಾದ್ಯಂತ ಉತ್ಸಾಹ-ಉಲ್ಲಾಸ-ಸಡಗರದಿಂದ ಆಚರಿಸಲಾಯಿತು. ಆದರೆ ಹುಬ್ಬಳ್ಳಿ ಜನರಿಗೆ ಮಾತ್ರ ಅದು ಕರಾಳ ದಿನವಾಗಿತ್ತು. ಈದಗಾ ಮೈದಾನದಲ್ಲಿ ಧ್ವಜಾರೋಹಣದ ವಿವಾದದ ಹಿನ್ನೆಲೆಯಲ್ಲಿ ನಡೆದ ಗಲಭೆಯಲ್ಲಿ ಐದು ಜನ ಅಮಾಯಕರು ಅಸುನೀಗಿದರು. ಅವರ ಆತ್ಮಕ್ಕೆ ಶಾಂತಿಯನ್ನು ಕೋರುತ್ತ 'ಭಾರತಿ' ಈ ವಿವಾದ ಬೇಗ ಇತ್ಯರ್ಥವಾಗಿ ರಾಷ್ಟ್ರಧ್ವಜ ಗೆಲುವಿನಿಂದ ಅಲ್ಲಿ ಹಾರುವಂತಾಗಲಿ ಎಂದು ಆಶಿಸುತ್ತದೆ.

ಸದ್ಭಾವನಾ ದಿನಾಚರಣೆ

ದಿನಾಂಕ ೨೦-೮-೯೪ ರಂದು ರಾಜೀವಗಾಂಧಿ ಅವರ ೫೦ನೆಯ ಜನ್ಮದಿನವನ್ನು ಸದ್ಭಾವನಾದಿನವೆಂದು ಆಚರಿಸಲಾಯಿತು. 'ಭಾರತಿ' ಈ ಸಂದರ್ಭದಲ್ಲಿ ನಾಡಿನ ಜನಮನದಲ್ಲಿ ಸತ್ಯ, ಶಾಂತಿ ಸದ್ಭಾವನೆಗಳು ನೆಲೆಸುವಂತಾಗಲಿ ಎಂದು ಆಶಿಸುತ್ತದೆ.

-ಸಂಪಾದಕರು.

ಲೇಖಕರ ವಿಳಾಸಗಳು

೧. ವೀಣಾ ಬನ್ನಂಜೆ
ಈಶಾವಾಸ್ಯಂ
ಅಂಬಲಪಾಡಿ, ಉಡುಪಿ-೩

೨. ಶ್ರೀ ಡಿ.ಬಿ.ಥಂಗ
ಶಾನಭಾಗ ಕಂಪೌಂಡ್
ಸಪ್ತಾಪೂರ, ೩ ನೆಯ ಕ್ರಾಸ್, ಧಾರವಾಡ-೧

೩. ಶ್ರೀ ಆರ್. ವಾಯ್. ಕುಲಕರ್ಣಿ
ಇಂಗ್ಲೀಷ ಅಧ್ಯಾಪಕರು
ಗುಡ್‌ನ್ಯೂಜ್ ಕಲಾ ಮತ್ತು ವಾಣಿಜ್ಯ ಕಾಲೇಜು, ಕಲಘಟಗಿ

೪. ಡಾ. ಬಿ.ಆರ್. ಹಿರೇಮಠ
ಪ್ರಾಧ್ಯಾಪಕರು, ಕನ್ನಡ ಅಧ್ಯಯನ ಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೫. ಡಾ. ವಿ.ಎಸ್.ಮಾಳಿ
ಕನ್ನಡ ಅಧ್ಯಾಪಕರು
ವೃಷಭೇಂದ್ರ ಶಿಕ್ಷಣ ಸಂಸ್ಥೆಯ ಕಲಾ-ವಾಣಿಜ್ಯ ಕಾಲೇಜು
ಹಾರೂಗೇರಿ(ಜಿಲ್ಲೆ-ಬೆಳಗಾವಿ)

೬. ಡಾ. ಎಂ. ಎಸ್. ಪಾಟೀಲ
ಪ್ರವಾಚಕರು ಹಾಗೂ ವಿಶೇಷಾಧಿಕಾರಿಗಳು
ಸ್ನಾತಕೋತ್ತರ ಕೇಂದ್ರ, ರಾಯಚೂರು

೭. ಹನುಮಾಕ್ಷಿ ಗೋಗಿ,
ಸಹಕಾರಿ ಸಂಘಗಳ ಸಹಾಯಕ ನಿಬಂಧಕರು
ಹಾವೇರಿ

೮. ಡಾ. ಸಿ.ಕೆ ನಾವಲಗಿ
ಕನ್ನಡ ಅಧ್ಯಾಪಕರು
ಜೆ.ಎಸ್. ಎಸ್. ಕಾಲೇಜು, ಗೋಕಾಕ

೯. ಕೆ. ಜಿ. ವೆಂಕಟೇಶ ಜೋಷಿ
ಕೆಳದಿ -೫೭೭೫೦೧
ಸಾಗರ - ಶಿವಮೊಗ್ಗಾ

೧೦. ಡಾ. ಬಸವರಾಜ ನಾಯ್ಕರ
ಪ್ರವಾಚಕರು, ಇಂಗ್ಲೀಷ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೧೧. ಡಾ. ಎಸ್. ಕೆ. ಕೊಪ್ಪಾ
ಕನ್ನಡ ಅಧ್ಯಾಪಕರು
ಕಲಾ- ವಾಣಿಜ್ಯ ಕಾಲೇಜು, ಇಂಡಿ (ಜಿಲ್ಲೆ - ವಿಜಾಪುರ)

೧೨. ಎಂ. ಮುನಿಸ್ವಾಮಯ್ಯ
ಭೂವಿಜ್ಞಾನಿ, ಅಂತರ್ಜಲ ವಿಭಾಗ
ಜಿಲ್ಲಾಪರಿಷತ್, ಧಾರವಾಡ

೧೩. ಗಣಪತಿಗೌಡ ಎಸ್.
ಸಂಶೋಧನ ವಿದ್ಯಾರ್ಥಿ
ಪ್ರಾಚೀನ ಭಾರತೀಯ ಇತಿಹಾಸ ಹಾಗೂ ಶಾಸನ ವಿಜ್ಞಾನ ವಿಭಾಗ
ಕ.ವಿ.ವಿ. ಧಾರವಾಡ -೩

೧೪. ಪ್ರೊ. ರಾಮಕೃಷ್ಣ ಮರಾಠೆ
ಬಿ. ಕೆ. ಕಾಲೇಜ
ಕ್ಲಬ್ ರೋಡ, ಬೆಳಗಾವಿ - ೫೯೦೦೦೧

೧೫. ಯು. ಶಂಕರನಾರಾಯಣ ಭಟ್
ಕನ್ನಡ ಪ್ರಾಧ್ಯಾಪಕ
ಸರಕಾರಿ ಕಾಲೇಜು, ಕಾಸರಗೋಡು
ಅಂಚೆ: ವಿದ್ಯಾನಗರ-೬೭೧೧೨೩.

---

w.o. 712/500+25